ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಗಾಯತ್ರ ಪಿ.ಎಸ್.

ಮಾರ್ಗದರ್ಶಕರು
ಡಾ. ಸಿದ್ಧಗಂಗಮ್ಮ
ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು
ಡಾ.ಎ.ಕೆ. ದೊಡ್ಡಮನಿ ಲೋಕರಾಜ
ಸಹಾಯಕ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೨೧

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಮಾಜಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಗಾಯತ್ರ ಪಿ.ಎಸ್.

ಮಾರ್ಗದರ್ಶಕರು

ಡಾ. ಸಿದ್ಧಗಂಗಮ್ಮ

ಪ್ರಾಧ್ಯಾಪಕರು

ಸಹ ಮಾರ್ಗದರ್ಶಕರು

ಡಾ.ಎ.ಕೆ. ದೊಡ್ಡಮನಿ ಲೋಕರಾಜ

ಸಹಾಯಕ ಪ್ರಾಧ್ಯಾಪಕರು

ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೨೧

ಮಾರ್ಗದರ್ಶಕರ ದೃಢೀಕರಣ ಪತ್ರ

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಗಾಯತ್ರ ಪಿ.ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪ್ರಸ್ತುತ ಮಹಾಪ್ರಬಂಧವಾಗಲಿ ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 10-03-೨೦೨೧

ಸ್ಥಳ : ವಿದ್ಯಾರಣ್ಯ

(ಡಾ. ಸಿದ್ಧಗಂಗಮ್ಮ)
ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಹ ಮಾರ್ಗದರ್ಶಕರ ದೃಢೀಕರಣ ಪತ್ರ

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಗಾಯತ್ರ ಪಿ.ಎಸ್. ಅವರು ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪ್ರಸ್ತುತ ಮಹಾಪ್ರಬಂಧವಾಗಲಿ ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

Dr [signature]

ದಿನಾಂಕ : 10-03-೨೦೨೧
ಸ್ಥಳ : ವಿದ್ಯಾರಣ್ಯ

(ಡಾ. ಎ.ಕೆ. ದೊಡ್ಡಮನಿ ಲೋಕರಾಜ)
ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಜಗಳೂರು, ದಾವಣಗೆರೆ ಜಿಲ್ಲೆ

ಸಂಶೋಧಕರ ಘೋಷಣಾ ಪ್ರಮಾಣ ಪತ್ರ

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ವಿಭಾಗದ ಪ್ರಾಧ್ಯಾಪಕರಾದ **ಡಾ. ಸಿದ್ಧಗಂಗಮ್ಮ** ಅವರು ಮಾರ್ಗದರ್ಶಕರು ಹಾಗೂ ಡಾ ಎ.ಕೆ. ದೊಡ್ಡಮನ ಲೋಕರಾಜ ಅವರ ಸಹ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

gayathra .P.S

ದಿನಾಂಕ : 10-03-೨೦೩೧

ಸ್ಥಳ : ವಿದ್ಯಾರಣ್ಯ

(ಗಾಯತ್ರ ಪಿ.ಎಸ್.)
ಸಂಶೋಧಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

Kannada University, Hampi

Akshara Central Library

Anti-Plagiarism Cell

Certificate of Plagiarism Check Report

Krushi uthapanna marukatteyalli dudiyuthiruva mahilehara aroyagada sthithigathi

Health Conditions of Working Women in Agricultural Produce Market

By

Gaytra P.S.

Reg.No. 170111020253 dated: 23.12.2017

Research Guide

Dr.Siddagangamma

Urkund Analysis Result

Analyzed document: KUH-PhD-DDS-Gayatra P S.docx (D97411569)
Submitted: 3/6/2021 6:17:00 AM
Submitted by: Shankaragouda S G
Submitter email: shankargoudas.mailbox@gmail.com
Similarity: 9%
Analysis address: shankargoudas.mailbox.kanuni@analysis.urkund.com

06/03/2021

Seal and authorized sign

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ

ಪರಿವಿಡಿ

ಅಧ್ಯಾಯ – ಒಂದು

ಪ್ರಸ್ತಾವನೆ

೧.೧ ಪೀಠಿಕೆ

೧.೨ ಅಧ್ಯಯನದ ಆಯ್ಕೆ

೧.೩ ಸಮಸ್ಯೀಕರಣ

೧.೪ ಅಧ್ಯಯನದ ಮಹತ್ವ

೧.೫ ಅಧ್ಯಯನದ ಉದ್ದೇಶಗಳು

೧.೬ ಅಧ್ಯಯನದ ವಿಧಾನ

೧.೭ ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳು

೧.೮ ಅಧ್ಯಯನದ ವಿಭಾಗೀಕರಣ

ಅಧ್ಯಾಯ – ಒಂದು

ಪ್ರಸ್ತಾವನೆ

೧.೧ : ಪೀಠಿಕೆ

ಮಾನವನ ಜೀವನದಲ್ಲಿ ಎಲ್ಲಾ ಸಿರಿಸಂಪತ್ತಿಗಿಂತ ಶ್ರೇಷ್ಠವಾದ ಸಂಪತ್ತು ಎಂದರೆ ಅದು ಆರೋಗ್ಯ ಸಂಪತ್ತು. ಮಾನವನು ದೈಹಿಕವಾಗಿ, ಮಾನಸಿಕವಾಗಿ ಆರೋಗ್ಯವಾಗಿದ್ದರೆ ಮನುಷ್ಯನಿಗೆ ತನ್ನ ಬದುಕಿನ ಸ್ವಾದವನ್ನು ಸಾಧಿಸಲು ಸಾಧ್ಯ. ಉತ್ತಮ ಆರೋಗ್ಯ ಅವರ ಎಲ್ಲಾ ಸಾಧನೆ, ಕಾರ್ಯಚಟುವಟಿಕೆಗಳಿಗೆ ಉತ್ತಮ ಪ್ರೇರಣೆಯೇ ಅವಲಂಬನೆಯ ಮೆಟ್ಟಿಲು. ಅನಾರೋಗ್ಯ ಒಬ್ಬ ಮನುಷ್ಯನ ಬದುಕನ್ನು ಕತ್ತಲೂ ಮಾಡಬಹುದು. ಆದ್ದರಿಂದ ಮನುಷ್ಯನ ಜೀವನವನ್ನು ಹಸನು ಮಾಡಬಲ್ಲ ಆರೋಗ್ಯ ಭಾಗ್ಯಕ್ಕೆ ಮೊದಲ ಮಹತ್ವವನ್ನು ಕೊಡಬೇಕು.

ಆರೋಗ್ಯವೇ ಅಭ್ಯುದಯದ ಅಡಿಗಲ್ಲು. ಹಾಗೆಯೇ ಒಂದು ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಅಡಿಪಾಯವಾಗಿ ಕಂಡುಬರುವುದು. ಆ ಪ್ರದೇಶದಲ್ಲಿಯ ಜನರ ಉತ್ತಮ ಗುಣಮಟ್ಟದ ಆರೋಗ್ಯ ಹಾಗೂ ಜನರ ಜೀವನಮಟ್ಟವನ್ನು ಸುಧಾರಿಸುವಲ್ಲಿ ಆಧುನಿಕ ಜಗತ್ತಿನಲ್ಲಿ ಹಲವಾರು ಸೌಲಭ್ಯಗಳಿರುತ್ತವೆ. ಪ್ರಪಂಚದ ಯಾವುದೇ ದೇಶದ ಸಮುದಾಯದ ಜನರ ಆರೋಗ್ಯ ಆ ದೇಶದ ಆಯಾ ಸಮುದಾಯಗಳ ಅಭಿವೃದ್ಧಿಗೆ ಹಿಡಿದ ಕೈಗನ್ನಡಿ. ನಮ್ಮ ದೇಶದ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಇರುವ ಮಹಿಳೆಯರ ಆರೋಗ್ಯ ಉತ್ತಮಗೊಳ್ಳದೇ ಪ್ರಸ್ತುತ ಜನ ಸಮುದಾಯದ ಆರೋಗ್ಯವಾಗಲಿ, ಮುಂದಿನ ತಲೆಮಾರಿನ ಆರೋಗ್ಯವಾಗಲೀ ಉತ್ತಮಗೊಳ್ಳಲು ಖಂಡಿತಾ ಸಾಧ್ಯವಿಲ್ಲ. ಮುಂದಿನ ತಲೆಮಾರನ್ನು ಹೆತ್ತು, ಹೊತ್ತು, ಪಾಲಿಸಬೇಕಾಗಿರುವ ಮಹಿಳೆಯರ ಶೋಷಣೆ, ಅನಾರೋಗ್ಯ ಮತ್ತು ಅಲಕ್ಷ್ಯಗಳಿಗೆ ಒಳಗಾಗಿ ಬಳಲುತ್ತಿದ್ದಲ್ಲಿ ಆ ಸಮುದಾಯದ ಆರೋಗ್ಯಕ್ಕೆ ಹಾಗೂ ಅಭಿವೃದ್ಧಿಯ ಹಾದಿಯಲ್ಲಿ ನಡೆಯಬಲ್ಲ ಜನತೆಯ ಕಾರ್ಯಕ್ಷಮತೆಗೆ ಹಿನ್ನೆಲೆಯುಂಟಾಗುವುದರಲ್ಲಿ ಅಚ್ಚರಿಯಿಲ್ಲ.

ನಮ್ಮ ದೇಶ ಒಂದರಲ್ಲಿ ಸ್ತ್ರೀಯರ ಒಡೆತನದ ಕುಟುಂಬಗಳು ೬೦, ಸಾವಿರದಷ್ಟು ಇದ್ದು ಇವರೆಲ್ಲರೂ ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಜಗತ್ತಿನ ಪ್ರತಿ ೩ ಕುಟುಂಬಗಳಲ್ಲಿ ಒಂದರ ಪೂರ್ಣ ಆರ್ಥಿಕ ಹೊರೆಯನ್ನು ಮಹಿಳೆಯರೇ ಹೊತ್ತು ಮನೆಯಲ್ಲಿ ಹಾಗೂ ಮನೆಯ ಆಚೆ ದುಡಿದು ಬದುಕು ಸಾಗಿಸುತ್ತಿದ್ದಾರೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೇಕ್ಷಣೆಯ ಪ್ರಕಾರ ೨೦೦೦ ದಶಕದ ಮೊದಲು ಅರ್ಧದ ಅವಧಿಯಲ್ಲಿ ಸುಮಾರು ೧,೧೧,೦೦೦ ಮಹಿಳೆಯರು ಪ್ರತಿವರ್ಷ ಬಸಿರು ಮತ್ತು ಹೆರಿಗೆ ಸಂಬಂಧಿಸಿದ ಕಾರಣಗಳಿಂದ ಮರಣ ಹೊಂದಿರುವುದು ವರದಿಯಾಗಿದೆ. ಅದಲ್ಲದೇ ಇತ್ತೀಚಿನ ವರದಿಗಳ ಪ್ರಕಾರ ಈ ರೀತಿ ಪ್ರತಿವರ್ಷ ಸಾಯುವ ಮಹಿಳೆಯರ ಸಂಖ್ಯೆ ೧,೨೫,೦೦೦ ಏರಿರುವುದು ಕಂಡುಬಂದಿದೆ.

ಅದೇ ರೀತಿ ಆರೋಗ್ಯ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯದ ಸಾಧನೆಯನ್ನೇ ಸೂಕ್ಷ್ಮವಾಗಿ ಅವಲೋಕಿಸಿದಾಗ ಕರ್ನಾಟಕವು ಶಿಶು ಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣ, ನವಜಾತ ಶಿಶುಗಳು ಹಾಗೂ ಮಕ್ಕಳ ಮರಣ ಪ್ರಮಾಣಗಳನ್ನು ತಗ್ಗಿಸುವುದರಲ್ಲಿ ಯಶಸ್ವಿಯಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರ ಆರೋಗ್ಯದ ಸ್ಥಿತಿ ಇತರ ವರ್ಗದ ಜನರ ಆರೋಗ್ಯ ಸ್ಥಿತಿಗಿಂತ ಬಹಳಷ್ಟು ಕೆಳಮಟ್ಟದಲ್ಲಿದೆ. ಸಾಂಕ್ರಾಮಿಕ ರೋಗಗಳಾದ ಕ್ಷಯ, ಮಲೇರಿಯಾ, ಕರಳು ಬೇನೆ ಪ್ರಕರಣಗಳು ಅಧಿಕವಾಗಿವೆ ಹಾಗೂ ಬದಲಾದ ಜೀವನ ಶೈಲಿಯಿಂದ ಡಯಾಬಿಟಿಸ್, ಕ್ಯಾನ್ಸರ್ ಹಾಗೂ ಹೃದಯ ರೋಗಗಳಿಂದ ನರಳುತ್ತಿರುವವರ ಸಂಖ್ಯೆ ಹೆಚ್ಚಾಗಿದೆ.

ಭಾರತೀಯ ಸಂವಿಧಾನದ ಪ್ರಕಾರ ಆರೋಗ್ಯ ನಿರ್ವಹಣೆಯ ಜವಾಬ್ದಾರಿಯು ರಾಜ್ಯಗಳಿಗೆ ಸೇರಿದೆ. ಅಲ್ಲದೆ ೧೯೭೮ ರಲ್ಲಿ ಜರುಗಿದ ಆಲ್ಮ-ಆಟ ಘೋಷಣೆಯನ್ನೂ ಭಾರತ ಸರ್ಕಾರ ಸಹಿಮಾಡಿ ಒಪ್ಪಿಕೊಂಡಿದೆ. ಹೀಗಾಗಿ ಅದು ೧೯೮೩ ರಷ್ಟು ಹಿಂದೆಯೇ ತನ್ನ ರಾಷ್ಟ್ರೀಯ ಆರೋಗ್ಯ ನೀತಿಯನ್ನು ಘೋಷಿಸಿತು. **"ಕ್ರಿ.ಶ.೨೦೦೦ ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ"** ಒದಗಿಸುವ ಬದ್ಧತೆಯನ್ನು ವ್ಯಕ್ತಪಡಿಸಿತು. ಆರೋಗ್ಯ ಅಭಿವೃದ್ಧಿಯು ರಾಷ್ಟ್ರೀಯ ಸಾಮಾಜಿಕ, ಆರ್ಥಿಕಾಭಿವೃದ್ಧಿಯ ಅವಿಭಾಜ್ಯ ಕಾರ್ಯ ಎಂಬ ಅಂಶವನ್ನು ರಾಷ್ಟ್ರಾಡಳಿತ ಗರಿಷ್ಠ ಮಟ್ಟದ ಅಧಿಕಾರಿಗಳು, ಶಾಸಕರು ಒಪ್ಪಿಕೊಂಡಿದ್ದಾರೆ. ಹೀಗಾಗಿ ಆರೋಗ್ಯ ಮತ್ತು ಆರೋಗ್ಯ ಸಂಬಂಧಿತ ಸೇವೆಗಳಿಗೆ ಕಾರ್ಯಚಟುವಟಿಕೆಗಳಿಗೆ ಎಲ್ಲ ಹಂತಗಳಿಗೆ ಅನ್ವಹಿಸುವಂತಹ ವ್ಯವಸ್ಥಿತ ಯೋಜನೆಗಳನ್ನು ಸಂಯೋಜಿಸಲಾಯಿತು. ಏಳನೇ ಯೋಜನೆಯಲ್ಲಿಯೇ ಆರೋಗ್ಯ ಅಭಿವೃದ್ಧಿಗಾಗಿ ವಿಶೇಷ ಕೆಲ ಗುಂಪುಗಳನ್ನು ನಿಯೋಜಿಸಲಾಯಿತು. ಈ ಸಮೂಹಗಳು ಕೆಳಕಂಡ ಎಂಟು ಪ್ರಮುಖ ಅಂಶಗಳನ್ನು ಆರೋಗ್ಯ ಮೇಲ್ವಿಚಾರಣೆ, ಸಾಂಕ್ರಾಮಿಕ ಜಾಡ್ಯಗಳಲ್ಲದ

ರೋಗಗಳ ನಿಯಂತ್ರಣ, ಸಾಂಕ್ರಾಮಿಕ ಜಾಡ್ಯಗಳ ನಿಯಂತ್ರಣ, ವೈದ್ಯಕೀಯ ಶಿಕ್ಷಣ, ತರಬೇತಿ ಮತ್ತು ಮಾನವ ಸಂಪನ್ಮೂಲಗಳನ್ನು ಯೋಜಿಸುವಿಕೆ ಹಾಗೂ ಅಭಿವೃದ್ಧಿ, ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಅಭಿವೃದ್ಧಿ, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಪದ್ಧತಿಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಅವುಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವ್ಯವಸ್ಥಿತವಾಗಿ ಜಾರಿಗೊಳಿಸುವಿಕೆ ಹಾಗೂ ಸುದ್ದಿ ಸಂಗ್ರಹಣೆ ಮತ್ತು ಸಂವಹನೆಯ ಅಭಿವೃದ್ಧಿ.

ಈ ಆರೋಗ್ಯ ನೀತಿಯ ವಿಶಾಲವಾದ ಸಾಮಾಜಿಕ-ಆರ್ಥಿಕ ನೀತಿಗಳ ಬೆಂಬಲವನ್ನು ಪಡೆದುಕೊಂಡು, ಪ್ರಾದೇಶಿಕ ಅಸಮಾನತೆಗಳನ್ನು ನಿವಾರಿಸಿಕೊಳ್ಳುವಿಕೆ, ಸಂಪೂರ್ಣ ಉದ್ಯೋಗ ಅವಕಾಶಗಳನ್ನು ಒದಗಿಸುವಿಕೆ, ಪ್ರಾಥಮಿಕ ಶಿಕ್ಷಣ ದೊರಕಿಸುವಿಕೆ, ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ಮಾಡುವಿಕೆ, ಜನಸಂಖ್ಯಾ ನಿಯಂತ್ರಣ, ಸ್ತ್ರೀ ಮತ್ತು ಶಿಶು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವಿಕೆಗಳಿಂದ ಯಶಸ್ವಿಯಾಗುತ್ತಿದೆ ಎಂದು ಹೇಳಬಹುದು.

ಮಹಿಳೆ ಹಿಂದಿನ ಕಾಲದಿಂದ ಎಲ್ಲಾ ಸಮಾಜಗಳಲ್ಲಿ ಕೇವಲ ಸಂತಾನೋತ್ಪತ್ತಿಯ ಕಾರ್ಯವನ್ನಷ್ಟೇ ಅಲ್ಲದೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಆಯಾ ಸಮಾಜದ ಸಂಪತ್ತಿನ ವಿದೇಯಕ್ಕಾಗಿಯೂ ಪುರುಷರಿಗೆ ಹೆಗಲಣಿಯಾಗಿ ಕೆಲವೊಮ್ಮೆ ಪುರುಷರಿಗಿಂತ ಹೆಚ್ಚಿನ ಕೊಡುಗೆ ನೀಡಿರುವುದು ಕಾಣಬಹುದು. ಇದರ ಜೊತೆಗೆ ಗ್ರಾಮೀಣ ಬಡ ಕುಟುಂಬಗಳಲ್ಲಿ ಕೃಷಿ ಕೆಲಸಗಳು ನಡೆಯುವ ಅವಧಿಯಲ್ಲಿ ಹಾಗೂ ಮನೆಯಲ್ಲಿಯ ಗಂಡಸರು ದುಡಿಯದ ಅವಧಿಯಲ್ಲಿ ಆ ಕುಟುಂಬಗಳ ಹೊರೆಯನ್ನು ಮನೆಯ ಮಹಿಳೆಯರೇ ಹೊರಬೇಕಾಗಿರುವುದು ಅನಿವಾರ್ಯ.

ಬ್ಯಾಡಗಿ ತಾಲ್ಲೂಕು ೬೬ ಗ್ರಾಮಗಳನ್ನು ಒಳಗೊಂಡಿದ್ದು, ಈ ಪಟ್ಟಣವು ಪ್ರಮುಖವಾಗಿ ಮೆಣಸಿನಕಾಯಿ ಕೃಷಿ ಉತ್ಪನ್ನ ಮಾರುಕಟ್ಟೆಗೆ ಪ್ರಸಿದ್ಧಿಯಾಗಿದ್ದು, ಈ ಮಾರುಕಟ್ಟೆಗೆ ವಿವಿಧ ಗ್ರಾಮಗಳಿಂದ ಮಹಿಳೆಯರು ಆಗಮಿಸಿ ದುಡಿಯುತ್ತಾ ತಮ್ಮ ಕುಟುಂಬವನ್ನು ನಿರ್ವಹಿಸುತ್ತಿದ್ದಾರೆ. ಇಂತಹ ಮಾರುಕಟ್ಟೆಯಲ್ಲಿ ದುಡಿಯುವಂತ ಮಹಿಳೆಯರು ಹಲವಾರು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಹಾಗಾಗಿ ಸಂಶೋಧಕರಾದ ನಾನು ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಆರೋಗ್ಯದ ಸ್ಥಿತಿಗತಿಯ ಬಗ್ಗೆ ಸಂಶೋಧನೆಯನ್ನು ಕೈಗೊಂಡಿರುತ್ತೇನೆ.

೧.೨ ಅಧ್ಯಯನದ ಆಯ್ಕೆ

ವಿಶ್ವದ ಬಹುಪಾಲು ರಾಷ್ಟ್ರಗಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಆರೋಗ್ಯ ಸಮಸ್ಯೆ ಪ್ರಮುಖವಾದುದು. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ

ಹಾಗೂ ಬಡ ರಾಷ್ಟ್ರಗಳ ಆರೋಗ್ಯ ಸಮಸ್ಯೆಗಳಿಂದ ಕೂಡಿವೆ. ಈ ವ್ಯತ್ಯಾಸಕ್ಕೆ ಅಲ್ಲಿನ ಭೌಗೋಳಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕಾರಣಗಳು ಪ್ರಮುಖವಾಗಿವೆ. ಇದಕ್ಕೆ ಆಯಾ ದೇಶಗಳ ಉತ್ತಮ ಆರೋಗ್ಯಕ್ಕೆ ಅಲ್ಲಿ ಸಿಗುವ ಮೂಲಭೂತ ಸೌಲಭ್ಯಗಳೇ ಕಾರಣ.

ಆರೋಗ್ಯವಂತ ಮಾನವ ಶಕ್ತಿಯು ದೇಶದ ಬಹುದೊಡ್ಡ ಆಸ್ತಿ. ಆರೋಗ್ಯವು ಮಾನವನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ೧೯೯೩ ರ ವಿಶ್ವ ಅಭಿವೃದ್ಧಿ ವರದಿಯ ಪ್ರಕಾರ ಸುಧಾರಿತ ಆರೋಗ್ಯದ ಆರ್ಥಿಕ ಬೆಳವಣಿಗೆಯಲ್ಲಿ ಹೆಚ್ಚು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಆರ್ಥಿಕವಾಗಿ ಸಬಲರಾಗಲು ಆರೋಗ್ಯವು ಬಹಳ ಮುಖ್ಯವಾದುದು. ಜನಸಂಖ್ಯೆಯು ಹೆಚ್ಚಿದ ಮಾತ್ರಕ್ಕೆ ಮಾನವ ಸಂಪನ್ಮೂಲ ಹೆಚ್ಚಿದೆ ಎನ್ನಲು ಸಾಧ್ಯವಿಲ್ಲ. ಜನಸಂಖ್ಯೆ ಹೆಚ್ಚಾದಂತೆ ಅವರನ್ನು ಆರೋಗ್ಯವಂತರನ್ನಾಗಿ ಮಾಡುವುದು ಬಹಳ ಮುಖ್ಯ ಮತ್ತು ಅವರ ಮೂಲಭೂತ ಸೌಲಭ್ಯಗಳಲ್ಲಿ ಒಂದಾದ ಆರೋಗ್ಯ ಸೌಲಭ್ಯವನ್ನು ನೀಡಿ ಆರೋಗ್ಯವಂತ ಮನುಷ್ಯನನ್ನು ಮಾಡುವುದು ಸರ್ಕಾರದ ಮುಖ್ಯ ಕರ್ತವ್ಯ.

ಪ್ರಸ್ತುತ ಅಧ್ಯಯನಕ್ಕಾಗಿ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ೪೦೦ ಮಹಿಳಾ ಕಾರ್ಮಿಕರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಮಾಹಿತಿದಾರರನ್ನು ಸರಳ ಯಾದೃಚ್ಛಿಕ ನಮೂನೆಯಲ್ಲಿ ಆಯ್ಕೆ ಮಾಡಲಾಗಿದೆ. ಈ ಅಧ್ಯಯನದಲ್ಲಿ ಪ್ರತಿಶತ ೪೧% ರಷ್ಟು ವಾಲ್ಮೀಕಿ ಸಮುದಾಯದ ಮಹಿಳೆಯರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಹಾಗೂ ಇನ್ನುಳಿದ ೫೯% ರಷ್ಟು ಮಹಿಳೆಯರನ್ನು ಇತರೆ ವರ್ಗದವರಾದ ಹರಿಜನ, ಮುಸ್ಲಿಂ, ಲಿಂಗಾಯತ, ಪಿಂಜಾರ, ಕ್ರಿಶ್ಚಿಯನ್ ಸಮುದಾಯಗಳಿಂದ ಪ್ರಸ್ತುತ ಮಾಹಿತಿಯನ್ನು ಪಡೆದು ವಿಶ್ಲೇಷಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ೨೦೦೪ ರಂದು ಕರ್ನಾಟಕ ರಾಜ್ಯದಲ್ಲಿ ಸಮಗ್ರ ನೀತಿಯನ್ನು ರೂಪಿಸಲಾಯಿತು. ಈ ವರದಿಯಲ್ಲಿ ೮ ಅಂಶಗಳ ಕಾರ್ಯಕ್ರಮವನ್ನು ಕರ್ನಾಟಕ ಘನ ಸರ್ಕಾರ ಪ್ರಾಮುಖ್ಯತೆಯನ್ನು ಕೊಟ್ಟಿತು.

೧. ಸಮಗ್ರ ಹಾಗೂ ವ್ಯಾಪಕವಾದ ಆರೋಗ್ಯ ಸೇವೆಯನ್ನು ಸಾರ್ವಜನಿಕರಿಗೆ ಒದಗಿಸುವುದು.

೨. ತಜ್ಞ ವೈದ್ಯರ ಸೇವೆಯನ್ನು ಒದಗಿಸುವುದು.

೩. ಉತ್ತಮ ಗುಣಮಟ್ಟದ ಸೇವೆ ಒದಗಿಸುವಲ್ಲಿ ಸಮಾನತೆ ಸಾಧಿಸುವುದು.

೪. ಹಳ್ಳಿ ಹಳ್ಳಿಗೂ ಸುಧಾರಿತ ಆರೋಗ್ಯ ಸೇವೆ ಒದಗಿಸುವುದು.

೫. ಆರೋಗ್ಯಕ್ಕೆ ಸಂಬಂಧಿಸಿದಂತೆ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ಎದುರಿಸುತ್ತಿರುವುದು.

೬. ಆರೋಗ್ಯದ ಮೂಲಭೂತ ಸೌಲಭ್ಯಗಳನ್ನು ಬಲಪಡಿಸುವುದು.

೭. ಕೈಗೆಟುಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಔಷಧಿ ವಿತರಿಸುವುದು.

೮. ಪರ್ಯಾಯ ವೈದ್ಯಕೀಯ ವ್ಯವಸ್ಥೆ ಜನರಿಗೆ ಒದಗಿಸುವಂತೆ ಮಾಡುವುದು.

ಆದರೆ ಸರ್ಕಾರಿ ಅಂಕಿ ಅಂಶಗಳ ಪ್ರಕಾರ ಕೆಲವು ಜಿಲ್ಲೆ ಹಾಗೂ ನಗರ ಪ್ರದೇಶಗಳಲ್ಲಿ ಆರೋಗ್ಯದ ಮಟ್ಟ ಸುಧಾರಿಸುತ್ತ ಬಂದಿರುವುದು ತಿಳಿಯುತ್ತದೆ.

ಒಟ್ಟಾರೆಯಾಗಿ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆದಾಯ ಕಡಿಮೆ ಇದ್ದು, ಅವರ ದೈನಂದಿನ ಅಗತ್ಯಗಳಾದ ಊಟ, ಬಟ್ಟೆಗೆ ಮತ್ತು ಊರಿಗೆ ಹೋಗಿಬರುವ ಖರ್ಚಿಗೂ ಕೂಡ ಸಾಕಾಗುವುದಿಲ್ಲ. ಹಾಗಾಗಿ ಅವರಿಗೆ ಹಣ ಕೊಟ್ಟು ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಪಡೆಯುವ ಸಾಮರ್ಥ್ಯ ಇರುವುದಿಲ್ಲ. ಹೀಗಾಗಿ ಅವರು ಹತ್ತಿರವಿರುವ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಸೌಲಭ್ಯಗಳನ್ನು ಮಾತ್ರ ಪಡೆಯುತ್ತಿರುತ್ತಾರೆ. ಈ ಸಂದರ್ಭದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಯವರೇ ಕಾರ್ಮಿಕರಿಗೆ ಪ್ರಾಥಮಿಕ ಆರೋಗ್ಯ ಸೌಲಭ್ಯವನ್ನಾದರೂ ನೀಡಲು ಮುಂದಾಗಬೇಕು ಹಾಗೂ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಆರೋಗ್ಯ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಅನುಕೂಲವಾಗಿವೆ ಎನ್ನುವುದನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ.

೧.೩ ಸಮಸ್ಯೀಕರಣ

ಆರ್ಥಿಕ ಅಭಿವೃದ್ಧಿಗೆ ಪರ್ಯಾಯವಾಗಿ ಇಂದು ಮಾನವ ಅಭಿವೃದ್ಧಿಯನ್ನು ಉಲ್ಲೇಖಿಸಲಾಗಿದೆ. ಯು.ಎನ್.ಡಿ.ಪಿಯ ೨೦೧೦ರ ವರದಿ ಅನ್ವಯ "ದೀರ್ಘವಾದ, ಆರೋಗ್ಯಕರವಾದ ಮತ್ತು ಸೃಜನಶೀಲವಾದ ಬದುಕನ್ನು ಸಾಧಿಸಿಕೊಳ್ಳಲು ಜನರು ಯಾವುದನ್ನು ಮೌಲ್ಯಯುತವಾದುದೆಂದು ಪರಿಗಣಿಸುತ್ತಾರೋ ಅವುಗಳನ್ನು ಸಾಧಿಸಿಕೊಳ್ಳಲು ಹಾಗೂ ನಾವೆಲ್ಲರೂ ಪಾಲುದಾರರಾಗಿರುವ ನಮ್ಮ ಈ ಸಮಾಜದಲ್ಲಿ ಸಮಾನತೆ, ಸುಸ್ಥಿರ ಗತಿಯ ಆಧಾರದ ಮೇಲೆ ಅಭಿವೃದ್ಧಿಯನ್ನು ರೂಪಿಸಲು ಅಗತ್ಯವಾದ ಜನರ ಸ್ವಾತಂತ್ರ್ಯಗಳೇ ಮಾನವ ಅಭಿವೃದ್ಧಿ. ಇಲ್ಲಿ ವರಮಾನವನ್ನು ಅಭಿವೃದ್ಧಿಯ ಪ್ರಧಾನ ಧಾತುವಾಗಿ ಪರಿಗಣಿಸಿಲ್ಲ. ಬದಲಾಗಿ ಜನರ ಅಭಿವೃದ್ಧಿಯೇ ಮುಖ್ಯ ಧಾತುವೆನಿಸಿಕೊಂಡಿದೆ. ಆದುದರಿಂದ ಅಭಿವೃದ್ಧಿಯೆಂಬ ಪರಿಭಾಷೆಯನ್ನು ನಾವು ಬಹಳ ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ ಹಾಗೂ ಬಳಸಬೇಕಾಗುತ್ತದೆ. ಅಭಿವೃದ್ಧಿಯ ಮಟ್ಟಕ್ಕೂ ಲಿಂಗ ಸಮಾನತೆಗೂ ನಡುವೆ ಬಹಳ ನಿಕಟ ಸಂಬಂಧವಿದೆ. ಏಕೆಂದರೆ, ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯನ್ನು ಕೇವಲ ಒಂದು ವಸ್ತುವಾಗಿ, ಸಂತಾನೋತ್ಪತ್ತಿ ಆಗರವಾಗಿ ನೋಡಲಾಗಿದೆ. ಕುಟುಂಬದ ಏಳಿಗೆಯೇ ಮಹಿಳೆಯರ ಬದುಕಿನ ನಿಜವಾದ

ಸಾರ್ಥಕತೆ ಎಂದು ಭಾವಿಸಲಾಗಿದೆ. ಮಹಿಳೆಯರಿಗೆ ಸಾಮಾಜಿಕ ಅಸ್ತಿತ್ವವನ್ನು ನೀಡುವುದಕ್ಕೆ ನಮ್ಮ ಸಮಾಜ ಸಿದ್ಧವಿಲ್ಲ. ಮಹಿಳೆಯನ್ನು ಸಾಮಾಜಿಕ ಘಟಕದ ಒಂದು ಭಾಗವಾಗಿ ನೋಡಲು ನಮ್ಮ ಸಮಾಜ ವ್ಯವಸ್ಥೆಯು ಒಪ್ಪುವುದಿಲ್ಲ. ಅವಳನ್ನು ಜೈವಿಕ ನೀತಿಯ ಕಟ್ಟುಪಾಡುಗಳಲ್ಲಿ ಬಂಧಿಸಲಾಗಿದೆ. ಅವಳನ್ನು ಪ್ರಜೆಯಾಗಿಯೂ, ನಾಗರಿಕಳಾಗಿಯೂ ನೋಡಲು ನಮ್ಮ ಸಮಾಜ ಹಿಂದೇಟು ಹಾಕುತ್ತಿದೆ. ಅಮರ್ತ್ಯಸೇನ್‌ರವರ ಅಭಿಪ್ರಾಯದಂತೆ **"ಧಾರಣಾ ಸಾಮರ್ಥ್ಯ"**ವು ಅಭಿವೃದ್ಧಿಯ ಒಂದು ಅಂಗವೆಂಬಂತೆ ವಿವರಿಸುತ್ತಾರೆ. ಆದರೆ ವಿಷಾದವೆಂದರೆ ಮಹಿಳೆಯನ್ನು ಈ ಅಭಿವೃದ್ಧಿಯ ಅಂಶಗಳಿಂದಲೂ ಹೊರಗಿಡಲಾಗಿದೆ. ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರ ನಡುವೆ ಸಮಾನತೆ ಇದ್ದರೆ ಲಿಂಗಾನುಪಾತವು ಸಾವಿರಕ್ಕಿಂತ ಅಧಿಕವಾಗಿರಬೇಕು. ಆದರೆ ಭಾರತವು ೧೦೦೦ಕ್ಕೆ ೯೨೪ ಮಹಿಳೆಯರ ಅನುಪಾತವನ್ನು ಅಂದರೆ ೪೮.೦೪% ಮಹಿಳೆಯರನ್ನು ಹಾಗೂ ೫೧.೯೬% ಪುರುಷ ಜನಸಂಖ್ಯೆಯನ್ನು ಹೊಂದಿದೆ. ೨೦೧೧ರ ಜನಗಣತಿಯ ಪ್ರಕಾರ ಭಾರತವು ೧೦೦೦ ಪುರುಷರಿಗೆ ೯೪೩ ಮಹಿಳಾ ಜನಸಂಖ್ಯೆಯನ್ನು ದಾಖಲಿಸಿದೆ. ಕರ್ನಾಟಕದಲ್ಲಿ ೨೦೧೧ರ ಜನಗಣತಿಯನ್ನು ಆಧಾರವನ್ನಾಗಿ ಪರಿಗಣಿಸಿದರೆ ೧೦೦೦ ಪುರುಷರಿಗೆ ೯೭೩ ಮಹಿಳೆಯರಿದ್ದು, ಕೇರಳವು ಲಿಂಗಾನುಪಾತದಲ್ಲಿ ಪ್ರಥಮ ಸ್ಥಾನದಲ್ಲಿದೆ. ಕರ್ನಾಟಕವು ೧೨ನೇ ಸ್ಥಾನದಲ್ಲಿದ್ದು, ದಿಯು ಮತ್ತು ದಮನ್ ಕೊನೆಯ ಸ್ಥಾನದಲ್ಲಿದೆ.

ನಮ್ಮ ದೇಶದ ಸಂಸ್ಕೃತಿಯಲ್ಲಿ ಮಹಿಳೆಯನ್ನು ಕೇವಲ ಗೃಹಿಣಿಯ ಪಾತ್ರದಲ್ಲಿ ಆಕೆ ಇತರರಿಗೆ ಮಾದರಿಯಾಗಬಲ್ಲ ರೀತಿಯಲ್ಲಿ ಬಿಂಬಿಸಲಾಗುತ್ತದೆ. ಆದರೆ ಆಕೆಯ ದುಡಿಮೆಗೆ ಆದರ್ಶವಾಗಬಲ್ಲ ನಿದರ್ಶನಗಳು ನಮಗೆ ಹೇರಳವಾಗಿ ಕಂಡುಬರುವುದಿಲ್ಲ. ಏಕೆಂದರೆ, ಮಹಿಳೆಯರನ್ನು ದುಡಿಮೆಗಾರಳಾಗಿ, ಅವಳನ್ನು ಉತ್ತಮ ಮಾದರಿಯಾಗಿ ನೋಡಲು ನಮ್ಮ ಸಮಾಜ ಸಿದ್ಧವಿಲ್ಲ. ಆದರೆ ಪರಿಶಿಷ್ಟ-ಸ್ಥಳೀಯ ಸಂಸ್ಕೃತಿಯನ್ನು ಗಮನಿಸಿದರೆ ದುಡಿಮೆಗೆ ಮಾದರಿಯಾಗಬಲ್ಲ ಹಲವಾರು ಮಹಿಳೆಯರ ಆದರ್ಶ ಬದುಕುಗಳು ನಮಗೆ ಕಾಣಸಿಗುತ್ತವೆ. ಆದರೆ, ಭಾರತದಲ್ಲಿ ಶಿಷ್ಟ ಸಂಸ್ಕೃತಿಗೆ ಮೊದಲ ಆದ್ಯತೆಯನ್ನು ನೀಡಲಾಗಿದ್ದು, ಪರಿಶಿಷ್ಟ ಸಂಸ್ಕೃತಿಯು ಮಬ್ಬಾಗಿದೆ. ಹಾಗಾಗಿ ಶಿಷ್ಟ ಸಂಸ್ಕೃತಿಯನ್ನು ಪ್ರತಿನಿಧಿಸುವ ಏಕೈಕ ಕಾಯಕವೆಂದರೆ ಕೃಷಿ. ಮಹಿಳೆಯರು ಶಿಷ್ಟ ಸಂಸ್ಕೃತಿಯ ಚೌಕಟ್ಟಿನಲ್ಲಿ ದುಡಿತದ ಬಾಳನ್ನು ನಡೆಸಬೇಕಾದರೆ ಕೃಷಿ ದುಡಿಮೆಯೊಂದೇ ಆಧಾರ. ಆದರೆ ದುರಾದೃಷ್ಟವೆಂದರೆ ಶಿಷ್ಟತೆಯ ಹಣೆಪಟ್ಟಿಯನ್ನು ಕಟ್ಟಿಕೊಂಡ ಕೃಷಿ ದುಡಿಮೆಯಲ್ಲಿ ಮಹಿಳೆಯು ಅವಕಾಶ ಗಿಟ್ಟಿಸಿಕೊಂಡರೂ ಅಲ್ಲಿಯ ಅವಳ ಪಾತ್ರವನ್ನು ಕೀಳಾಗಿ ನಡೆಸಿಕೊಳ್ಳಲಾಗಿದೆ. ಹಾಗಾಗಿ ಹೊಲ-ಗದ್ದೆಗಳಲ್ಲೂ ಮಹಿಳೆಯ ಪಾತ್ರವನ್ನು

ಕಡೆಗಣಿಸಲಾಗಿದ್ದು ಆಕೆಗೆ ಮನೆಯ ಯಜಮಾನಿ ಪಟ್ಟವೇ ಗೌರವಯುತವಾದ ಸ್ಥಾನವೆಂಬ ಚಿತ್ರಣವನ್ನೇ ದಟ್ಟವಾಗಿ ಚಿತ್ರಿಸಲಾಗಿದೆ. ಹೀಗಿದ್ದೂ ಮಹಿಳೆಯು ತಾನು ಪುರುಷನಿಗಿಂತ ಕಡಿಮೆಯೇನಿಲ್ಲ ಎಂದು ಕೃಷಿಯಲ್ಲಿ ತನ್ನ ಪಾತ್ರದ ಹಿರಿಮೆಯನ್ನು ಎತ್ತಿ ಹಿಡಿದುದು ವಿಶೇಷವೆ ಆಗಿದೆ. ಮಹಿಳೆಯ ದುಡಿಮೆಯನ್ನು ಪ್ರೋತ್ಸಾಹಿಸದೇ ಇರಲು ಹಲವಾರು ಕಾರಣಗಳಿವೆ. ಡಾ. ಟಿ.ಆರ್. ಚಂದ್ರಶೇಖರ್ ಅವರ ಪ್ರಕಾರ ಮಹಿಳೆಯರು ಜೈವಿಕವಾಗಿ ದುರ್ಬಲರು. ಅವರಿಗೆ ಮನೆಯ ಒಳಗಿನ ಕೆಲಸಗಳನ್ನು ಹೊರತುಪಡಿಸಿ ಮನೆಯ ಹೊರಗಿನ ಕೆಲಸವನ್ನು ನಿರ್ವಹಿಸಲು ಸಾಧ್ಯವಿಲ್ಲ. ಅವರ ಕಾರ್ಯಕ್ಷೇತ್ರವೇನಿದ್ದರೂ ಮನೆಯ ಒಳಗಿನ ವಾತಾವರಣಕ್ಕೆ ಸೀಮಿತ. ಗಂಡ, ಮನೆ, ಮಕ್ಕಳು ಎಂದು ಸಂಸಾರದ ನಿರ್ವಹಣೆಯಲ್ಲಿ ತೊಡಗುವುದೇ ಮಹಿಳೆಯರ ಆದ್ಯತೆಯ ಕೆಲಸ ಹಾಗೂ ಅವರ ಕರ್ತವ್ಯವೂ ಕೂಡಾ ಆಗಿದೆ ಎಂದು ಬಿಂಬಿಸಲಾಗಿದೆ. ಹೀಗೆ ಮಹಿಳೆಯು ಪ್ರಧಾನವಾಗಿ ಗೃಹಿಣಿಯೇ ವಿನಃ ದುಡಿಮೆಗಾರಳಲ್ಲ ಎಂಬ ಸತ್ಯವನ್ನು ಬಹಳ ಕಟುವಾಗಿ ಸಮಾಜವು ಒಪ್ಪಿರುವುದು ಮಹಿಳೆಯನ್ನು ದುಡಿಮೆಗಾರಳನ್ನಾಗಿ ನೋಡದೇ ಇರುವುದಕ್ಕೆ ಮುಖ್ಯ ಕಾರಣವಾಗಿದೆ.

ಆದರೆ ವಾಸ್ತವದಲ್ಲಿ ಮಹಿಳೆಯರು ಅಪಾರ ಸಂಖ್ಯೆಯಲ್ಲಿ ಮನೆಯ ಹೊರಗೆ ದುಡಿಯುತ್ತಿದ್ದಾರೆ. ಕೃಷಿಯೇ ಅವರ ಮುಖ್ಯ ಕಸುಬಾಗಿದೆ. ಮಹಿಳೆಯರ ದುಡಿಮೆಯು ತಾತ್ವಿಕ ನೆಲೆಗಟ್ಟಿನಲ್ಲಿ ಗಮನಿಸುವುದಾದರೆ ಅದು ಅಗೋಚರವಾಗಿದೆ. ಮಹಿಳೆಯರು ಸಮಾಜದಲ್ಲಿ ಅಧೀನ ಸ್ಥಾನದಲ್ಲಿರುವುದು, ಅವರ ದುಡಿಮೆಯನ್ನು ಅಭಿವೃದ್ಧಿಗೆ ಪೂರಕವಾಗಿ ಗಮನಿಸದಿರುವುದು ಹಾಗೂ ಆರ್ಥಿಕ ಹಿಂದುಳಿಯುವಿಕೆಗೂ ಒಂದಕ್ಕೊಂದು ಸಂಬಂಧವಿದೆ.

ಸರಕಾರಗಳು ಮಹಿಳೆಯರ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಮಹಿಳೆಯರನ್ನು ಶೋಷಣೆಯಿಂದ ವಿಮುಕ್ತಿಗೊಳಿಸುವಲ್ಲಿ ವಿಫಲವಾಗಿವೆ. ಸರಕಾರಗಳು ಮಹಿಳೆಯರ ಅಭಿವೃದ್ಧಿ ಕುರಿತಂತೆ ಅನೇಕ ಬಗೆಯಲ್ಲಿ ಮಹಿಳೆಯರ ಸ್ಥಿತಿಯನ್ನು ಉತ್ತಮಗೊಳಿಸಲು ಶ್ರಮಿಸುತ್ತಿವೆ. ಕಡಿಮೆ ಕೂಲಿಯನ್ನು ಗಳಿಸುವ ಮಹಿಳೆಯು ವೇತನದಲ್ಲಿ ತಾರತಮ್ಯವನ್ನು ಅನುಭವಿಸುತ್ತಿದ್ದಾಳೆ. ಆದ್ದರಿಂದ ಸಮಾನ ದುಡಿಮೆಗೆ ಸಮಾನ ವೇತನ ಪಡೆಯುವುದು ಮಹಿಳೆಯರ ಹಕ್ಕು ಎಂಬ ನಿಟ್ಟಿನಲ್ಲಿ ಸುಧಾರಣೆಗಳು ನಡೆಯುತ್ತಿವೆ. ಮಹಿಳೆಯರು ಅಪೌಷ್ಟಿಕತೆಯನ್ನು ಮೆಟ್ಟಿನಿಲ್ಲಲು ಹಲವಾರು ಯೋಜನೆಗಳು ಕಾರ್ಯಗತವಾಗಿದೆ. ಗರ್ಭಿಣಿ ಮಹಿಳೆಯರ ಸಾವು (ತಾಯಿ ಮರಣ ಪ್ರಮಾಣ) ನೋವುಗಳನ್ನು ಕಡಿಮೆ ಮಾಡಲು ಹಲವಾರು ಉತ್ತಮ ಯೋಜನೆಗಳನ್ನು ಸರಕಾರ ಜಾರಿಗೊಳಿಸಿದೆ. ಮಹಿಳೆಯರನ್ನು ಕೇವಲ ಜೈವಿಕ ಘಟಕಗಳೆಂದೂ, ಅನುಭೋಗಿಗಳೆಂದೂ ನೋಡುವ ಬದಲಾಗಿ ಅವಳನ್ನು ಅಭಿವೃದ್ಧಿಯ

ಪ್ರತೀಕವಾಗಿ ನೋಡುವ ಅಗತ್ಯವನ್ನು ಸ್ಪಷ್ಟೀಕರಿಸಿದೆ. ಮೀರಾ ದೇಖಾರವರು ತಮ್ಮ **"ವುಮೆನ್ಸ್ ಏಜೆನ್ಸಿ ಆ್ಯಂಡ್ ಸೋಷಿಯಲ್ ಚೇಂಜಸ್"** ಎಂಬ ಕೃತಿಯಲ್ಲಿ ಮಹಿಳೆಯು ಸಮಾಜದಲ್ಲಿನ ಬದಲಾವಣೆಯ ಮುಖ್ಯ ನೇಕಾರಳಾಗಿದ್ದಾಳೆ. ಮಹಿಳೆಯು ಸಮಾಜದಲ್ಲಿನ ಬದಲಾವಣೆಗೆ ಎಷ್ಟು ಪ್ರಭಾವಿ ವ್ಯಕ್ತಿಯಾಗಿರುವಳು ಎಂದರೆ ಒಂದು ಸಮಾಜದ ವ್ಯವಸ್ಥೆಯಲ್ಲಿನ ಸಾಮಾಜಿಕ ಸ್ಥಿತಿ, ಆರ್ಥಿಕ ಘನತೆ, ಸಾಂಸ್ಕೃತಿಕ ಶಕ್ತಿ ಇವೆಲ್ಲವೂ ಮಹಿಳೆಯಿಂದ ಪ್ರಭಾವಿಸಲ್ಪಟ್ಟಿದೆ. ಚಾರಿತ್ರಿಕವಾಗಿಯೂ ನಾವು ಗಮನಿಸುವುದಾದರೆ ಎಷ್ಟೋ ದೇಶಗಳಲ್ಲಿ ಈ ಮೇಲಿನ ಎಲ್ಲಾ ಅಂಶಗಳು ಹಲವಾರು ರೀತಿಯಲ್ಲಿ ಮಹಿಳೆಯರಿಂದಲೇ ಪ್ರಭಾವಿಸಲ್ಪಟ್ಟಿರುವುದರಲ್ಲಿ ಸಂಶಯವಿಲ್ಲ. ಪುರಾಣಗಳಲ್ಲಿ ನಾವು ಗಮನಿಸುವುದಾದರೆ ಓರ್ವ ಸ್ತ್ರೀಯು ಇಡೀ ಯುಗದ ಮುಖ್ಯ ಕಥಾನಾಯಕಿಯಾಗುತ್ತಾಳೆ. ಹಾಗೆಯೇ ಆಧುನಿಕ ಯುಗದಲ್ಲಿ ಆಕೆಯೇ ಪ್ರಭಾವಶಾಲಿ ವ್ಯಕ್ತಿಯಾಗಿದ್ದಾಳೆ.

ರಾಬರ್ಟ್ ಜೆ. ಸ್ಟೆಲ್ಲಾರ್ ಅವರು ತಮ್ಮ **"ಸೆಕ್ಸ್ ಆ್ಯಂಡ್ ಜೆಂಡರ್ – ಆನ್ ದ ಡೆವಲಪ್‌ಮೆಂಟ್ ಆಫ್ ಮಸ್ಕ್ಯುಲಿನಿಟಿ ಆ್ಯಂಡ್ ಫೆಮಿನಿಸಂ"** ಎಂಬ ಕೃತಿಯಲ್ಲಿ ಗಂಡು-ಹೆಣ್ಣಿನ ಕುರಿತಾಗಿ ಸರಿಯಾದ ವ್ಯಾಖ್ಯಾನವನ್ನು ಕೊಟ್ಟಿರುತ್ತಾರೆ. ಈ ಸಮಾಜದ ಪ್ರತಿಯೊಂದು ಅಂಶವೂ ಲಿಂಗಾಧಾರಿತವಾಗಿದ್ದು, ಕುಟುಂಬ, ಸಮಾಜ, ರಾಜಕೀಯ, ಧರ್ಮ, ಕಾನೂನು, ಸಂಸ್ಕೃತಿ, ರೀತಿ ರಿವಾಜುಗಳೆಲ್ಲವೂ ಪುರುಷರ ಹಾಗೂ ಮಹಿಳೆಯರ ಜೈವಿಕ, ಭೌತಿಕ ಹಾಗೂ ಮಾನಸಿಕ ನೆಲೆಗಟ್ಟಿನಲ್ಲಿ ಸ್ಥಾಪಿತವಾಗಿದೆ. ಲಿಂಗಭೇದ, ಲಿಂಗ ಅಸಮಾನತೆ ಎನ್ನುವುದು ಈ ಸಮಾಜದ ಹುಟ್ಟಿನಿಂದಲೇ ಪ್ರಾರಂಭವಾಗಿದೆ ಎನ್ನುವುದನ್ನು ಕಂಡುಕೊಂಡಿದ್ದಾರೆ.[೨] ಭಾರತದಲ್ಲಿ ಮಹಿಳೆಯರನ್ನು ದೇವತೆಯೆಂದು ಪರಿಗಣಿಸಲಾಗಿದ್ದರೂ ಆಕೆಯು ದೇವತೆಯ ಸ್ಥಾನವನ್ನೇರಲಿಲ್ಲ.

ಪ್ರಪಂಚದಾದ್ಯಂತ ಸುಸ್ಥಿರಗತಿಯ ಅಭಿವೃದ್ಧಿಯನ್ನು ಸಾಧಿಸಲು ಮಹಿಳಾ ಸಬಲೀಕರಣ ಒಂದು ಮಹತ್ವದ ಗುರಿಯಾಗಿದೆ. ೧೯೮೦ರ ದಶಕದಿಂದ ಅಭಿವೃದ್ಧಿಯು ಜನರ ಸಾಮರ್ಥ್ಯದ ಹಾಗೂ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಸಬಲೀಕರಣ ಪರಿಕಲ್ಪನೆಯು ಮೂಡಿಬಂದಿತು. ಬದಲಾದ ಅಭಿವೃದ್ಧಿ ಚಿಂತನೆಯು ಎಲ್ಲಾ ಜನರನ್ನು ಒಳಗೊಂಡ ಅಭಿವೃದ್ಧಿ ಪ್ರಕ್ರಿಯೆಗೆ ನಾಂದಿ ಹಾಡಿತು. ಜನರ ಸಾಮರ್ಥ್ಯ ಹೆಚ್ಚಳ ಹಾಗೂ ಭಾಗವಹಿಸುವಿಕೆ ಚಿಂತನೆಗಳು ಸಬಲೀಕರಣ ಪರಿಕಲ್ಪನೆಯ ಹುಟ್ಟಿಗೆ ಕಾರಣವಾಯಿತು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳದ ಹೊರತು ಅಭಿವೃದ್ಧಿಯು ಪೂರ್ಣವಾಗುವುದಿಲ್ಲ ಎಂಬ ಅರಿವಿನೊಂದಿಗೆ **"ಅಭಿವೃದ್ಧಿಯನ್ನು ಲಿಂಗೀಕರಣ ಮಾಡದಿದ್ದರೆ ಅಭಿವೃದ್ಧಿಗೆ ಅಪಾಯ"** ಎಂದು

ಪರಿಗಣಿಸಲಾಯಿತು. ಸಬಲೀಕರಣ ಅಥವಾ ಮಹಿಳಾ ಸಶಕ್ತೀಕರಣ ಎಂಬ ಪದವು **"ಶಕ್ತಿ"** ಎಂಬ ಪರಿಕಲ್ಪನೆಯನ್ನು ಹೊಂದಿದೆ.

ಪಾಲ್ ಪ್ರಯರ್‌ರವರ ಪ್ರಕಾರ, "ಜಾಗತೀಕರಣ ಪ್ರಕ್ರಿಯೆಯೇ ಸಶಕ್ತೀಕರಣವಾಗಿದೆ. ನಾವು ಇದನ್ನು ಮಹಿಳೆಯರಿಗೆ ಅನ್ವಯಿಸಿದರೆ ಸ್ವಂತಿಕೆ, ಸಂಪನ್ಮೂಲ ಮತ್ತು ಬೌದ್ಧಿಕತೆಯ ಮೇಲೆ ನಿಯಂತ್ರಣ ವಿಲ್ಲದಿರುವುದು, ತಮ್ಮ ಪರಿಸ್ಥಿತಿಯ ಬಗ್ಗೆ ಜಾಗೃತರಾಗಿರುವುದು ಕಂಡು ಬರುತ್ತದೆ. ಮಹಿಳಾ ಸಶಕ್ತೀಕರಣದಲ್ಲಿ ಶಕ್ತಗೊಳ್ಳುವುದೆಂದರೆ ಮತ್ತೊಬ್ಬರ ಮೇಲೆ ಅಧಿಕಾರ ಚಲಾಯಿಸುವುದೆಂದಾಗಲೀ ಅಥವಾ ಇತರರ ಅಧಿಕಾರವನ್ನು ತಾನು ಕಸಿದುಕೊಳ್ಳುವುದೆಂದಾಗಲೀ ಅಲ್ಲ. ಬದಲಾಗಿ ಮಹಿಳೆಯರು ತಾವೇ ತಮ್ಮ **'ಬಲ'** ಶಕ್ತಿಯನ್ನು ಪಡೆದುಕೊಳ್ಳುವುದು ಮತ್ತು ಸಾಮರ್ಥ್ಯವನ್ನು ಹೊಂದುವುದು ಎಂದರ್ಥ. ಅದಕ್ಕೆ ಬೇಕಾಗಿರುವ ಸೂಕ್ತ ವಾತಾವರಣವನ್ನು ನೀಡುವುದೇ ಮಹಿಳಾ ಸಬಲೀಕರಣ. ಮಹಿಳೆಯರು ತಮ್ಮನ್ನು ತಾವೇ ಅರಿತುಕೊಂಡು ತಮಗೆ ಏನು ಬೇಕು, ಏನು ಬೇಡ ಎಂಬುದನ್ನು ಅರ್ಥೈಸಿಕೊಂಡು ಅದನ್ನು ಅಭಿವ್ಯಕ್ತಗೊಳಿಸುವಂತೆ ಮಾಡುವುದು, ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವುದು, ತಮ್ಮ ಆದಾಯ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವುದು, ನಿರ್ಧಾರದ ಹಕ್ಕು ಹಾಗೂ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿ ಸ್ವಾವಲಂಬನಾ ಜೀವನವನ್ನು ನಡೆಸುವಂತೆ ಮಾಡುವ ಪ್ರಕ್ರಿಯೆಯೇ ಮಹಿಳಾ ಸಬಲೀಕರಣ."[೩]

ಹಾಗೆಂದು ಇದು ಗೊಂದಲವಿಲ್ಲದ, ಅಡ್ಡಿಗಳಿಲ್ಲದ ಸರಳವಾದ ಪ್ರಕ್ರಿಯೆಯಲ್ಲ. ಮಹಿಳಾ ಸಬಲೀಕರಣವು ಹಲವಾರು ಚರ್ಚಿತ ವಿಷಯಗಳನ್ನೊಳಗೊಂಡಿದೆ. ಏಕೆಂದರೆ, ಮಹಿಳೆಯು ಏಕರೂಪಾತ್ಮಕವಾದ ಅಭಿವ್ಯಕ್ತಿಯಲ್ಲ. ಬದಲಾಗಿ ವೈವಿಧ್ಯತೆಯಿಂದ ಕೂಡಿರುವ ಒಂದು ಗುಂಪು. ಹಾಗಾಗಿ ಮಹಿಳಾ ಸಬಲೀಕರಣ ಎಂದಾಗ ನಮಗೆ ಹಲವಾರು ಪ್ರಶ್ನೆಗಳು ಎದುರಾಗುತ್ತವೆ. ಬಹುಮುಖ್ಯವಾಗಿ ಎಲ್ಲಾ ಮಹಿಳೆಯರನ್ನು ಸಬಲೀಕರಣಗೊಳಿಸಬೇಕೇ? ಅವರ ಅಶಕ್ತತೆಗೆ ಕಾರಣಗಳೇನು? ಬೇರೆ ಬೇರೆ ಗುಂಪಿನ ಮಹಿಳೆಯರನ್ನು ಬೇರೆ ಬೇರೆ ವಿಧಾನಗಳಿಂದ ಸಬಲೀಕರಣಗೊಳಿಸಬೇಕೇ? ಯಾವ ಹಂತದಲ್ಲಿ ಸಬಲೀಕರಣಗೊಳಿಸಬೇಕು ಮತ್ತು ಹೇಗೆ? ಅದರಿಂದಾಗುವ ಪರಿಣಾಮಗಳು ಹಾಗೂ ಅಡ್ಡಿ ಆತಂಕಗಳೇನು? ಎಂಬೆಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಗಮನಿಸುವುದು ಬಹು ಅಗತ್ಯವಾಗಿದೆ.

ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶವೆಂದರೆ ಮಹಿಳಾ ಸಬಲೀಕರಣಕ್ಕೆ ಪುರುಷ ಪ್ರಧಾನತ್ವವೇ ಪ್ರಮುಖ ಅಡ್ಡಿಯೆಂಬುದು ಒಪ್ಪಿತ ವಿಷಯವಾಗಿದೆ. ಶತಮಾನಗಳಿಂದಲೂ ಪಾಲಿಸಿಕೊಂಡು ಬಂದಿರುವ ರೂಢಿಗತ ನಂಬಿಕೆ, ಮೌಲ್ಯ ಮತ್ತು ಆಚರಣೆಗಳನ್ನು ಒಮ್ಮೆಗೆ

ಬದಲಾಯಿಸುವುದು ಸುಲಭದ ಮಾತಲ್ಲ. ಸಾವಿರಾರು ವರ್ಷಗಳಿಂದ ಅಧಿಕಾರ, ಸಂಪನ್ಮೂಲ, ನಿರ್ಧಾರಗಳ ಮೇಲಿನ ಹಿಡಿತವನ್ನು ಪುರುಷರು ಅಷ್ಟು ಸುಲಭವಾಗಿ ಬಿಟ್ಟು ಕೊಡಲಾರರು. ಒಂದು ರೀತಿಯಲ್ಲಿ ಪ್ರಗತಿಪರ ಪುರುಷರು ಒಪ್ಪಿಕೊಂಡರೂ ಸಂಪೂರ್ಣ ಬದ್ಧರಾಗಿರುವುದಿಲ್ಲ.[೧೪] ಸುಧಾರಣಾ ವಿಧಾನಗಳನ್ನು ಅನುಸರಿಸಿದರೂ ಅದರ ಪರಿಣಾಮ ದೀರ್ಘಕಾಲೀನ ಅವಧಿಯಲ್ಲಿ ಕಂಡುಬರುವುದಂತೂ ಸತ್ಯ. ಹಾಗಾಗಿ ಮಹಿಳಾ ಸಬಲೀಕರಣ ತತ್ವವನ್ನು ಅಳವಡಿಸಿಕೊಂಡರೂ ಅದರ ಪರಿಣಾಮ ದೀರ್ಘಕಾಲದ ನಂತರದಲ್ಲಿ ಉಂಟಾಗಬಹುದು. ಹಾಗೆಯೇ ಏಕರೂಪಿಯಾಗಿ ಇದನ್ನು ಅಳವಡಿಸಿಕೊಳ್ಳಲು ಅಸಾಧ್ಯ. ಶ್ರೀಮಂತ ವರ್ಗದ ಮಹಿಳೆಯರ ಅಗತ್ಯಗಳು ಹಾಗೂ ಬಡ ವರ್ಗದ ಮಹಿಳೆಯರ ಅಗತ್ಯಗಳು ಭಿನ್ನವಾಗಿರುತ್ತವೆ. ಹಾಗಾಗಿ ಸಬಲೀಕರಣದ ವಿಧಾನಗಳೂ ಬೇರೆ ಬೇರೆಯಾಗಿರಬೇಕಾದುದು ಇಲ್ಲಿ ಬಹುಮುಖ್ಯ. ಅಭಿವೃದ್ಧಿ ಹೊಂದಿದ ದೇಶಗಳ ಮಹಿಳೆಯರನ್ನು ಕೆಲವೊಂದು **"ಸ್ಟ್ರಾಟಜಿಕ್ ಜೆಂಡರ್ ನೀಡ್ಸ್"** ನೀಡುವ ಮೂಲಕ ಸಬಲೀಕರಣಗೊಳಿಸಬೇಕಾಗುತ್ತದೆ.[೧೫] ಉದಾಹರಣೆಗೆ ಸಮಾನತೆ, ಆಯ್ಕೆಯ ಸ್ವಾತಂತ್ರ್ಯ, ದೌರ್ಜನ್ಯಮುಕ್ತ ಸಮಾನ ಹಕ್ಕುಗಳು ಇತ್ಯಾದಿ.

ಅಭಿವೃದ್ಧಿಶೀಲ ರಾಷ್ಟ್ರಗಳ ಮಹಿಳೆಯರನ್ನು ಮತ್ತು ಬಡ ರಾಷ್ಟ್ರಗಳ ಮಹಿಳೆಯರನ್ನು **"ಪ್ರಾಕ್ಟಿಕಲ್ ಜೆಂಡರ್ ನೀಡ್ಸ್"**ಗಳನ್ನು ಪೂರೈಸುವ ಮುಖಾಂತರ ಸಶಕ್ತಗೊಳಿಸಬೇಕಾಗುತ್ತದೆ. ಉದಾಹರಣೆಗೆ ಮೂಲಭೂತ ಅವಶ್ಯಕತೆಗಳ ಪೂರೈಕೆ, ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳು, ಕಾನೂನಾತ್ಮಕ ರಕ್ಷಣೆ ಇತ್ಯಾದಿ. ಸಬಲೀಕರಣ ಪ್ರಕ್ರಿಯೆಯನ್ನು ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ಪ್ರಾರಂಭಿಸಬೇಕು. ಇತ್ತೀಚಿನ ದಿನಗಳಲ್ಲಿ ಶಿಕ್ಷಣದ ಪ್ರಗತಿ, ಪೋಷಕರ ಅರಿವು, ವೈಚಾರಿಕತೆ ಇವೆಲ್ಲವೂ ಹೆಣ್ಣುಮಕ್ಕಳನ್ನು ಬಾಲ್ಯದಿಂದಲೇ ಸಬಲರನ್ನಾಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ.[೧೬] ಶಿಕ್ಷಣ ಪಡೆಯುತ್ತಿರುವ ಹೆಣ್ಣುಮಕ್ಕಳಲ್ಲಿ ಯಾವ ರೀತಿಯ ಬದಲಾವಣೆಗಳಾಗುತ್ತಿದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಯುವತಿಯರ ಸಬಲೀಕರಣಕ್ಕೆ ಮುಖ್ಯವಾಗಿ ಆರು ಸೂಚಿಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳೆಂದರೆ ಆತ್ಮವಿಶ್ವಾಸ, ಅಭಿವ್ಯಕ್ತಿ ಸ್ವಾತಂತ್ರ್ಯ, ಆಯ್ಕೆಯ ಸ್ವಾತಂತ್ರ್ಯ (ಶಿಕ್ಷಣ, ವಿವಾಹ, ಉದ್ಯೋಗ), ಮುಕ್ತ ಸಂಚಲನ, ಆರ್ಥಿಕ ಸಂಪತ್ತಿನ ಲಭ್ಯತೆ ಹಾಗೂ ಜ್ಞಾನ ಮತ್ತು ಕೌಶಲ್ಯ. ನಮ್ಮ ಸಮಾಜವು ಮಹಿಳೆ ಮತ್ತು ಸಂಸ್ಕೃತಿಗೆ ತುಂಬಾ ಹತ್ತಿರವಾದ ಸಂಬಂಧವನ್ನು ಕಲ್ಪಿಸಿಕೊಡುತ್ತದೆ ಎಂಬ ಅಂಶವನ್ನು ನಾವು ಹಲವಾರು ರೀತಿಯಲ್ಲಿ ಗುರುತಿಸಬಹುದಾಗಿದೆ.[೧೭]

ನಮ್ಮ ಸಾಂಸ್ಕೃತಿಕ ಅಂಶಗಳು ಹೆಚ್ಚಾಗಿ ವಿವಾಹದ ಸುತ್ತಲೇ ಹೆಣೆದುಕೊಂಡಿರುವುದು ಕಂಡುಬರುತ್ತದೆ. ವರದಕ್ಷಿಣೆ ಬಗ್ಗೆ ವಿರೋಧ ವ್ಯಕ್ತಪಡಿಸಿದರೂ ಅದನ್ನು ನೀಡದೇ ಮದುವೆ

ಸಾಧ್ಯವಿಲ್ಲ ಎಂಬುದೂ ಗೊತ್ತಿದೆ. ಕುಟುಂಬದ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕನ್ನು ಕಾನೂನು ಹೆಣ್ಣಿಗೆ ನೀಡಿದ್ದರೂ ಹೆಚ್ಚಿನ ಹೆಣ್ಣುಮಕ್ಕಳು ಆಸ್ತಿಯನ್ನು ಪಡೆಯಲು ಹಿಂದೇಟು ಹಾಕುತ್ತಾರೆ.[೧೮] ಕುಟುಂಬದ ಮೇಲಿನ ಪ್ರೀತಿ, ವಾತ್ಸಲ್ಯ ಅಲ್ಲದೇ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡು ಬೆಳೆದಿರುವ ಹೆಣ್ಣುಮಕ್ಕಳಿಗೆ ಆಸ್ತಿಯ ಮೇಲೆ ಹಕ್ಕು ಚಲಾಯಿಸಲು ಹಿಂಜರಿಕೆಯುಂಟಾಗುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಆದರೆ ಜೀವನದಲ್ಲಿ ಅನಿರೀಕ್ಷಿತವಾಗಿ ಎದುರಾಗುವ ಪರಿಸ್ಥಿತಿಗಳನ್ನು ಎದುರಿಸಲು ಸಂಪನ್ಮೂಲಗಳ ಅವಶ್ಯಕತೆಯೂ ಇರುತ್ತದೆ ಎಂಬುದನ್ನು ಹೆಣ್ಣುಮಕ್ಕಳು ಅರಿತುಕೊಳ್ಳಬೇಕು.[೧೯]

ಮಹಿಳೆಯು ಬಹಳ ಸೂಕ್ಷ್ಮವಾದ ಆರೋಗ್ಯ ಸ್ಥಿತಿಯನ್ನು ಹೊಂದಿರುತ್ತಾಳೆ. ಅಲ್ಲದೇ ಜೈವಿಕ ಹಾಗೂ ಲಿಂಗ ಸಂಬಂಧಿತ ವ್ಯತ್ಯಾಸಗಳ ಪರಿಣಾಮವಾಗಿ ಮಹಿಳೆಯು ಆರೋಗ್ಯದ ದೃಷ್ಟಿಯಿಂದ ಬಹಳ ಸಂವೇದನಾಶೀಲಳಾಗಿರುತ್ತಾಳೆ. ಈ ನಿಟ್ಟಿನಲ್ಲಿ ಮಹಿಳೆಯರ ಮತ್ತು ಹುಡುಗಿಯರ ಆರೋಗ್ಯ ಸಂಬಂಧಿತ ವಿಷಯಗಳು ಬಹಳ ಮಹತ್ವವನ್ನು ಪಡೆದಿವೆ.[೨೦] ಹರ್ಟ್‌ಮನ್ ಸಿ. ಮತ್ತು ಕೆರ್‌ಶಾ ತಮ್ಮ ಅಧ್ಯಯನದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದ ಅಭಿಪ್ರಾಯವನ್ನು ಈ ರೀತಿಯಾಗಿ ಹಂಚಿಕೊಳ್ಳುತ್ತಾರೆ. ಕೆಲವೊಂದು ಸಾಮಾಜಿಕ-ಸಾಂಸ್ಕೃತಿಕ ನಿರ್ಬಂಧಗಳು ಮತ್ತು ವಿಚಾರಗಳು ಮಹಿಳೆಯರು ಹಾಗೂ ಹೆಣ್ಣುಮಕ್ಕಳಿಗೆ ಉತ್ತಮ ಆರೋಗ್ಯ ಸೇವೆಯನ್ನು ಪಡೆಯುವಲ್ಲಿ ತೊಡಕಾಗಿ ಪರಿಣಮಿಸಿವೆ. ಅವುಗಳೆಂದರೆ ಮಹಿಳೆ ಮತ್ತು ಪುರುಷರ ನಡುವಿನ ಅಸಮಾನ ಸ್ಥಾನಗ್ರಹಿಕಾ ಸಂಬಂಧಗಳು, ಶಿಕ್ಷಣ ಹಾಗೂ ಉದ್ಯೋಗಾವಕಾಶಗಳನ್ನು ಕುಂಠಿತಗೊಳಿಸುವ ಸಾಮಾಜಿಕ ಮೌಲ್ಯಗಳು, ಮಹಿಳೆಯರ ಸಂತಾನೋತ್ಪತ್ತಿ ಪಾತ್ರದ ಮೇಲೆ ಹೆಚ್ಚಿನ ಗಮನ, ದೈಹಿಕ, ಲೈಂಗಿಕ ಅಥವಾ ಮಾನಸಿಕ ಹಿಂಸೆಯ ಸಂಭಾವ್ಯ ಅಥವಾ ನಿಜವಾದ ಅನುಭವ, ಧನಾತ್ಮಕ ಆರೋಗ್ಯ ಸವಲತ್ತುಗಳನ್ನು ಪಡೆಯುವಲ್ಲಿ ತಡೆಗೋಡೆಯಾಗಿರುವ ಬಡತನ ಇವೆಲ್ಲವೂ ಮಹಿಳೆಯರ ಆರೋಗ್ಯದ ಮೇಲೆ ಪರೋಕ್ಷ ಪರಿಣಾಮವನ್ನು ಬೀರುವ ಅಂಶಗಳಾಗಿವೆ. ರೋಗವನ್ನು ತಪ್ಪಿಸಲು, ಜೀವನವನ್ನು ಸಂತೋಷದಿಂದ ಕಳೆಯಲು ಆರೋಗ್ಯಕರ ಅಭ್ಯಾಸಗಳು ಬಹಳ ಯುಕ್ತವಾದ ಅಸ್ತ್ರಗಳಾಗಿವೆ. ಆದರೆ ಮಹಿಳೆಯರ ದೈನಂದಿನ ಜೀವನದ ಅವ್ಯವಸ್ಥೆಯಲ್ಲಿ ಆರೋಗ್ಯಕರ ಜೀವನ ವಿಧಾನವನ್ನು ಅಳವಡಿಸಿಕೊಳ್ಳುವುದು ಬಹಳ ಕಷ್ಟಕರವಾದ ಕೆಲಸವಾಗಿದೆ. ಏಕೆಂದರೆ ನಿತ್ಯನಿರಂತರತೆಯ ದುಡಿತವು ಆಕೆಯ ದೈನಂದಿನ ವೇಳಾಪಟ್ಟಿಯ ಭಾಗವಾಗಿದೆ.[೨೧] ಈ ಸ್ಥಿತಿಯಲ್ಲಿ ತನ್ನ ವೈಯಕ್ತಿಕ ಆರೋಗ್ಯದ ಕಡೆಗೆ ಗಮನ ಹರಿಸಲು ಸಮಯವಾದರೂ ಆಕೆಗೆ ಎಲ್ಲಿದೆ?

ಮಹಿಳೆಯರ ಆರೋಗ್ಯ ಏಕೆ ಮುಖ್ಯ ಎಂಬ ಪ್ರಶ್ನೆಗೆ ಉತ್ತರವನ್ನು ನಾವು ಕಂಡುಕೊಳ್ಳುವುದಾದರೆ ಪುರುಷರಿಗಿಂತ ಅಧಿಕವಾಗಿ ಆರೋಗ್ಯ ರಕ್ಷಣೆಯ ಅಗತ್ಯವು ಮಹಿಳೆಯರಿಗೆ ಇರುತ್ತದೆ. ಅವರ ಸಂತಾನೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯದ ಅಗತ್ಯಗಳಿಂದಾಗಿ ಆಕೆಯು ಹೃದಯದ ಕಾಯಿಲೆ, ಕ್ಯಾನ್ಸರ್, ಮಾನಸಿಕ ಖಿನ್ನತೆ, ಮಧುಮೇಹ, ಅಸ್ಪ್ರಿಯಾ, ಪೋರೋನಿಸ್ಕ್‌ನಂತಹ ದೀರ್ಘಕಾಲೀನ ಆರೋಗ್ಯ ಸಮಸ್ಯೆಗಳನ್ನು ಹೊಂದುವ ಸಾಧ್ಯತೆ ಹೆಚ್ಚಿದೆ. ಅಲ್ಲದೇ ಭಾರತದಲ್ಲಿ ಮಹಿಳೆಯರು ಬಾರೀ ಲಿಂಗ ಪಕ್ಷಪಾತವನ್ನು ಅನುಭವಿಸುವುದರಿಂದ ಈ ಸಮಸ್ಯೆಗಳು ಮುಂದೆ ಮಹಿಳೆಯರ ಜೀವನದಲ್ಲಿ ಹೆಚ್ಚು ಮಾರಕವಾಗಿ ಪರಿಣಮಿಸಬಲ್ಲದು.[೨೨] ವಿಶೇಷವಾಗಿ ಆರೋಗ್ಯ ರಕ್ಷಣೆಯ ವಿಷಯದಲ್ಲಿ ಭಾರತೀಯ ಮಹಿಳೆಯರಿಗೆ ಲಭ್ಯವಿರುವ ಆರೋಗ್ಯ ಸಂಪನ್ಮೂಲಗಳ ಕೊರತೆಯು ಅವರನ್ನು ಆರೋಗ್ಯ ಸೇವೆಯಿಂದ ವಂಚಿತರನ್ನಾಗಿಸುತ್ತಿದೆ. ಮಹಿಳೆಯರು ಮುಖ್ಯವಾಗಿ ಹೊಂದಿರುವ ಆರೋಗ್ಯ ಸಮಸ್ಯೆಗಳೆಂದರೆ ಕಡಿಮೆ ರೋಗನಿರೋಧಕ ಶಕ್ತಿ, ಅಪೌಷ್ಠಿಕತೆ, ತಾಯಿಯ ಆರೋಗ್ಯ ರಕ್ಷಣೆಯ ಕೊರತೆ, ಮುಟ್ಟಿನ ನೈರ್ಮಲ್ಯದ ಕೊರತೆ ಇತ್ಯಾದಿ.[೨೩]

೨೦೧೯ರ ಅಂಕಿಅಂಶಗಳ ಪ್ರಕಾರ ಶೇ. ೯೦ರಷ್ಟು ಮಹಿಳೆಯರು ಮುಟ್ಟಿನ ತೊಂದರೆಯಿಂದ ಬಳಲುತ್ತಿರುವುದು ಕಂಡುಬಂದಿರುತ್ತದೆ. ಅಧಿಕ ರಕ್ತಸ್ರಾವ, ನೋವು, ಅನಿಯಮಿತ ಮುಟ್ಟು ಇವೆಲ್ಲಾ ಹೆಚ್ಚಿನ ಮಹಿಳೆಯರಲ್ಲಿ ಕಂಡುಬಂದಿತ್ತು. ಮಹಿಳೆಯ ಆರೋಗ್ಯವು ಜೈವಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಿಂದ ಪ್ರಭಾವಿಸಲ್ಪಟ್ಟಿದೆ.[೨೪] ಹಲವಾರು ಅಧ್ಯಯನಗಳು ಕಂಡುಕೊಂಡ ಅಂಶಗಳ ಪ್ರಕಾರ ಮಹಿಳೆಯು ಪುರುಷನಿಗಿಂತ ಹೆಚ್ಚು ಆರೋಗ್ಯ ಸಮಸ್ಯೆಗಳನ್ನು ಹೊಂದಿರುತ್ತಾಳೆ. ಮಹಿಳೆಯರು ಹೆಚ್ಚಾಗಿ ಅನಾರೋಗ್ಯಕ್ಕೆ ತುತ್ತಾಗಲು ಮುಖ್ಯ ಕಾರಣವೆಂದರೆ ಅಸುರಕ್ಷಿತ ಗರ್ಭಪಾತ, ಬಾಲ್ಯವಿವಾಹ, ಅಪೌಷ್ಠಿಕತೆ, ಬಡತನ, ಶಿಕ್ಷಣದ ಕೊರತೆ, ಉತ್ತಮ ಆರೋಗ್ಯ ಸೇವೆಗಳ ಕೊರತೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು, ಲಿಂಗಭೇದ, ಕೌಟುಂಬಿಕ ಹಿಂಸೆ, ಲೈಂಗಿಕ ಶೋಷಣೆ, ಕಡಿಮೆ ಉದ್ಯೋಗಾವಕಾಶಗಳು, ಅಶುಚಿತ್ವ, ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳನ್ನು ಹೆರುವ ಕಾರಣಗಳಿಂದಾಗಿ ಅತ್ಯಧಿಕವಾಗಿ ಅನಾರೋಗ್ಯಕ್ಕೀಡಾಗುತ್ತಾರೆ. ಭಾರತದ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಉತ್ತಮ ಆರೋಗ್ಯ ವ್ಯವಸ್ಥೆಯನ್ನು ಕಲ್ಪಿಸಲು ಅಸಾಧ್ಯವಾಗಿದೆ. ಮುಖ್ಯವಾಗಿ ಗ್ರಾಮೀಣ ಭಾಗದಲ್ಲಿರುವ ಮಹಿಳೆಯರು ತಮ್ಮ ಗರ್ಭಾವಸ್ಥೆ, ಹೆರಿಗೆಯ ಸಂದರ್ಭದಲ್ಲಿ ಹೆಚ್ಚು ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಾರೆ.

ಮಲ್ಲಿಕಾರ್ಜುನ ರಾವ್ ಕೆ. ಅವರು ತಮ್ಮ ಕೃತಿ **"ಡಯಟ್ ಆ್ಯಂಡ್ ನ್ಯೂಟ್ರಿಷನಲ್ ಸ್ಟೇಟ್ಸ್ ಆಫ್ ವುಮೆನ್ ಇನ್ ಇಂಡಿಯಾ"**ದಲ್ಲಿ ಗ್ರಾಮೀಣ ಭಾಗದಲ್ಲಿ ಹೆರಿಗೆ ಸಂದರ್ಭದಲ್ಲಿ

ಸರಿಯಾದ ಆರೋಗ್ಯ ಸೇವೆಯ ಕೊರತೆಯಿಂದಾಗಿ ಸಾವನ್ನಪ್ಪುತ್ತಿರುವ ಗರ್ಭಿಣಿಯರ ಸಂಖ್ಯೆ ನಗರ ಪ್ರದೇಶಕ್ಕಿಂತ ಅಧಿಕವಾಗಿದೆ. ಇದು ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ಶೇ. ೫೭.೧ರಷ್ಟು ಭಾರತದಲ್ಲಿ ಅಧಿಕವಾಗಿದೆ ಎಂದು ಹೇಳಬಹುದಾಗಿದೆ. ಹೀಗಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅತ್ಯಧಿಕ ಅಪೌಷ್ಠಿಕತೆಯಿಂದ ಬಳಲುತ್ತಿರುವ ಹೆಣ್ಣುಮಕ್ಕಳನ್ನು ಹೊಂದಿರುವ ದೇಶವೆಂದು ಭಾರತವನ್ನು ಪರಿಗಣಿಸಲಾಗಿದೆ. ಬಡ ಮಹಿಳೆಯರಿಗೆ ಜೈವಿಕ ಅಗತ್ಯಕ್ಕೆ ಬೇಕಾಗುವಷ್ಟು ಪೌಷ್ಠಿಕ ಆಹಾರವನ್ನು ಹೊಂದುವುದು ಅಸಾಧ್ಯ. ಹೀಗಾಗಿ ಕಳಪೆ ಪೋಷಣೆಯು ತಾಯಿಯ ಆರೋಗ್ಯ ಮತ್ತು ಶಿಶುಗಳ ಆರೋಗ್ಯದ ಮೇಲೆ ಪರಿಣಾಮವನ್ನು ಬೀರುತ್ತದೆ.

ಆರೋಗ್ಯದ ಸಮಸ್ಯೆಗಳಿಗೆ ಬಡತನವೇ ಮುಖ್ಯ ಕಾರಣವಾಗಿದೆ ಮತ್ತು ಇದು ಅನಾರೋಗ್ಯದ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಸಾಂಕ್ರಾಮಿಕ ಮತ್ತು ಉಷ್ಣ ವಲಯದ ಕಾಯಿಲೆಗಳು ಪ್ರತೀ ವರ್ಷ ಲಕ್ಷಾಂತರ ಬಡ ಜನರನ್ನು ಕೊಲ್ಲುತ್ತದೆ. ಆರೋಗ್ಯ ಯೋಜನೆಯ ನೀತಿಗಳು ಸಮಾಜದಲ್ಲಿ ಬಡವರಿಗೆ ಮತ್ತು ದುರ್ಬಲರಿಗೆ ಅನುಕೂಲವಾಗುವಂತೆ ರೋಗಗಳ ಸಂಭವ ಮತ್ತು ಅನಾರೋಗ್ಯಕ್ಕೆ ಕಾರಣವಾಗುವ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಪರೀಕ್ಷಿಸಲು ಸಂಶೋಧನಾ ವಿಧಾನವನ್ನು ಕೈಗೊಂಡು ಅದಕ್ಕೆ ಬೇಕಾದ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಮಕ್ಕಳ ಬಡತನವು ಆರ್ಥಿಕ ಆಥವಾ ರಾಜಕೀಯ ಸಮಸ್ಯೆ ಮಾತ್ರವಲ್ಲ ನೈತಿಕ ಮತ್ತು ಸಾಮಾಜಿಕ ನ್ಯಾಯದ ವಿಷಯವಾಗಿದೆ. ಅಲ್ಲದೇ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಅತೀ ಮಹತ್ವದ ವಿಷಯವೆಂದು ಪರಿಗಣಿಸಲಾಗಿದೆ. ಭಾರತದಲ್ಲಿ ಬಡತನದ ಏರಿಕೆಗೆ ಮುಖ್ಯ ಕಾರಣವೆಂದರೆ ಜನಸಂಖ್ಯೆ. ಜನಸಂಖ್ಯಾ ಬೆಳವಣಿಗೆಯು ಆರ್ಥಿಕತೆಯ ಬೆಳವಣಿಗೆಯನ್ನು ಮೀರಿದೆ. ಆರ್ಥಿಕ ಬಡತನದ ಹಿಂದೆ ಹಲವಾರು ಆರ್ಥಿಕ ಕಾರಣಗಳಿವೆ. ಕಡಿಮೆ ಮೂಲಸೌಕರ್ಯ, ಹಳೆಯ ಕೃಷಿ ಪದ್ಧತಿ, ಹೆಚ್ಚು ಬಳಕೆಯಲ್ಲಿಲ್ಲದ ತಂತ್ರಜ್ಞಾನ, ಕೃಷಿ ಶಿಕ್ಷಣದ ಕೊರತೆ ಇತ್ಯಾದಿ. ಇಂತಹ ಪರಿಸರದಲ್ಲಿ ಓರ್ವ ಕುಟುಂಬದ ಮಹಿಳೆಯು ತನ್ನ ಕುಟುಂಬದ ನಿರ್ವಹಣೆಯೊಂದಿಗೆ ತನ್ನ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸುವುದರಲ್ಲಿ ಬಹಳ ಕಡಿಮೆ ಆಸಕ್ತಿಯುಳ್ಳವಳಾಗಿದ್ದಾಳೆ. ಅತಿಯಾದ ಬಡತನವು ಕಳಪೆ ಆರೋಗ್ಯ ಸ್ಥಿತಿಗೆ ಕಾರಣವಾಗುತ್ತದೆ.

ಈ ಹಂತದಲ್ಲಿ ಕೃಷಿ ಪ್ರಧಾನವಾದ ಭಾರತದಲ್ಲಿ ಹೆಚ್ಚಿನ ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಅವರ ದುಡಿಮೆಯನ್ನು ನಾವು ಅಭಿವೃದ್ಧಿ ಮಾನದಂಡವಾಗಿ ಪರಿಗಣಿಸಿದಾಗ ಮುಖ್ಯವಾಗಿ ಅವರ ಆರೋಗ್ಯ ಸಂಬಂಧಿ ವಿಚಾರಗಳು ಹೆಚ್ಚು ಮಹತ್ವದ್ದಾಗಿದೆ.[೨೮]

ಈ ನಿಟ್ಟಿನಲ್ಲಿ ಪ್ರಸ್ತುತ ಕೃಷಿ ಮಾರುಕಟ್ಟೆಯಲ್ಲಿನ ಮಹಿಳಾ ಕಾರ್ಮಿಕರ ಆರೋಗ್ಯ ಸ್ಥಿತಿಗತಿಗೆ ಸಂಬಂಧಿಸಿದಂತೆ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಮುಖ್ಯವಾಗಿ ಹಾವೇರಿ ಜಿಲ್ಲೆಯ ಬ್ಯಾಡಗಿ ಕೃಷಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಆರೋಗ್ಯದ ವಿಚಾರಕ್ಕೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಮಹಿಳಾ ಕಾರ್ಮಿಕರ ಆರೋಗ್ಯ ಸಮಸ್ಯೆಗಳು ಯಾವುವು? ಅವರಿಗೆ ದೊರಕುವ ಆರೋಗ್ಯ ಸವಲತ್ತುಗಳು ಯಾವುವು? ಕಾರ್ಮಿಕರಾಗಿ ದುಡಿಯುವ ಸಂದರ್ಭದಲ್ಲಿ ಅವರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳೇನು? ಪುರುಷ ಪ್ರಧಾನವಾದ ಸಮಾಜದಲ್ಲಿ ಕೃಷಿ ಕಾರ್ಮಿಕಳಾಗಿ ದುಡಿಯುತ್ತಿರುವ ಆಕೆಯ ಸವಾಲುಗಳೇನು? ಅದನ್ನು ಯಾವ ರೀತಿಯಾಗಿ ಆಕೆ ನಿಭಾಯಿಸುತ್ತಾಳೆ? ಅಲ್ಲದೇ ಕೃಷಿ ಮಾರುಕಟ್ಟೆಯಲ್ಲಿನ ಸೌಲಭ್ಯಗಳು ಯಾವ ರೀತಿಯಲ್ಲಿ ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮವನ್ನು ಬೀರಿದೆ? ಆಕೆಯ ದುಡಿಮೆಯ ಅನಿವಾರ್ಯತೆ, ಸರಕಾರದಿಂದ ಸಿಗಬೇಕಾದ ಸವಲತ್ತುಗಳೇನು? ಹಾಗೆಯೇ ಮಹಿಳಾ ಆರೋಗ್ಯವನ್ನು ತುಷ್ಟೀಕರಿಸುವಲ್ಲಿ ಸರಕಾರದ ಪಾತ್ರವೇನು? ಈ ಎಲ್ಲಾ ಸಮಸ್ಯೆಗಳನ್ನು ಸಂಶೋಧನೆಯ ಪ್ರಮುಖ ಅಂಗಗಳಾಗಿ ಪರಿಗಣಿಸಲಾಗಿದೆ.

೧.೪ ಅಧ್ಯಯನದ ಮಹತ್ವ

ಭಾರತವು ತನ್ನ ಅಭಿವೃದ್ಧಿಯ ಪಥದಲ್ಲಿ ಹೊಸ ಹೊಸ ಮಜಲುಗಳನ್ನು ತೆರೆಯುತ್ತಿದೆ. ಅದರಲ್ಲಿ ಮಹಿಳೆಯ ಅಭಿವೃದ್ಧಿಯ ಒಂದು ಭಾಗವಾಗಿ ಪರಿಗಣಿಸಿದುದರ ಪರಿಣಾಮವಾಗಿ ಇಂದು ಮಹಿಳೆಯ ದುಡಿಮೆಗೂ ಒಂದು ಅರ್ಥವಿದೆ. ದುಡಿಯುತ್ತಿರುವ ಮಹಿಳೆಯನ್ನು ಇಂದು ಕೀಳಾಗಿ ನೋಡುವ ಸಂದರ್ಭಗಳು ಬಹಳ ಕಡಿಮೆ. ಇದಕ್ಕೆ ಮುಖ್ಯ ಕಾರಣ ಜಾಗತೀಕರಣದ ಪ್ರಭಾವ. ಮನೆಯ ಒಳಗೂ ಹೊರಗೂ ಒಂದೇ ಸಮನೆ ದುಡಿಯುವ ಅವಳ ಮಾನಸಿಕ ಹಾಗೂ ದೈಹಿಕ ಆರೋಗ್ಯವೂ ಇಂದು ಅತೀ ಮುಖ್ಯವಾಗಿ ಚರ್ಚಿತವಾಗಬೇಕಾದ ವಿಷಯ. ಏಕೆಂದರೆ, ಮಹಿಳೆಯರು ಆರೋಗ್ಯ ಸಂಬಂಧಿ ವಿಚಾರದಲ್ಲಿ ಪುರುಷರಿಗಿಂತ ಕಡಿಮೆ ಆರೋಗ್ಯವನ್ನು ಹೊಂದಿರುತ್ತಾರೆ. ಈ ನಿಟ್ಟಿನಲ್ಲಿ ಬ್ಯಾಡಗಿ ತಾಲೂಕಿನ ಕೃಷಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳೆಯರ ಆರೋಗ್ಯದ ಸ್ಥಿತಿಯ ಬಗ್ಗೆ ಅಧ್ಯಯನ ಮಾಡುವುದು ಹೆಚ್ಚು ಪ್ರಸ್ತುತ ಎಂದುಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಇಲ್ಲಿನ ಮಾರುಕಟ್ಟೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಕಾರ್ಮಿಕರೇ ದುಡಿಯುತ್ತಿರುವುದರಿಂದ ಅವರ ಆರೋಗ್ಯ ಸಮಸ್ಯೆಗಳನ್ನು ಅಧ್ಯಯನ ಮಾಡುವುದು ಹೆಚ್ಚು

ಪ್ರಸ್ತುತ ಎಂದೆನಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅಲ್ಲದೇ ಇಲ್ಲಿನ ಮಾರುಕಟ್ಟೆ ಮೆಣಸಿನಕಾಯಿಗೆ ಹೆಸರುವಾಸಿಯಾಗಿದ್ದು, ದೇಶದ ಆರ್ಥಿಕ ಬಲವರ್ಧನೆಗೂ ತನ್ನ ಕೊಡುಗೆಯನ್ನು ನೀಡಿದೆ. ಹೀಗಾಗಿ, ಇಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಆರೋಗ್ಯದ ವಿಷಯವನ್ನು ಹೆಚ್ಚು ಮಹತ್ವದ್ದು ಎಂದು ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

೧.೫ ಅಧ್ಯಯನದ ಉದ್ದೇಶಗಳು

ಮಹಿಳಾ ಅಭಿವೃದ್ಧಿ ಕುರಿತಂತೆ ಮಾಡಲಾದ ಅಧ್ಯಯನಗಳು ಮತ್ತು ನಡೆಸಿದ ಸಂಶೋಧನೆಗಳನ್ನು ಆಧಾರವಾಗಿ ಇಟ್ಟುಕೊಂಡು ಸಂಶೋಧನೆಗೆ ಪೂರಕವಾಗಿ ಉದ್ದೇಶಗಳನ್ನು ಹಾಕಿಕೊಳ್ಳಲಾಗಿದೆ.

೧. ಕೃಷಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಅಧ್ಯಯನ ಮಾಡುವುದು.
೨. ಕಾರ್ಮಿಕ ಮಹಿಳೆಯರು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳನ್ನು ವಿಶ್ಲೇಷಿಸುವುದು.
೩. ಕಾರ್ಮಿಕ ಮಹಿಳೆಯರಿಗೆ ಇರುವ ಸೌಲಭ್ಯಗಳನ್ನು ಅವಲೋಕಿಸುವುದು.
೪. ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಜೀವನಮಟ್ಟವನ್ನು ಸುಧಾರಿಸಲು ಬೇಕಾದ ಅವಶ್ಯಕತೆಗಳನ್ನು ಅಧ್ಯಯನ ಮಾಡುವುದು.

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಹಿತ್ಯಾವಲೋಕನ ಮಾಡಿದಾಗ ಭಾರತದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಆದರೆ ಆರೋಗ್ಯ ಸಂಬಂಧಿ ವಿಚಾರಗಳನ್ನು ಗಮನಿಸಿದರೆ ತಮ್ಮ ಆರೋಗ್ಯದ ಕಡೆಗೆ ಅವರು ಅತೀ ಕಡಿಮೆ ಎಚ್ಚರಿಕೆಯನ್ನು ಹೊಂದಿರುವುದು ಕಂಡುಬಂದಿರುತ್ತದೆ. ಶಿಷ್ಟಾಚಾರದಡಿಯಲ್ಲಿ ಬದುಕುತ್ತಿರುವ ಭಾರತದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ಮಹಿಳೆಯರು ದುಡಿಮೆ ಹಾಗೂ ಕುಟುಂಬ ನಿರ್ವಹಣೆಯಲ್ಲಿ ತಮ್ಮ ಜೀವನ ಸಾರ್ಥಕತೆಯನ್ನು ಕಂಡುಕೊಂಡಿದ್ದಾರೆ. ಕೃಷಿಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮಹಿಳೆಯರು ಶೇ.೩೫ರಷ್ಟು ಮಾತ್ರ. ಹಾಗಾಗಿ ಆರ್ಥಿಕಾಭಿವೃದ್ಧಿಗೆ ಕೃಷಿ ಕಾರ್ಮಿಕರಾಗಿ ದುಡಿಯುತ್ತಿರುವ ಮಹಿಳೆಯರ ಕೊಡುಗೆಯು ಅನನ್ಯವಾದುದು. ಆದರೆ ಆಕೆ ತನ್ನ ಆರೋಗ್ಯದ ವಿಚಾರದಲ್ಲಿ ಹೆಚ್ಚು ಬಡತನವನ್ನು ಅನುಭವಿಸುತ್ತಿದ್ದಾಳೆ. ಹಾವೇರಿ ಜಿಲ್ಲೆಯ ಬ್ಯಾಡಗಿ ಮೆಣಸಿನಕಾಯಿ ಕೃಷಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಒಟ್ಟು ಕಾರ್ಮಿಕರಲ್ಲಿ ಶೇ. ೯೫ರಷ್ಟು ಮಹಿಳೆಯರೇ ಆಗಿದ್ದು, ಅತೀ ಹೆಚ್ಚಿನವರು ಅನಕ್ಷರಸ್ಥರಾಗಿದ್ದಾರೆ. ಮೆಣಸಿನಕಾಯಿಯು ಮೂಲತಃ ಅತೀ ಹೆಚ್ಚು ಉಷ್ಣಾಂಶವನ್ನು ಹೊಂದಿದ ಕೃಷಿ ಉತ್ಪನ್ನವಾಗಿರುವುದರಿಂದ ಅದರಲ್ಲಿ ತೊಡಗಿಕೊಂಡಿರುವ ಮಹಿಳಾ ಕೃಷಿ ಕಾರ್ಮಿಕರ ಆರೋಗ್ಯ

ಸಂಬಂಧಿ ವಿಚಾರಗಳೂ ಮಹತ್ವ ಪಡೆದುದಾಗಿದೆ. ಏಕೆಂದರೆ ಅತೀ ಹೆಚ್ಚು ಬೇಡಿಕೆಯ ಸಂದರ್ಭದಲ್ಲಿ ೬೦೦೦ ದಿಂದ ೧೦೦೦೦ ದವರೆಗೂ ಮಹಿಳಾ ಕಾರ್ಮಿಕರು ಮೆಣಸಿನಕಾಯಿ ಹೊಟ್ಟು ತೆಗೆಯುವುದು, ಶುಚಿ ಮಾಡುವುದು, ತೊಟ್ಟು ತೆಗೆಯುವ ಕಾಯಕದಲ್ಲಿ ನಿರತರಾಗಿರುತ್ತಾರೆ. ಆದರೆ ಅವರಿಗೆ ಅತೀ ಕಡಿಮೆ ವೇತನವನ್ನು ನೀಡಲಾಗುತ್ತಿತ್ತು. ಆರೋಗ್ಯದ ವಿಚಾರದಲ್ಲಿ ಅಲ್ಲಿ ಗಮನಹರಿಸದೇ ಇರುವ ಅಂಶವನ್ನು ಕಂಡುಕೊಂಡ ಸಂದರ್ಭದಲ್ಲಿ ಮಹಿಳಾ ಆರೋಗ್ಯದ ಮಹತ್ವವನ್ನು ಅರಿತುಕೊಂಡು ಈ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

೧.೬ ಅಧ್ಯಯನದ ವಿಧಾನ

ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಮೆಣಸಿನಕಾಯಿ **"ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ"** ಎಂಬ ಶೀರ್ಷಿಕೆಯಡಿ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಇಲ್ಲಿನ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರನ್ನು ಮಾತ್ರ ಸರಳ ಯಾದೃಚ್ಛಿಕ ವಿಧಾನವನ್ನು ಬಳಸಿಕೊಂಡು ಮಾಹಿತಿಗಾರರಿಂದ ಪ್ರಶ್ನಾವಳಿಗಳ ಮೂಲಕ ವೈಜ್ಞಾನಿಕವಾಗಿ ಅಧ್ಯಯನವನ್ನು ನಡೆಸಲಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಬಗ್ಗೆ ಮಾತ್ರ ಅಧ್ಯಯನವನ್ನು ಮಾಡಲಾಗಿದೆ.

ಪ್ರಾಥಮಿಕ ಮಾಹಿತಿ

ಅಧ್ಯಯನವು ಬಹುತೇಕ ಕ್ಷೇತ್ರಕಾರ್ಯವನ್ನು ಅವಲಂಬಿಸಿದೆ. ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಂದರ್ಶನದ ಸಮಯದಲ್ಲಿ ಮಾರುಕಟ್ಟೆಯ ವಿವಿಧ ಅಧಿಕಾರಿಗಳು, ಪುರುಷ ಕಾರ್ಮಿಕರು, ಕಛೇರಿಯ ಇತರ ಸಿಬ್ಬಂದಿ ವರ್ಗದಿಂದಲೂ ಮೌಖಿಕ ಮಾಹಿತಿಯನ್ನು ಕಲೆಹಾಕಲಾಗಿದೆ. ಇಲ್ಲಿ ಮಹಿಳಾ ಕೃಷಿ ಕಾರ್ಮಿಕರ ನೇರ ಸಂದರ್ಶನವನ್ನು ಪಡೆದು ಮಾಹಿತಿಯನ್ನು ಕಲೆಹಾಕಲಾಗಿದೆ. ಅಲ್ಲದೇ ಸಂಶೋಧಕರು ನೇರವಾಗಿ ಕಾರ್ಮಿಕರ ಜೊತೆ ಬೆರೆಯುವುದರ ಮೂಲಕ ಪರಿಣಾಮಕಾರಿಯಾದ ಹಾಗೂ ವಿಶ್ಲೇಷಣಾತ್ಮಕವಾಗಿ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಲಾಗಿದೆ.

ಅನುಷಂಗಿಕ ಮಾಹಿತಿ

ಅಧ್ಯಯನಕ್ಕೆ ಪೂರಕವಾಗಿ ಆರೋಗ್ಯ ನೀತಿ, ಕೃಷಿ ಕಾರ್ಮಿಕ ನೀತಿ ನಿಯಮಾವಳಿಗಳಿಗೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆ, ರಾಷ್ಟ್ರೀಯ ಆರೋಗ್ಯ ನೀತಿ ಮತ್ತು ರಾಜ್ಯ ಆರೋಗ್ಯ ಕಾರ್ಯಕ್ರಮಗಳ ಆದೇಶ, ಅಧಿಸೂಚನೆಗಳು ಹಾಗೆಯೇ ಮಹಿಳಾ ಮತ್ತು ಮಕ್ಕಳ

ಕಲ್ಯಾಣ ಇಲಾಖಾ ಸೂಚ್ಯಂಕಗಳ ಅಭಿವೃದ್ಧಿ ವರದಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಾಗೆಯೇ ಜಿಲ್ಲಾ ಕೃಷಿ ವಿಶ್ವವಿದ್ಯಾಲಯ, ತೋಟಗಾರಿಕಾ ಇಲಾಖೆ, ಹಾವೇರಿ ಜಿಲ್ಲಾ ಅಂಕಿ ಅಂಶಗಳ ಕೇಂದ್ರವನ್ನು ಸಂದರ್ಶಿಸಿ ಸಂಪೂರ್ಣ ಮಾಹಿತಿಯನ್ನು ಕಲೆಹಾಕಲಾಗಿದೆ. ಅಲ್ಲದೆ ಈ ನಿಟ್ಟಿನಲ್ಲಿ ಈಗಾಗಲೇ ನಡೆದಿರುವ ಕೆಲವು ಅಧ್ಯಯನಗಳು, ಸಂಶೋಧನೆಗಳು, ಸಂಶೋಧನಾ ಗ್ರಂಥಗಳು, ಜಾಲತಾಣಗಳು, ದಿನಪತ್ರಿಕೆ ಹಾಗೂ ಪಾಕ್ಷಿಕಗಳಲ್ಲಿ ಬಂದಂತಹ ಉತ್ತಮ ಲೇಖನಗಳಿಂದಲೂ ಮಾಹಿತಿಯನ್ನು ಕಲೆಹಾಕಲಾಗಿದೆ. ಸಂಪನ್ಮೂಲ ವ್ಯಕ್ತಿಗಳು, ಬುದ್ಧಿಜೀವಿಗಳು ಮತ್ತು ಆಸಕ್ತರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಲ್ಲದೇ ಈ ವಿಷಯವನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮುಖಾಮುಖಿಯಾಗಿ ಚರ್ಚಿಸಲಾಗಿದೆ.

ವಿಶ್ಲೇಷಣೆ: ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಈಗಾಗಲೇ ಕ್ಷೇತ್ರದಲ್ಲಿ ನಡೆಸಲ್ಪಟ್ಟಿರುವ ಅಧ್ಯಯನಗಳೊಂದಿಗೆ ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಸಂಗ್ರಹಿತ ಮಾಹಿತಿಯನ್ನು ಕೋಷ್ಠಕ ಮತ್ತು ರೇಖಾ ಚಿತ್ರಗಳ ಮೂಲಕ ವಿಶ್ಲೇಷಿಸಲಾಗಿದೆ. ಈ ವಿವರಣೆಗಳು ಸಂಗ್ರಹಿತ ಮಾಹಿತಿಯ ಕ್ರಮಬದ್ಧ ಮತ್ತು ವಸ್ತುನಿಷ್ಠವಾದ ಅಂಕಿಅಂಶಗಳನ್ನು ಆಧರಿಸಿದ ಮಾಹಿತಿಯಾಗಿದೆ. ಸರಳವಾದ ಮೈಕ್ರೋಸಾಫ್ಟ್ ಎಕ್ಸೆಲ್ ತಂತ್ರಾಂಶದಲ್ಲಿ ಅಂಕಿಅಂಶಗಳನ್ನು ದಾಖಲೀಕರಿಸಿ ಕೊಂಡು ಕೋಷ್ಟಕಗಳನ್ನು ರಚಿಸಲಾಗಿದೆ.

ಮಾಧ್ಯಮಿಕ ದತ್ತಾಂಶಗಳು

ಅಧ್ಯಯನಕ್ಕೆ ಸಂಬಂಧಿಸಿ ಸಿದ್ಧಪಡಿಸಿದ ಹಾಗೂ ಪ್ರಕಟಿಸಿದ ಮಾಹಿತಿಯನ್ನು ಈ ಕೆಳಗಿನ ವಿವಿಧ ಇಲಾಖೆಗಳ ವರದಿಗಳನ್ನು ಆಧರಿಸಿ ಪಡೆಯಲಾಗಿದೆ. ರಾಷ್ಟ್ರೀಯ ಕೃಷಿ ಮಾರುಕಟ್ಟೆ ನೀತಿ ವರದಿ, ತೋಟಗಾರಿಕಾ ಇಲಾಖಾ ವರದಿ, ಹಾವೇರಿ ಜಿಲ್ಲಾ ತೋಟಗಾರಿಕಾ ಮಾಹಿತಿ ವಿಭಾಗ, ಹಾವೇರಿ ಜಿಲ್ಲಾ ಕೃಷಿ ವಿಶ್ವವಿದ್ಯಾಲಯ, ಹಾವೇರಿ ಜಿಲ್ಲಾ ಅಂಕಿಅಂಶಗಳ ನೋಟ ೨೦೧೫ ರಿಂದ ೨೦೧೯, ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೋವಿಡ್–೧೯ ಮಾಹಿತಿ ವಿಭಾಗ, ರಾಷ್ಟ್ರೀಯ ಆರೋಗ್ಯ ನೀತಿ ೧೯೮೩, ಕೃಷಿ ಮಾರುಕಟ್ಟೆ ನೀತಿ ೨೦೨೦, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ೨೦೦೫–೨೦೧೨, ಸಮಗ್ರ ಆರೋಗ್ಯ ನೀತಿ ೨೦೦೪, ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಭಾಗ ೨೦೧೪ ಇತ್ಯಾದಿಗಳ ಮಾಹಿತಿಗಳನ್ನು ಆಧರಿಸಿ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೭ ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳು

ಅಭಿವೃದ್ಧಿಯ ಪಥಗಳು ಇಂದು ಬದಲಾದಂತೆ ಅದರ ಪರಿಕರಗಳೂ ಬದಲಾಗುತ್ತಿವೆ. ಮಹಿಳೆಯನ್ನು ಒಳಗೊಳ್ಳದ ಅಭಿವೃದ್ಧಿಯು ಇಂದು ಅಪೂರ್ಣವೆಂದು ಪರಿಗಣಿಸಲಾಗಿದೆ.

ದುಡಿಯುತ್ತಿರುವ ಮಹಿಳೆಯು ಬೆಳೆಯುತ್ತಿರುವ ಆರ್ಥಿಕತೆಗೆ ಹೆಚ್ಚಿನ ಕೊಡುಗೆಯನ್ನು ನೀಡಬಲ್ಲಳು ಎಂಬುದು ಹಲವಾರು ಸಂದರ್ಭಗಳಲ್ಲಿ ಸಾಬೀತಾಗಿರುವ ಸಂಗತಿಯಾಗಿದೆ. ಆದರೂ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಆರೋಗ್ಯವು ಕಡಿಮೆ ಬಾಳಿಕೆಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ದುಡಿಯುವ ಮಹಿಳೆಯರ ಆರೋಗ್ಯ ರಕ್ಷಣೆ ನಮ್ಮ ಹಾಗೂ ಸಮಾಜದ ಜವಾಬ್ದಾರಿಯಾಗಿದೆ. ಏಕೆಂದರೆ, ಮಹಿಳೆಯರು ಹೆಚ್ಚು ಆರೋಗ್ಯವಾಗಿದ್ದಷ್ಟು ಅವರ ಉತ್ಪಾದಕತೆಯ ಪ್ರಮಾಣವು ಅಧಿಕವಾಗುವುದು. ಈ ನಿಟ್ಟಿನಲ್ಲಿ ನಮ್ಮ ದೇಶದಲ್ಲಿ ಹೆಚ್ಚಿನ ಮಹಿಳೆಯರು ಕೃಷಿ ಕಾರ್ಮಿಕರೇ ಆಗಿರುವುದರಿಂದ ಅತಿ ಹೆಚ್ಚು ಮಹಿಳಾ ಕಾರ್ಮಿಕರನ್ನು ಹೊಂದಿರುವ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಮೆಣಸಿನಕಾಯಿ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಆಯ್ಕೆ ಮಾಡಿಕೊಂಡು ಅಲ್ಲಿ ದುಡಿಯುತ್ತಿರುವ ಸಾವಿರಾರು ಮಹಿಳೆಯರ ಆರೋಗ್ಯ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಲು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ವೃತ್ತಿಯಲ್ಲಿ ಪಡೆಯುವ ವೇತನದಲ್ಲೂ ಲಿಂಗ ತಾರತಮ್ಯವನ್ನು ಎದುರಿಸಬೇಕಾಗುತ್ತದೆ. ಆಕೆಯ ದುಡಿಮೆಗೆ ತಕ್ಕುದಾದ ಕೂಲಿಯೂ ದೊರಕದೇ ಇದ್ದಾಗ ಆಕೆಯು ಉತ್ತಮ ಆರೋಗ್ಯ ಮಟ್ಟವನ್ನು ಕಾಯ್ದುಕೊಳ್ಳಲು ಬಹಳ ಹೆಣಗಬೇಕಾಗುತ್ತದೆ. ಆದುದರಿಂದ ಅವರ ಆರೋಗ್ಯದ ಬಗ್ಗೆ ಅಧ್ಯಯನ ಮಾಡುವುದೇ ಸೂಕ್ತವೆಂದೆನಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳ ಕುರಿತು ಈ ಕೆಳಕಂಡ ಟಿಪ್ಪಣಿಗಳನ್ನು ಮಾಡಲಾಗಿದೆ. ಮಹಿಳೆಯರ ಆರೋಗ್ಯದ ಅಭಿವೃದ್ಧಿ ಕುರಿತಂತೆ ಮಾಡಿದ ಎಷ್ಟೋ ಯೋಜನೆಗಳು ಸರಿಯಾಗಿ ಗುರಿಯನ್ನು ತಲುಪಿಲ್ಲ. ಹಾಗಾಗಿ ಸರಕಾರದ ಅವೆಷ್ಟೋ ಯೋಜನೆಗಳು ನಿರೀಕ್ಷಿತ ಯಶಸ್ಸನ್ನು ಕಾಣುತ್ತಿಲ್ಲ. ಹೀಗೆ ಹಾವೇರಿ ಜಿಲ್ಲೆಯ ಮಹಿಳಾ ಕಾರ್ಮಿಕರಲ್ಲಿ ಆರೋಗ್ಯ ಸಂಬಂಧಿ ಯೋಜನೆಗಳ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಸಫಲತೆಯನ್ನು ಕಂಡಿವೆ ಎಂಬುದರ ಕುರಿತಂತೆ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಹಾವೇರಿ ಜಿಲ್ಲೆಯ ಬ್ಯಾಡಗಿ ಮೆಣಸಿನಕಾಯಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಆರೋಗ್ಯದ ಸ್ಥಿತಿಗತಿಯ ಬಗ್ಗೆ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

- ಅಧ್ಯಯನವು ಮೆಣಸಿನಕಾಯಿ ಮಾರುಕಟ್ಟೆಯಲ್ಲಿನ ಮಹಿಳಾ ಕಾರ್ಮಿಕರ ಆರೋಗ್ಯದ ಸಮಸ್ಯೆಗಳನ್ನು ಮಾತ್ರ ಪರಿಗಣಿಸಿದ್ದು ಅಧ್ಯಯನದ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಸಾಂಧರ್ಭಿಕವಾಗಿ ವೈದ್ಯಾಧಿಕಾರಿಗಳು, ಇತರ ಅಧಿಕಾರಿ ವರ್ಗದವರನ್ನೂ ಸಂದರ್ಶನಕ್ಕೆ ಒಳಪಡಿಸಲಾಗಿದೆ.

- ಮಾಹಿತಿದಾರರ ಗೌಪ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಮರೆಮಾಚಿದ ಮಾಹಿತಿಗಳು ಅಧ್ಯಯನದ ಸ್ಪಷ್ಟತೆಯನ್ನು ತೀರ್ಮಾನಿಸಲು ವಿಫಲವಾಗಿರುವುದು ಅಧ್ಯಯನದ ಮಿತಿಯಾಗಿದೆ.
- ಮೆಣಸಿನಕಾಯಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರನ್ನು ಮಾತ್ರ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.
- ಜಿಲ್ಲೆಯ ನಾಗರಿಕರು, ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧಿಕಾರಿಗಳು

ಹಾವೇರಿ ಜಿಲ್ಲೆಯು ೧೫,೯೭,೬೬೮ ಜನಸಂಖ್ಯೆಯನ್ನು ಹೊಂದಿದ್ದು, ಹಲವಾರು ಕೃಷಿ ಬೆಳೆಗಳಿಗೆ ಜಿಲ್ಲೆಯು ಹೆಸರುವಾಸಿಯಾಗಿದೆ. ಬ್ಯಾಡಗಿ ತಾಲೂಕು ೧,೪೧,೦೨೪ ಜನಸಂಖ್ಯೆಯನ್ನು ಹೊಂದಿದೆ. ಜಿಲ್ಲೆಯಲ್ಲಿ ಒಟ್ಟು ೪,೮೯,೨೦೩ ಮುಖ್ಯ ಕೆಲಸಗಾರರಿದ್ದು, ೧,೦೯,೮೮೯ ಅರೆಕಾಲಿಕ ಕೆಲಸಗಾರರು ಹಾಗೂ ೬,೪೩,೦೧೫ ನಿರುದ್ಯೋಗಿಗಳು ಇದ್ದಾರೆ. ಜಿಲ್ಲೆಯಲ್ಲಿ ಒಟ್ಟು ೧,೪೭,೭೯ ಕೃಷಿ ಕಾರ್ಮಿಕರಿದ್ದು, ಅದರಲ್ಲಿ ೧,೪೫,೪೦೫ ಮಹಿಳಾ ಕೃಷಿ ಕಾರ್ಮಿಕರಾಗಿದ್ದಾರೆ. ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಯು ಸುಮಾರು ಎಂಭತ್ತು ಎಕರೆ ವಿಸ್ತಾರವಾದ ಪ್ರದೇಶವನ್ನು ಹೊಂದಿದೆ. ಇಲ್ಲಿ ಸುಮಾರು ೨೮೦ ರಿಂದ ೩೦೦ರಷ್ಟು ಅಂಗಡಿಗಳಿದ್ದು, ಪ್ರತಿದಿನ ಸುಮಾರು ೩೦೦೦ ದಿಂದ ೫೦೦೦ ದಷ್ಟು ಕಾರ್ಮಿಕರು ಮೆಣಸಿನಕಾಯಿ ತೊಟ್ಟು ಬಿಡಿಸಲು, ಪ್ಯಾಕ್ ಮಾಡಲು ಹಾಗೂ ತುಂಬು ತೆಗೆಯುವ ಕೆಲಸದಲ್ಲಿ ತೊಡಗಿಕೊಂಡಿರುತ್ತಾರೆ. ಡಿಸೆಂಬರ್‌ನಿಂದ ಏಪ್ರಿಲ್‌ವರೆಗೆ ಇಲ್ಲಿ ಬಿರುಸಿನ ವ್ಯಾಪಾರ ಚಟುವಟಿಕೆಗಳು ನಡೆಯುತ್ತಿದ್ದು ಆ ವೇಳೆಯಲ್ಲಿ ೮೦೦೦ ದಿಂದ ೧೦೦೦೦ ದವರೆಗೂ ಮಹಿಳಾ ಕಾರ್ಮಿಕರು ಇಲ್ಲಿ ದಿನಗೂಲಿ ನೌಕರರಾಗಿ ದುಡಿಯುತ್ತಿದ್ದಾರೆ. ಪ್ರತಿ ಕೆ.ಜಿ.ಗೆ ಕನಿಷ್ಠ ೮ ರಿಂದ ೧೦ ರೂಪಾಯಿವರೆಗೆ ವೇತನ ಪಡೆಯುವ ಇವರು ಬಿಡುವಿಲ್ಲದೇ ದುಡಿಯುತ್ತಾರೆ. ಹೀಗಾಗಿ ತಮ್ಮ ಆರೋಗ್ಯದ ಬಗೆಗೆ ಹೆಚ್ಚಿನ ಕಾಳಜಿಯಾಗಲೀ, ಶ್ರಮವಾಗಲೀ ಮಾಡದೇ ಇರುವುದು ಗಮನಿಸಬೇಕಾದ ಅಂಶವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಇಲ್ಲಿ ದುಡಿಯುವ ಮಹಿಳೆಯರ ಆರೋಗ್ಯದ ದೃಷ್ಟಿಕೋನದಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಯಾವುದೇ ಒಂದು ವಸ್ತುನಿಷ್ಠ ಹಾಗೂ ಪರಿಪೂರ್ಣವಾದ ಅಧ್ಯಯನವನ್ನು ಕೈಗೊಳ್ಳಬೇಕಾದರೆ ಒಂದು ಪರಿಧಿಯ ಅವಶ್ಯಕತೆ ಇರುತ್ತದೆ. ಈ ಕಾರಣಕ್ಕಾಗಿ ಪ್ರಸ್ತುತ ಅಧ್ಯಯನಕ್ಕೆ ಕಾಲಮಿತಿಯನ್ನು ಗಮನದಲ್ಲಿಟ್ಟುಕೊಂಡು **"ಕೃಷಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ"** ಎಂಬ ಶೀರ್ಷಿಕೆಯಡಿ ಹಾವೇರಿ ಜಿಲ್ಲೆಯ ಬ್ಯಾಡಗಿ

ತಾಲೂಕನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಅಧ್ಯಯನದ ವಿಷಯಕ್ಕೆ ತಕ್ಕಂತೆ ಬ್ಯಾಡಗಿ ತಾಲೂಕನ್ನು ಅನುಲಕ್ಷಿಸಿ ಪ್ರಸ್ತುತ ಅಧ್ಯಯನಕ್ಕೆ ಒಂದು ಚೌಕಟ್ಟನ್ನು ಹಾಕಿಕೊಳ್ಳಲಾಗಿದೆ. ಇದರಲ್ಲಿ ಕೃಷಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳೆಯರ ಆರೋಗ್ಯ ಸ್ಥಿತಿಗತಿ, ಅವರ ಸಮಸ್ಯೆಗಳು, ಆಯ್ದುಕೊಂಡ ಪ್ರದೇಶದ ವ್ಯಾಪ್ತಿ, ಆಯ್ಕೆ ಮಾಡಲ್ಪಟ್ಟ ನಮೂನೆಗಳು, ಸಮಯ ಮತ್ತು ಸನ್ನಿವೇಶಕ್ಕೆ ತಕ್ಕಂತೆ ಪ್ರಸ್ತಾಪವಾಗಿರುತ್ತದೆ. ಅಧ್ಯಯನಕ್ಕೆ ಆಯ್ಕೆ ಮಾಡಿದ ವಿಷಯಾನುಸಾರ **"ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ"** ಎಂಬ ಶೀರ್ಷಿಕೆಯಡಿ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿನ ಮಹಿಳಾ ಕಾರ್ಮಿಕರ ಆರೋಗ್ಯದ ಕುರಿತಂತೆ ಅಧ್ಯಯನ ಕೈಗೆತ್ತಿಕೊಳ್ಳಲಾಗಿದೆ.

೧.೮ ಅಧ್ಯಯನದ ವಿಭಾಗೀಕರಣ

ಅಧ್ಯಾಯ ಒಂದು – ಪ್ರಸ್ತಾವನೆ: ಈ ಅಧ್ಯಾಯದಲ್ಲಿ ಅಧ್ಯಯನದ ವಿಷಯ, ಸಮಸ್ಯೀಕರಣ, ಅಧ್ಯಯನದ ಉದ್ದೇಶ, ಅಧ್ಯಯನದ ಮಹತ್ವ, ಅಧ್ಯಯನದ ವಿಧಾನ, ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳು ಒಳಗೊಂಡಿವೆ.

ಅಧ್ಯಾಯ ಎರಡು – ಅಧ್ಯಯನದ ಸಾಹಿತ್ಯ ಪರಾಮರ್ಶೆ: ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಸಾಹಿತ್ಯ ಪರಾಮರ್ಶೆ ಇದ್ದು ಅಭಿವೃದ್ಧಿ ಬಗೆಗಿನ ಸಾಹಿತ್ಯ ಪರಾಮರ್ಶೆ, ಆರೋಗ್ಯದ ಕುರಿತಾದ ಸಾಹಿತ್ಯ ವಿಮರ್ಶೆ, ಅಭಿವೃದ್ಧಿ ಮತ್ತು ಕೃಷಿ, ಅಭಿವೃದ್ಧಿ ಮತ್ತು ಮಹಿಳೆಯ ಬಗೆಗಿನ ಸಾಹಿತ್ಯ ಪರಾಮರ್ಶನ, ಮಹಿಳೆ ಮತ್ತು ಆರೋಗ್ಯದ ಬಗೆಗಿನ ಸಾಹಿತ್ಯ ಪರಾಮರ್ಶನ, ಕೃಷಿ ಮಾರುಕಟ್ಟೆ ಮತ್ತು ಮಹಿಳಾ ಕಾರ್ಮಿಕರ ದುಡಿಮೆಯ ಬಗೆಗಿನ ಅಂತಾರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಗಳನ್ನು ಕೇಂದ್ರೀಕರಿಸಿ ನಡೆಸಲಾದ ಸಾಹಿತ್ಯ ವಿಮರ್ಶನ ನಡೆಸಲಾಗಿದೆ.

ಅಧ್ಯಾಯ ಮೂರು – ಅಧ್ಯಯನದ ಕ್ಷೇತ್ರ ಪರಿಚಯ: ಇದರಲ್ಲಿ ಹಾವೇರಿ ಜಿಲ್ಲೆಯನ್ನು ಪರಿಚಯಿಸಲಾಗಿದ್ದು, ಅಧ್ಯಯನಕ್ಕೊಳಪಡಿಸಿದ ತಾಲೂಕಿನ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ಒದಗಿಸಲಾಗಿದೆ. ಬ್ಯಾಡಗಿ ತಾಲೂಕಿನ ಜನಸಂಖ್ಯೆ, ಸಾಕ್ಷರತಾ ಪ್ರಮಾಣ, ಇತಿಹಾಸ, ಭೌಗೋಳಿಕ ವಿಸ್ತೀರ್ಣ, ಜನಸಾಂದ್ರತೆ, ಲಿಂಗ ಪ್ರಮಾಣ, ಆರ್ಥಿಕ ಸ್ಥಿತಿಗತಿ, ಬೆಳೆಗಳು, ಬ್ಯಾಂಕ್‌ಗಳು, ಉದ್ಯೋಗ, ಮಾನವ ಅಭಿವೃದ್ಧಿ ಸೂಚ್ಯಂಕ, ಶಿಕ್ಷಣ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ, ನೀರಾವರಿ ಸೌಲಭ್ಯ, ವ್ಯವಸಾಯ, ಮುಖ್ಯ ಕೆಲಸಗಾರರು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆಯ ಬಗೆಗಿನ ಮಾಹಿತಿಯನ್ನು ಒಳಪಡಿಸಲಾಗಿದೆ.

ಅಧ್ಯಾಯ ನಾಲ್ಕು – ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ ಬಗ್ಗೆ ಕ್ಷೇತ್ರಕಾರ್ಯಾಧಾರಿತ ವಿಶ್ಲೇಷಣೆ ಮತ್ತು ಚರ್ಚೆ: ಇದರಲ್ಲಿ ಕೃಷಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಮಹಿಳೆಯರ ಆರೋಗ್ಯದ ಸಮಸ್ಯೆಗಳು, ಅವರಿಗೆ ಒದಗಿಸಲಾಗಿರುವ ಸೌಲಭ್ಯಗಳು, ಸರಕಾರದ ಕಡೆಯಿಂದ ದೊರೆಯಲ್ಪಡುವ ಸವಲತ್ತುಗಳ ಕುರಿತಂತೆ ಕ್ಷೇತ್ರಕಾರ್ಯಾಧಾರಿತ ವಿವರಗಳನ್ನು ನೀಡಲಾಗಿದ್ದು ಈ ವಿಷಯಗಳ ಕುರಿತಾಗಿ ಚರ್ಚಿಸಲಾಗಿದೆ.

ಅಧ್ಯಾಯ ಐದು – ಉಪಸಂಹಾರ: ಈ ಅಧ್ಯಾಯದಲ್ಲಿ ಉಳಿದ ನಾಲ್ಕು ಅಧ್ಯಾಯಗಳಲ್ಲಿ ಕಂಡುಕೊಂಡ ಫಲಿತಗಳನ್ನು ವಿಶ್ಲೇಷಣೆ ಮಾಡುವುದರೊಂದಿಗೆ ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ.

ಕೊನೆಯ ಟಿಪ್ಪಣಿಗಳು

೧. ಕುಮಾರ್ ಆರ್., ನೊವಾಕ್ ಜೆ., ರಾಘವನ್ ಪಿ., "ಸ್ಟ್ರಕ್ಚರ್ ಆ್ಯಂಡ್ ಎವಲ್ಯೂಷನ್ ಆಫ್ ಬ್ಲಾಗ್ ಸ್ಪೇಸ್ ಕಮ್ಯುನಿಕೇಶನ್ ಆಫ್ ದ ಎ.ಸಿ.ಎಂ.", ೨೦೦೪. ಪುಟ ೩೫-೩೯.

೨. ಚಂದ್ರಶೇಖರ್, ಟಿ.ಆರ್. "ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦. ಪುಟ ೫-೩೩.

೩. ಹೇಮಲತಾ, "ಅಭಿವೃದ್ಧಿಯ ಲಿಂಗ ಸಂಬಂಧಿ ಆಯಾಮಗಳು", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯. ಪುಟ ೧೫೩-೧೫೭.

೪. ಕರ್ನಾಟಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ೨೦೧೧ರ ಅಂಕಿಅಂಶಗಳ ಆಧಾರ.

೫. . ಚಂದ್ರಶೇಖರ್, ಟಿ.ಆರ್ "ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ", ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦. ಪುಟ ೫-೪೫.

೬. ಬಾಲ ಎನ್., "ಸೆಲೆಕ್ಟಿವ್ ಡಿಸ್ಕ್ರಿಮಿನೇಷನ್ ಅಗೈನ್ಸ್ಟ್ ವುಮೆನ್ ಇನ್ ಇಂಡಿಯನ್ ಅಗ್ರಿಕಲ್ಚರ್ – ಎ ರಿವ್ಯೂ", ಎಗ್ರಿಕಲ್ಚರ್ ರಿವ್ಯೂಸ್, ೨೦೧೦. ಪುಟ ೨೨೪-೨೨೮.

೭. ಮಜುಮ್ದಾರ್, ಆರ್.ಸಿ. "ಹಿಸ್ಟರಿ ಆ್ಯಂಡ್ ಕಲ್ಚರ್ ಆಫ್ ದ ಇಂಡಿಯನ್ ಪೀಪಲ್ – ದ ವೇದಿಕ್ ಏಜ್", ಜಾರ್ಜ್ ಆಲ್ಲನ್ ಆ್ಯಂಡ್ ಉನ್‌ವಿನ್ ಪಬ್ಲಿಕೇಷನ್, ಲಂಡನ್, ೧೯೫೧. ಪುಟ ೨೦೧-೨೦೨.

೮. ಜಿತೇಂದ್ರನಾಥ್ ಬ್ಯಾನರ್ಜಿ, "ದ ಡೆವಲಪ್‌ಮೆಂಟ್ ಆಫ್ ಹಿಂದೂ ಐಕಾನಾಗ್ರಫಿ", ಮುನ್ಶಿರಾಮ್ ಮನೋಹರ್‌ಲಾಲ್, ನ್ಯೂಡೆಲ್ಲಿ, ೧೯೮೫. ಪುಟ ೪೯೦-೪೯೬.

೯. ಮಜುಮ್ದಾರ್, ಆರ್.ಸಿ. "ಹಿಸ್ಟರಿ ಆ್ಯಂಡ್ ಕಲ್ಚರ್ ಆಫ್ ದ ಇಂಡಿಯನ್ ಪೀಪಲ್ – ದ ಕ್ಲಾಸಿಕಲ್ ಏಜ್", ಜಾರ್ಜ್ ಆಲ್ಲನ್ ಆ್ಯಂಡ್ ಉನ್‌ವಿನ್ ಪಬ್ಲಿಕೇಷನ್, ಲಂಡನ್, ೧೯೫೧. ಪುಟ ೧೮೦-೧೮೨.

೧೦. ಭಟ್ಟಾಚಾರ್ಯ, "ಎ ನಾನ್-ಆರ್ಯನ್ ಎಸ್ಪೆಕ್ಟ್", ಪುಟ ೧೯೭-೧೯೮.

೧೧. ಸದಾಶಿವನ್, "ದೇವದಾಸಿ ಸಿಸ್ಟಂ ಇನ್ ಮಿಡೀವಲ್ ತಮಿಳುನಾಡು", ಸಿ.ಬಿ.ಎಚ್. ಪಬ್ಲಿಕೇಷನ್, ೧೯೯೩. ಪುಟ ೧೦-೧೨.

೧೨. ಡೌಬೊಯಿಸ್, "ಕಲರ್ ಆ್ಯಂಡ್ ಡೆಮಾಕ್ರಸಿ – ಕಾಲನೀಸ್ ಆ್ಯಂಡ್ ಪೀಸ್", ಜರ್ನಲ್ ಆಫ್ ಅಮೆರಿಕನ್ ಅಕಾಡೆಮಿ ಆಫ್ ಪೊಲಿಟಿಕಲ್ ಆ್ಯಂಡ್ ಸೋಷಿಯಲ್ ಸಯನ್ಸ್, ವಾಲ್ಯೂಮ್ ೧೧., ೧೪೯೮. ಪುಟ ೧-೨೩.

೧೩. ವಿದ್ಯಾರ್ಥಿ, ಎಲ್.ವಿ. "ಪ್ರಾಬ್ಲಮ್ಸ್ ಆ್ಯಂಡ್ ಪ್ರೋಜೆಕ್ಟ್ಸ್ ಆಫ್ ಟ್ರೈಬಲ್ ಡೆವೆಲೆಪ್‌ಮೆಂಟ್ಸ್ ಇನ್ ಇಂಡಿಯಾ", ಇಂಡಿಯಾನ್ ಅನ್‌ತ್ರೋಪೊಲಾಜಿಕಲ್‌ಅಸೋಸಿಯೇಶನ್, ೧೯೭೨.

೧೪. ಗುನ್ನಾರ್ ಮಿರ್ಡಲ್,"ದ ಚಾಲೆಂಜ್ ಆಫ್ ವರ್ಲ್ಡ್ ಪವರ್ಟಿ",ಪ್ಯಾಂಥನ್‌ಬುಕ್ ಹೌಸ್, ನ್ಯೂಯಾರ್ಕ್, ೧೯೭೦.

೧೫. ಬಸಪ್ಪ, ಎಸ್. "ಅಭಿವೃದ್ಧಿಯ ಆಯಾಮಗಳು", ಇಂದ್ರನೀಲಮಣಿಂ ಪ್ರಕಾಶನ, ಚಿಕ್ಕೋಡಿ ೨೦೨೦.

೧೬. ಶ್ರೀದೇವಿ ಜೊಂಗನವರ, "ಮಹಿಳಾ ಕೃಷಿ ಕಾರ್ಮಿಕರ ಬಿಕ್ಕಟ್ಟುಗಳು ಮತ್ತು ಸಾಮಾಜಿಕ ಸ್ಥಿತಿಗತಿ", ಇಂದ್ರನೀಲಮಣಿಂ ಪ್ರಕಾಶನ, ಚಿಕ್ಕೋಡಿ ೨೦೨೦.

೧೭. ಜನಾರ್ದನ, "ಬಡತನದ ಪರಿಕಲ್ಪನೆ", ಅಭಿವೃದ್ಧಿ ಅಧ್ಯಯನ ವಿಭಾಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭.

೧೮. ಶಾಂತವೀರ ಭದ್ರಯ್ಯ, ಎಸ್.ಎಂ. "ವಾಣಿಜ್ಯ ಬೆಳೆಗಳು", ಕೃಷಿ ವಿಜ್ಞಾನ ವಾಹಿನಿ, ಸಂಜಯನಗರ, ಬೆಂಗಳೂರು, ೨೦೧೩.

೧೯. . ಚಂದ್ರಶೇಖರ್, ಟಿ.ಆರ್ "ಅಭಿವೃದ್ಧಿ ಅಧ್ಯಯನ ಸಂಯುಕ್ತ ಸಂಚಿಕೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೦. ಹೊಸಮನಿ, ಎಚ್.ಬಿ. ಬಬಲಾದ, ಬಿ.ಎಂ. ಚಿತ್ತಾಪೂರ ಮತ್ತು ವಿ.ಎಸ್. ಕನ್ನೂರ, "ಮೆಣಸಿನಕಾಯಿ ಬೆಳೆ", ೧೯೮೬.

೨೧. .ಮೂರ್ತಿ, ಟಿ.ಹೆಚ್ "ಮಾನವ ಸಂಪನ್ಮೂಲ ಅಭಿವೃದ್ಧಿ-ಕರ್ನಾಟಕದ ಒಂದು ತೌಲನಿಕ ವಿಶ್ಲೇಷಣೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೨೨. ಮುಜಾಫರ್ ಅಸ್ಸಾದಿ, "ಜಾಗತೀಕರಣ ಮತ್ತು ನಾಗರಿಕ ಸಮಾಜ ಭಾರತದ ಸಂದರ್ಭದಲ್ಲಿ ಸವಾಲುಗಳ ನಿರ್ವಹಣೆ", ಪ್ರಸಾರಾಂಗ, ಅಭಿವೃದ್ಧಿ ಅಧ್ಯಯನ ಸಂಯುಕ್ತ ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨.

೨೩. ಮಿಶ್ರಾ, "ವುಮೆನ್ ಇನ್ ಮೊಘಲ್ ಇಂಡಿಯಾ", ಭಾರತೀಯ ವಿದ್ಯಾಭವನ್, ಬಾಂಬೆ, ೧೯೫೧.

೨೪. ಗುಪ್ತಾ ಆರ್., "ದ ರೋಲ್ ಆಫ್ ವುಮೆನ್ ಇನ್ ಎಕನಾಮಿಕ್ ಡೆವಲಪ್‌ಮೆಂಟ್", ಯೋಜನಾ ೩೧(೮), ೧೯೮೭.

ಅಧ್ಯಾಯ – ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಾಯ – ಎರಡು

ಅಧ್ಯಯನಗಳ ಸಮೀಕ್ಷೆ

ಭಾರತವು ಕೃಷಿ ಆಧಾರಿತ ದೇಶವಾಗಿದ್ದು ಗ್ರಾಮೀಣ ಭಾಗದ ೬೦% ಜನರು ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಅದರಲ್ಲೂ ಗ್ರಾಮೀಣ ಭಾಗದಲ್ಲಿ ಮಹಿಳೆಯರು ಹೆಚ್ಚಾಗಿ ಕೃಷಿ ಉದ್ಯೋಗಿಗಳಾಗಿದ್ದು ದೇಶದ ಆರ್ಥಿಕತೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ. ಮಹಿಳೆಯು ಸ್ವಭಾವತಃ ಸೂಕ್ಷ್ಮ ಹಾಗೂ ಸಂವೇದನಾಶೀಲ ಆರೋಗ್ಯವನ್ನು ಹೊಂದಿದ್ದು, ಆಕೆಯ ಆರೋಗ್ಯ ರಕ್ಷಣೆಯು ಬಹುಮುಖ್ಯವಾದ ಅಂಶವಾಗಿದೆ. ಈ ನಿಟ್ಟಿನಲ್ಲಿ ಕೃಷಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳೆಯ ಆರೋಗ್ಯ ಸಮಸ್ಯೆಯ ಕುರಿತಂತೆ ಕೈಗೊಂಡ ಅಧ್ಯಯನಕ್ಕೆ ಸಂಬಂಧಿಸಿ ನಡೆಸಲಾದ ಸಾಹಿತ್ಯ ಪರಾಮರ್ಶೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ, ಜಿಲ್ಲಾ ಮಟ್ಟಗಳಲ್ಲಿ ಪ್ರಕಟಿತವಾದ ಸಾಹಿತ್ಯಗಳ ಪರಾಮರ್ಶೆಯನ್ನು ನಡೆಸಿ ಅಧ್ಯಯನಕ್ಕೆ ಒಂದು ಸೂಕ್ತವಾದ ನೆಲೆಗಟ್ಟನ್ನು ಕೊಡಲು ಪ್ರಯತ್ನಿಸಲಾಗಿದೆ.

ಕುಮಾರ್ ಆರ್., ನೊವಾಕ್ ಜೆ., ರಾಘವನ್ ಪಿ.ರವರ (೨೦೦೪) ಅಭಿಪ್ರಾಯದಂತೆ, ಸಂಶೋಧನೆ ಎಂಬುವುದು "ಜ್ಞಾನದ ಸಂಗ್ರಹಾಗಾರವನ್ನು ಹೆಚ್ಚಿಸಲು ಕೈಗೊಂಡ ಸೃಜನಶೀಲ ಮತ್ತು ವ್ಯವಸ್ಥಿತ ಕೆಲಸ". ಇದು ಒಂದು ನಿರ್ದಿಷ್ಟ ವಿಷಯವನ್ನು ಕೂಲಂಕುಷವಾಗಿ ಅಭ್ಯಸಿಸಿದಾಗ ಹೆಚ್ಚಿನ ಅಗತ್ಯ ಮಾಹಿತಿಯ ಸಂಗ್ರಹಣೆಯಾಗುತ್ತದೆ. ಸಂಶೋಧನೆ ಎನ್ನುವುದು ಒಂದು ವಿಷಯದ ವಿಚಾರಣೆ ಅಥವಾ ಪರೀಕ್ಷೆ. ವಿಶೇಷವಾಗಿ ಸತ್ಯಗಳ ಅವಿಷ್ಕಾರ ಮತ್ತು ಒಂದು ವ್ಯಾಖ್ಯಾನವನ್ನು ಗುರಿಯಾಗಿ ಇಟ್ಟುಕೊಂಡು ತನಿಖೆ ಅಥವಾ ಪ್ರಯೋಗಗಳನ್ನು ನಡೆಸುವುದು ಹಾಗೂ ಹೊಸ ಸಂಗತಿಗಳ ಬೆಳಕಿನಲ್ಲಿ ಅಂಗೀಕೃತ ಸಿದ್ಧಾಂತಗಳು ಅಥವಾ ಕಾನೂನುಗಳ ಪರಿಷ್ಕರಣೆ ಹಾಗೂ ಪ್ರಾಯೋಗಿಕ ಅನ್ವಯಿಕೆ" ಎಂದು ಬಣ್ಣಿಸಿರುತ್ತಾರೆ.

ಮಾನವನು ಸಂಘಜೀವಿ ಹಾಗೂ ಆಶಾವಾದಿ. ತನ್ನ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪರಾವಲಂಬಿ ಆಗಿರುವುದು ಆತನ ಮೂಲ ಲಕ್ಷಣಗಳಲ್ಲಿ ಒಂದಾಗಿದೆ. ಮಾನವನು ಪ್ರಕೃತಿಯೊಡನೆ ಅವಿನಾಭಾವ ಸಂಬಂಧ ಹೊಂದಿದ್ದಾನೆ. ಪ್ರಕೃತಿಯು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಹಲವಾರು ರೀತಿಯಲ್ಲಿ ಮಾನವನ ಜೀವನದಲ್ಲಿ ಪ್ರಭಾವವನ್ನು ಬೀರುತ್ತದೆ. ನಾಗರಿಕತೆ ಬೆಳೆದಂತೆಲ್ಲಾ ಮಾನವನ ವಿಚಾರಧಾರೆಗಳು ಬದಲಾಗಿದೆ. ಆತನ ಬೇಡಿಕೆಗಳು ಬದಲಾಗಿದೆ. ಬೇಡಿಕೆ ಎಂಬುವುದು ಒಂದು ವ್ಯವಸ್ಥೆಯನ್ನೇ ಬದಲಾಯಿಸಬಲ್ಲಂತಹ ಸಾಮರ್ಥ್ಯವನ್ನು ಹೊಂದಿರುವಂತಹ ಪ್ರಕ್ರಿಯೆಯಾಗಿದೆ. ಬೆಳೆಯುತ್ತಿರುವ ಮಾನವನ ಅವಶ್ಯಕತೆಗಳ ಬೇಡಿಕೆಗೆ ಸರಿದೂಗಿಸುವಂತಹ ಪೂರೈಕೆ ವ್ಯವಸ್ಥೆಯು ಆಗಲೇಬೇಕು. ಇಲ್ಲದಿದ್ದರೆ ಸಮಸ್ಯೆ ಉದ್ಭವವಾಗುವುದು ಸಾಮಾನ್ಯವಾಗಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕವಾಗಿ ಮಾನವನ ವಿಚಾರಧಾರೆಯು ಕೆಲವೊಮ್ಮೆ ಸಮಸ್ಯೆಗಳ ಪರಿಹಾರರೂಪವಾಗಿ ಅಥವಾ ಕೆಲವೊಮ್ಮೆ ಹೊಸ ಸಮಸ್ಯೆಗಳನ್ನು ಹುಟ್ಟುಹಾಕಲು ಕಾರಣವಾಗುತ್ತದೆ. ಪ್ರಸ್ತುತ ಅಧ್ಯಯನವು ಅಂತಹುದೇ ಸಮಸ್ಯೆಯ ಒಂದು ಅಧ್ಯಾಯದ ಭಾಗವಾಗಿದೆ. ಸಾಂಪ್ರದಾಯಿಕ ಹಾಗೂ ಅಭಿಜಾತವಾಗಿ ಅಭಿವೃದ್ಧಿ ಸಿದ್ಧಾಂತಗಳು ಮಹಿಳೆಯರನ್ನು ಅಭಿವೃದ್ಧಿಯ ಪರಿಧಿಯಿಂದ ದೂರವಿಟ್ಟಿವೆ. ಇಲ್ಲಿ ಮಹಿಳೆಯರನ್ನು ಆರ್ಥಿಕ ಅಭಿವೃದ್ಧಿಯ ಮಾನದಂಡವಾಗಿ ಪರಿಗಣಿಸಲಾಗಿಲ್ಲ. ಅವರಿಗೆ ಕೇವಲ ಜೈವಿಕ ಸ್ಥಾನಮಾನವನ್ನು ಮಾತ್ರ ನೀಡಲಾಗಿದೆ. ಅವರ ಕಾರ್ಯಕ್ಷೇತ್ರವನ್ನು ಮನೆಯ ಒಳಗಿನ ಚಟುವಟಿಕೆಗಳಿಗೆ ಮಾತ್ರ ಮೀಸಲಿಟ್ಟು ಅದನ್ನು ಖಾಸಗಿ ಎಂದು ಪರಿಗಣಿಸಲಾಗಿದೆ. ಆದರೆ ಪ್ರಸ್ತುತ ಅಭಿವೃದ್ಧಿಯ ಚಿಂತನೆಗಳು ಮಹಿಳೆಯರನ್ನು ಒಂದು ಅಭಿವೃದ್ಧಿಯ ಮಾಪನವನ್ನಾಗಿ ಪರಿಭಾವಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಖ್ಯಾತ ಸಂಶೋಧಕರಾದ **ಜೆ. ಮೆಡ್ಡಾರೆಸ್‌ರವರ (೨೦೦೮)** ಪ್ರಕಾರ, ಮಾನವ ಅಭಿವೃದ್ಧಿ ಸೂಚ್ಯಂಕವನ್ನು (ಎಚ್‌ಡಿಐ) ಒಂದು ದೇಶದ ಜನರ ಜೀವನ ಮಟ್ಟವನ್ನು ಅಳೆಯಲು ವ್ಯಾಪಕವಾಗಿ ಬಳಸಲಾಗುತ್ತದೆ. ಭಾರತವು ಎಚ್‌ಡಿಐ ಮೌಲ್ಯದಲ್ಲಿ ಅಧ್ಯಯನದ ಪ್ರಗತಿಯನ್ನು ಸಾಧಿಸಿದೆ.[೨] ದಕ್ಷಿಣ ಭಾಗದ ನಗರ ಪ್ರದೇಶಗಳಲ್ಲಿ ಆದಾಯದ ಬೆಳವಣಿಗೆಯು ಹೆಚ್ಚು ಕ್ರಿಯಾತ್ಮಕವಾಗಿದೆ. ಎಚ್‌ಡಿಐ ಶ್ರೇಣಿಗಳಿಂದ ಸಾಮಾಜಿಕ–ಆರ್ಥಿಕ, ಜನಸಂಖ್ಯಾ ಮತ್ತು ಆಹಾರ ಸೂಚ್ಯಂಕಗಳಲ್ಲಿನ ವ್ಯತ್ಯಾಸಗಳನ್ನು ಅಧ್ಯಯನ ಮಾಡಬಹುದಾಗಿದೆ. ಭಾರತದ ಎಚ್‌ಡಿಐ ಮೌಲ್ಯವು ಸುಧಾರಿಸಿದ್ದರೂ, ಇತರ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮ ಶ್ರೇಣಿ ಹೆಚ್ಚು ಸುಧಾರಿಸಿಲ್ಲ. ಭಾರತದಲ್ಲಿ ಮಕ್ಕಳ ಅಪೌಷ್ಟಿಕತೆ ಸಾರ್ವಜನಿಕ ಆರೋಗ್ಯ ರಕ್ಷಣಾ ವಲಯದಲ್ಲಿ ಬಹುದೊಡ್ಡ ಸಮಸ್ಯೆಯೆಂದೆನಿಸಲ್ಪಟ್ಟಿದೆ. ಈ ನಿಟ್ಟಿನಲ್ಲಿ ಆರೋಗ್ಯದ

ಸಮಸ್ಯೆಯಿಂದ ಉಂಟಾಗುವ ಅಪಾಯಗಳನ್ನು ನಿಭಾಯಿಸಲು ಸರಿಯಾದ ಪೋಷಣೆ ಮತ್ತು ಆರೋಗ್ಯದ ಅರಿವು ಬಹಳ ಮುಖ್ಯವಾಗಿದೆ. ಸಾರ್ವಜನಿಕ ಆರೋಗ್ಯ ರಕ್ಷಣಾ ವಲಯವು ಹಮ್ಮಿಕೊಂಡಿರುವ ಹಲವಾರು ರಾಷ್ಟ್ರೀಯ ಪೌಷ್ಠಿಕಾಂಶ ಕಾರ್ಯಕ್ರಮಗಳ ಹೊರತಾಗಿಯೂ, ಆರೋಗ್ಯ ಮತ್ತು ಪೌಷ್ಠಿಕಾಂಶದ ಕ್ಷೇತ್ರದಲ್ಲಿ ನಮಗೆ ಗಮನಾರ್ಹವಾದುದನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ. ನಗರ ಜನಸಂಖ್ಯೆಯ ಬದಲಾಗುತ್ತಿರುವ ಆಹಾರ ಪದ್ಧತಿಯು ಇನ್ನಷ್ಟು ಆರೋಗ್ಯ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಮಾನವ ಅಭಿವೃದ್ಧಿ ಪರಿಕಲ್ಪನೆಯು ಬಹಳ ಸಂಕೀರ್ಣ ಮತ್ತು ಬಹು ಆಯಾಮದ ವಿಶೇಷವನ್ನೊಳಗೊಂಡಿದೆ. ಒಂದು ದೇಶದ ಜನರ ಜೀವನಮಟ್ಟವನ್ನು ಅಳೆಯಲು ಒಂದು ಉಪಯುಕ್ತ ಮಾನದಂಡವಾಗಿ ಇದನ್ನು ಉಪಯೋಗಿಸಲಾಗಿದೆ.

ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಮೂರು ಇತರ ಸೂಚ್ಯಂಕಗಳ ಆಧಾರದ ಮೇಲೆ ಮಾಪನ ಮಾಡಲಾಗುತ್ತದೆ. ಅವುಗಳೆಂದರೆ – ದೀರ್ಘಾಯುಷ್ಯ, ಶೈಕ್ಷಣಿಕ ಸಾಧನೆ ಮತ್ತು ಉತ್ತಮ ಜೀವನಮಟ್ಟ. ೨೦೦೧ರ ಅಂಕಿಅಂಶಗಳ ಪ್ರಕಾರ ಭಾರತವು ಮಾನವ ಅಭಿವೃದ್ಧಿಯಲ್ಲಿ ೧೭೭ ದೇಶಗಳ ಪೈಕಿ ೧೨೭ನೇ ಸ್ಥಾನದಲ್ಲಿದೆ. ಅದೇ ರೀತಿ ಮಾನವ ಬಡತನ ಸೂಚ್ಯಂಕ(ಎಚ್‌ಪಿಐ)ದ ೧೦೩ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಭಾರತವು ೫೮ನೇ ಸ್ಥಾನ ಪಡೆದಿದೆ. ವೇಗವಾಗಿ ಪ್ರಗತಿಯನ್ನು ಸಾಧಿಸುವತ್ತ ಹೆಜ್ಜೆಯಿಡುವಲ್ಲಿ ಭಾರತವು ಇಂದು ಮುಂಚೂಣಿಯಲ್ಲಿದೆ. ಆದರೂ ಮೂಲಭೂತ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆ ಅಲ್ಲದೇ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ಕೆಲವೊಂದು ಮೂಲಭೂತ ಸಾಮಾಜಿಕ ಬದಲಾವಣೆಯ ಅಗತ್ಯವಿದೆಯೆಂದು ಲೇಖಕರು ಅಭಿಪ್ರಾಯಪಟ್ಟಿರುತ್ತಾರೆ. ಏಕೆಂದರೆ ಆರ್ಥಿಕ ಅಭಿವೃದ್ಧಿಯು ಬಹಳ ವಿಶಾಲವಾದ ದೃಷ್ಟಿಕೋನವನ್ನು ಆಧರಿಸಿದೆ. ಅಲ್ಲದೇ ಇದು ಪ್ರಮಾಣೀಕೃತ ಸೂಚ್ಯಂಕಗಳಿಗಿಂತಲೂ ಮಾನವನ ಯೋಗಕ್ಷೇಮ ಮತ್ತು ಸಾಮಾಜಿಕ ಅವಕಾಶಗಳ ಮೇಲೆ ಹೆಚ್ಚು ಕೇಂದ್ರೀಕೃತವಾಗಿದೆ. ಈ ಹಿಂದೆ ದೇಶದ ಅಭಿವೃದ್ಧಿಯು ದೇಶದ ವರಮಾನವನ್ನು ಅವಲಂಬಿಸಿದ್ದರೂ, ಕಾಲಾ ನಂತರದ ಬೆಳವಣಿಗೆಗಳಲ್ಲಿ ಇದಕ್ಕೆ ಹಲವಾರು ಅಂಶಗಳು ಸೇರ್ಪಡೆಗೊಂಡಿವೆ. ಅದರಲ್ಲಿ ಮುಖ್ಯವಾಗಿ ಮಾನವ ಅಭಿವೃದ್ಧಿ. ಯಾವುದೇ ಒಂದು ದೇಶವು ಉತ್ತಮ ಮಾನವ ಸಂಪನ್ಮೂಲವನ್ನು ಹೊಂದಿದ್ದರೆ ಆ ದೇಶವನ್ನು ನಾವು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದೆಯೆಂದು ಹೇಳಬಹುದು.

ಪ್ರಶಾಂತ್ ಎಚ್.ಡಿ. (೨೦೧೬) ಅವರು ತಮ್ಮ **"ಅಭಿವೃದ್ಧಿ ಮತ್ತು ಮಹಿಳೆ"** ಎಂಬ ವಿಷಯದ ಕುರಿತಾದ ಲೇಖನದಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ವ್ಯಕ್ತಪಡಿಸುತ್ತಾರೆ. ಅಭಿವೃದ್ಧಿ ಪ್ರಕ್ರಿಯೆಗಳು ಇಂದು ಯಾವ ದಿಕ್ಕಿನಲ್ಲಿ ಸಾಗುತ್ತಿವೆ? ಇಂದು ಅಭಿವೃದ್ಧಿ ಪದವು

ಒಂದು ಅರ್ಥಹೀನ ವಿಚಾರವಾಗಿದ್ದು ಸಮಯಕ್ಕೆ ತಕ್ಕಂತೆ ತನ್ನ ಬಣ್ಣವನ್ನು ಬದಲಾಯಿಸಿಕೊಳ್ಳುತ್ತಿದೆ. ದೇಶದಲ್ಲಿ ನಿರುದ್ಯೋಗ ಹಾಗೂ ಹಣ ಸಂಪಾದನೆ ಮಾಡುವ ಹಂಬಲದಿಂದ ಪ್ರಬಲ ಅನಿವಾರ್ಯತೆಯು ಇಂದು ಅಭಿವೃದ್ಧಿಯಾಗಿ ಮಾರ್ಪಟ್ಟಿದೆ. ಮಹಿಳೆಯರು ಅಭಿವೃದ್ಧಿಗೆ ಪೂರಕ ಎಂಬುದಾಗಿ ಹಲವಾರು ಅಧ್ಯಯನಗಳು, ವಿಶ್ವದಾದ್ಯಂತ ವರದಿಗಳು ಉಲ್ಲೇಖಿಸಿದ್ದರೂ ಮಹಿಳೆಯು ಇನ್ನೂ ಸಬಲೀಕರಣ ಎಂಬ ಪದದಲ್ಲಿಯೇ ತೃಪ್ತಿಯನ್ನು ಕಾಣುವಂತಾಗಿದೆ. ವಿಶ್ವ ಬ್ಯಾಂಕಿನ ಹಣಕಾಸಿನ ಸಹಾಯದಿಂದ ಸರಕಾರಗಳು ಮಹಿಳೆಯರ ದುಡಿಮೆಯನ್ನು ಪ್ರೋತ್ಸಾಹಿಸಲು ಹಲವಾರು ನಿಗಮಗಳನ್ನು ಸ್ಥಾಪಿಸಿದರೂ ಅದಕ್ಕೆ ಪೂರಕವಾದ ಹಣಕಾಸಿನ ನೆರವನ್ನು ನೀಡದೇ ಸತಾಯಿಸುತ್ತಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಕಳಪೆ ಗುಣಮಟ್ಟದಿಂದಾಗಿ ತಾಯಿಯ ಮರಣ ಪ್ರಮಾಣ ಹಾಗೂ ಶಿಶುಗಳ ಮರಣ ಪ್ರಮಾಣ ಇತರ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ತುಸು ಹೆಚ್ಚೆಂದೇ ಹೇಳಬಹುದು. ಮಹಿಳೆಯರು ಮತ್ತು ಮಕ್ಕಳ ಆರೋಗ್ಯದ ದೃಷ್ಟಿಕೋನದಿಂದ ಪ್ರಾರಂಭಿಸಲಾದ ಸಮಗ್ರ ಶಿಶುಯೋಜನೆಯ ಕೆಲವು ಅಂಶಗಳಲ್ಲಿ ಉತ್ತಮ ಪರಿಣಾಮವನ್ನು ಬೀರಿದ್ದರೂ ತಳಮಟ್ಟದಲ್ಲಿ ಅದರ ಪರಿಣಾಮಕಾರಿ ಅನುಷ್ಠಾನವು ಅತ್ಯಗತ್ಯ. ಅಲ್ಲದೇ ಜಗತ್ತಿನಲ್ಲಿ ಅತೀ ವೇಗವಾಗಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಭಾರತದಂತಹ ದೇಶಗಳಿಗೆ ಮಹಿಳೆಯರನ್ನು ಅಭಿವೃದ್ಧಿಯ ಕೇಂದ್ರವೆಂದು ಪರಿಗಣಿಸಲು ಆಗುತ್ತಿಲ್ಲ. ಅಲ್ಲದೇ ಭಾರತದ ಮಾನವ ಸಂಪತ್ತನ್ನು ಅತೀ ಕಡಿಮೆ ಲಭ್ಯವಾಗುವಂತೆ ಇಂದಿನ ಬಂಡವಾಳಶಾಹಿ ಜಗತ್ತು ಮಾಡುತ್ತಿದೆ.

ಅಭಿವೃದ್ಧಿ ಪ್ರಕ್ರಿಯೆಗಳು ಹೆಚ್ಚಿದಂತೆ ಮಹಿಳೆಯರ ಹಕ್ಕುಗಳು ತಮ್ಮ ಬೆಲೆಯನ್ನು ಕಳೆದುಕೊಳ್ಳುತ್ತಿವೆ. ಬಡ ಮಹಿಳೆಯರು ಇಂದು ಸಮಾಜದಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಆದರೆ ಅವರನ್ನು ಉದ್ಧರಿಸಬೇಕಾದ ವ್ಯವಸ್ಥೆಯು ಕೇವಲ ಸಬಲೀಕರಣ ಮಂತ್ರವನ್ನು ಜಪಿಸಿ ತಟಸ್ಥವಾಗಿದೆ. ಅಲ್ಲದೇ ಮಹಿಳೆಯರ ಅಭಿವೃದ್ಧಿ ಕುರಿತಂತೆ ಲೇಖಕರು, ಸರಕಾರಗಳು ಮಹಿಳೆಯರ ಪರ ತಮ್ಮ ಯೋಜನೆಗಳ ಅನುಷ್ಠಾನಗಳಲ್ಲಿ ಸಕಾರಾತ್ಮಕ ಧೋರಣೆಯನ್ನು ಹೊಂದಬೇಕು. ಅಲ್ಲದೇ ಅಭಿವೃದ್ಧಿ ನೀತಿಗಳು ಮಹಿಳೆಯರು ಮತ್ತು ಮಕ್ಕಳಿಗೆ ಸಮಾನತೆಯ ನೆಲೆಯಲ್ಲಿ ಎಲ್ಲಾ ಹಕ್ಕುಗಳನ್ನು ನೀಡಬೇಕು ಮಾತ್ರವಲ್ಲದೇ ಮಹಿಳೆಯರ ದುಡಿಮೆಯನ್ನು ಅಭಿವೃದ್ಧಿಯ ಸಂಕೇತವಾಗಿ ಪರಿಗಣಿಸಬೇಕು ಎಂದು ಅಭಿಪ್ರಾಯಪಟ್ಟಿರುತ್ತಾರೆ.೩

ಚಂದ್ರಶೇಖರ್‌ರವರು ಟಿ.ಆರ್. (೨೦೧೦) ತಮ್ಮ ಬರಹದಲ್ಲಿ ಅಭಿವೃದ್ಧಿ ಮತ್ತು ಲಿಂಗ ಸಂಬಂಧಗಳ ಬಗ್ಗೆ ವಿವರಿಸುತ್ತಾ, **"ಮಹಿಳೆಯರ ಶೋಷಣೆ"** ಎಂಬುದು ಈಗ ಕೇವಲ ಮಹಿಳೆಯರ ಸಮಸ್ಯೆಯಾಗಿ ಉಳಿದಿಲ್ಲ. ಇಂದು ಅದು ಸಮಾಜದ ಸಮಸ್ಯೆಯಾಗಿದೆ. ಇದು

ಪರೋಕ್ಷವಾಗಿ ಅಭಿವೃದ್ಧಿಯ ಸಮಸ್ಯೆಯೂ ಹೌದು. ಹಿಂದಿನಿಂದಲೂ ಮಹಿಳೆಯನ್ನು ಜೈವಿಕ ಘಟಕವಾಗಿ ಪರಿಭಾವಿಸಲಾಗಿದೆ. ಅಲ್ಲದೇ ಅವಳಿಗೆ ಸರಿಯಾದ ಅಸ್ತಿತ್ವವನ್ನು ಇಂದಿಗೂ ಸಮಾಜವು ನೀಡಿಲ್ಲ ಮಾತ್ರವಲ್ಲ ನೀಡಲು ಸಿದ್ಧವೂ ಇಲ್ಲ. ಇದರಿಂದಾಗಿ ಮಹಿಳೆಯು ಅನೇಕ ಅವಕಾಶಗಳಿಂದ ವಂಚಿತಳಾಗಿದ್ದಾಳೆ. ಹೀಗಾಗಿ ಅವಳು ಅಭಿವೃದ್ಧಿಯಿಂದಲೂ ವಂಚಿತಳಾಗಿದ್ದಾಳೆ. ಲೇಖಕರ ಅಧ್ಯಯನವು ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸಲಾಗಿದ್ದು, ಕುಸಿಯುತ್ತಿರುವ ಲಿಂಗಾನುಪಾತದ ಬಗ್ಗೆ ವಿವರಿಸಿದ್ದಾರೆ. ಕೇವಲ ಮೂರು ಜಿಲ್ಲೆಗಳಲ್ಲಿ ಲಿಂಗಾನುಪಾತವು ಸಾವಿರಕ್ಕಿಂತ ಅಧಿಕವಾಗಿದ್ದು ಅವುಗಳೆಂದರೆ – ಉಡುಪಿ, ದಕ್ಷಿಣ ಕನ್ನಡ ಮತ್ತು ಹಾಸನ. ಅಲ್ಲದೇ ಮಹಿಳೆಯರ ಸಾಕ್ಷರತೆಯೂ ತುಂಬಾ ಕೆಳಮಟ್ಟದಲ್ಲಿದೆ. ೨೦೦೧ರಲ್ಲಿ ನಮ್ಮ ರಾಜ್ಯದ ಮಹಿಳೆಯರ ಸಾಕ್ಷರತೆಯು ೫೬.೮೭%ರಷ್ಟಿತ್ತು. ಅಲ್ಲದೇ ರಾಜ್ಯದಲ್ಲಿ ಮಹಿಳೆಯರ ಸಾಕ್ಷರತೆಯು ಪುರುಷರ ಸಾಕ್ಷರತೆಗಿಂತ ೧೯.೨೩%ರಷ್ಟು ಕಡಿಮೆಯಿದೆ. ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣದ ಕುಸಿತದ ಬಗ್ಗೆ ಅಮರ್ತ್ಯಸೇನ್‌ರವರು ಹೆಚ್ಚು ಮುತುವರ್ಜಿ ವಹಿಸಿದ್ದಾರೆ. ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಮಹಿಳೆಯರಿಗೆ ಹೆಚ್ಚು ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯವಿರಬೇಕು. ಏಕೆಂದರೆ, ಮಹಿಳೆಯರ ಸ್ವಾಯತ್ತತೆಯೇ ಜನಸಂಖ್ಯಾ ನಿಯಂತ್ರಣಕ್ಕೆ ಪ್ರಬಲ ಉಪಾಯವಾಗಿದೆ. ಅಲ್ಲದೇ ಲಿಂಗಸಂಬಂಧಗಳನ್ನು ಜೈವಿಕವಾಗಿ ನೋಡುವ ಅಂಶವು ಸರಿಯಲ್ಲ. ಇದು ಟೀಕಾತ್ಮಕವೂ ಆಗಿದೆ. ಮಹಿಳೆಯರ ಅಭಿವೃದ್ಧಿ ಕುರಿತಂತೆ ಅಮರ್ತ್ಯಸೇನ್ ತಮ್ಮನ್ನು ತಾವೇ **"ಸ್ತ್ರೀವಾದಿ ಅರ್ಥಶಾಸ್ತ್ರಜ್ಞ"** ಎಂದು ಕರೆದುಕೊಂಡಿದ್ದಾರೆ. ಮನೆಗಳಲ್ಲಿ ಹೆಚ್ಚು ದುಡಿಯುವವರು ಮಹಿಳೆಯರೇ ಆದರೂ ಅವರ ದುಡಿಮೆಗೆ ಯಾವುದೇ ವೇತನ ಇರುವುದಿಲ್ಲ. ಆದುದರಿಂದ ಮಹಿಳೆಯ ದುಡಿಮೆ ಇಲ್ಲಿ ಅವಗಣನೆಗೆ ಒಳಗಾಗುತ್ತದೆ. ಹಾಗಾಗಿ ಮಹಿಳೆಗೆ ಉದ್ಯೋಗದ ಅವಶ್ಯಕತೆಯಿದೆ. ಅದಕ್ಕಾಗಿ ಉತ್ತಮ ಶಿಕ್ಷಣದ ಅಗತ್ಯವಿದೆ. ಮಹಿಳೆಯರು ಹೊರಗಡೆ ದುಡಿಯುವುದರಿಂದ ಅವರ ದುಸ್ಥಿತಿ ಶಮನಗೊಳ್ಳುವ ಸಾಧ್ಯತೆಗಳು ಇವೆ. ಅಲ್ಲದೇ ಆಕೆ ಆರ್ಥಿಕವಾಗಿ ಸಬಲಳಾಗುತ್ತಾಳೆ. ಮಹಿಳೆಗೆ ಶಿಕ್ಷಣ ಅತಿ ಅಗತ್ಯ. ಆಕೆಯ ಸಾಕ್ಷರತೆ ಮಟ್ಟ ಉತ್ತಮಗೊಂಡರೆ ಎಳೆಯ ಮಕ್ಕಳ ಮರಣ, ತಾಯಿಯ ಮರಣ ಪ್ರಮಾಣವೂ ಕಡಿಮೆಯಾಗಬಹುದು.[೪]

ಲೇಖಕರು ಮುಕ್ತಾಯದಲ್ಲಿ ಮಹಿಳೆಯರ ಬದುಕು ಮತ್ತೊಬ್ಬರಿಗಾಗಿ ಎಂಬುದು ಆದರ್ಶವೇ ಸರಿ. ಆದರೆ ಅವಳಿಗೂ ಅವಳದೇ ಆದ ಆಸಕ್ತಿಗಳಿವೆ. ಅದನ್ನು ಗೌರವಿಸುವುದು ಬಹು ಅಗತ್ಯ. ಅಲ್ಲದೇ ಆಕೆಯ ದುಡಿಮೆಯನ್ನು ಪರಿಗಣಿಸಿ ಮಹಿಳೆಯನ್ನು ಅಭಿವೃದ್ಧಿಯ ಅಂಶವಾಗಿ ಪರಿಗಣಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೀರಾ ಸೇತ್ (೨೦೦೧) ಅವರು ತಮ್ಮ **"ವುಮೆನ್ ಆ್ಯಂಡ್ ಡೆವಲಪ್‌ಮೆಂಟ್"** ಪುಸ್ತಕದಲ್ಲಿ ಮಹಿಳೆಯ ಕುರಿತಂತೆ ಈ ರೀತಿಯಾಗಿ ವಿವರಿಸುತ್ತಾರೆ. ಮಹಿಳೆ ಎಂದರೆ ಬಲವಾದ ಉದ್ವಿಗ್ನತೆ ಹೊಂದಿರುವ, ಸಕಾರಾತ್ಮಕ ಮನೋಭಾವ ಹೊಂದಿರುವ ಧೃಡವಾದ ಮನಸ್ಸುಳ್ಳವಳು ಆಗಿದ್ದಾಳೆ. ಮಹಿಳೆಯೆಂದರೆ ಒಂದು ಮಾನವ ಸ್ತ್ರೀ. **'ಮಹಿಳೆ'** ಎಂಬ ಪದವು ಹೆಣ್ಣುಮಗು, ಹುಡುಗಿ ಎಂಬುದನ್ನು ಸೂಚಿಸುತ್ತದೆ. ಮಹಿಳೆಗೆ 2xx ಕ್ರೋಮೋಝೋಮ್‌ಗಳಿದ್ದು, ಆಕೆ ಗರ್ಭಧಾರಣೆ ಸಾಮರ್ಥ್ಯವನ್ನು ಹೊಂದಿರುತ್ತಾಳೆ. ಈಕೆ ಪುರುಷರಿಗಿಂತ ಸಂಪೂರ್ಣವಾಗಿ ಭಿನ್ನವಾದ ದೇಹ ರಚನೆಯನ್ನು ಹೊಂದಿರುತ್ತಾಳೆ. ಮಾನವನ ಇತಿಹಾಸದುದ್ದಕ್ಕೂ ಸಾಂಪ್ರದಾಯಿಕ ಲಿಂಗ ಪಾತ್ರಗಳು ಮಹಿಳೆಯರ ಚಟುವಟಿಕೆಗಳು ಮತ್ತು ಅವಕಾಶವನ್ನು ವ್ಯಾಖ್ಯಾನಿಸುತ್ತದೆ ಹಾಗೂ ಸೀಮಿತಗೊಳಿಸುತ್ತದೆ. ಅನೇಕ ಧಾರ್ಮಿಕ ಸಿದ್ಧಾಂತಗಳೂ ಕೂಡಾ ಮಹಿಳೆಯರಿಗೆ ಹಲವಾರು ನಿಯಮಗಳನ್ನು ವಿಧಿಸಿವೆ. ಇವರು ಮಹಿಳೆಯ ಕುರಿತಾಗಿ ವಿವರಿಸುತ್ತಾ: ಮಹಿಳೆಯು ಸಕಾರಾತ್ಮಕ ಮನೋಭಾವಗಳನ್ನು ಅವಳು ಅಡೆತಡೆಗಳನ್ನು ನಿವಾರಿಸಬಲ್ಲವಳಾಗಿರುತ್ತಾಳೆ. ಅವಳು ಮೃದು ಹೃದಯದವಳು, ಸಮಗ್ರತೆಯುಳ್ಳವಳು, ಅವಳು ತನ್ನ ಜೀವನದಲ್ಲಿ ಸಮತೋಲನವನ್ನು ಹೊಂದಿದವಳು, ತನ್ನ ಜೀವನದಲ್ಲಿ ಸರಿಯಾದ ಗುರಿಯನ್ನು ಹೊಂದಿದವಳು, ಒಂದು ನಿರ್ದಿಷ್ಟ ಕಾರಣದಿಂದ ನಡೆಸಲ್ಪಡುವವಳು ಆಗಿರುತ್ತಾಳೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.[3]

ಅಗರ್ವಾಲ್ ಸೂರನ್(೧೯೯೪) ರವರು ತಮ್ಮ ಲೇಖನವಾದ **"ಸೆಕೆಂಡ್ ಹಿಸ್ಟೋರಿಕಲ್ ಸರ್ವೆ ಆಫ್ ವುಮನ್ ಎಜುಕೇಶನ್ ಇನ್ ಇಂಡಿಯಾ"**ದಲ್ಲಿ ಮಹಿಳೆ ಮತ್ತು ಅಭಿವೃದ್ಧಿಯ ಕುರಿತಂತೆ ಈ ರೀತಿಯಾಗಿ ವಿವರಿಸುತ್ತಾರೆ. ಮಹಿಳೆಯರು ಅಭಿವೃದ್ಧಿ ಯೋಜನೆಗಳ ಒಂದು ಭಾಗವಾಗಿದ್ದಾರೆ. ೧೯೭೦ರ ನಂತರದ ದಿನಗಳಲ್ಲಿ ಮಹಿಳೆಯರನ್ನು ಒಂದು ಅಭಿವೃದ್ಧಿಯ ಕೇಂದ್ರಬಿಂದುವಾಗಿ ಪರಿಗಣಿಸಲಾಯಿತು. ಮಹಿಳಾ ಸಶಕ್ತೀಕರಣ ಅಭಿವೃದ್ಧಿಯ ೧೯೮೦ರ ದಶಕದಲ್ಲಿ ಮುಖ್ಯವಾಹಿನಿ ಅಭಿವೃದ್ಧಿಯು ಜನರ ಸಾಮರ್ಥ್ಯ ಹಾಗೂ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಪ್ರಕ್ರಿಯೆಯಿಂದ ಸಶಕ್ತೀಕರಣ ಪರಿಕಲ್ಪನೆಯು ಮೂಡಿಬಂದಿತು. ಅದರ ಹಿಂದಿನ ದಶಕದಲ್ಲಿ ಬಡತನ ನಿರ್ಮೂಲನ ಹಾಗೂ ಸಾಮಾಜಿಕ ನ್ಯಾಯ ಒದಗಿಸುವ ಹಿನ್ನೆಲೆಯಲ್ಲಿ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಮೂಲಕ ಅಭಿವೃದ್ಧಿ ಸಾಧಿಸುವ ಪ್ರಯತ್ನಗಳು ನಡೆದವು. ಆದರೆ ಬಡತನ ಹೋಗಲಿಲ್ಲ. ಜನರು ಕೇವಲ ಫಲಾನುಭವಿಗಳಾಗಿ ಸ್ವೀಕರಿಸುವವರಾಗಿ ರೂಪುಗೊಂಡರು. ಆಗ ಅಭಿವೃದ್ಧಿ ಚಿಂತಕರು ತಮ್ಮ ಚಿಂತನೆಯ ಹಾದಿಯನ್ನು ಬದಲಾಯಿಸಿದರು. ಜನರಿಗೆ ನೇರವಾಗಿ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಬದಲು ಅವರೇ ಅವುಗಳನ್ನು

ಸಂಪಾದಿಸಿಕೊಳ್ಳುವಂತೆ ಮಾಡಲು ಅವರ ಸಾಮರ್ಥ್ಯವನ್ನು ಹೆಚ್ಚಿಸುವ ಕಾರ್ಯಗಳು ಪ್ರಾರಂಭವಾದವು. ಜೊತೆಗೆ ಅಭಿವೃದ್ಧಿಯನ್ನು ಭಾಗವಹಿಸುವಿಕೆಯ ಪ್ರಕ್ರಿಯೆಯನ್ನಾಗಿ ಮಾಡಿ ಎಲ್ಲಾ ಜನರು ಅದರಲ್ಲಿ ಭಾಗವಹಿಸುವಂತೆ ಮಾಡಲಾಯಿತು. ಹೀಗೆ ಅಭಿವೃದ್ಧಿಯು ಹೆಚ್ಚು ಜನಮುಖಿಯಾದಂತೆ ಅದರಲ್ಲಿ ಲಿಂಗಸಂಬಂಧಿ ಅಂಶಗಳು ಸೇರಿಕೊಳ್ಳಲು ಸಾಧ್ಯವಾಯಿತು. ಜನರ ಸಾಮರ್ಥ್ಯ ಹೆಚ್ಚಳ ಹಾಗೂ ಭಾಗವಹಿಸುವಿಕೆ ಚಿಂತನೆಗಳು ಸಶಕ್ತೀಕರಣದ ಪರಿಕಲ್ಪನೆಯ ಹುಟ್ಟಿಗೆ ಕಾರಣವಾದವು. ಅದರಲ್ಲೂ ಮಹಿಳಾ ಸಶಕ್ತೀಕರಣ ಅಭಿವೃದ್ಧಿಯ ಒಂದು ಭಾಗವಾಗಿ ಬೆಳೆದು ಬಂದಿತು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳದ ಹೊರತು ಅಭಿವೃದ್ಧಿಯು ಪೂರ್ಣಗೊಳ್ಳುವುದಿಲ್ಲ ಎಂಬ ಅರಿವು ಮೂಡಿತು. **"ಅಭಿವೃದ್ಧಿಯನ್ನು ಲಿಂಗಲೀಕರಣ ಮಾಡದಿದ್ದರೆ ಅಭಿವೃದ್ಧಿಗೆ ಅಪಾಯ"** ಎಂದು ಪರಿಗಣಿಸಲಾಯಿತು.

ಭಾರತದಲ್ಲಿ ಮಹಿಳೆಯರು ದೇಶದ ಆಡಳಿತದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾರೆ. ಅಲ್ಲದೇ ಜಾಗತಿಕ ಮಟ್ಟದಲ್ಲಿಯೂ ಅನೇಕ ಮಹಿಳೆಯರು ಅನುಕರಣೀಯ ನಾಯಕರಾಗಿ ಹೊರಹೊಮ್ಮಿದ್ದಾರೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಮಹಿಳೆಯರು ದೇಶದ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಪ್ರೇರಕ ಶಕ್ತಿಯಾಗಿದ್ದಾರೆ ಎಂಬುವುದರಲ್ಲಿ ಎರಡು ಮಾತಿಲ್ಲ. ಹಲವಾರು ಕ್ಷೇತ್ರಗಳಲ್ಲಿ, ವಿವಿಧ ಸ್ತರಗಳಲ್ಲಿ ಸ್ವ ನಿರ್ಧಾರ ತೆಗೆದುಕೊಳ್ಳುವ ಮಹಿಳೆಯರ ಉಪಸ್ಥಿತಿಯು ಇತರ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತದೆ. ಅಲ್ಲದೆ, ಭವಿಷ್ಯದ ಸಾಧನೆಗಳನ್ನು ಇನ್ನಷ್ಟು ವಿಸ್ತಾರಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.[೬]

೧೯ನೇ ಶತಮಾನದಲ್ಲಿ ಲಿಂಗ ಸಮಾನತೆ ಹಾಗೂ ಸ್ತ್ರೀವಾದವನ್ನು ಅತ್ಯಂತ ತಾರ್ಕಿಕವಾಗಿ ಪ್ರತಿಪಾದಿಸಿದ ಚಿಂತಕ **ಜೆ.ಎಸ್. ಮಿಲ್**. (೧೮೬೯) ರಲ್ಲಿ ಅವರು ಬರೆದ, **"ದಿ ಸಬ್ಜೆಕ್ಷನ್ ಆಫ್ ವುಮೆನ್"** ಎಂಬ ಗ್ರಂಥದಲ್ಲಿ ಸ್ತ್ರೀ–ಪುರುಷ ಸಮಾನತೆ, ಸ್ತ್ರೀಯರ ಶಿಕ್ಷಣ, ನಾಗರಿಕ ಹಕ್ಕುಗಳು, ಕಾನೂನು ಸುಧಾರಣೆ, ವೈವಾಹಿಕ ಸಂಬಂಧಗಳು ಮುಂತಾದ ವಿಷಯಗಳನ್ನು ಚರ್ಚಿಸಿರುತ್ತಾರೆ. ಈ ಗ್ರಂಥದಲ್ಲಿ ಮಹಿಳೆಯರಿಗೆ ಸಿಗಬೇಕಾಗಿರುವ ಸಮಾನ ಅವಕಾಶಗಳನ್ನಷ್ಟೇ ಚರ್ಚಿಸುವುದಿಲ್ಲ. ಸ್ತ್ರೀ–ಪುರುಷರ ಸಂಬಂಧದಲ್ಲಿ ಕಂಡುಬರುವ ಭ್ರಷ್ಟತೆ ಹಾಗೂ ವಿವಾಹ ವ್ಯವಸ್ಥೆಯಲ್ಲಿ ಸ್ನೇಹಪೂರ್ವಕ ಸಂಬಂಧಗಳನ್ನು ಹೇಗೆ ಸ್ಥಾಪಿಸಬೇಕೆಂಬುದನ್ನು ವಿವರಿಸುತ್ತಾರೆ. ಮಾನವ ಸಮಾಜದ ಪ್ರಗತಿಗೆ ಸ್ತ್ರೀ–ಪುರುಷರ ಸಮಾನತೆ ಅತ್ಯಂತ ಅವಶ್ಯ ಎಂಬುದೇ ಅವರ ಗ್ರಂಥದ ಮೂಲತತ್ವ. ಮಹಿಳೆಯರಿಗೆ ಸಮಾನ ನಾಗರಿಕ ಮತ್ತು ರಾಜಕೀಯ ಹಕ್ಕುಗಳು ದೊರೆತು ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಬೇಕೆಂದರೆ ಈ ಹಕ್ಕುಗಳಿಗೆ ಸ್ವಾತಂತ್ರ್ಯ ಮತ್ತು ಸ್ವ–ಅಭಿವೃದ್ಧಿಗಳು ಆಧಾರವಾಗಬೇಕಾಗಿದೆ. ಸ್ವತಂತ್ರ್ಯ ಸಮಾಜದ ನಿರ್ಮಾಣಕ್ಕೆ ಸ್ತ್ರೀವಿಮೋಚನೆಯು ನಿರ್ಣಾಯಕ ಅಂಶವಾಗಿದೆ ಎಂದು ಹೇಳುತ್ತಾರೆ.[೭]

ಕೊಲಿಯರ್ ಪಾಲ್ (೨೦೦೭) ತಮ್ಮ **"ವುಮನ್ ಇನ್ ಡೆವೆಲೆಪ್‌ಮೆಂಟ್, ಡಿಫೈನಿಂಗ್ ಇಷ್ಯೂಸ್"**ನಲ್ಲಿ ಮಹಿಳೆ ಮತ್ತು ಸಬಲೀಕರಣದ ಕುರಿತಂತೆ ಈ ರೀತಿಯಾಗಿ ಅಭಿಪ್ರಾಯ ಪಟ್ಟಿರುತ್ತಾರೆ. ಮಹಿಳೆಯರ ಸಬಲೀಕರಣ ವ್ಯವಸ್ಥೆಯು ಅವರ ದೀರ್ಘಕಾಲದ ಅಧೀನತೆಯಿಂದ ಉದ್ಭವಿಸುತ್ತದೆ. ಮಹಿಳೆಯುರ ಸಬಲೀಕರಣವು ಜೀವನದ ವಿವಿಧ ಕ್ಷೇತ್ರಗಳಲ್ಲಿ ಭಾಗವಹಿಸುವುದರೊಂದಿಗೆ ಪ್ರಾರಂಭವಾಗಬೇಕಾಗಿದೆ. ಈ ವಿಷಯದಲ್ಲಿ ಶಿಕ್ಷಣವು ಒಂದು ನಿರ್ಣಾಯಕ ಪಾತ್ರವಹಿಸುತ್ತದೆ. ಸಬಲೀಕರಣವನ್ನು ಸಾಧಿಸಲು ಆಧುನಿಕ ಸಮಾಜದಲ್ಲಿ ಮಹಿಳೆಯರಿಗೆ ತಮ್ಮ ಹಕ್ಕು ಮತ್ತು ಆದ್ಯತೆಗಳ ಬಗ್ಗೆ ಅರಿವು ಮೂಡಿಸಲು ಶಿಕ್ಷಣ ನೀಡಬೇಕು. ಗ್ರಾಮೀಣ ಭಾರತದ ಮಹಿಳೆಯರು ಅನಾರೋಗ್ಯ, ಅಪೌಷ್ಟಿಕತೆ, ಪುನರಾವರ್ತಿತ ಮಕ್ಕಳನ್ನು ಹೊಂದುವುದು ಹಾಗೂ ಶಿಕ್ಷಣದ ಕೊರತೆಯಿಂದ ಬಳಲುತ್ತಿದ್ದರು. ಕೃಷಿ ಚಟುವಟಿಕೆಗಳಲ್ಲಿ ಅವರನ್ನು ಗುಲಾಮರನ್ನಾಗಿ ನಡೆಸಿಕೊಳ್ಳುವುದನ್ನು ನಿಲ್ಲಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.[೯]

ಹ್ಯಾರಿಟ್ ಬುಚರ್ರವರ **(೧೯೭೩)** ಪ್ರಕಾರ, ಮಹಿಳೆಯರು ಸಮಾಜದ ನಿಜವಾದ ವಾಸ್ತುಶಿಲ್ಪಿಗಳು. ಶಿಕ್ಷಣದ ಕೊರತೆಯನ್ನು ಅನುಭವಿಸುತ್ತಿದ್ದರೂ, ಹಲವಾರು ವಸತಿ ಮತ್ತು ವಾಣಿಜ್ಯ ಕಟ್ಟಡ ನಿರ್ಮಾಣ ಕಾರ್ಯದಲ್ಲಿ, ರಸ್ತೆ ನಿರ್ಮಾಣ, ಜಲಮೂಲಗಳಲ್ಲಿ, ವಿವಿಧ ದೇಶೀಯ ಮತ್ತು ಸಮುದಾಯ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಐತಿಹಾಸಿಕವಾಗಿ ಭಾರತದಲ್ಲಿ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರ ಭಾಗವಹಿಸುವಿಕೆ ಗಮನಾರ್ಹವಾಗಿ ಹಿಂದುಳಿದಿದೆ. ಇಂದಿರಾ ಗಾಂಧಿ, ಚಾಂದ್‌ಬೀಬಿ, ಅಹಲ್ಯಾಬಾಯಿ, ರಾಣಿ ದುರ್ಗಾವತಿ, ಕಿತ್ತೂರು ರಾಣಿ ಚೆನ್ನಮ್ಮ, ಜೀಜಾಬಾಯಿ, ರಾಣಿ ಅವಂತಿಬಾಯಿ, ರಾಣಿ ಲಕ್ಷ್ಮೀಬಾಯಿ, ಆನ್ನಿ ಬೆಸೆಂಟ್, ಸರೋಜಿನಿ ನಾಯ್ಡು, ಮಹಾದೇವಿ ವರ್ಮಾ, ಅರುಂಧತಿ ರಾಯ್, ಸುಚೇತಾ ಕೃಪಾಣಿ, ಪ್ರತಿಭಾ ಪಟೇಲ್‌ರಂತಹ ಮಹಿಳೆಯರ ಕೊಡುಗೆಗಳು ಭಾರತದ ದೇಶದಲ್ಲಿ ನಮ್ಮ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ವ್ಯಾಪಕವಾಗಿ ಹರಡಿಕೊಂಡಿದೆ. ಇದು ಇಂದು ಭಾರತವು ಬೆಳವಣಿಗೆಯ ಹಾದಿಯತ್ತ ಸ್ಥಿರವಾಗಿ ಸಾಗಲು ಸಹಕಾರಿಯಾಗಿದೆ. ಉತ್ಪಾದನಾ ಬೆಳವಣಿಗೆಯ ಗುಣಾತ್ಮಕ ವೇಗವರ್ಧಕಗಳಾದ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯಿಂದ ಮಾತ್ರ ಇದು ಸಾಧ್ಯ. ನೀತಿ ಮಟ್ಟದಲ್ಲಿ ಮತ್ತು ಸಮುದಾಯ ಮಟ್ಟದಲ್ಲಿ ಅನೇಕ ಮಹಿಳೆಯರು ಅನುಕರಣೀಯ ನಾಯಕರಾಗಿ ಹೊರಹೊಮ್ಮಿದ್ದಾರೆ ಎಂದು ವಿಶ್ಲೇಷಣೆ ಮಾಡಿದ್ದಾರೆ.[೧೦]

ಸುಶೀಲಾ ಕೌಶಿಕ್(೨೦೧೨) ರವರು ತಮ್ಮ **"ವುಮನ್ ಡೆವೆಲೆಪ್‌ಮೆಂಟ್ ಸ್ಟಡೀಸ್ – ಪಂಚಾಯತ್‌ರಾಜ್ ಇನ್ ಹರಿಯಾಣ"** ಕೃತಿಯಲ್ಲಿ ಮಹಿಳಾ ನೀತಿ ಮತ್ತು ಯೋಜನೆಗಳ ಬಗ್ಗೆ ಈ ರೀತಿಯಾಗಿ ವಿವರಿಸುತ್ತಾರೆ. ನೀತಿ ನಿರೂಪಣೆಯ ಅನೌಪಚಾರಿಕ ಮತ್ತು ಅತ್ಯಂತ ಪ್ರಭಾವಶಾಲಿ ಗುಂಪುಗಳು ಎಂದರೆ ರಾಜಕೀಯ ಪಕ್ಷಗಳು ಮತ್ತು ಸರಕಾರೇತರ ಸಂಸ್ಥೆಗಳು. ಮಹಿಳೆಯರಿಗೆ ಸಂಬಂಧಿಸಿದ ನೀತಿಯ ವಿಚಾರದಲ್ಲಿ ಹೇಳುವುದಾದರೆ ಮಹಿಳಾ ಸ್ವಯಂಪ್ರೇರಿತ ಸಂಸ್ಥೆಗಳು, ವಿವಿಧ ಸಾಧನೆಗೈದ ಮಹಿಳಾ ಸಾಧಕರು ಮತ್ತು ಮಹಿಳಾ ಕಾರ್ಯಕರ್ತರು ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ೧೯೫೫ರಲ್ಲಿ ನಡೆದ ಬೀಜಿಂಗ್ ಸಮ್ಮೇಳನವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಬಗ್ಗೆ ಕರಡು ನೀತಿ ಹೇಳಿಕೆಯನ್ನು ನೀಡಿತ್ತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ನಾಯಕರು ಮಹಿಳೆಯರ ಸಾಧನೆಯ ಬಗೆಗೆ ಹೆಚ್ಚಿನ ಸಾಧನೆಯ ಬಗೆಗೆ ಅತ್ಯಧಿಕ ವಿಶ್ವಾಸವನ್ನು ಹೊಂದಿದ್ದರು. ಇದರ ಪರಿಣಾಮವಾಗಿ ನಮ್ಮ ಸಂವಿಧಾನದ ೧೫ ಮತ್ತು ೧೬ರ ವಿಶೇಷ ವಿಧಿಗಳು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡುತ್ತವೆ. ಮತದಾನದ ಹಕ್ಕು, ಉದ್ಯೋಗದ ಹಕ್ಕು ಇತ್ಯಾದಿ ಮೂಲಭೂತ ಹಕ್ಕುಗಳನ್ನು ಹೊಂದಿದ್ದಾರೆ. ಸಾಮಾಜಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಹಿಂದು ಮಹಿಳೆಯರ ಸ್ಥಾನವು ಅತೃಪ್ತಿಕರವಾಗಿದೆ. ಅಲ್ಪಸಂಖ್ಯಾತ ಸಮುದಾಯಗಳ ಮಹಿಳೆಯರ ಸ್ಥಾನವೂ ಉತ್ತಮವಾಗಿರಲಿಲ್ಲ. ಆದುದರಿಂದ ೧೯೫೬ರ ಹಿಂದೂ ಉತ್ತರಾಧಿಕಾರಿ ಕಾಯ್ದೆಯಡಿ ಮಹಿಳೆಯರಿಗೆ ತನ್ನ ಗಂಡನ ಆಸ್ತಿಯಲ್ಲಿ ಸಮಾನ ಪಾಲನ್ನು ಪಡೆದುಕೊಳ್ಳುವ ಹಕ್ಕನ್ನು ನೀಡಲಾಗಿತ್ತು. ೧೯೫೫ರ ಹಿಂದೂ ವಿವಾಹ ಕಾಯ್ದೆಯ ಪ್ರಕಾರ ಕಡ್ಡಾಯ ಏಕಪತ್ನಿ ವಿವಾಹ ಮತ್ತು ವಿಚ್ಛೇದನ ಅವಕಾಶವನ್ನು ನೀಡಲಾಯಿತು. ೧೯೫೬ರ ಕಾಯ್ದೆಯು ಮಹಿಳೆಗೆ ತನ್ನ ಪತಿಯಿಂದ ಬೇರ್ಪಟ್ಟ ಸಂದರ್ಭದಲ್ಲಿ ಮಗುವನ್ನು ದತ್ತು ತೆಗೆದುಕೊಳ್ಳುವ ಮತ್ತು ನಿರ್ವಹಿಸುವ ಹಕ್ಕನ್ನು ನೀಡಿತು ಎಂದು ತಮ್ಮ ಕೃತಿಯಾದ **"ಮಹಿಳಾ ಅಭಿವೃದ್ದಿ"** ವಿಚಾರದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.[೧೧]

ಜೋಕೇಸ್ ಸುಸಾನ್ರವರು (೨೦೦೮) ತಮ್ಮ **"ಎಕರ್ಸೈಸ್ ಆನ್ ವಿಮನ್ ಇನ್ ಡೆವೆಲೆಪ್‌ಮೆಂಟ್ – ಇಂಟರ್‌ನ್ಯಾಶನಲ್ ಡೆವೆಲೆಪ್‌ಮೆಂಟ್ ಸ್ಟ್ರಾಟಜಿ ಫಾರ್ ಥರ್ಡ್ ನೇಶನ್ಸ್"** ಕೃತಿಯಲ್ಲಿ ಮಹಿಳೆ ಮತ್ತು ಶಿಕ್ಷಣದ ಕುರಿತಂತೆ ಹೀಗೆನ್ನುತ್ತಾರೆ. ಶಿಕ್ಷಣವು ಮೊದಲಿನಿಂದಲೂ ಭಾರತೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಬಹುಮುಖ್ಯ ಭಾಗವಾಗಿದೆ. ಮೊಹಂಜೋದಾರೋ ಮತ್ತು ಹರಪ್ಪರ ಸಿಂಧೂ ನಾಗರೀಕತೆಯಲ್ಲಿ ಶಿಕ್ಷಣದ ವ್ಯವಸ್ಥೆ ಮತ್ತು ಮಹಿಳೆಯರ ಶಿಕ್ಷಣದ ಅವಕಾಶಗಳ ಬಗ್ಗೆ ನಮ್ಮಲ್ಲಿ ಯಾವುದೇ ಪುರಾವೆಗಳಿಲ್ಲ. ಆದರೂ

ವೇದ ಸಾಹಿತ್ಯದಲ್ಲಿ ಋಗ್ವೇದದಿಂದಲೇ ಮಹಿಳೆಯ ಶಿಕ್ಷಣದ ಸ್ಥಿತಿಯ ಬಗ್ಗೆ ನಮಗೆ ಸಾಕಷ್ಟು ಪುರಾವೆಗಳು ದೊರೆಯುತ್ತದೆ. ಋಗ್ವೇದದ ಕನಿಷ್ಠ ೩೩ ಮಂತ್ರಗಳನ್ನು ಮಹಿಳೆಯರಿಗೆ ಸಂಯೋಜಿಸಿದ್ದಾರೆ. ಭಾರತದಲ್ಲಿ ಬ್ರಿಟೀಷ್ ಆಳ್ವಿಕೆಯ ಆಗಮನವು ಇಲ್ಲಿ ಅಸ್ತಿತ್ವದಲ್ಲಿದ್ದ ಗುರುಕುಲ ಶಿಕ್ಷಣ ವ್ಯವಸ್ಥೆಗೆ ಒಂದು ದೊಡ್ಡ ಸವಾಲಾಗಿತ್ತು. ಏಕೆಂದರೆ, ಬ್ರಿಟೀಷರು ಶಾಸನಗಳ ಮೂಲಕ ನೀಡುವ ಶಿಕ್ಷಣವನ್ನು ನಂಬಿದ್ದರು. ಇದಕ್ಕಾಗಿ ೧೮೮೨ರಲ್ಲಿ ಹಂಟರ್ ಕಮಿಷನ್ ಎಂಬ ಭಾರತೀಯ ಶಿಕ್ಷಣ ಆಯೋಗವನ್ನು ರಚಿಸಿ ಶೈಕ್ಷಣಿಕ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಗಳಿಗೆ ನಾಂದಿ ಹಾಡಲಾಯಿತು. ಅಂತೆಯೇ, ೧೯೧೯ರ ಭಾರತ ಸರಕಾರದ ಕಾಯ್ದೆ ಮತ್ತು ೧೯೩೫ರ ಕಾಯ್ದೆಯ ಅಂಗೀಕಾರವು ಭಾರತೀಯ ಮಂತ್ರಿಗಳಿಗೆ ಸ್ವತಂತ್ರ್ಯವಾಗಿ ಕಾರ್ಯನಿರ್ವಹಿಸಲು ಹೆಚ್ಚಿನ ಅಧಿಕಾರವನ್ನು ನೀಡಿತು ಮತ್ತು ಶಿಕ್ಷಣವು ಪ್ರಾಂತೀಯ ವಿಷಯ ಆಗಿರುವುದರಿಂದ ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತೆಯ ಹರಡುವಿಕೆಗೆ ಹೆಚ್ಚಿನ ಒತ್ತನ್ನು ನೀಡಲಾಯಿತು. ಸಂಶೋಧಕರು ಮಹಿಳಾ ಅಭಿವೃದ್ಧಿ ಹಾಗೂ ಆರೋಗ್ಯದ ಬಗ್ಗೆ ಹೆಚ್ಚೇನೂ ಒತ್ತು ಕೊಟ್ಟಿರುವುದಿಲ್ಲ.[೧೨]

ವಾಗ್ಲಿಯಾನಿ, ವಿನ್‌ಫ್ರೆಡ್‌ರವರು (೨೦೧೨) ತಮ್ಮ **"ದ ಇಂಟಿಗ್ರೇಶನ್ಸ್ ಆಫ್ ವುಮನ್ ಇನ್ ಡೆವಲೆಪ್‌ಮೆಂಟ್"** ಲೇಖನದಲ್ಲಿ ಮಹಿಳೆ ಮತ್ತು ಉದ್ಯೋಗದ ಕುರಿತಂತೆ ತನ್ನ ಅಭಿಪ್ರಾಯವನ್ನು ಈ ರೀತಿಯಾಗಿ ವಿವರಿಸುತ್ತಾರೆ. ಸಮಾಜದಲ್ಲಿ ತಮ್ಮ ಸ್ಥಾನಮಾನವನ್ನು ಹೆಚ್ಚಿಸಲು ಮಹಿಳಾ ಆರ್ಥಿಕ ಸಬಲೀಕರಣ ಅತ್ಯಗತ್ಯ. ಗ್ರಾಮೀಣ ಮತ್ತು ನಗರವಾಸಿ ಮಹಿಳೆಯರೊಂದಿಗೆ ನಡೆಸಿದ ಅತ್ಯಧಿಕ ಸಂವಹನಗಳಲ್ಲಿ ನಮಗೆ ಯಾವಾಗಲೂ ಒಂದೇ ತೆರನಾದ ನಿಲುವನ್ನು ಸ್ಪಷ್ಟಪಡಿಸುತ್ತದೆ. ಅದೇನೆಂದರೆ, **"ನಮಗೆ ಉದ್ಯೋಗವನ್ನು ನೀಡಿ. ನಾವೂ ಸಮರ್ಥರಾಗಬಹುದು"** ಎಂದು. ಮಹಿಳೆಯು ತನ್ನನ್ನು ತಾನು ಉದ್ಯೋಗದಲ್ಲಿ ತೊಡಗಿಸಿಕೊಂಡರೆ ಅವಳ ಕುಟುಂಬದ ಗುಣಮಟ್ಟದ ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯ ಅಭಿವೃದ್ಧಿಗೆ ಕಾರಣವಾಗುತ್ತದೆ ಹಾಗೂ ಆ ಕುಟುಂಬದ ಹೆಣ್ಣು ಮಗಳಿಗೆ ಖಂಡಿತವಾಗಿ ಭವಿಷ್ಯದಲ್ಲಿ ಉತ್ತಮ ಅವಕಾಶಗಳು ಒದಗಿಬರುವುದರಲ್ಲಿ ಯಾವುದೇ ಸಂಶಯವಿಲ್ಲ.

ಸಾಂಪ್ರದಾಯಿಕವಾಗಿ ಭಾರತೀಯ ಮಹಿಳೆಯರು ಉದ್ಯೋಗ ಸ್ವಾವಲಂಬನೆಯ ಮಟ್ಟಿಗೆ ಅವಲಂಬನಾ ಲಕ್ಷಣವನ್ನು ಒಳಗೊಂಡಿರುತ್ತಾರೆ. ಮನೆ ನೋಡಿಕೊಳ್ಳುವುದು, ಕೃಷಿ ಚಟುವಟಿಕೆಗಳು, ಮನೆ ಯಜಮಾನನಿಗೆ ಸಹಾಯ ಮಾಡುವುದು, ಪಶುಗಳ ಆರೈಕೆ, ಮನೆಯಲ್ಲಿ ಕರಕುಶಲ ವಸ್ತುಗಳ ತಯಾರಿಕೆ ಅವಳ ಮುಖ್ಯ ಕೆಲಸವಾಗಿತ್ತು. ಕುಟುಂಬದ ಆದಾಯವಾಗಲೀ, ಖರ್ಚನ್ನಾಗಲೀ ನಿರ್ಧರಿಸುವ ತನ್ನ ಗಂಡನ ಆದಾಯದ ಮೇಲೆ

ಯಾವುದೇ ನಿಯಂತ್ರಣವನ್ನು ಹೇರದ ಕಾರಣ ಅವಳು ಕುಟುಂಬದ ಮಹಿಳೆ ಎಂಬ ಸ್ಥಾನವನ್ನು ಪಡೆದಳು. ಹಾಗಾಗಿ ಇಂದಿಗೂ ಬಹುಪಾಲು ಸಾಂಪ್ರದಾಯಿಕ ಉದ್ಯೋಗ ಮಾದರಿಯು ಚಾಲ್ತಿಯಲ್ಲಿದೆ.[೧೭]

ಭಾರತವು ಇಂದು ಕೃಷಿ ಉತ್ಪಾದನೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಕಂಡಿದೆ. ಇದಕ್ಕೆ ಮಹಿಳೆಯರ ಶ್ರಮವೂ ಗಣನೀಯ ಕೊಡುಗೆಯನ್ನು ನೀಡಿದೆ. ಆದರೂ ಇಂದಿಗೂ ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ಅಲ್ಪ ಕಾರ್ಮಿಕರಾಗಿಯೇ ದುಡಿಯುತ್ತಿದ್ದಾರೆ. ಹೆಚ್ಚಿನ ರಾಜ್ಯಗಳಲ್ಲಿ ಕೃಷಿ ವಲಯಗಳಲ್ಲಿ ಪುರುಷರು ತಮ್ಮನ್ನು ಉಳುಮೆ ಮತ್ತು ನೀರಾವರಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ ಮಹಿಳೆಯರು ಮೊಳಕೆ ಬಿತ್ತನೆ, ಸಸ್ಯಗಳ ಪೋಷಣೆ, ತರಕಾರಿ ಹಣ್ಣುಗಳ ಕೊಯ್ಲು ಮಾಡುವುದು, ಧಾನ್ಯಗಳ ಶೇಖರಣಾ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಸುಧಾರಿತ ಕೃಷಿ ಪದ್ಧತಿಗಳಲ್ಲಿನ ಹೊಸ ಯೋಜನೆಗಳ ಪ್ರಯೋಜನಗಳನ್ನು ಪಡೆಯುವಲ್ಲಿ ಮಹಿಳೆಯರು ವಿಫಲರಾಗಿದ್ದಾರೆಂದೇ ಹೇಳಬಹುದು. ಏಕೆಂದರೆ, ಕೃಷಿ ವಲಯದಲ್ಲಿ ಇಂದಿಗೂ ಅವರು ಕಡಿಮೆ ವೇತನವನ್ನು ಪಡೆಯುವುದಲ್ಲದೇ ಇದನ್ನು ಯೋಗ್ಯ ರೀತಿಯಲ್ಲಿ ಪ್ರಸ್ತಾಪಿಸಲು ಯಾವುದೇ ರೀತಿಯ ಕಾರ್ಮಿಕ ಸಂಘಟನೆಗಳನ್ನು ಹೊಂದಿಲ್ಲ. ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಶೇಕಡಾವಾರು ಮಹಿಳೆಯರು ಉದ್ಯೋಗದಲ್ಲಿರುವುದರಿಂದ ಅವರಿಗೆ ಕೃಷಿ ಹಕ್ಕುಗಳಂತೆ ಭೂಮಿಯ ಹಕ್ಕುಗಳು, ಉತ್ಪಾದಕತೆಯನ್ನು ಹೆಚ್ಚಿಸಲು ತಾಂತ್ರಿಕ ಕೌಶಲ್ಯಗಳನ್ನು ಒದಗಿಸುವುದು ಕೃಷಿ ಇಲಾಖೆಯ ಜವಾಬ್ದಾರಿಯಾಗಿದೆ. ಇದಕ್ಕೆಂದೇ ಕೇಂದ್ರ ಕೃಷಿ ಸಚಿವಾಲಯವು ೧೯೯೭ರಲ್ಲಿ ವಿವಿಧ ರಾಜ್ಯಗಳ ಕೃಷಿ ವಲಯದಲ್ಲಿನ ಮಹಿಳೆಯರ ಸಂಘಟನೆಗೆ ಒಂದು ಯೋಜನೆಯನ್ನು ರೂಪಿಸಿತು. ಇದರಲ್ಲಿ ಸುಮಾರು ೪೨೦೦ ಮಹಿಳೆಯರು ಪಾಲ್ಗೊಂಡಿದ್ದರು. ಅದೇ ವರ್ಷ "ಕೃಷಿಯಲ್ಲಿ ಮಹಿಳೆಯರ ತರಬೇತಿ" ಎಂಬ ಮತ್ತೊಂದು ಯೋಜನೆಯನ್ನು ರೂಪಿಸಲಾಯಿತು ಎಂದು ತಮ್ಮ ಅಭಿಪ್ರಾಯ ತಿಳಿಸಿರುತ್ತಾರೆ. ಸಂಶೋಧಕರು ಮಹಿಳಾ ಆರ್ಥಿಕತೆ ಮತ್ತು ಆರೋಗ್ಯದ ಬಗ್ಗೆ ಒತ್ತನ್ನು ನೀಡಿರುವುದಿಲ್ಲ.

ಚಂದ್ರ ಪೂಜಾರಿ ಎಂ. (೨೦೧೭) ಅವರು ಅಭಿವೃದ್ಧಿಯ ಕುರಿತಾದ ತನ್ನ ನಿಲುವನ್ನು ವ್ಯಕ್ತಪಡಿಸುತ್ತಾ, "ಅಭಿವೃದ್ಧಿಯು ಇಂದು ವಿಸ್ತಾರವಾದ ವ್ಯಾಖ್ಯಾನವನ್ನು ಒಳಗೊಂಡ ಪರಿಕಲ್ಪನೆಯಾಗಿದೆ. ಇದು ಜನರೊಂದಿಗೆ ಬೆರೆತುಹೋಗಿರುವ ಒಂದು ಶಿಸ್ತು ಆಗಿದೆ. ಅಭಿವೃದ್ಧಿಯು ಕೇವಲ ಆರ್ಥಿಕ ಕ್ಷೇತ್ರಕ್ಕೆ ಮಾತ್ರ ಮೀಸಲಾಗಿರದೆ ಸಮಾಜದ ಎಲ್ಲ ಅಂಗಗಳನ್ನು ಪ್ರಭಾವಿಸುವ ಕೆಲಸ ಮಾಡುತ್ತಿದೆ. ಅಭಿವೃದ್ಧಿಯು ಸರಕು ಸೇವೆಗಳ ಉತ್ಪಾದನೆಗೆ ಮಹತ್ವ ನೀಡಿದರೆ ಅದು ಮೇಲ್ವರ್ಗದ ಹಿತಾಸಕ್ತಿಯನ್ನು ಕಾಪಾಡುವಂತೆ ಗೋಚರಿಸಬಹುದು. ಮಾನವ

ಅಭಿವೃದ್ಧಿಯನ್ನು ಪ್ರತಿನಿಧಿಸಿದರೆ ಶಿಕ್ಷಣ, ಆರೋಗ್ಯ ಹಾಗೂ ಸರ್ವರ ಯೋಗಕ್ಷೇಮವನ್ನು ನಿರ್ಧರಿಸಬಹುದು. ಹೀಗೆ ಅಭಿವೃದ್ಧಿಯು ಇಂದು ವರಮಾನ ಕೇಂದ್ರೀಕೃತವಾಗದೆ ಸಮಾನತೆ, ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಯ ಅಂಶಗಳನ್ನು ಒಳಗೊಂಡಿದೆ" ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಅಭಿವೃದ್ಧಿಯು ಕಾಲದ ಜೊತೆಗೆ ತನ್ನ ವ್ಯಾಖ್ಯಾನವನ್ನು ಬದಲಾಯಿಸುತ್ತಿದೆ. ಇಂದು ಜನರನ್ನು ಒಳಗೊಳ್ಳುವ ಅಭಿವೃದ್ಧಿಗೆ ಹೆಚ್ಚು ಒತ್ತನ್ನು ನೀಡಲಾಗುತ್ತಿದೆ. ಶ್ರೀಮಂತ ಅಥವಾ ಅಧಿಕ ಚಿನ್ನ, ಬೆಳ್ಳಿ ಹೊಂದಿರುವ ಅಭಿವೃದ್ಧಿ ಕಲ್ಪನೆಗಿಂತ ಉತ್ತಮ ಸಾಮರ್ಥ್ಯ, ಸ್ವಾತಂತ್ರ್ಯಗಳ ಮುಖಾಂತರ ಅವಕಾಶಗಳನ್ನು ಬಳಸಿಕೊಂಡು ಉತ್ತಮ ಜೀವನ ಮಟ್ಟವನ್ನು ಪಡೆಯಲು ಅವಕಾಶವಿರುವ ಪ್ರತೀ ವ್ಯವಸ್ಥೆಯು ಅಭಿವೃದ್ಧಿಯ ಪ್ರತೀಕವಾಗಿರುತ್ತದೆ ಎಂಬುದನ್ನು ಹಲವಾರು ಅಧ್ಯಯನಗಳು ತೋರಿಸಿ ಕೊಟ್ಟಿವೆ. ಮಾನವ ಅಭಿವೃದ್ಧಿ ಕಲ್ಪನೆಯಡಿ ಉತ್ತಮ ಶಿಕ್ಷಣ, ಆರೋಗ್ಯ ಹಾಗು ಉತ್ತಮ ಜೀವನವನ್ನು ಕಲ್ಪಿಸುವ ಯಾವುದೇ ವ್ಯವಸ್ಥೆಯು ಅಭಿವೃದ್ಧಿಗೆ ಪೂರಕವಾಗಿರುತ್ತದೆ ಎಂದು ಲೇಖನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.[೧೪]

ಶೇಷಾದ್ರಿ ಬಿ. (೨೦೧೦) ಅವರು ಸಾರ್ವಜನಿಕ ಆರೋಗ್ಯ ಕ್ಷೇತ್ರದ ಯೋಜನೆಗಳ ವೈಫಲ್ಯತೆಯ ಹಾಗೂ ಆರೋಗ್ಯ ಅಸಮಾನತೆಯ ಬಗ್ಗೆ ವಿವರಿಸುತ್ತಾ, "೧೯೪೯ರಲ್ಲಿ ಭಾರತವು ಮಕ್ಕಳ ಹಕ್ಕಿನ ಕುರಿತಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಿದ್ದರೂ ಸಹ ದೇಶದಲ್ಲಿ ಅಪೌಷ್ಠಿಕತೆ ಹಾಗೂ ಕೆಲವು ಸೋಂಕಿನಿಂದ ಸಾವನ್ನಪ್ಪುತ್ತಿರುವ ಮಕ್ಕಳ ಸಂಖ್ಯೆ ಅಧಿಕವಾಗಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಅದು ಸಮಸ್ಯೆಯ ಆಳವನ್ನು ಭೇದಿಸುವ ಕೆಲಸವನ್ನು ಮಾಡುತ್ತಿಲ್ಲ. ಅಲ್ಲದೆ ಸಮಸ್ಯೆಗಳ ಪರಿಹಾರಕ್ಕಾಗಿ ಸರಿಯಾದ ವ್ಯವಸ್ಥೆಯನ್ನು ಮಾಡದಿರುವುದರಿಂದ ಸಮಸ್ಯೆಗಳು ಇನ್ನು ಜೀವಂತವಾಗಿವೆ. ಶ್ರೀಮಂತರು ಹಾಗೂ ಹೆಚ್ಚು ಆದಾಯವುಳ್ಳವರು ದುಬಾರಿಯಾದ ಆರೋಗ್ಯ ಸೇವೆಯನ್ನು ಪಡೆಯುತ್ತಾರೆ. ಇದು ಇನ್ನಷ್ಟು ಆರೋಗ್ಯ ಅಸಮಾನತೆಗೆ ಕಾರಣವಾಗುತ್ತದೆ. ಭಾರತದಲ್ಲಿ ಹಲವಾರು ರೀತಿಯಲ್ಲಿ ಬಡವರು, ಶೋಷಿತರಾಗುತ್ತಿದ್ದಾರೆ. ಆದರೆ ಆರೋಗ್ಯ ಕ್ಷೇತ್ರದಲ್ಲಿ ಉಂಟಾಗಿರುವ ಅಸಮಾನತೆಯ ಹೊರೆ ಒಟ್ಟಾರೆ ಅಭಿವೃದ್ಧಿಗೆ ನೇರ ಪರಿಣಾಮವನ್ನು ಬೀರಬಹುದು. ಹೀಗಾಗಿ ಈ ದಿಕ್ಕಿನಲ್ಲಿ ಸರ್ಕಾರಗಳು ಹೆಚ್ಚಿನ ಗಮನವನ್ನು ಹರಿಸಿ, ಆರೋಗ್ಯ ಸಂಬಂಧಿತ ಸವಲತ್ತುಗಳು ಹಾಗೂ ಆರೋಗ್ಯ ವೆಚ್ಚಕ್ಕೆ ಸಂಬಂಧಿಸಿದಂತೆ ಬಡವರ್ಗದ ಜನರಿಗೆ ಸಬ್ಸಿಡಿ ಸವಲತ್ತುಗಳನ್ನು ನೀಡಬೇಕು. ಜನರು ಆರೋಗ್ಯ ವೆಚ್ಚಕ್ಕೆ ಭಯಬಿದ್ದು ಕಾಯಿಲೆಗೆ ಔಷಧಿಯನ್ನು ಪಡೆಯಲು ಅಥವಾ

ಆಸ್ಪತ್ರೆಗೆ ಭೇಟಿ ನೀಡಲು ಹಿಂದೇಟು ಹಾಕಬಹುದು. ಸರಿಯಾದ ಹಣಕಾಸಿನ ವ್ಯವಸ್ಥೆ ಅಥವಾ ವಿಮೆಗಳನ್ನು ನೀಡುವ ಮೂಲಕ ಈ ಆರೋಗ್ಯ ಅಸಮಾನತೆಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದು" ಎಂದು ಅಭಿಪ್ರಾಯ ಪಟ್ಟಿರುತ್ತಾರೆ.[೧೫]

ನೀಲ್ ಹಾಲ್ಫಾನ್ ಆಂಡ್ ಮೈಲ್ಸ್ ಹಾಟ್ಸ್‌ಸ್ಟೈನ್ (೨೦೦೨) ಇವರು, "ಆರೋಗ್ಯವು ಒಂದು ಬಹು ನಿರ್ಧಾರಕಗಳ ಪರಿಣಾಮವಾಗಿದೆ. ಅದು ಅನುವಂಶಿಕ ಜೈವಿಕ ವರ್ತನೆಯ, ಸಾಮಾಜಿಕ, ಆರ್ಥಿಕ, ಸಾಮಾಜಿಕ ಸನ್ನಿವೇಶಗಳಲ್ಲಿ ಕಾರ್ಯನಿರ್ವಹಿಸುವ ಹಾಗೂ ವ್ಯಕ್ತಿಯ ಬೆಳವಣಿಗೆಗೆ ಅನುಗುಣವಾಗಿ ಬದಲಾಗುವ ಒಂದು ಪ್ರಕ್ರಿಯೆಯಾಗಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ವಿಭಿನ್ನವಾದ ಆರೋಗ್ಯ ಪಥಗಳು ನಿರ್ಣಯಿಸಲ್ಪಟ್ಟಿವೆ. ಅದರ ಸಂಚಿತ ಅಪಾಯ, ರಕ್ಷಣಾತ್ಮಕ ಅಂಶಗಳು ಹಾಗೂ ಜೈವಿಕ ವರ್ತನೆಯ ನಿಯಂತ್ರಕಗಳನ್ನು ಅಳವಡಿಸಿಕೊಳ್ಳುವ ಇತರ ಪ್ರಭಾವಗಳ ಉತ್ಪನ್ನವಾಗಿದೆ. ಆರೋಗ್ಯ ಅಭಿವೃದ್ಧಿ ಎನ್ನುವುದು ಸಂದರ್ಭಗಳು ಮತ್ತು ಮಾನವನ ಕಾರ್ಯಗಳ ನಡುವೆ ಇರುವ ಒಂದು ವ್ಯವಸ್ಥೆ. ಇದು ಬಹು ವ್ಯವಹಾರಗಳಿಂದ ಕೂಡಿದ ಹೊಂದಾಣಿಕೆ ಪ್ರಕ್ರಿಯೆಯಾಗಿದೆ. ಆರೋಗ್ಯದ ಮೇಲೆ ಹಲವಾರು ಅಂಶಗಳು ಪ್ರಭಾವವನ್ನು ಬೀರುತ್ತವೆ. ಅವೆಂದರೆ ಒಬ್ಬ ವ್ಯಕ್ತಿಯ ಜೈವಿಕ, ಮಾನಸಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಘಟನೆಗಳು ಹಾಗೂ ಆತನ ಜೀವನ ನಿರ್ವಹಣೆಯ ಸ್ಥಿತಿ. ಇವೆಲ್ಲವೂ ಒಟ್ಟಾರೆ ಜನಸಂಖ್ಯೆಯ ಹಾಗೂ ಆರ್ಥಿಕ ಪರಿಸ್ಥಿತಿಯ ಮೇಲೆ ಪ್ರಭಾವವನ್ನು ಬೀರುತ್ತವೆ" ಎಂದಿದ್ದಾರೆ. ಒಟ್ಟಾರೆಯಾಗಿ ಸಂಶೋಧಕರು ಮಹಿಳಾ ಆರೋಗ್ಯದ ಬಗ್ಗೆ ಏನನ್ನೂ ವ್ಯಕ್ತಪಡಿಸಿಲ್ಲ.[೧೬]

ಚಂದ್ರ ಪೂಜಾರಿ ಎಂ. (೨೦೦೯) ಅವರು ತಮ್ಮ ಕೃತಿ ಸಂಶೋಧನೆ **"ಏನು? ಏಕೆ? ಹೇಗೆ?"** ಎಂಬ ಕೃತಿಯಲ್ಲಿ ಸಂಶೋಧನೆಯ ಪ್ರಕ್ರಿಯೆಯಲ್ಲಿ ಆರಂಭಿಕವಾಗಿ ಸಂಶೋಧಕರನ್ನು ಕಾಡುವ ಪ್ರಶ್ನೆಗಳಿಗೆ ಅತಿ ಸಮರ್ಪಕವಾಗಿ ಉತ್ತರಿಸುತ್ತಾರೆ. ಇವರ ಪ್ರಕಾರ ಸಂಶೋಧನೆಯು ವ್ಯಕ್ತಿಗತವಾಗಿ ಬೇರೆ ಬೇರೆ ರೀತಿಯಲ್ಲಿ, ಬೇರೆ ಬೇರೆ ರೂಪವಾಗಿ ಕಾಣಬಹುದು. ಇಂದು ಆಧುನಿಕ ಲೋಕ ದೃಷ್ಟಿಯನ್ನು ರೂಪಿಸುವ ಬಹು ದೊಡ್ಡ ಜವಬ್ದಾರಿಯನ್ನು ಆಧುನಿಕ ಶಿಕ್ಷಣ ಹೊಂದಿದೆ. ಈ ದೃಷ್ಟಿಯಿಂದ ಆಧುನಿಕ ಶಿಕ್ಷಣವನ್ನು ನೋಡಿದರೆ ಇದು ಶಾಲೆಯ ವಾತಾವರಣ ಹಾಗೂ ಸುಸಂಸ್ಕೃತರನ್ನು ಸೃಷ್ಟಿಸಿ ಇದು ಸಮಾಜದ ಕೆಳಸ್ತರದ ಸಂಸ್ಕೃತಿಯನ್ನು ನಾಶಮಾಡುವ ಸಂಭವವೂ ಇದೆ. ಸಂಶೋಧನೆಯು ನಿಜವಾಗಿಯೂ ಸಮಾಜವನ್ನು ಒಂದು ಉತ್ತಮ ರೀತಿಯಾಗಿ ಬೆಳೆಸಲು ಸಂಶೋಧನೆಯು ಮಹತ್ತರ ಕೊಡುಗೆಯನ್ನು ನೀಡಿದೆ. ಹೀಗಾಗಿ ಸಂಶೋಧನೆಯ ವ್ಯಾಖ್ಯಾನ, ಇದರ ಕೊಡುಗೆ ಹಾಗೂ ಸಂಶೋಧನೆಯ ವಿಧಿ

ವಿಧಾನಗಳನ್ನು ಹೊಸ ದೃಷ್ಟಿಯಿಂದ ನೋಡುವ ಅಗತ್ಯವಿದೆ. ಹಾಗೆಯೇ ಸಂಶೋಧನೆಯು ವಾದದ ಪ್ರತಿಪಾದನೆ ಅಥವಾ ಸತ್ಯದ ಪ್ರತಿಪಾದನೆ ಎಂದು ಕರೆಯಬಹುದು. ಅಲ್ಲದೇ ಸಮಾಜದಲ್ಲಿ ಹೀಗಾಗಲೇ ಇರುವ ಎಲ್ಲಾ ಅಸಮಾನತೆಗಳನ್ನು ನಿರ್ಮೂಲನಗೊಳಿಸುವಲ್ಲಿ ಸಂಶೋಧನೆಯ ಪಾತ್ರ ಮಹತ್ವದ್ದಾಗಿದೆ.

ಸಂಶೋಧನೆಯೆಂದರೆ ಇದು ಸತ್ಯದ ಅನ್ವೇಷಣೆ ಅಲ್ಲದೇ ಇದು ಹೊಸ ವಿಚಾರಗಳ ಬಗ್ಗೆ ಹುಡುಕಾಟವನ್ನು ನಡೆಸುವುದು ಈಗಾಗಲೇ ಆಗಿರುವ ಅಧ್ಯಯನಗಳನ್ನು ವಿಮರ್ಶಾತ್ಮಕವಾಗಿ ಅಭ್ಯಸಿಸಿ ಅದರ ಕೊರತೆಯನ್ನು ತುಂಬಿಸಲು ಪ್ರಯತ್ನಿಸುವುದು. ಈಗಾಗಲೇ ಸ್ಥಾಪಿತವಾದ ಎಲ್ಲಾ ಬಗೆಯ ವಾದಗಳೊಂದಿಗೆ ಸಂವಾದ ನಡೆಸಿ ಆ ಮೂಲಕ ಸತ್ಯ ಪ್ರತಿಪಾದನೆ ನಡೆಸುವುದು. ಸಂಶೋಧನೆಯ ತಾತ್ವಿಕ ನಿಲುವುಗಳು ಸತತವಾಗಿ ವಿಮರ್ಶೆಗೆ ಒಳಗಾಗುತ್ತಲೇ ಇದೆ. ಅಲ್ಲದೇ ಹೊಸ ತಾತ್ವಿಕ ನಿಲುವುಗಳು ಮುಂಚೂಣಿಗೆ ಬರುತ್ತಲೇ ಇವೆ. ಒಂದು ರೀತಿಯಲ್ಲಿ ಸಂಶೋಧನೆಯನ್ನು ವಾದ ಪ್ರತಿಪಾದನೆಯ ಪ್ರಕ್ರಿಯೆ ಎಂದು ಕರೆಯಬಹುದು. ತುಲನಾತ್ಮಕ ಸಂಶೋಧನೆಗಳಲ್ಲಿ ಎರಡು ಅಥವಾ ಹೆಚ್ಚಿನ ಸಂಗತಿಗಳನ್ನು ಹೋಲಿಸುವ ಮೂಲಕ ಅದರ ನಡುವಿನ ಸಾಮ್ಯತೆ ಅಥವಾ ವ್ಯತ್ಯಾಸಗಳನ್ನು ಗುರುತಿಸಬಹುದು. ಅಲ್ಲದೇ ಸಂಶೋಧನೆಯನ್ನು ಒಂದು ಒಪ್ಪಿತ ಚೌಕಟ್ಟಿನೊಳಗೆ ನಡೆಯುವ ಸತ್ಯಪ್ರತಿಪಾದನೆ ಅಂತಲು ಕರೆಯಬಹುದು. ಸಂಶೋಧನೆಯಲ್ಲಿ ಮುಖ್ಯವಾಗಿ ಆಸಕ್ತಿಗಳು ಪ್ರಮುಖ ಪಾತ್ರವನ್ನು ವಹಿಸುತ್ತದೆ" ಎಂದು ಹೇಳಿರುತ್ತಾರೆ. ಸಂಶೋಧಕರು ಮಹಿಳಾ ಆರೋಗ್ಯದ ಬಗ್ಗೆ ಗಮನಹರಿಸಿಲ್ಲ.[೭]

ಚಂದ್ರಶೇಖರ್ ಟಿ.ಆರ್ (೨೦೧೦) ಅವರು ತಮ್ಮ **"ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ"** ಎಂಬ ಪುಸ್ತಕದಲ್ಲಿ ಮಹಿಳೆ ಮತ್ತು ಅಭಿವೃದ್ಧಿ ನಡುವಿನ ಸಂಬಂಧವನ್ನು ಸೈದ್ಧಾಂತಿಕ ಮತ್ತು ನಿದರ್ಶನಾತ್ಮಕ ಸಂಗತಿಗಳನ್ನು ಚರ್ಚಿಸುವುದರ ಮುಖಾಂತರ ಹೆಚ್ಚು ಸ್ಪಷ್ಟವಾಗಿ ವಿವರಿಸಿರುತ್ತಾರೆ. ಮಹಿಳೆ ಮತ್ತು ಅಭಿವೃದ್ಧಿ ಬಗೆಗಿನ ಸಂಬಂಧಗಳ ಕುರಿತಂತೆ ಹೆಚ್ಚು ಹೆಚ್ಚು ಸಿದ್ಧಾಂತಗಳು ಇಂದು ರೂಪುಗೊಳ್ಳುತ್ತದೆ. ಜನಸಂಖ್ಯೆಯಲ್ಲಿ ಮಹಿಳೆಯರ ಸಂಖ್ಯೆಯು ಕಡಿಮೆಯಾಗುತ್ತಿರುವುದು ಆತಂಕದ ವಿಷಯವಾಗಿದೆ. ಜನಸಂಖ್ಯೆ, ಸಂತಾನೋತ್ಪತ್ತಿ, ಸಂಗೋಪಣೆ ಮುಂತಾದ ಚಟುವಟಿಕೆಗಳಲ್ಲಿ ಮಹಿಳೆಯರೆ ಮೂಲಭೂತ ಪಾತ್ರವನ್ನು ವಹಿಸುತ್ತಾರೆ. ಮಹಿಳೆಯರನ್ನು ಇಲ್ಲಿ ಕೇವಲ ಸಾಧನವನ್ನಾಗಿ ಅಥವಾ ಗುರಿಯನ್ನಾಗಿ ಗುರುತಿಸುತ್ತಾರೆ. ಅಲ್ಲದೇ ಮಹಿಳೆಯನ್ನು ಲಿಂಗ ಸಂಬಂಧಗಳ ನೆಲೆಯಿಂದ ಪರಿಭಾವಿಸಿಕೊಳ್ಳುವ ಅಗತ್ಯವನ್ನು ಮನಗಾಣ ಬೇಕಿದೆ. ಮಹಿಳೆಯರು ತಮ್ಮ ಸಂತಾನೋತ್ಪತ್ತಿ ವಿಷಯಕ್ಕೆ ಸಂಬಂಧಿಸಿದಂತೆ ಸ್ವಾಯತ್ತತೆಯನ್ನು ಪಡೆಯುವ ಅಗತ್ಯವಿದೆ. ಇಂತಹ ಸ್ವಾಯತ್ತತೆ ಸಾಧಿತವಾದಾಗ ಸಹಜವಾಗಿ

ಮಹಿಳೆಯರು ಸ್ವಇಚ್ಛೆಯಿಂದ ಸಂತಾನೋತ್ಪತ್ತಿಯನ್ನು ನಿಯಂತ್ರಿಸಲು ಮುಂದಾಗುತ್ತಾರೆ. ಮಹಿಳೆಯನ್ನು ಒಬ್ಬ ವ್ಯಕ್ತಿಯನ್ನಾಗಿ ನೋಡುವ ಅಗತ್ಯವಿದೆ. ಸಾರ್ವಜನಿಕ ಕ್ಷೇತ್ರದಲ್ಲೂ ಮಹಿಳೆಯರು ತಮ್ಮ ಕರ್ತವ್ಯವನ್ನು ನಿಭಾಯಿಸುತ್ತಿದ್ದಾರೆ ಆದರೆ ಪುರುಷಶಾಹಿ ಆಳ್ವಿಕೆಯಿಂದಾಗಿ ಮಹಿಳೆಯು ನಗಣ್ಯವಾಗಿದ್ದಾಳೆ. ಕುಟುಂಬ ಹಾಗೂ ನಮ್ಮ ಸಮಾಜದ ಕೌಟುಂಬಿಕ ವ್ಯವಸ್ಥೆಯು ಕೂಡ ಮಹಿಳೆಯ ಮೇಲೆ ಅನೇಕ ರೀತಿಯಲ್ಲಿ ನಿಯಂತ್ರಣವನ್ನು ವಿಧಿಸುತ್ತದೆ. ಮಹಿಳಾ ಚಳುವಳಿಗಳು ಮತ್ತು ಹಲವಾರು ಮಹಿಳಾ ಅಧ್ಯಯನಗಳು ಕಂಡುಕೊಂಡ ವಿಷಯವೆಂದರೆ ಕುಟುಂಬವೆಂಬುದು ಮಹಿಳೆಗೆ ಹಿಂಸೆಯ ಕೂಪವಾಗಿದೆ. ಅಲ್ಲದೇ ಆಕೆಯ ಧ್ವನಿಯನ್ನು ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಮಹಿಳೆಯರ ದುಡಿಮೆಯು ಕೂಡ ತುಂಬಾ ಕೆಳಮಟ್ಟದಲ್ಲಿದೆಯೆಂದು ಹಲವಾರು ಸಮೀಕ್ಷೆಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿವೆ. ಮಹಿಳೆಯರ ದುಡಿಮೆಯನ್ನು ತುಂಬಾ ಸೂಕ್ಷ್ಮವಾದ ದೃಷ್ಟಿಕೋನದಿಂದ ಚರ್ಚಿಸಬೇಕಾಗುತ್ತದೆ. ಇಂದು ಮಹಿಳೆಯರು ಮತ್ತು ಅಭಿವೃದ್ಧಿ ಮತ್ತು ಲಿಂಗ ಸಂಬಂಧಗಳು ಎಂಬ ವಿಷಯದ ಕುರಿತಂತೆ ತೀವ್ರತರನಾದ ಚರ್ಚೆಗಳು ನಡೆಯುತ್ತಿದೆ. ಆದರೆ ಇವೆಲ್ಲವುಗಳಿಗಿಂತಲೂ ಮುಖ್ಯವಾಗಿ ಮಹಿಳೆಯನ್ನು ಅಭಿವೃದ್ಧಿಯ ಭಾಗವಾಗಿ ಪರಿಗಣಿಸಬೇಕಾದುದು ಅಗತ್ಯವಾಗಿದೆ" ಎಂದು ಹೇಳಿರುತ್ತಾರೆ.[೧೮]

ಸಂಗೊಳ್ಳಿ ಎನ್.ಎಸ್. (೨೦೦೬) ಅವರು ತಮ್ಮ **"ಮಾನವ ಹಕ್ಕುಗಳು"** ಎಂಬ ಪುಸ್ತಕದಲ್ಲಿ ಹಿಂದು ಧರ್ಮಶಾಸ್ತ್ರದಲ್ಲಿ ಮುಖ್ಯವಾಗಿ ಅರ್ಥಶಾಸ್ತ್ರವು ಅರಸನ ಕರ್ತವ್ಯ ಹಾಗೂ ನ್ಯಾಯಾಧೀಶನ ನೀತಿಸಂಹಿತೆ, ಕಾನೂನನ್ನು ಅಳವಡಿಸುವ ಪ್ರಕ್ರಿಯೆಯ ಬಗ್ಗೆ ವಿವರವಾಗಿ ಹೇಳಿರುತ್ತದೆ. ಇದು ಹೇಗೆ ಒಬ್ಬ ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ಬೆಳೆಸಿಕೊಳ್ಳಬಹುದು ಎನ್ನುವುದನ್ನು ತಿಳಿಸುತ್ತದೆ. ಧರ್ಮ ಪರಿಕಲ್ಪನೆಯಲ್ಲಿ ಮಾನವ ಹಕ್ಕುಗಳು ಮತ್ತು ಅವುಗಳ ರಕ್ಷಣೆ ಒಂದಕ್ಕೊಂದು ಸಂಬಂಧವನ್ನು ಹೊಂದಿದೆ. ಧರ್ಮವನ್ನು ತ್ಯಜಿಸಿದಾಗ ಹೇಗೆ ಮಾನವ ರಾಕ್ಷಸನಾಗುತ್ತಾನೆ ಮತ್ತು ಮಾನವತೆ ಹೇಗೆ ದುಷ್ಟರಾಜರ ದುರಾಡಳಿತಕ್ಕೆ ಒಳಗಾಗಿ ಹಿಂಸೆಪಟ್ಟಿತು ಅನ್ನುವುದನ್ನು ನಾವು ಹಲವಾರು ಐತಿಹಾಸಿಕ ದಾಖಲೆಗಳಲ್ಲಿ ತಿಳಿದುಕೊಳ್ಳಬಹುದು. ರಾಜ ಕಾನೂನನ್ನು ಬಳಸಿ ತನ್ನ ರಾಜಧರ್ಮ ಪಾಲಿಸಬೇಕಾಗಿತ್ತು. ಜಗತ್ತಿನಲ್ಲಿ ಹಲವಾರು ನಾಗರಿಕತೆಗಳು ಸಂಸ್ಕೃತಿಗಳು ಜೀವ ಮಾನವನ ವಿಧಾನಗಳು ಹುಟ್ಟಿಬಂದು ನಾಶಗೊಂಡಿವೆ. ಇಂತಹ ಘಟನೆಗಳ ಇತಿಹಾಸವನ್ನು ಕೆದಕಿದಾಗ ನಮಗೆ ಮಾನವನ ಪಶುತ್ವದ ಹಾಗೂ ಕ್ರೌರ್ಯದ ಪರಿಚಯವಾಗುತ್ತದೆ. ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಿದ ಯುಕ್ತ ರಾಷ್ಟ್ರ ಸಂಘವು ಯುದ್ಧವನ್ನು ತಡೆಯುವ ಮೂಲ ಉದ್ದೇಶಗಳನ್ನು ತಡೆಯಿತು. ಮಾನವ ಹಕ್ಕುಗಳ

ವಿಶ್ವಘೋಷಣೆಯು ೧೯೪೮ರಲ್ಲಿ ಆಗಿದ್ದು, ಇದರ ಮೂಲ ಉದ್ದೇಶ ಜಗತ್ತಿನ ಎಲ್ಲಾ ಜನತೆ ರಾಷ್ಟ್ರ, ಪ್ರತಿಯೊಬ್ಬ ಮಾನವ ಅಲ್ಲದೇ ಈ ಸಮಾಜದ ಅತ್ಯಂತ ಸಣ್ಣ ಘಟಕವನ್ನು ರಕ್ಷಿಸಿ, ಉಳಿಸಿ ಬೆಳೆಸುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ಈ ಘೋಷಣೆಯು ೨೯ ಅನುಚ್ಛೇದಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಬ್ಬನು ಸಮಾಜದಲ್ಲಿ ಕಾನೂನಿನ ರಕ್ಷಣೆಯನ್ನು ಪಡೆಯಲು ಬದ್ಧನಾಗಿರುತ್ತಾನೆ. ಅಲ್ಲದೇ ತನ್ನ ಧಾರ್ಮಿಕ ಹಾಗೂ ಧರ್ಮವನ್ನು ಅವಲಂಬಿಸುವಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ. ಎಲ್ಲರಿಗೂ ಸ್ವಯಂ ನಿರ್ಣಯದ ಹಕ್ಕು ಇದ್ದು ತಮ್ಮ ರಾಜಕೀಯ ಸ್ಥಾನಮಾನ, ಆರ್ಥಿಕ ಬಲಾಢ್ಯತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಉನ್ನತಿಗಳನ್ನು ಗಳಿಸುವಲ್ಲಿ ಸಮಾನ ಅವಕಾಶಗಳನ್ನು ಹೊಂದಿರುತ್ತಾನೆ. ಜನಾಂಗ, ಬಣ್ಣ, ವಾರಿಸುದಾರಿಕೆ, ವಂಶ ಅಥವಾ ಜನಾಂಗೀಯ ಮೂಲಗಳ ಆಧಾರದ ಮೇಲೆ ಯಾವುದೇ ತಾರತಮ್ಯವನ್ನು ಮಾಡುವ ಹಾಗೇ ಇಲ್ಲ ಎಂದು ಲೇಖಕರು ಅಭಿಪ್ರಾಯಪಟ್ಟಿರುತ್ತಾರೆ.[೧೯]

ಚಂದ್ರಶೇಖರ ಟಿ.ಆರ್. (೨೦೧೦) ರವರ ಪ್ರಕಾರ **"ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ"** ದಲ್ಲಿ ಅಭಿವೃದ್ಧಿಯು ಹಲವಾರು ಹೊಸ ಹೊಸ ಅಂಶಗಳನ್ನು ತನ್ನ ಮಡಿಲಿಗೆ ಸೇರಿಸಿಕೊಂಡಿದೆ. ಅದರಲ್ಲೂ ಮುಖ್ಯವಾಗಿ ಅಭಿವೃದ್ಧಿಯಲ್ಲಿ ಸಾಕ್ಷರತೆಯು ಪ್ರಮುಖ ಪಾತ್ರ ವಹಿಸುತ್ತದೆ. ಅದನ್ನು ಅನೂಚಾನಾವಾಗಿ ಅಭಿವೃದ್ಧಿಯ ಸಾಧನವಾಗಿ ಪರಿಗಣಿಸಲಾಗಿದೆ. ಈ ಅಮರ್ತ್ಯಸೇನ್ ಅವರು ಇದಕ್ಕೆ ಕೊಟ್ಟ ಕೊಡುಗೆ ಅಪಾರ ಮಹಿಳೆಯರ ಸಾಕ್ಷರತೆ ಕುರಿತ ಚರ್ಚೆಯು ಕರ್ನಾಟಕದ ಅಭಿವೃದ್ಧಿ ಸಂಬಂಧಿತ ವಿಚಾರಗಳನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗಿದೆ. ಆದರೆ ವಾಸ್ತವದಲ್ಲಿ ಮಹಿಳೆಯರು ಮತ್ತು ಪುರುಷರ ನಡುವಿನ ಸಾಕ್ಷರತಾ ಅಂತರವು ಲಿಂಗ ಅಸಮಾನತೆಯ ಪ್ರಮುಖ ಮಾನದಂಡವಾಗಿದೆ. ಉಳಿದ ಯಾವುದೇ ರಾಷ್ಟ್ರದಲ್ಲೂ ಸಾಕ್ಷರತೆ ಸಮಾನತೆಯು ಕಂಡುಬರುವುದಿಲ್ಲ ಈಗಲೂ ಮಹಿಳೆಯರ ಸಾಕ್ಷರತೆ ಹಾಗೂ ಶಿಕ್ಷಣವನ್ನು ಒಂದು ಹೊರೆಯೆಂದೇ ಪರಿಗಣಿಸಲಾಗಿದೆ. ಅಭಿವೃದ್ಧಿಯಲ್ಲಿ ಸಾಕ್ಷರತೆಯನ್ನು ಎತ್ತಿ ಹಿಡಿದ ಕೀರ್ತಿ ಅಮರ್ತ್ಯಸೇನ್ ಹಾಗೂ ಮೆಹಬೂಬ್ ಉಲ್-ಹಕ್ ಅವರಿಗೆ ಸಲ್ಲುತ್ತದೆ. ಮಹಿಳೆಯೊಬ್ಬಳು ಉತ್ತಮ ತಾಯಿಯಾಗಲು ಅವಳಿಗೆ ಶಿಕ್ಷಣ ಬಹು ಅಗತ್ಯ. ಏಕೆಂದರೆ ಒಂದು ಕುಟುಂಬದ ಸಮರ್ಪಕ ನಿರ್ವಹಣೆಯು ಮಹಿಳೆಯ ಜವಬ್ದಾರಿಯಾಗಿದೆ. ಸಾಕ್ಷರತೆಯು ಮಹಿಳೆಗೆ ಧಾರಣಾ ಸಾಮರ್ಥ್ಯವನ್ನು ನೀಡುತ್ತದೆ. ನಮ್ಮ ಸಮಾಜದಲ್ಲಿ ಮಹಿಳೆಯರು ಹಲವಾರು ರೀತಿಯ ಆ ಸ್ವಾತಂತ್ರ್ಯದಿಂದ ನರಳುತ್ತಿದ್ದಾರೆ. ಏಕೆಂದರೆ ಅವರ ಧಾರಣಾ ಸಾಮರ್ಥ್ಯವು ಕೆಳಮಟ್ಟದಲ್ಲಿದೆ. ಮಹಿಳೆಯು ಅಕ್ಷರಸ್ಥಳಾದರೆ ಇದು ಮರಣ ಪ್ರಮಾಣದ ಇಳಿಕೆಗೆ ಕಾರಣವಾಗುತ್ತದೆ ಎಂದು ಅಧ್ಯಯನಗಳು ತೋರಿಸಿಕೊಟ್ಟಿವೆ. ಕಳೆದ ಒಂದು

ದಶಕದಲ್ಲಿ ಮಹಿಳೆಯರ ಸಾಕ್ಷರತೆಯು ೧೪.೮೪% ರಷ್ಟು ಏರಿಕೆಯಾಗಿದೆ. ೧೯೯೧ರಲ್ಲಿ ಅಕ್ಷರಸ್ಥ ಮಹಿಳೆಯರಿಗಿಂತ ಅನಕ್ಷರಸ್ಥ ಮಹಿಳೆಯರ ಸಂಖ್ಯೆಯು ಅಧಿಕವಾಗಿತ್ತು. ೨೦೦೧ರಲ್ಲಿ ರಾಜ್ಯದ ಒಟ್ಟು ಅಕ್ಷರಸ್ಥವು ಮಹಿಳೆಯರ ಪ್ರಮಾಣ ೪೧.೯೮%ರಷ್ಟಿದ್ದು ಪುರುಷರ ಪ್ರಮಾಣವು ೨೮.೩%ರಷ್ಟಿದ್ದು, ಪುರುಷರ ಪ್ರಮಾಣವು ೨೮.೩% ರಷ್ಟು ಒಟ್ಟು ಜನಸಂಖ್ಯೆಯನ್ನು ತೆಗೆದುಕೊಂಡರೆ ಲಿಂಗಸಂಬಂಧ ಸಾಕ್ಷರತಾ ಅಂತರ ೧೯.೨% ರಷ್ಟಾಗುತ್ತದೆ. ದಲಿತರಿಗೆ ಸಂಬಂಧಿಸಿದಂತೆ ೨೨.೩೫%ರಷ್ಟಿದ್ದು, ದಲಿತೇತರರಿಗೆ ೧೬.೨೯%ರಷ್ಟಿದೆ. ತಮ್ಮ ಸಂಶೋಧನೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.[೨೦]

ಕೃಷ್ಣಯ್ಯಗೌಡ ಎಚ್.ಆರ್. (೨೦೦೮) ಇವರು ತಮ್ಮ **"ಕರ್ನಾಟಕ ಆರ್ಥಿಕತೆ"** ಎಂಬ ಪುಸ್ತಕದಲ್ಲಿ ಕರ್ನಾಟಕದ ಅರ್ಥವ್ಯವಸ್ಥೆಯಲ್ಲಿ ಕೃಷಿಯ ಮಹತ್ವವನ್ನು ವಿವರಿಸುತ್ತಾ ಮೊದಲನೆದಾಗಿ ಇದು ಜೀವನ ನಿರ್ವಹಣೆಗೆ ನೆರವು ನೀಡುತ್ತದೆ. ವ್ಯವಸಾಯವು ಎಲ್ಲಾ ಜನರ ಜೀವನ ನಿರ್ವಹಣೆಯ ಮೂಲವಾಗಿದೆ. ಯಾವುದೇ ವಲಯದಲ್ಲಿ ಉದ್ಯೋಗ ನಿರತರಾಗಿರುವ ವ್ಯಕ್ತಿಗಳಾದರೂ ಆಹಾರವನ್ನು ಅನುಭೋಗಿಸಲೇ ಬೇಕಾಗಿರುವುದರಿಂದ ಅದು ಅನಿವಾರ್ಯವಾದ ಕಸಬು ಎಂದು ಪರಿಗಣಿಸಲ್ಪಟ್ಟಿದೆ. ಕರ್ನಾಟಕದಂತಹ ಕಡಿಮೆ ತಲಾ ಆದಾಯದ ಆರ್ಥಿಕತೆಗಳಲ್ಲಿ ಒಟ್ಟು ಅನುಭೋಗದಲ್ಲಿ ಕೃಷಿ ವಸ್ತುಗಳ ಪ್ರಮಾಣವೇ ಜಾಸ್ತಿ. ಎರಡನೆಯದಾಗಿ ಬೃಹತ್ ಪ್ರಮಾಣದ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. ಕರ್ನಾಟಕದ ಅರ್ಥವ್ಯವಸ್ಥೆಯಲ್ಲಿ ವ್ಯವಸಾಯವೇ ಅತೀ ದೊಡ್ಡ ಉದ್ಯಮವಾಗಿದೆ. ಒಟ್ಟು ಕಾರ್ಯನಿರತ ಜನಸಂಖ್ಯೆಯಲ್ಲಿ ಸುಮಾರು ಶೇಕಡ ೫೬ರಷ್ಟು ಜನರು ಕೃಷಿ ವಲಯದಲ್ಲಿ ಉದ್ಯೋಗಿಗಳಾಗಿರುವರು. ಸಾಗುವಳಿಯಿಂದ ನೇರ ಉದ್ಯೋಗ ದೊರೆತಿರುವುದಲ್ಲದೆ, ಕೃಷಿ ವಸ್ತುಗಳ ಸಾಗಣೆ, ಮಾರುಕಟ್ಟೆ ವ್ಯವಸ್ಥೆ ಮುಂತಾದ ಚಟುವಟಿಕೆಗಳಿಂದ ಪರೋಕ್ಷ ಉದ್ಯೋಗವೂ ದೊರೆತಿದೆ. ಸುಮಾರು ಶೇಕಡ ೬ ಭಾಗ ಜನರು ವ್ಯವಸಾಯದಲ್ಲಿ ಪರೋಕ್ಷವಾಗಿ ಉದ್ಯೋಗ ನಿರತರಾಗಿದ್ದಾರೆ. ಮೂರನೆಯದಾಗಿ ಇದು ರಾಜ್ಯದ ಆದಾಯದ ಪ್ರಮುಖ ಮೂಲ. ಕರ್ನಾಟಕ ರಾಜ್ಯದ ಆದಾಯಕ್ಕೆ ವ್ಯವಸಾಯದ ಕೊಡುಗೆ ಅತಿ ಹೆಚ್ಚಿನದ್ದಾಗಿದೆ. ೨೦೧೦-೧೧ರ ಅಂದಾಜಿನಂತೆ ರಾಜ್ಯದ ಆದಾಯದಲ್ಲಿ ಸುಮಾರು ಶೇಕಡ ೩೫ರಷ್ಟು ವ್ಯವಸಾಯದ ಮೂಲದಿಂದ ಬಂದಿದೆ. ನಾಲ್ಕನೆಯದಾಗಿ ಇದು ಕೈಗಾರಿಕಾ ವಲಯಕ್ಕೆ ಕಚ್ಚಾ ವಸ್ತುಗಳ ಪೂರೈಕೆಯನ್ನು ಮಾಡುತ್ತದೆ ಹಾಗೂ ಐದನೆಯದಾಗಿ ಕೈಗಾರಿಕೋತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುತ್ತದೆ: ಕೃಷಿ ವಲಯುದಲ್ಲಿ ಉತ್ಪಾದನೆಯುನ್ನು ಕೈಗೊಳ್ಳಲು ಅವಶ್ಯಕವಾಗಿರುವ ಸರಕುಗಳು ಕೈಗಾರಿಕೋತ್ಪನ್ನಗಳಾಗಿವೆ ಎಂದರು. ಆದರೆ ಅಭಿವೃದ್ಧಿಯ ದೃಷ್ಟಿಯಲ್ಲಿ ಮಹಿಳಾ ಕಾರ್ಮಿಕರ ಆರೋಗ್ಯದ ಬಗ್ಗೆ ಚಿಂತನೆ ಮಾಡಿರುವುದಿಲ್ಲ.[೨೧]

ಅರ್ಜುನ್ ದೇವ್ ಇಂದಿರಾ ಅರ್ಜುನ್‌ದೇವ್, ಸುಪ್ತಾ ದಾಸ್ (೨೦೦೩) ಇವರು ಮಾನವ ಹಕ್ಕುಗಳ ಕುರಿತಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಮಾನವ ಹಕ್ಕುಗಳ ವಿಶ್ವವ್ಯಾಪಿ ಘೋಷಣೆಯು ತಾರತಮ್ಯದ ತತ್ವವನ್ನು ದೃಢೀಕರಿಸಿರುವುದನ್ನು ಹಾಗೂ ಎಲ್ಲರೂ ಸಮಾನ ಸ್ವಾತಂತ್ರ್ಯ ಹಾಗೂ ಘನತೆಯಿಂದ ಬಾಳುವ ಹಕ್ಕನ್ನು ಹೊಂದಿರುತ್ತಾರೆ. ಮಾನವ ಹಕ್ಕುಗಳ ಒಡಂಬಡಿಕೆಯನ್ನು ಒಪ್ಪದ ಎಲ್ಲಾ ರಾಷ್ಟ್ರಗಳು ಎಲ್ಲಾ ರೀತಿಯ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ನಾಗರಿಕ ಹಾಗೂ ರಾಜಕೀಯ ಹಕ್ಕುಗಳ ಅನುಭೋಗಕ್ಕೆ ಗಂಡು ಹೆಣ್ಣುಗಳ ಸಮಾನ ಹಕ್ಕನ್ನು ಖಾತರಿಪಡಿಸಲು ಬದ್ಧರಾಗಿರುತ್ತಾರೆ. ವಿಶ್ವಸಂಸ್ಥೆಯ ಆಶ್ರಯದಲ್ಲಿ ಮತ್ತು ಹೆಣ್ಣು ಹಾಗೂ ಗಂಡುಗಳ ಸಮಾನ ಹಕ್ಕನ್ನು ನಿರ್ಧರಿಸಲು ಹಲವಾರು ಒಡಂಬಡಿಕೆಗಳನ್ನು ಮಾಡಲಾಗಿದೆ. ಗಂಡು ಹೆಣ್ಣಿನ ಮಧ್ಯೆ ಪೂರ್ಣ ಸಮಾನತೆಯ ಸಾಧನೆಗೆ ಸಮಾಜದಲ್ಲಿ ಮತ್ತು ಸಂಸಾರದಲ್ಲಿ ಪುರುಷರು ಮತ್ತು ಮಹಿಳೆಯರ ಸಾಂಪ್ರದಾಯಿಕ ಪಾತ್ರ ನಿರ್ವಹಣೆಯಲ್ಲಿ ಒಂದು ಬದಲಾವಣೆಯ ಅಗತ್ಯವಿದೆ. ಹೀಗಾಗಿ ಮಹಿಳೆಯರ ವಿರುದ್ಧ ತಾರತಮ್ಯದ ನಿರ್ಮೂಲನೆಯನ್ನು ಹೋಗಲಾಡಿಸಲು ಎಲ್ಲಾ ರೂಪದ ಕಾರ್ಯ ತತ್ವವನ್ನು ರೂಪಿಸಿದೆ.

ವಿಶ್ವ ಸಂಸ್ಥೆಯ ಒಡಂಬಡಿಕೆಗಳಿಗೆ ಸಂಬಂಧಿಸಿದಂತೆ ಮಹಿಳೆಯರ ವಿರುದ್ಧ ತಾರತಮ್ಯವನ್ನು ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ನಾಗರಿಕ ಅಥವಾ ಇನ್ನಾವುದೇ ಕ್ಷೇತ್ರದಲ್ಲಿ ಅವರ ವೈವಾಹಿಕ ಸ್ಥಾನಮಾನಗಳ ಗಣನೆಯಿಲ್ಲದೆ, ಮಹಿಳೆಯರಿಂದ ಮಾನವ ಹಕ್ಕುಗಳ ಮನ್ನಣೆ, ಅನುಭೋಗ ಅಥವಾ ಚಲಾವಣೆಯನ್ನು ರದ್ದುಗೊಳಿಸುವ ಅಥವಾ ಕುಂಠಿತಗೊಳಿಸುವ ಪರಿಣಾಮ ಅಥವಾ ಉದ್ದೇಶವನ್ನು ಹೊಂದಿರುವ ಲಿಂಗಾಧಾರಿತ ವಿಂಗಡಣೆ, ನಿರಾಕರಣೆ ಅಥವಾ ನಿರ್ಬಂಧ ಎಂದು ಪರಿಗಣಿಸಲಾಗಿದೆ. ಗಂಡು ಹೆಣ್ಣಿನ ಸಮಾನತೆಯ ಆಧಾರದ ಮೇಲೆ ಸಮಾನ ಹಕ್ಕುಗಳನ್ನು ಖಚಿತಪಡಿಸುವುದಕ್ಕಾಗಿ ಭಾಗಸ್ಥ ರಾಷ್ಟ್ರಗಳು, ಉದ್ಯೋಗದ ಕ್ಷೇತ್ರದಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯವನ್ನು ನಿರ್ಮೂಲನೆಗೊಳಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಮಹಿಳೆಯರ ವಿರುದ್ಧದ ಎಲ್ಲಾ ಬಗೆಯ ತಾರತಮ್ಯ ನಿರ್ಮೂಲನ ಸಂಬಂಧವಾದ ಒಡಂಬಡಿಕೆಯು ೧೮ನೇ ಡಿಸೆಂಬರ್ ೧೯೭೯ರಲ್ಲಿ ವಿಶ್ವಸಂಸ್ಥೆಯ ಮಹಾಧಿವೇಶನದಲ್ಲೂ ಅಂಗೀಕಾರವಾಯಿತು. ಇದು ೩ನೇ ಸೆಪ್ಟಂಬರ್ ೧೯೮೧ರಂದು ಜಾರಿಗೊಂಡಿತು. ಈ ಒಡಂಬಡಿಕೆಯ ಕೆಲವು ಅಂಶಗಳನ್ನು ಲೇಖಕರು ಈ ಮೇಲಿನಂತೆ ವಿವರಿಸಿದ್ದಾರೆ. ಆದರೆ ಇವರು ಕೂಡ ಸಾಮಾಜಿಕ, ಆರ್ಥಿಕ, ರಾಜಕೀಯ ಬಗ್ಗೆ ಅವಲೋಕಿಸಿದ್ದಾರೆ. ಆದರೆ ಮಹಿಳಾ ಆರೋಗ್ಯದ ಬಗ್ಗೆ ಚಿಂತಿಸಿಲ್ಲ.[೨೨]

ಸಿದ್ಧಗಂಗಮ್ಮ (೨೦೦೭) ಅವರ **"ಕರ್ನಾಟಕದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯ ಸ್ಥಿತಿಗತಿ"** ಕುರಿತಾದ ಪ್ರಬಂಧ ಲೇಖನದಲ್ಲಿ, "ಯಾವುದೇ ಒಂದು ದೇಶದ ಅಭಿವೃದ್ಧಿಯು ಅಲ್ಲಿನ ಮಹಿಳೆ ಮತ್ತು ಮಕ್ಕಳ ಆರೋಗ್ಯದ ಸ್ಥಿತಿಯನ್ನು ವಿವರಿಸುತ್ತದೆ. ಮಹಿಳೆಯರ ಆರೋಗ್ಯವು ಕುಟುಂಬದ ಆರ್ಥಿಕ ಸ್ಥಿತಿ ಹಾಗೂ ಸಾರ್ವತ್ರಿಕವಾಗಿ ದೇಶದ ಆರೋಗ್ಯ ಸ್ಥಿತಿಯ ಮೇಲೆ ಪರಿಣಾಮವನ್ನು ಬೀರುತ್ತದೆ. ಅಲ್ಲದೇ ಜಾತಿ ಮತ್ತು ಲಿಂಗದ ಆಧಾರದ ಮೇಲೆ ಬಿಂಬಿತವಾಗಿರುವ ನಮ್ಮ ಸಮಾಜವು ಮಹಿಳೆ ಮತ್ತು ಮಕ್ಕಳ ಆರೋಗ್ಯದ ಕುರಿತಂತೆ ಹೆಚ್ಚಿನ ಕಾಳಜಿಯನ್ನು ವಹಿಸಿಲ್ಲ. ಅಲ್ಲದೇ ಬಡತನದಲ್ಲಿರುವ ಓರ್ವ ಮಹಿಳೆಗೆ ಆಕೆಯ ಉತ್ತಮ ಆರೋಗ್ಯವೇ ಸಂಪನ್ಮೂಲವಾಗಿದೆ." ಅಲ್ಲದೇ ಇತ್ತೀಚಿನ ಜಾಗತೀಕರಣ ಲೇಪಿತ ಅಭಿವೃದ್ಧಿ ಚಟುವಟಿಕೆಗಳು ಮಹಿಳೆಯರ ಬದುಕನ್ನು ಹೈರಾಣಗೊಳಿಸಿದೆ. ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ಕುರಿತಂತೆ ಸರಕಾರವು ತನ್ನ ಹತ್ತನೇ ಹಣಕಾಸು ಯೋಜನೆಯಲ್ಲಿ ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದಂತೆ ಮೂರು ಪ್ರಮುಖ ಯೋಜನೆಗಳನ್ನು ಹಮ್ಮಿಕೊಂಡಿದೆ. ಅಲ್ಲದೇ ತಾಯಿಯ ಹಾಲಿನ ಮಹತ್ವದ ಕುರಿತಂತೆ ಆಗಸ್ಟ್ ೧ ರಿಂದ ೭, ೨೦೦೨ರಲ್ಲಿ ವಿಶ್ವ ತಾಯಂದಿರ ಸಾಪ್ತಾಹಿಕ ದಿನವನ್ನಾಗಿ ಆಚರಿಸಲಾಗಿದೆ. ರಾಜ್ಯ ಸರಕಾರವು ಶಿಶುಪಾಲನೆ, ಆರೋಗ್ಯ ಶಿಕ್ಷಣ ಹಾಗೂ ರಕ್ಷಣಾತ್ಮಕ ಕ್ರಮಗಳನ್ನು ಹಮ್ಮಿಕೊಂಡಿದೆ" ಎಂದು ತನ್ನ ಬರಹದಲ್ಲಿ ವಿಶ್ಲೇಷಿಸಿದ್ದಾರೆ.[೨೨]

ಪ್ರಶಾಂತ್ (೨೦೦೯) ಅವರ **"ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ-ಸದಸ್ಯರೊಂದಿಗೆ ಸಂವಾದ"** ಎಂಬ ಲೇಖನದಲ್ಲಿ ಹೊಸಪೇಟೆ ತಾಲೂಕಿನ ಕೆಲವು ಶಾಲೆಗಳಲ್ಲಿ ನಡೆಸಿದ ಅಧ್ಯಯನಗಳನ್ನು ಆಧಾರವಾಗಿರಿಸಿ ಸಮಕಾಲೀನ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಶಿಕ್ಷಣದ ಸ್ಥಿತ್ಯಂತರದ ಕುರಿತಂತೆ ಚರ್ಚಿಸಿರುತ್ತಾರೆ. ಶಿಕ್ಷಣದ ನಿರ್ವಹಣೆಗೆ ಸಂಬಂಧಿಸಿದಂತೆ ಶಿಕ್ಷಣದ ಆಡಳಿತವನ್ನು ಕೇಂದ್ರೀಕೃತ ವ್ಯವಸ್ಥೆಯಿಂದ ಸ್ಥಳೀಯ ಮಟ್ಟದಲ್ಲಿ ನಿರ್ವಹಿಸಬೇಕಾದ ಅನಿವಾರ್ಯತೆಯೂ ಇದೆ. ಅಲ್ಲದೇ ಶಾಲಾ ಆಡಳಿತಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಮುದಾಯಗಳ ಸಬಲೀಕರಣವು ಪ್ರಮುಖವಾಗಿದೆ. ಶಿಕ್ಷಣದ ಉತ್ತಮ ಆಡಳಿತ ಪ್ರಕ್ರಿಯೆಗೆ ಹಲವಾರು ಯೋಜನೆಗಳು ಜಾರಿಯಲ್ಲಿದ್ದರೂ ಇದು ತಳಮಟ್ಟದ ಯಶಸ್ಸಿಗೆ ಸೂಕ್ತ ವಾತವರಣವನ್ನು ನಿರ್ಮಿಸುತ್ತಿಲ್ಲ. ಸಮಕಾಲೀನ ಅಭಿವೃದ್ಧಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಶಿಕ್ಷಣ ವ್ಯವಸ್ಥೆಯನ್ನು ಸ್ಥಳೀಯ ಮಟ್ಟದಲ್ಲಿ ನಿಯಂತ್ರಿಸುವ ಅಂಶಗಳು ಮೂರು ಮುಖ್ಯ ಅಂಶಗಳಿಗೆ ಅಧಿಕ ಪ್ರಾಮುಖ್ಯತೆಯನ್ನು ನೀಡುತ್ತದೆ. ಅವುಗಳೆಂದರೆ ಸ್ಥಳೀಯ ಸಮುದಾಯದ ಪಾಲುದಾರಿಕೆಗೆ ಹೆಚ್ಚಿನ ಅಧಿಕಾರ, ಆಡಳಿತ ನಿರ್ವಹಣೆಯಲ್ಲಿ ಪಾರದರ್ಶಕತೆ ಹಾಗೂ ಗುಣಾತ್ಮಕ ಶಿಕ್ಷಣದ ಅಭಿವೃದ್ಧಿಗೆ ಪೂರಕ

ಪರಿಸರದ ನಿರ್ಮಾಣ, ಈ ಸಂವಾದ ತೆಗೆದುಕೊಂಡ ನಿರ್ಣಯಗಳೆಂದರೆ ಮಕ್ಕಳ ಕಡ್ಡಾಯ ಹಾಜರಾತಿ; ಶಿಕ್ಷಣದ ಅಭಿವೃದ್ಧಿಗೆ ಮಾಧ್ಯಮಗಳ ಬಳಕೆ ಹಾಗೂ ಪಾರದರ್ಶಕ ಲೆಕ್ಕಪತ್ರಗಳು, ಪೋಷಕರ ಪಾಲ್ಗೊಳ್ಳುವಿಕೆ, ಶಿಕ್ಷಕರು ಹೆಚ್ಚಿನ ಪ್ರಮಾಣದಲ್ಲಿ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ನೋಡಿಕೊಳ್ಳುವುದು" ಎಂದು ಹೇಳಿರುತ್ತಾರೆ. ಸಂಶೋಧಕರು ಮಹಿಳಾ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿರುತ್ತಾರೆ.[೨೯]

ಶ್ರೀಧರ್ ಎ. (೨೦೧೪) ಅವರ "ಬಹುಮುಖಿ ಚಿಂತನೆ-ವೈಚಾರಿಕ ಲೇಖನಗಳ ಸಂಗ್ರಹ"ದಲ್ಲಿ ಮಾನವಾಭಿವೃದ್ಧಿ ಮತ್ತು ಅಭಿವೃದ್ಧಿ ಹಕ್ಕು ವಿಷಯದ ಕುರಿತಂತೆ ಚರ್ಚಿಸುತ್ತಾ. "ಮಾನವ ಹಕ್ಕು ಮತ್ತು ಮಾನವ ಅಭಿವೃದ್ಧಿ ಒಂದಕ್ಕೊಂದು ಪೂರಕವಾದ ಅಂಶಗಳಾಗಿವೆ. ಇವುಗಳೆರೆಡು ಉತ್ತಮ ಉದ್ದೇಶಗಳನ್ನು ಹೊಂದಿದ್ದು, ಪರಿಕಲ್ಪನಾತ್ಮಕವಾಗಿ ಬೇರೆಬೇರೆಯಾಗಿವೆ. ಮಾನವಾಭಿವೃದ್ಧಿ ಪರಿಕಲ್ಪನೆಯು ಮಾನವ ಕಲ್ಯಾಣದ ಕುರಿತಂತೆ ಬೆಳಕು ಚೆಲ್ಲುತ್ತದೆ. ಮಾನವ ಹಕ್ಕುಗಳು ಒಬ್ಬ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಪ್ರತಿಪಾದನೆಗೆ ಪೂರಕ ಅಂಶಗಳನ್ನು ಒದಗಿಸುತ್ತದೆ. ಸಕಾರಾತ್ಮಕ ಮಾನವ ಹಕ್ಕುಗಳ ಬಳಕೆಯು ಮಾನವ ಅಭಿವೃದ್ಧಿಗೆ ಪೂರಕ ವೇದಿಕೆಯನ್ನು ನಿರ್ಮಿಸಿಕೊಡಬಲ್ಲದು. ಮಾನವ ಅಭಿವೃದ್ಧಿಯು ಮಾನವನ ಸಮಗ್ರವಾದ ಧಾರಣಾ ಶಕ್ತಿಯನ್ನು ಹೆಚ್ಚಿಸುವಂತಹ ಕಾರ್ಯಗಳಿಗೆ ಹೆಚ್ಚಿನ ಒತ್ತನ್ನು ನೀಡುತ್ತದೆ. ಮಾನವ ಹಕ್ಕುಗಳು ಒದಗಿಸುವ ಸ್ವಾತಂತ್ರ್ಯವು ಒಬ್ಬ ವ್ಯಕ್ತಿಯ ದೈಹಿಕ ಅಗತ್ಯಗಳಿಗೆ ಪೂರಕ ಪರಿಸರವನ್ನು ನಿರ್ಮಿಸುತ್ತದೆ. ಹೀಗಾಗಿ ಮಾನವ ಹಕ್ಕುಗಳು ಮತ್ತು ಮಾನವ ಅಭಿವೃದ್ಧಿಯು ಒಂದಕ್ಕೊಂದು ಅಂತರ್ಗತವಾಗಿದೆ" ಎಂಬುವುದು ಲೇಖಕರ ಅಭಿಪ್ರಾಯವಾಗಿದೆ. ಲೇಖಕರು ತಮ್ಮ ಮಾನವಾಭಿವೃದ್ಧಿ ಮತ್ತು ಅಭಿವೃದ್ಧಿ ಹಕ್ಕು ಎಂಬ ಬರಹದಲ್ಲಿ ಅಂತರಾಷ್ಟ್ರೀಯ ಸಂಪನ್ಮೂಲ ಮರು ಹಂಚಿಕೆಗೆ ಸಂಬಂಧಿಸಿದಂತೆ ತೃತೀಯ ಜಗತ್ತಿನ ಹೋರಾಟದಲ್ಲಿ ಅಭಿವೃದ್ಧಿ ಹಕ್ಕಿನ ಕಲ್ಪನೆ ಅಂತರ್ಗತಗೊಂಡಿತ್ತು. ಆದರೆ ಇದರ ನಡುವೆ ಅಭಿವೃದ್ಧಿ ಹಕ್ಕು ನಿರಾಕರಣೆಗೆ ಒಳಗಾಗಲಿಲ್ಲ, ಅಭಿವೃದ್ಧಿ ಹಕ್ಕು ಯಾವುದೇ ಪರಾಧೀನವಲ್ಲದ ಮಾನವ ಹಕ್ಕು ಅಲ್ಲದೆ ಅಭಿವೃದ್ಧಿ ಹಕ್ಕು ಮೂಲಭೂತ ಸ್ವಾತಂತ್ರ್ಯವನ್ನು ಪರಿಪೂರ್ಣವಾಗಿ ಹೊಂದುವುದು ಆಗಿದೆ. ಅಭಿವೃದ್ಧಿ ಹಕ್ಕು ಹಲವು ವಿರುದ್ಧ ಲಕ್ಷಣಗಳನ್ನು ಒಳಗೊಂಡಿದೆ. ಕಾನೂನಾತ್ಮಕವಾಗಿ ಫಲಪ್ರದವಾದರೂ ಪ್ರಾಯೋಗಿಕವಾಗಿ ಸಂಪೂರ್ಣ ವಿಫಲವಾಗಿದೆ. ಇದು ರಾಜಕೀಯವಾಗಿ ಬಹಳ ದುರ್ಬಲವೆನಿಸಿದೆ. ಮಾನವ ಹಕ್ಕು ಮತ್ತು ಮಾನವಾಭಿವೃದ್ಧಿ ಒಂದಕ್ಕೊಂದು ಪೂರಕ ಅಂಶಗಳನ್ನು ಒಳಗೊಂಡಿದೆ. ಒಂದು ಹಕ್ಕಿನ ಬಗ್ಗೆ ಪ್ರತಿಪಾದಿಸಿದರೆ ಇನ್ನೊಂದು ಅದನ್ನು ಹೊಂದಲು ಬೇಕಾದ ಅವಕಾಶಗಳನ್ನು ಒದಗಿಸುತ್ತದೆ. ಮಾನವಾಭಿವೃದ್ಧಿ ಪರಿಕಲ್ಪನೆ ಮಾನವ

ಜೀವಿತಾ ಕಲ್ಯಾಣ ಬಗೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತದೆ. ಇದು ನಿರ್ದಿಷ್ಟ ಧಾರಣಶಕ್ತಿಯನ್ನು ಹೆಚ್ಚಿಸುವಂತ ಗುರಿಯನ್ನು ಹೊಂದಿದೆ. ಅಲ್ಲದೇ ಜೀವಿಸಲು ಸಾಧ್ಯವಾಗುವ ಸ್ವಾತಂತ್ರ್ಯ ಮತ್ತು ಅದನ್ನು ಆಯ್ಕೆ ಮಾಡುವ ಅವಕಾಶಗಳನ್ನು ಇದು ಹೆಚ್ಚು ಗಮನವನ್ನು ನೀಡುತ್ತದೆ. ಹೀಗಾಗಿ ಮಾನವಾಭಿವೃದ್ಧಿಯನ್ನು ಸಾಧಿಸಲು ಮುಖ್ಯ ಆಯುಧ ಶಿಕ್ಷಣವು ಮಾನವನ ಧಾರಣಶಕ್ತಿಯನ್ನು ಹೆಚ್ಚಿಸುತ್ತದೆ. ಇದರ ಜೊತೆಗೆ ಸಾಮಾಜಿಕ ಸ್ವಾತಂತ್ರ್ಯಗಳ ಅವಕಾಶಗಳೂ ಇವೆ. ಕೆಲವು ಹಕ್ಕುಗಳು ಇತರರ ಹಸ್ತ ಕ್ಷೇಪದಿಂದ ದೂರವಿರುವ ಸ್ವಭಾವದ್ದಾಗಿರಬಹುದು. ಆದರೂ ಇದು ನಿಶ್ಚಿತ ಸಂಗತಿಯನ್ನು ಸಾಕಾರಗೊಳಿಸುವ ಸ್ವರೂಪವನ್ನು ಹೊಂದಿವೆ ಎಂದು ಲೇಖಕರು ಅಭಿಪ್ರಾಯ ಪಟ್ಟಿರುತ್ತಾರೆ. ಸಂಶೋಧಕರು ಮಾನವ ಹಕ್ಕುಗಳು ಮತ್ತು ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿರುತ್ತಾರೆ. ಆದರೆ ಮಹಿಳಾ ಕಾರ್ಮಿಕರ ಬಗ್ಗೆ ಚಿಂತಿಸಿಲ್ಲ.[೨೫]

ಶೈಲಜಾ ವೇಣುಗೋಪಾಲ (೨೦೦೧) ಅವರು, **"ಮಕ್ಕಳ ಅಭಿವೃದ್ಧಿ ಮತ್ತು ದಲಿತ ಮಹಿಳೆ"** ಎಂಬುದರ ಕುರಿತಂತೆ ವಿವರಿಸುತ್ತಾ, ಯಾವುದೇ ಅಭಿವೃದ್ಧಿ ಕಾರ್ಯಗಳು ಒಂದೇ ರೀತಿಯಲ್ಲಿ ಎಲ್ಲರನ್ನೂ ತಲುಪುವುದಿಲ್ಲ ಬೇರೆ ಬೇರೆ ವರ್ಗ ಜಾತಿ ಮತ್ತು ಪ್ರದೇಶದ ಜನರ ಮೇಲೆ ಈ ಅಭಿವೃದ್ಧಿ ಮಾದರಿಯು ವಿಭಿನ್ನ ರೀತಿಯಲ್ಲಿ ಪರಿಣಾಮವನ್ನು ಬೀರುತ್ತದೆ. ಅಲ್ಲದೆ ಎಲ್ಲಕ್ಕಿಂತಲೂ ಮುಖ್ಯವಾಗಿ ಇದು ಪುರುಷ ಹಾಗೂ ಮಹಿಳೆಯರ ಮೇಲೆ ಬೇರೆಯದೇ ರೀತಿಯಲ್ಲಿ ಪರಿಣಾಮವನ್ನು ಬೀರುತ್ತದೆ. ಒಂದು ನಿರ್ದಿಷ್ಟ ಹಳ್ಳಿಯ ಅತ್ಯಂತ ನಿರ್ಲಕ್ಷಿತ, ಅರಕ್ಷಿತ, ಅನಕ್ಷರಸ್ಥ ದಲಿತ ಮಹಿಳೆಯ ಮೇಲೆ ಈ ಅಭಿವೃದ್ಧಿ ಮಾದರಿಯು ಯಾವ ಪರಿಣಾಮವನ್ನು ಬೀರಬಹುದು ಎಂದು ಲೇಖಕರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ದಲಿತರ ಪರ ಚಿಂತಕರಲ್ಲಿ ಇಂದು ಜಾಗತೀಕರಣದ ಪರ ವಿರುದ್ಧ ವಾದಗಳು ಸಾಮಾನ್ಯವಾಗಿದೆ. ಜಾಗತೀಕರಣಕ್ಕೆ ಒಪ್ಪಿಕೊಂಡರೆ ತಮ್ಮ ಗುಂಡಿಯನ್ನು ತಾವೇ ತೋಡಿಕೊಂಡಂತೆ ಎಂಬ ವಾದವನ್ನೂ ಹಲವು ಚಿಂತಕರು ಒಪ್ಪಿಕೊಂಡಿರುತ್ತಾರೆ. ಹಿಂದೆ ಕೂಡ ಸಣ್ಣ ರೈತರು ಸಾಲ ಮುಂತಾದ ಜಂಜಡಗಳಲ್ಲಿ ಸಿಕ್ಕಿ ಭೂಮಿಯನ್ನು ಜಮೀನುದಾರರಿಗೆ ಬರೆದುಕೊಟ್ಟರೂ, ಜಮೀನು ಕಳೆದುಕೊಂಡ ದಲಿತ ರೈತರು ಅದರ ಹಕ್ಕನ್ನು ಕಳೆದುಕೊಂಡರೂ, ಅದರೊಡನೆ ಸಂಬಂಧವನ್ನು ಸಾಮಾನ್ಯವಾಗಿ ಕಳೆದುಕೊಳ್ಳುತ್ತಿರಲಿಲ್ಲ. ಆದರೆ ಇಂದು ದಲಿತ ರೈತರು ಗುಳೆ ಹೋಗುವುದು ಸಾಮಾನ್ಯವಾಗಿದೆ. ಆದರೆ ತನ್ನ ಹೆಂಡತಿ ಮಕ್ಕಳನ್ನು ಊರಿನಲ್ಲಿಯೇ ಬಿಟ್ಟು ಹೋದ ಸಂದರ್ಭದಲ್ಲಿ ಕೂಲಿಯು ದೊರಕದಿರುವ ದಲಿತ ಮಹಿಳೆಯು ಕುಟುಂಬದ ನಿರ್ವಹಣೆಗೆ ಊರಿನ ಮೇಲ್ವರ್ಗದವರ ಬಳಿ ದುಡಿಯುವ ಸಂದರ್ಭದಲ್ಲಿ ಅದೆಷ್ಟು ರೀತಿಯಲ್ಲಿ ಶೋಷಣೆಗೊಳಗಾಗುವ ಸಂದರ್ಭಗಳು ಎದುರಾಗಿದ್ದು, ಆಕೆಗೆ ಅದರ ವಿರುದ್ಧ ಧ್ವನಿಯೆತ್ತುವ

ಯಾವ ಸಾಮರ್ಥ್ಯವೂ ಇರುವುದಿಲ್ಲ. ಗಂಡನಿಲ್ಲದ ಕಾರಣ ಕುಟುಂಬ ನಿರ್ವಹಣೆ ಅವಳದೇ ಜವಾಬ್ದಾರಿಯಾಗಿರುತ್ತದೆ. ಒಂಟಿತನದ ಜೊತೆಗೆ ನಿರುದ್ಯೋಗದ ಬೇಗೆಯನ್ನು ಆಕೆ ತಾಳಿಕೊಳ್ಳಬೇಕಾಗುತ್ತದೆ. ಮೇಲ್ವರ್ಗದ ಜಾತಿಯವರ ಮನೆಗೆಲಸ ಮಾಡುವುದು ಆಕೆಗೆ ನಿಷಿದ್ಧವಾಗಿರುತ್ತದೆ. ಹೀಗಾಗಿ ಆಕೆ ಕೃಷಿ ಕೂಲಿಯಾಳಾಗಿಯೇ ಕೆಲಸ ಮಾಡಬೇಕಾಗುತ್ತದೆ. ಕೂಲಿಗಾಗಿ ದಲಿತ ಮಹಿಳೆ ತುಂಬಾ ದೂರದೂರ ಕ್ರಮಿಸಬೇಕಾಗುತ್ತದೆ. ಬೆಳೆಯುತ್ತಿರುವ ಮಕ್ಕಳನ್ನು ಗಮನಿಸುವುದು ಆಕೆಗೆ ಕಷ್ಟದ ಕೆಲಸ ಇದರಿಂದ ದಲಿತರ ಹೆಚ್ಚಿನ ಮಕ್ಕಳು ಬಾಲಾಪರಾಧಿಗಳಾಗಿ ಬೆಳೆಯುತ್ತಾರೆ. ಈ ದಿಕ್ಕಿನಲ್ಲಿಯೂ ಗಮನಹರಿಸಬೇಕಾದ ಅಗತ್ಯವಿದೆ. ಕೊಯ್ಲಿನ ಕೆಲಸದಲ್ಲಿ ಹೆಚ್ಚು ಹೆಚ್ಚು ತೊಡಗಿಕೊಳ್ಳುವವರು ದಲಿತ ಮಹಿಳೆಯರೇ ಆಗಿದ್ದು, ಇಂದು ಆಧುನಿಕ ಕೃಷಿ ಪದ್ಧತಿಯಿಂದ ಅವರೂ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಹೆಚ್ಚಿನ ದಲಿತ ಮಹಿಳೆಯರು ಅಪೌಷ್ಠಿಕತೆಯ ಕೊರತೆಯಿಂದ ೪೦ ವರ್ಷ ದಾಟುವಾಗಲೇ ದೇಹದ ಅರ್ಧ ಚೈತನ್ಯವನ್ನೇ ಕಳೆದುಕೊಳ್ಳುತ್ತಾರೆ. ದಲಿತ ಕುಟುಂಬಗಳಲ್ಲಿ ಇಂದಿಗೂ ಅನ್ನದಾತೆ ಮಹಿಳೆಯೇ ಆಗಿದ್ದಾಳೆ" ಎಂದು ಲೇಖಕರು ಅಭಿಪ್ರಾಯ ಪಟ್ಟಿರುತ್ತಾರೆ.[೨೬]

ಚೆನ್ನಮ್ಮ ಕೆ.ಸಿ. (೨೦೧೦) ಅವರು, **"ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ"** ಎಂಬ ಕೃತಿಯಲ್ಲಿ ಮಹಿಳೆಯರು ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಿದರೂ ಅಭಿವೃದ್ಧಿ ಸಿದ್ಧಾಂತಗಳು ಅದನ್ನು ಕಡೆಗಣಿಸಿವೆ. ಆದರೆ ೧೯೯೫ರ ಮಾನವ ಅಭಿವೃದ್ಧಿ ವರದಿಯು ವಿಶೇಷವಾಗಿ ಮಹಿಳೆಯರ ಕುರಿತಾಗಿದ್ದು ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಅನುಭವಿಸುವ ಅಸಮಾನತೆಯ ಕಡೆಗೆ ಹೆಚ್ಚು ಗಮನ ಕೇಂದ್ರೀಕರಿಸಿತು ಇದಕ್ಕೆ ಅಮರ್ತ್ಯಸೇನ್ ಅವರ ಕೊಡುಗೆ ಅನನ್ಯವಾದುದು ೧೯೯೬ರ **'ಶ್ರಮಶಕ್ತಿ ವರದಿ'** ಪ್ರಕಾರ ಮಹಿಳೆಯರು ಏಕರೂಪಿಯಲ್ಲವೆಂಬ ನಿರ್ಧಾರಕ್ಕೆ ಬರಲಾಯಿತು. ಮಹಿಳೆಯು ಒಂದು ಕುಟುಂಬದಲ್ಲಿ ಇತರ ಸದಸ್ಯರಿಗಿಂತ ಹೆಚ್ಚು ಅಪೌಷ್ಠಿಕತೆ ಆಹಾರದ ಕೊರತೆಯನ್ನು ಅನುಭವಿಸುತ್ತಾಳೆ. ಮನುಷ್ಯನು ತನ್ನ ಜೀವನವನ್ನು ಉತ್ತಮಪಡಿಸಿಕೊಳ್ಳಲು ಇರುವ ಆಯ್ಕೆಯ ವಿಸ್ತರಣೆಯೇ ಮಾನವ ಅಭಿವೃದ್ಧಿ. ಹೀಗೆ ಆಯ್ಕೆ ಮಾಡಿಕೊಂಡ ಜನರು ಏನನ್ನು ಸಾಧಿಸುವರೋ ಅದನ್ನು ಆರ್ಥಿಕ ಅವಕಾಶಗಳೆಂದು ಪರಿಗಣಿಸಬಹುದು. ಮಾನವನ ಆಯ್ಕೆಗೆ ಮುಖ್ಯವಾಗಿ ಧಾರಣಾ ಸಾಮರ್ಥ್ಯದ ಅಗತ್ಯವಿದೆ. ಇದಕ್ಕೆ ಹೆಚ್ಚಿನ ಸ್ವಾತಂತ್ರ್ಯದ ಅಗತ್ಯವೂ, ಅವಕಾಶವೂ ಇರಬೇಕು. ಮಾನವನು ತಾನುಗಳಿಸಿದ ಸ್ವಾತಂತ್ರ್ಯದಿಂದ ಹೆಚ್ಚಿನ ಅವಕಾಶಗಳನ್ನು ತನ್ನ ಧಾರಣಾ ಸಾಮರ್ಥ್ಯವನ್ನು ಬಳಸಿಕೊಂಡು, ತನ್ನ ಜೀವನದಲ್ಲಿ ಉನ್ನತಿಯನ್ನು ಅಥವಾ ಕಲ್ಯಾಣವನ್ನು ಕಾಣುವುದೇ ಮಾನವ ಅಭಿವೃದ್ಧಿ. ಸೇನ್ ಅವರ ಪ್ರಕಾರ ಧಾರಣಾ ಸಾಮರ್ಥ್ಯವೂ ಒಂದು

ಸ್ವಾತಂತ್ರ್ಯವಿದ್ದಂತೆ. ಇದರಿಂದ ಮನುಷ್ಯನ ಆಯ್ಕೆಗೆ ಹೆಚ್ಚು ಸಮಂಜಸ ಹಾಗೂ ಆತನನ್ನು ಹೆಚ್ಚು ಕ್ರೀಯಾಶೀಲನನ್ನಾಗಿಸುತ್ತದೆ. ಮನುಷ್ಯ ತನ್ನನ್ನು ತಾನು ಉತ್ತಮನೆನಿಸಿಕೊಳ್ಳಲು ಯಾವ ರೀತಿಯ ಚಟುವಟಿಕೆಗಳಲ್ಲಿ ಕ್ರೀಯಾಶೀಲನಾಗುತ್ತಾನೆಯೋ ಅದನ್ನು ಆತನ ಧಾರಣಾ ಸಾಮರ್ಥ್ಯವೆಂದು ಪರಿಗಣಿಸಲಾಗುವುದು. ಮಾನವ ಅಭಿವೃದ್ಧಿಯು ಮಹಿಳೆಯರನ್ನು ಒಳಗೊಳ್ಳುವ ಅಭಿವೃದ್ಧಿ ಪ್ರಕ್ರಿಯೆಯೆಂದೆನಿಸಿದೆ. ೧೯೯೫ರ ಮಾನವ ಅಭಿವೃದ್ಧಿಯು ಮಹಿಳೆಯರ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಿದೆ ಎಂದರೆ ತಪ್ಪೇನಿಲ್ಲ. ಪ್ರಸ್ತುತ ಲೇಖಕರು ತಮ್ಮ ಸಂಶೋಧನೆಯಲ್ಲಿ ತರಕಾರಿ ಮಾರುಕಟ್ಟೆಯಲ್ಲಿ ವೃತ್ತಿಯಲ್ಲಿ ತೊಡಗಿರುವ ಮಹಿಳೆಯರ ಸಾಮಾಜಿಕ, ಆರ್ಥಿಕ ಬದುಕು ಹಾಗೂ ಅವರ ಸವಾಲುಗಳು ಸವಲತ್ತುಗಳ ಕುರಿತಂತೆ ತಮ್ಮ ಬರಹದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.[೨೭]

ಬಿಪನ್ ಚಂದ್ರ, ಮೃದುಲಾ ಮುಖರ್ಜಿ, ಆದಿತ್ಯ ಮುಖರ್ಜಿ(೧೯೯೯) ಇವರು **"ಇಂಡಿಯಾ ಸಿನ್ಸ್ ಇಂಡಿಪೆಂಡೆನ್ಸ್"** ಕೃತಿಯಲ್ಲಿ ಮಹಿಳಾ ಚಳುವಳಿಗಳ ಕುರಿತಂತೆ ವಿವರಿಸುತ್ತಾ, ೧೯೪೭ರ ನಂತರದ ಹಲವಾರು ಬೆಳವಣಿಗೆಗಳು ಭಾರತವನ್ನು ಒಂದು ಸರಳ ರಾಷ್ಟ್ರವಾಗಿ ಬೆಳೆಸಲು ಕಾರಣವಾಯಿತು ಅದರಲ್ಲೂ ಮುಖ್ಯವಾಗಿ ೧೯೪೭ರ ನಂತರದ ಮಹಿಳಾ ಚಳುವಳಿಗಳು ಮಹಿಳೆಯರನ್ನು ನಗಣ್ಯ ಮಾಡಲಾದ ಹಲವಾರು ವಿಷಯಗಳು ತದನಂತರದ ದಿನಗಳಲ್ಲಿ ಮಹಿಳಾ ಪರ ಚಳುವಳಿಗಳು ಮುಖ್ಯ ಅಜೆಂಡಾ ಆಗಿ ಪರಿವರ್ತನೆ ಆದವು ಉದಾ: ವರದಕ್ಷಣೆ, ಸಾವು, ಅತ್ಯಾಚಾರ, ಕೆಲವು ಕೌಟುಂಬಿಕವಾಗಿ ಮಹಿಳೆಯರಿಗೆ ಮಾರಕವಾಗುವ ಹಿಂಸೆಗಳ ಕುರಿತಂತೆ ಈ ಮಹಿಳಾ ಪರ ಹೋರಾಟಗಳು ಚಳುವಳಿಗಳು ಹೆಚ್ಚು ಬೆಳಕು ಚೆಲ್ಲಿದವು ಇದರಿಂದಾಗಿ ಮಹಿಳೆಯರ ಕುರಿತಂತಹ ಸೂಕ್ಷ್ಮ ವಿಚಾರಗಳು ಹೆಚ್ಚು ಹೆಚ್ಚು ಸಾರ್ವಜನಿಕವಾಗಿ ಚರ್ಚೆಗೆ ಬರಲಾರಂಭಿಸಿದವು. ಸ್ವಾತಂತ್ರ್ಯ ನಂತರ ದಿನಗಳು ವಿವಿಧ ರಾಜಕೀಯ ಶಕ್ತಿಗಳು ಹಲವಾರು ರಾಷ್ಟ್ರಗಳ ಬೇಡಿಕೆಗೊಳಗೊಂಡ ವಿಷಯಗಳಲ್ಲಿ ಹೋರಾಟ ಮುಂದುವರಿಸಿದಂತೆ ಮಹಿಳಾ ಪರವಾದದ ಸಂಘಟನೆಗಳು, ಚಳುವಳಿಗಳು ಒಂದು ವಿಭಿನ್ನ ದೃಷ್ಟಿಕೋನದಿಂದ ತಮ್ಮ ಸಾಧನೆಯ ಹಾದಿಯಲ್ಲಿ ನಡೆದವು. ೧೯೪೭-೧೯೭೦ರ ವರೆಗೂ ಮಹಿಳಾ ಚಳುವಳಿಗೆ ಒಂದು ನಿರ್ದಿಷ್ಟ ರೂಪುರೇಷೆಯನ್ನು ಕೊಡಲಾಗದಿದ್ದರೂ ಕೃಷಿ ಬದುಕಿನಲ್ಲಿ ಮಹಿಳೆ ಪಡುತ್ತಿರುವ ಬವಣೆಗಳು ಹಲವಾರು. ಇದು ಮಹಿಳಾ ಪರ ಸಂಘಟನೆಗಳ ರಚನೆಗೆ ಕಾರಣವಾಯಿತು. ಅವುಗಳಲ್ಲಿ ಮುಖ್ಯವಾಗಿ ಮಹಿಳಾ ಆತ್ಮರಕ್ಷಣಾ ಸಮಿತಿ, ಓಲ್ಡ್ ಗಾಂಧಿಯನ್ ಅಸೋಶಿಯೇಶನ್, ಸೆಲ್ಫ್ ಎಂಪ್ಲೋಯಿಡ್ ವಿಮನ್ ಅಸೋಶಿಯೇಶನ್(ಎಸ್.ಇ.ಡಬ್ಲ್ಯೂ.ಎ) ಇವೆಲ್ಲವೂ ಮಹಿಳೆಯರ ಸ್ಥಿತಿಯನ್ನು ಸುಧಾರಿಸಲು ಹಲವಾರು ರೀತಿಯಲ್ಲಿ ಪ್ರಯತ್ನಪಟ್ಟಿವೆ.

ಭೋಪಾಲ್ ಗ್ಯಾಸ್ ಪೀಡಿತ್ ಮಹಿಳಾ ಉದ್ಯೋಗ ಸಂಘಟನೆ, ಸಂಘವು ಭೂಪಾಲ್ ದುರಂತದಲ್ಲಿ ಮಡಿದ, ಗಾಯಗೊಂಡ ಮಹಿಳೆಯರಿಗೆ ಉತ್ತಮ ಪರಿಹಾರವನ್ನು ದೊರಕಿಸಿ ಕೊಡುವಲ್ಲಿ ಹೆಚ್ಚು ಶ್ರಮವಹಿಸಿದವು. ಮಹಿಳಾ ರಕ್ಷಣಾ ಸಮಿತಿಯು ಮಹಿಳೆಯ ಪರ ವರದಕ್ಷಿಣೆ ಕಿರುಕುಳದ ಬಗ್ಗೆ ಧ್ವನಿ ಎತ್ತಿದೆ. **"ಓಲ್ಡ್ ಗಾಂಧೀಯನ್ ಅಸೋಶಿಯೇಶನ್,ಸೆಲ್ಫ್ ಎಂಪ್ಲಾಯ್ಡ್ ವುಮನ್ ಅಸೋಶಿಯೇಶನ್"** ಮಹಿಳಾ ಸಂಘಟನೆಯು(ಎಸ್.ಇ.ಡಬ್ಲ್ಯೂ.ಎ) ಮಹಿಳಾ ಸಂಘಟವು ಮಹಿಳಾ ಪರ ಸಂಶೋಧನೆ, ಡಾಕ್ಯುಮೆಂಟರಿ, ಕ್ಯಾಂಪೇನುಗಳು, ಪ್ರಕಟಣೆಗಳನ್ನು ನಡೆಸಿಕೊಡುವಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಿದವು ಎಂದು ತಮ್ಮ ಕೃತಿಯಲ್ಲಿ ವ್ಯಕ್ತಪಡಿಸಿರುತ್ತಾರೆ ವಿನ: ಮಹಿಳಾ ಕಾರ್ಮಿಕರ ಬಗ್ಗೆ ಚಿಂತನೆ ನಡೆಸಿಲ್ಲ.[೨೮]

ವೀಣಾ ಭಾಸಿನ್‌ರವರು (೨೦೦೭) ಬುಡಕಟ್ಟು ಮಹಿಳೆಯರ ಕುರಿತಂತೆ ವಿವರಿಸುತ್ತಾ, ಎಲ್ಲಾ ಸಾಮಾಜಿಕ ಗುಂಪುಗಳಲ್ಲಿನ ಮಹಿಳೆಯರಂತೆ ಬುಡಕಟ್ಟು ಮಹಿಳೆಯರು ಹೆಚ್ಚು ಅನರಕ್ಷರಸ್ಥರಾಗಿರುತ್ತಾರೆ. ಆದರೆ ಅವರು ಸ್ವತಂತ್ರರು ಹಾಗೂ ಇತರ ಸಮಸ್ಯೆಗಳನ್ನು ಹಂಚಿಕೊಳ್ಳುವ ಸ್ವಭಾವವನ್ನು ಹೊಂದಿರುತ್ತಾರೆ. ಬುಡಕಟ್ಟು ಮಹಿಳೆಯರ ಜೀವನಾಧಾರ ಚಟುವಟಿಕೆಗಳನ್ನು ಗಮನಿಸಿದಾಗ ಅವರು ಪುರುಷರಿಗಿಂತ ಹೆಚ್ಚು ಶ್ರಮಜೀವಿಗಳಾಗಿದ್ದಾರೆ. ವಿವಿಧ ಸಮಾಜಗಳಲ್ಲಿ ಮಹಿಳೆಯರು ಸ್ಥಿತಿಯನ್ನು ಗಮನಿಸಿದಾಗ ಅದು ವಿಭಿನ್ನವಾಗಿರುತ್ತದೆ. ಮಹಿಳೆಯರ ಜೀವನ ಸ್ಥಿತಿಯನ್ನು ಗಮನಿಸಿದಾಗ ಅವಲೋಕಿಸಿದಾಗ ಆಕೆ ಒಟ್ಟು ಏಳು ರೀತಿಯಲ್ಲಿ ತನ್ನ ಪಾತ್ರವನ್ನು ನಿಭಾಯಿಸುತ್ತಾಳೆ. ಪೋಷಕರು, ಸಂಯುಕ್ತರು, ದೇಶೀಯ, ರಕ್ತಸಂಬಂಧ, ಔದ್ಯೋಗಿಕ, ಸಮುದಾಯ, ಮತ್ತು ಒಟ್ಟು ವ್ಯಕ್ತಿಯಾಗಿ ಈ ವೈವಿಧ್ಯಮಯ ಪರಿಸರ ಪ್ರದೇಶಗಳಲ್ಲಿ ಮಹಿಳೆಯರ ಸಾಮಾಜಿಕ ಸ್ಥಿತಿಯನ್ನು ಮೌಲ್ಯಮಾಪನ ಮಾಡಲು ಅಥವಾ ಸಂದೇಶಗಳನ್ನು ಹಲವು ವರ್ಗಗಳಾಗಿ ವಿಂಗಡಿಸಲಾಗಿದೆ. ಅವೆಂದರೆ ಹುಡುಗಿ (ಮಗನ) ಅವಿವಾಹಿತ ಮಹಿಳೆ, ವಿವಾಹಿತ ಮಹಿಳೆ, ವಿಧವೆ, ವಿಚ್ಛೇದಿತೆ, ಮತ್ತು ಬಂಜೆ ಮಹಿಳೆ ಎಂಬುದಾಗಿದೆ. ಮಹಿಳೆಯ ಪಾತ್ರವು ಆರ್ಥಿಕ ಚಟುವಟಿಕೆಗಳಲ್ಲಿ ಮಾತ್ರವಲ್ಲದೆ ಆರ್ಥಿಕೇತರ ಚಟುವಟಿಕೆಗಳಲ್ಲೂ ಅಷ್ಟೇ ಮುಖ್ಯವಾಗಿದೆ. ಬುಡಕಟ್ಟು ಮಹಿಳೆಯರು ತುಂಬಾ ಶ್ರಮ ಜೀವಿಗಳು ಹೆಚ್ಚಿನ ಎಲ್ಲಾ ಬುಡಕಟ್ಟು ಸಮಾಜಗಳು ಪಿತೃಪ್ರಭುತ್ವವಾಗಿದ್ದು ಇದರಲ್ಲಿ ಸಾರ್ವಜನಿಕ ವಲಯದಲ್ಲಿ ಪುರುಷರು ಪ್ರಾಬಲ್ಯ ಹೊಂದಿದ್ದಾರೆ. ಆದರೆ ತಮ್ಮದೇ ಜಗತ್ತಿನಲ್ಲಿ ಈ ಬುಡಕಟ್ಟು ಮಹಿಳೆಯರು ಹೆಚ್ಚಿನ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ಅವರಿಗೆ ಸ್ವಯಂ ಅಭಿವೃದ್ಧಿಯೂ ಇರುತ್ತದೆ. ಅಭಿವೃದ್ಧಿ ಕಾರ್ಯಕ್ರಮದ ಜೊತೆಗೆ ಆರ್ಥಿಕ ಬದಲಾವಣೆಗಳು ನಡೆಯುತ್ತದೆ. ಆದರೂ ಬುಡಕಟ್ಟು ಮಹಿಳೆಯರು ತಮ್ಮ ಉಡುಗೆ, ಭಾಷೆ, ಪರಿಕರಗಳು ಮತ್ತು ಸಂಪನ್ಮೂಲಗಳ ಕುರಿತಂತೆ

ಹೆಚ್ಚು ಸಂಪ್ರದಾಯ ಬದ್ಧರಾಗಿರುತ್ತಾರೆ. ಏಕೆಂದರೆ ಅವರು ನಗದು ಬೆಳೆಗಳಿಗಿಂತ, ಆಹಾರ ಬೆಳೆಗಳನ್ನು ಹೆಚ್ಚು ಬೆಳೆಯುವವರಾಗಿರುತ್ತಾರೆ. ಆಧುನೀಕರಣವು ಬೆಳೆಯುತ್ತಿದೆ. ಇದು ಪುರುಷರು ಹಾಗೂ ಮಹಿಳೆಯರ ಮೇಲೆ ವಿಭಿನ್ನ ಪರಿಣಾಮಗಳನ್ನು ಬೀರುತ್ತಿದೆ. ಭಾರತವು ತೀಕ್ಷ್ಣವಾದ ಲಿಂಗಸಮಾನತೆಗಳಿಂದ ರಚಿಸಲ್ಪಟ್ಟ ದೇಶಗಳಾಗಿವೆ. ಆದರೂ ಮಹಿಳೆಯರ ಸ್ಥಾನಮಾನವು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗಿದೆ. ಎಲ್ಲಾ ಸಂದರ್ಭಗಳಲ್ಲಿ ಒಂದು ಸಮಾಜದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಗಗಳು, ಮಹಿಳೆಯರ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಅದೇ ರೀತಿ ಲಿಂಗ ಅಸಮಾನತೆ ಮತ್ತು ಸಾಮಜೀಕರಣವು ಮಹಿಳೆಯ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಬುಡಕಟ್ಟು ಮಹಿಳೆಯರು ಶಿಕ್ಷಣ, ಉದ್ಯೋಗ ಮತ್ತು ಉತ್ತಮ ಆರೋಗ್ಯ ಹಾಗೂ ಆರ್ಥಿಕ ಸಬಲೀಕರಣದಂತಹ ವಿಷಯಗಳಿಂದ ವಂಚಿತರಾಗಿದ್ದಾರೆ ಬುಡಕಟ್ಟು ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಸೂಕ್ತ ಯೋಜನೆಗಳು ಮತ್ತು ಕಾರ್ಯತಂತ್ರಗಳನ್ನು ಸಿದ್ಧಪಡಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.[೨೯]

ಭಾರತದಲ್ಲಿ ಮಹಿಳೆಯರ ಹಿಂದುಳಿಯುವಿಕೆಯ ಕುರಿತಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ **ಡಾ. ಹಿರೆನ್ನಿಯಾ ಕಲೇಶ್ ಪಿ. (೨೦೧೯)** ಅವರು, ಭಾರತವು ಅತೀ ದೊಡ್ಡ ಪ್ರಜಾಪ್ರಭುತ್ವವನ್ನೊಳಗೊಂಡ ದೇಶವಾಗಿದ್ದು ಮಹಿಳೆಯರ ಹಿಂದುಳಿಯುವಿಕೆಯು ಅತೀ ದೊಡ್ಡ ಸಮಸ್ಯೆಯಾಗಿದೆ. ಭಾರತದಲ್ಲಿ ಮಹಿಳೆಯರನ್ನು ದೇವರೆಂದು ಪರಿಗಣಿಸಲಾಗುತ್ತಿದೆಯಾದರೂ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ದೇವತೆಗಳ ಪರಿಕಲ್ಪನೆಗೆ ವಿರುದ್ಧವಾಗಿದೆ. ಅಲ್ಲದೆ ಈ ಸಮಸ್ಯೆಗಳ ಕಾರಣಕ್ಕಾಗಿಯೇ ಆಕೆ ಬಹಳವಾಗಿ ನಿಂದನೆಗೆ ಒಳಗಾಗಿದ್ದಾಳೆ ಎಂದರೂ ತಪ್ಪಿಲ್ಲ. ಭಾರತವು ಸ್ವತಂತ್ರ್ಯ ದೇಶವಾಗಿದ್ದರೂ ಮಹಿಳೆಯರಿಗೆ ಇನ್ನು ಕೆಲವು ನಿಬಂಧನೆಗಳು ಆಕೆಯನ್ನು ಸಂಕೋಲೆಗಳಿಂದ ಬಂಧಿಸಿದೆ. ಮಹಿಳೆಯು ಎದುರಿಸುತ್ತಿರುವ ಪ್ರಮುಖ ಹಾಗೂ ಮೊದಲ ಸಮಸ್ಯೆಯೆಂದರೆ ಬಾಲ್ಯ ವಿವಾಹ. ಇದು ಮುಖ್ಯವಾಗಿ ಯುವತಿಯ ಮಾನಸಿಕ, ಸಾಮಾಜಿಕ, ದೈಹಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಭಾರತದಲ್ಲಿ ಮಹಿಳೆಯರು ಎದುರಿಸುತ್ತಿರುವ ಮತ್ತೊಂದು ಪ್ರಮುಖ ಸಮಸ್ಯೆ ಅತ್ಯಾಚಾರ, ಆಸಿಡ್ ದಾಳಿ, ಬುಡಕಟ್ಟು ಪ್ರದೇಶಗಳಲ್ಲಿ ವಾಮಾಚಾರದ ನೆಪದಲ್ಲಿ ಮಹಿಳೆಯನ್ನು ಥಳಿಸಲಾಗುತ್ತದೆ. ಕೌಟುಂಬಿಕ ಹಿಂಸಾಚಾರವು ಇನ್ನೊಂದು ಪ್ರಮುಖ ಸಮಸ್ಯೆ ಮಹಿಳೆಯೊಬ್ಬಳು ತನ್ನ ಪತಿ ಮತ್ತು ಮನೆಯಲ್ಲಿರುವ ಅವಳ ಸಂಬಂಧಿಕರಿಂದ ಅವಮಾನಿಸಲ್ಪಡುತ್ತಾಳೆ ವರದಕ್ಷಣೆ, ಪಿಡುಗು, ಲೈಂಗಿಕ ಕಿರುಕುಳ, ಸಾರ್ವಜನಿಕವಾಗಿ ಮಹಿಳೆಯನ್ನು ರೇಪ್ ಮಾಡುವುದು. ಚುಡಾಯಿಸುವುದು, ಗೌರವ ಹತ್ಯೆ ಇದು ಹೆತ್ತವರು ಮತ್ತು ಸಂಬಂಧಿಕರ ಆಶಯಕ್ಕೆ

ವಿರುದ್ಧವಾಗಿ ಮದುವೆಯಾದರೆ ಆಕೆಯನ್ನು ಕೊಲ್ಲಲಾಗುತ್ತದೆ. ಭ್ರೂಣಹತ್ಯೆ, ಲಿಂಗತಾರತಮ್ಯ, ವರದಕ್ಷಿಣೆ, ಸಾವು, ಮತ್ತು ವಧುವನ್ನು ಸುಡುವುದು ಇದು ಕೂಡ ಭಾರತದಂತಹ ದೇಶದಲ್ಲಿ ಮಹಿಳೆಯು ಎದುರಿಸುವ ಸಮಸ್ಯೆಗಳಾಗಿದೆ. ಮಹಿಳೆಯು ಸಾಕ್ಷರಳಾಗಲು ಬಹಳ ಶ್ರಮ ಪಡಬೇಕಾಗುತ್ತದೆ. ಮಹಿಳೆಯರು ಹೆಚ್ಚಾಗಿ ಕಡಿಮೆ ಆದಾಯವನ್ನು ಹೊಂದಿದ ವರ್ಗಕ್ಕೆ ಸೇರುತ್ತಾರೆ. ಸುಮಾರು ೭೫% ಭಾರತೀಯ ಮಹಿಳೆಯರು ಕೌಟುಂಬಿಕ ಹಿಂಸಾಚಾರದಿಂದ ಬಳಲುತ್ತಿದ್ದಾರೆ. ಕೆಲವು ಗ್ರಾಮೀಣ ಪ್ರದೇಶದ ಹುಡುಗಿಯರು ಇನ್ನೂ ಉತ್ತಮ ಶಿಕ್ಷಣ ಅವಕಾಶಗಳಿಂದ ವಂಚಿತರಾಗಿದ್ದಾರೆ. ಸರಳ ಮತ್ತು ಮೂಲಭೂತ ಮಾನವ ಹಕ್ಕುಗಳನ್ನು ಪಡೆದುಕೊಳ್ಳುವುದು ಭಾರತದ ಮಹಿಳೆಯರ ಹೋರಾಟವಾಗಿದೆ. ಈ ಸಮಸ್ಯೆಗಳನ್ನು ಹೇಗೆ ನಿಭಾಯಿಸಬಹುದು ಎಂಬಂತೆ ಚರ್ಚಿಸಲಾಗಿದ್ದು ಮಹಿಳೆಯರ ಸಮಸ್ಯೆಗಳನ್ನು ನಿವಾರಿಸಲು ಎಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು. ಅಪರಾಧಗಳನ್ನು ಮಾಡುವ ಜನರ ವಿರುದ್ಧ ಹೆಚ್ಚು ಕಠಿಣ ಕಾನೂನುಗಳನ್ನು ರೂಪಿಸಬೇಕು ಮತ್ತು ಅದನ್ನು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳಿಸಬೇಕು. ಪ್ರತಿಯೊಂದು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳನ್ನು ನೀಡಬೇಕು. ಮಹಿಳೆಯರಿಗೆ ಶಿಕ್ಷಣದ ಬಗೆಗಿನ ಮಹತ್ವವನ್ನು ಒತ್ತಿ ಹೇಳಬೇಕು ಮತ್ತು ಅವರಿಗೆ ಶಿಕ್ಷಣ ನೀಡುವುದನ್ನು ಕಡ್ಡಾಯವಾಗಿಸಬೇಕು ಭಾರತದಲ್ಲಿ ನಮ್ಮ ಮಹಿಳೆಯರನ್ನು ರಕ್ಷಿಸಲು ನಾವು ಕೈ ಜೋಡಿಸಬೇಕು ಇದರಿಂದ ನಮ್ಮ ದೇಶದ ಅಭಿವೃದ್ಧಿ ಸಾಧ್ಯ.

ಬುಡಕಟ್ಟು ಜನಾಂಗದವರು ಕೃಷಿ ಉತ್ಪಾದನೆಯನ್ನು ಹೆಚ್ಚು ಆಸಕ್ತಿಯನ್ನು ಬೆಳೆಸಿಕೊಂಡವರಾಗಿರುತ್ತಾರೆ. ಅಲ್ಲದೆ ಬುಟಕಟ್ಟು ಮಹಿಳೆಯರು ಸಿಂಹಪಾಲು ಕೃಷಿ ಚಟುವಟಿಕೆಯಲ್ಲಿಯೇ ತೊಡಗಿಸುತ್ತಾರೆ. ಏಕೆಂದರೆ ಅವರಿಗೆ ಇತರ ಉನ್ನತ ವರ್ಗದ ಮಹಿಳೆಯರಂತೆ ವ್ಯಾಪಾರ ಅಥವಾ ಇನ್ನಿತರ ಉದ್ಯೋಗಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಬುಡಕಟ್ಟು ಮಹಿಳೆಯರು ಹಲವಾರು ವೈವಿಧ್ಯಮಯ ಕೃಷಿ ಚಟುವಟಿಕೆಗಳಲ್ಲಿ ಹೆಚ್ಚಿನ ಪಾತ್ರ ವಹಿಸುತ್ತದೆ. ಆದರೂ ಇಂದಿನ ತಾಂತ್ರಿಕ ಯುಗದಲ್ಲಿ ಅನೇಕ ಯುವಕರು ಕೃಷಿಯ ಮೇಲಿನ ಆಸಕ್ತಿಯನ್ನು ಕಳೆದುಕೊಂಡಿದ್ದಾರೆ ಆದರೂ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಕೂಲವಾಗುವಂತೆ ಕೃಷಿಗೆ ಒಳಪಡುವ ಹೊಲಗಳು ಕಡಿಮೆಯಾಗಿದೆ. ಅಲ್ಲದೆ ಬುಡಕಟ್ಟು ಯುವಕರಿಗೆ ಹಾಗೂ ಮಹಿಳೆಯರಿಗೆ ಆಧುನಿಕ ಕೃಷಿ ಪದ್ಧತಿ ಬಗ್ಗೆ ತಿಳಿಯಲು ಹೆಚ್ಚು ಅವಕಾಶಗಳಲಿಲ್ಲ. ಆದರೆ ಬುಡಕಟ್ಟು ಸಮುದಾಯದ ಹಿರಿಯರು ತಮ್ಮ ಯುವ ಜನಾಂಗ ಹೆಚ್ಚು ಕೃಷಿ ಚಟುವಟಿಕೆಗಳಲ್ಲಿ ತೊಡಗಲಿ ಎಂದು ಆಶಿಸುತ್ತಾರೆ. ಏಕೆಂದರೆ ಕೃಷಿ ಪದ್ಧತಿಯಲ್ಲಿ ಬುಡಕಟ್ಟು ಜನಾಂಗದವರ ಜ್ಞಾನ, ಆಸಕ್ತಿ, ಪಾಲ್ಗೊಳ್ಳುವಿಕೆಯು ಸಮೃದ್ಧವಾಗಿ,

ನಿರಂತರವಾಗಿರಲೆಂದು ಆಶಿಸುತ್ತಾರೆ. ಆದರೆ ಕೃಷಿ ತಂತ್ರಜ್ಞಾನದಲ್ಲಿನ ಅನುಭವ ಬುಡಕಟ್ಟು ಮಹಿಳೆಗೆ ಹಾಗು ಯುವಕರಿಗೆ ದೊರಕುವುದು ಅವಶ್ಯವಾಗಿದೆ. ದೇಶದ ಬುಡಕಟ್ಟು ಯುವಕರು ತಮ್ಮನ್ನು ಪ್ರವೇಶಿಸಿಕೊಳ್ಳಲು ಸಾಧ್ಯವಾಗುವಂತ ಪ್ರದೇಶಗಳಿಗೆ ತಮ್ಮನ್ನು ತಾವು ಹೆಚ್ಚು ನಿರ್ಬಂಧಿಸಿಕೊಡಿದ್ದಾರೆ. ಕೃಷಿ ತರಬೇತಿ ಹಾಗೂ ಇತರ ಉದ್ಯೋಗ ತರಬೇತಿಗಳನ್ನು ಅವರ ಜೀವನ ಮಟ್ಟವನ್ನು ಸುಧಾರಿಸಲು ಸಹಕಾರಿಯಾಗಿದೆ. ನಿಖರವಾದ ಕೃಷಿಯ ರೂಪದಲ್ಲಿ ತಂತ್ರಜ್ಞಾನಗಳ ವರ್ಗಾವಣೆ, ವೈಜ್ಞಾನಿಕ ರೀತಿಯಲ್ಲಿ ಜಾನುವಾರಗಳ ಸಾಕಣೆ ಇದು ಕೃಷಿ ಆದಾಯ ಮತ್ತು ಬುಡಕಟ್ಟು ಸಮುದಾಯಗಳ ಉದ್ಯೋಗ ಅವಕಾಶಗಳನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಅಲ್ಲದೇ ಬುಡಕಟ್ಟು ಮಹಿಳೆಯರು ಮತ್ತು ಯುವಕರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಲು ಇದು ಸಹಕಾರಿಯಾಗುತ್ತದೆ. ಸುಧಾರಿತ ಕೃಷಿ ಪದ್ಧತಿಗಳು ಹೊಸ ಹೊಸ ಅವಿಷ್ಕಾರಗಳು, ತಂತ್ರಜ್ಞಾನಗಳ ಬಳಕೆ ಇವೆಲ್ಲವನ್ನು ಬಳಸುವ ಕೌಶಲ್ಯ ತಂತ್ರಜ್ಞಾನಗಳು ಇಂದು ಅವರ ಜೀವನ ರೀತಿಯನ್ನು ಬದಲಾಯಿಸಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಾರ್ಮಿಕ ಮಹಿಳೆಯರ ಆರೋಗ್ಯದ ಬಗ್ಗೆ ಸಂಶೋಧನೆ ನಡೆಸಿಲ್ಲ.[೩೦]

ವಿದ್ಯಾರ್ಥಿ ಎಲ್.ವಿ. (೧೯೭೨) ಅವರು ತಮ್ಮ **"ಪ್ರಾಜೆಕ್ಟ್ಸ್ ಆಫ್ ಟ್ರೈಬಲ್ ಡೆವಲಪ್‌ಮೆಂಟ್ಸ್ ಇನ್ ಇಂಡಿಯಾ"** ಕೃತಿಯಲ್ಲಿ ಭಾರತದಲ್ಲಿ ಮಹಿಳೆಯರು ಪಿತೃಪ್ರಭುತ್ವ ಹಾಗೂ ಸಾಮಾಜಿಕ ಒತ್ತಡದಂತಹ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅಲ್ಲದೆ ಜಾತಿ ಆಧಾರದಿಂದಲೂ ಅವರು ಹಲವಾರು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಕೃಷಿಯಲ್ಲಿ ವ್ಯಾಪಕ ಭಾಗವಹಿಸುವಿಕೆಯ ಹೊರತಾಗಿಯೂ ಮಹಿಳೆಯರು ಪುರುಷರಿಗಿಂತ ಕಡಿಮೆ ಆಸಕ್ತಿಯನ್ನು ಈ ಕೃಷಿ ಆಧುನಿಕತೆಯಲ್ಲಿ ತೋರಿಸುತ್ತಾರೆ. ಗ್ರಾಮೀಣ ಅಭಿವೃದ್ಧಿಗೆ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಕೊಡುಗೆಗಳನ್ನು ದೀರ್ಘಾವದಿಯಲ್ಲಿ ಹೆಚ್ಚಿಸಲು, ಕಾನೂನು ಹಣಕಾಸು ಮತ್ತು ಶೈಕ್ಷಣಿಕ, ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಕೈಗೊಳ್ಳುವ ಅಗತ್ಯವಿದೆ. ಅಲ್ಲದೆ ಮಹಿಳೆಯರಿಗೆ ನೀಡಲಾದ ಭೂ ಅಧಿಕಾರವಧಿಯಲ್ಲಿ ಕಾನೂನುಗಳು ಮತ್ತು ನಿಬಂಧನೆಗಳ ಪರಿಣಾಮಗಳನ್ನು ಮತ್ತೊಮ್ಮೆ ಪರಿಶೀಲಿಸುವ ಅಗತ್ಯವಿದೆ. ಅಲ್ಲದೆ ಮಹಿಳೆಯರ ಪ್ರಾಥಮಿಕ ಶಿಕ್ಷಣ ಹಾಗೂ ಸಾಕ್ಷರತೆಗೆ ಹೆಚ್ಚಿನ ಮಹತ್ವವನ್ನು ನೀಡಬೇಕು ಮಹಿಳೆಯರು ತಮ್ಮ ಜೀವನದಲ್ಲಿ ಬಹು ಅಮೂಲ್ಯವಾದ ಪಾತ್ರಗಳನ್ನು ನಿಭಾಯಿಸುತ್ತಾರೆ. ಆಕೆಯು ಪುರುಷರಿಗಿಂತ ಒಂದು ಕೈ ಹೆಚ್ಚೇ ಶ್ರಮಿಕ ಳಾಗಿರುತ್ತಾಳೆ. ಕೃಷಿಯೂ ಇಡೀ ಕುಟುಂಬವನ್ನು ನಿರ್ವಹಿಸುವ ರೀತಿ, ಹಾಗೂ ತನ್ನ ಜವಾಬ್ದಾರಿಯನ್ನು ಅರಿತು ತನ್ನ ಪಾತ್ರವನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಲು ಆಕೆ

ಸಮರ್ಥಳಾಗಿರುತ್ತಾಳೆ. ಭಾರತದಲ್ಲಿ ಬುಡಕಟ್ಟು ಮಹಿಳೆಯರ ಅಧ್ಯಯನವನ್ನು ಇನ್ನಷ್ಟು ವ್ಯವಸ್ಥಿತವಾಗಿ ಮತ್ತು ಸರ್ವ ವ್ಯಾಪ್ತಿಯಾಗಿ ನಡೆಸುವ ಅಗತ್ಯವಿದೆ. ಏಕೆಂದರೆ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ವಿಶಿಷ್ಟತೆ ಮತ್ತು ವೈವಿಧ್ಯತೆಗೆ ಮುಖ್ಯ ಕೊಡುಗೆ ಬುಡಕಟ್ಟು ಮಹಿಳೆಯಾಗಿರುತ್ತಾರೆ. ಇವರು ಮಹಿಳಾ ಕಾರ್ಮಿಕರ ಆರೋಗ್ಯದ ಬಗ್ಗೆ ಚಿಂತನೆ ಮಾಡಿಲ್ಲ.[೩೩]

ಗುನ್ನಾರ್ ಮಿರ್ಡಲ್‌ರವರು (೧೯೭೦) ಕೃಷಿ ಜೀವನದ ಕುರಿತಂತೆ ವಿವರಿಸುತ್ತಾ, ದಕ್ಷಿಣ ಏಷ್ಯಾ, ಈಶಾನ್ಯ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟೀನ್ ಅಮೇರಿಕಾದಂತಹ ದೇಶಗಳ ಅಭಿವೃದ್ಧಿಯಾಗದ ಪ್ರದೇಶಗಳಲ್ಲಿ ಕೃಷಿಯು ಜೀವನಾಧಾರವಾಗಿದೆ. ಕೃಷಿ ಚಟುವಟಿಕೆಗಳಲ್ಲೂ ಈ ಪ್ರದೇಶ ಪ್ರದೇಶಗಳ ನಡುವೆ ಹೆಚ್ಚಿನ ವ್ಯತ್ಯಾಸಗಳು ಕಂಡುಬರುವುದಿಲ್ಲ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬೇಸಾಯವನ್ನು ಎರಡು ವಿಭಿನ್ನ ರೀತಿಗಳಲ್ಲಿ ನಡೆಸುತ್ತಾರೆ. ಮೊದಲನೆಯದಾಗಿ ದೊಡ್ಡ ಪ್ರದೇಶಗಳ ವ್ಯಾಪಕವಾದ ಭೂ ಬಳಕೆ ಎರಡನೇದಾಗಿ ಪ್ರತಿ ಯುನಿಟ್ ಭೂಮಿಗೆ ಹೆಚ್ಚಿನ ಇಳುವಳಿಯನ್ನು ಹೊಂದಿರುವ ಪ್ರಚೋದಕ ಭೂ ಬಳಕೆ ಇದು ಯೂರೋಪ್ ಮತ್ತು ಜಪಾನ್ ದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅಭಿವೃದ್ಧಿಯಾಗದ ದೇಶಗಳಲ್ಲಿ ಈ ಎರಡು ವಿಧದ ಕೃಷಿ ಪದ್ಧತಿಯು ಅನ್ವಯವಾಗುವುದಿಲ್ಲ. ಈ ಮೂರನೆ ಹಾಗೂ ಅತೀ ನಿಕೃಷ್ಟವಾದ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗುತ್ತದೆ. ಅವೆಂದರೆ ವ್ಯಾಪಕವಾದ ಭೂ ಬಳಕೆಯಿಂದ ಹೆಚ್ಚಿನ ಮನುಷ್ಯ ಹಾಗೂ ಭೂ ಅನುಪಾತದೊಂದಿಗೆ ಸಂಯೋಜಿಸಲ್ಪಟ್ಟಿರುವುದು. ಇದು ಅತೀ ಕಡಿಮೆ ನೈಜ ಆದಾಯಕ್ಕೆ ಕಾರಣವಾಗುತ್ತದೆ. ಏಕೆಂದರೆ ಇದು ಎಕರೆಗೆ ಅತೀ ಕಡಿಮೆ ಇಳುವರಿಯನ್ನು ನೀಡುತ್ತದೆ. ಅಲ್ಲದೆ ಕಡಿಮೆ ಉತ್ಪಾದನೆಗೆ ಅಧಿಕ ಕಾರ್ಮಿಕ ಬಲವನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಕಡಿಮೆ ಇಳುವರಿಗೆ ಕಾರಣ ಹೆಚ್ಚಿನ ಉತ್ಪಾದನೆಯು ಆಹಾರಕ್ಕಾಗಿ ವಿನಿಯೋಗವಾಗುವುದು, ಕೃಷಿಗೆ ಕಡಿಮೆ ಬಂಡವಾಳ ಹೂಡಿಕೆ, ಜನರು ಪೂರ್ಣ ಆರೋಗ್ಯ ಹಾಗೂ ಕೆಲಸದ ಸಾಮರ್ಥ್ಯಕ್ಕೆ ಸರಿಯಾಗಿ ಆಹಾರ ಸೇವನೆಯನ್ನು ಮಾಡದೆ ಕಡಿಮೆ ಕ್ಯಾಲೊರಿ ಆಹಾರವನ್ನು ಸೇವಿಸುವುದು ಇತ್ಯಾದಿ ಶ್ರೀಮಂತ ದೇಶಗಳು ಹಾಗೂ ಅಭಿವೃದ್ಧಿಯಾಗದ ದೇಶಗಳ ನಡುವಿನ ಅಸಮಾನತೆಯು ನೈಜ ಆದಾಯದ ಅಂತರದಲ್ಲಿ ನಮಗೆ ಗೋಚರಿಸುತ್ತದೆ. ಕೃಷಿಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಆರೋಗ್ಯ ಕ್ಷೀಣಿಸುತ್ತದೆ ಅಂದರು. ಅಲ್ಲದೆ ಅಭಿವೃದ್ಧಿಯಾಗದ ದೇಶಗಳಲ್ಲಿ ಎಕರೆಗೆ ಅತೀ ಹೆಚ್ಚಿನ ಕಾರ್ಮಿಕ ಬಲವನ್ನು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಅಘಾತಕಾರಿಯಾದ ಅಂಶವಾಗಿದೆ. ಭಾರತದಲ್ಲಿ ಕೃಷಿ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ೭೦% ರಷ್ಟಿದೆ. ಆದರೆ ಇದು ದೇಶದ ದೀರ್ಘಕಾಲದ ಆಹಾರದ ಬೇಡಿಕೆಯನ್ನು ಪೌಷ್ಟಿಕಾಂಶ

ಹಾಗೂ ಉತ್ತಮ ಕ್ಯಾಲೇರಿಗಳಲ್ಲಿ ಒಳಗೊಂಡಂತೆ ನೀಡುವುದರಲ್ಲಿ ವಿಫಲವಾಗಿದೆ. ಇದನ್ನು ಹಲವಾರು ಕೃಷಿ ಸಂಬಂಧಿತ ಅಧ್ಯಯನಗಳು ಬಹಿರಂಗಪಡಿಸಿವೆ.

ಅನೇಕ ಅಭಿವೃದ್ಧಿಯಾಗದ ದೇಶಗಳಲ್ಲಿ ಕಾರ್ಮಿಕ ಶಕ್ತಿಯ ಒಂದು ಭಾಗವು ಯಾವುದೇ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳದೆ ಇರುವುದು ಗಮನಿಸಬೇಕಾದ ಅಂಶವಾಗಿದೆ. ಹೀಗಾಗಿ ನಿರುದ್ಯೋಗಿ ಬಡತನದಿಂದ ಸಮಸ್ಯೆಗಳನ್ನು ಹೋಗಲಾಡಿಸಲು ಶ್ರೀಮಂತ ರಾಷ್ಟ್ರಗಳ ಹಾಗೂ ಬಹುರಾಷ್ಟ್ರಗಳ ಸಂಘಟಿತ ಪ್ರಯತ್ನದ ಅಗತ್ಯವಿದೆ. ಬಡದೇಶಗಳು ತಮ್ಮ ಬಡತನವನ್ನು ನಿವಾರಿಸಿಕೊಳ್ಳಲು ಗಂಭೀರವಾದ ಪರಿಹಾರದ ಬಗ್ಗೆ ಚಿಂತಿಸಬೇಕು. ಯುದ್ಧ, ರಾಜಕೀಯ ಒಳಲಾಭ, ಭ್ರಷ್ಟಾಚಾರಕ್ಕಿಂತ ಹೆಚ್ಚಾಗಿ ಬಡತನವನ್ನು ನಿವಾರಿಸಿಕೊಳ್ಳಲು ತಮ್ಮ ರಾಷ್ಟ್ರೀಯ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಅಲ್ಲದೆ ಈ ನಿಟ್ಟಿನಲ್ಲಿ ಶ್ರೀಮಂತ ರಾಷ್ಟ್ರಗಳು ಬಡದೇಶಗಳಿಗೆ ನೆರವನ್ನು ನೀಡುವ ಅಗತ್ಯವೂ ಇದೆ. ಇಂದಿನ ಪರಿಸ್ಥಿತಿಯು ಹೇಗಿದೆಯೆಂದರೆ "ನಾವು ಕೆಲಸ ಮಾಡುವಂತೆ ನಟಿಸುತ್ತೇವೆ ಮತ್ತು ನೀವು ನಮಗೆ ಹಣ ನೀಡುವಂತೆ ನಟಿಸುತ್ತಿರಿ" ಎಂದು ಇಂದು ಅನೇಕ ಬಡದೇಶಗಳು ಸುಧಾರಣೆಯ ನಾಟಕವಾಡುತ್ತಿವೆ. ಶ್ರೀಮಂತ ರಾಷ್ಟ್ರಗಳು ಅವರಿಗೆ ಸಹಾಯ ಮಾಡುವಂತೆ ನಟಿಸಿ ಸಿನಿಕತನವನ್ನು ಸಾಕಷ್ಟು ಉನ್ನತ ಮಟ್ಟಕ್ಕೆ ಏರಿಸುತ್ತಿವೆ. ಒಟ್ಟಾಗಿ ಇಲ್ಲಿಯೂ ಕೂಡ ಆರೋಗ್ಯ ಅಭಿವೃದ್ಧಿಯ ಬಗ್ಗೆ ಹೆಚ್ಚೇನೂ ಹೇಳಿರುವುದಿಲ್ಲ.[೨೨]

ಬಸಪ್ಪ ಎಸ್(೨೦೨೦) ಅವರು ತಮ್ಮ **"ಅಭಿವೃದ್ಧಿ ಮತ್ತು ಮಹಿಳೆ"** ಎಂಬ ಲೇಖನದಲ್ಲಿ ಮಹಿಳೆ ಮತ್ತು ಅಭಿವೃದ್ಧಿ ನಡುವಿನ ಸಂಬಂಧವನ್ನು ಚರ್ಚಿಸಿರುತ್ತಾರೆ. ಮಹಿಳಾ ಆರೋಗ್ಯ ಅಭಿವೃದ್ಧಿಯ ಆಲೋಚನೆಯು ತೀರಾ ಇತ್ತೀಚಿನದಾಗಿದ್ದು ಮಹಿಳಾ ಸಂಘಟನೆ ಮತ್ತು ಅದರ ಚಳುವಳಿಗಳು ಮಹಿಳಾ ಸಬಲೀಕರಣ ಎಂಬ ಕಲ್ಪನೆಗೆ ನಾಂದಿ ಹಾಡಿವೆ. ಆಧುನೀಕರಣ ಹೆಸರಿನಲ್ಲಿ ಸಂಪ್ರದಾಯ ಮತ್ತು ಧಾರ್ಮಿಕ ನಂಬಿಕೆಗಳು ಹೆಚ್ಚು ಶಿಥಿಲಗೊಳ್ಳುತ್ತಿರುವಾಗ ಲಿಂಗ ಸಮಾನತೆ ಎಂಬ ಪದವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಸಾಮಾನ್ಯವಾಗಿ ಕಾರ್ಮಿಕ ಮಹಿಳೆಯರ ಆರೋಗ್ಯದ ಬೆಳವಣಿಗೆ ಮತ್ತು ಅಭಿವೃದ್ಧಿ ಇವೆರಡು ಪದಗಳನ್ನು ಪರ್ಯಾಯವಾಗಿ ಬಳಸಿದರೂ ಇವೆರಡು ಪೂರಕ ಶಬ್ದಗಳಾಗಿವೆ. ಅಭಿವೃದ್ಧಿ ಪರಿಕಲ್ಪನೆಯು ಕಾಲದಿಂದ ಕಾಲಕ್ಕೆ ಬದಲಾಗುತ್ತಿದೆ. ಅಭಿವೃದ್ಧಿಯು ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಬದಲಾವಣೆಯಾಗುವ ಕ್ರಿಯೆಯೆಂದು ಹೇಳಬಹುದು. ಅಭಿವೃದ್ಧಿ ಕುರಿತ ಸಿದ್ಧಾಂತಗಳೆಲ್ಲವು ಲಿಂಗ ನಿರಪೇಕ್ಷ ನೆಲೆಯಲ್ಲಿ ರೂಪುಗೊಂಡಿವೆ. ಅಭಿವೃದ್ಧಿಯ ಸಾಧನವಾಗಿ ಮಹಿಳೆಯರನ್ನು ಗುರುತಿಸಿದರೂ ಮಹಿಳೆಯೇ ಅಭಿವೃದ್ಧಿ ಎಂಬ ಕಲ್ಪನೆ ಇನ್ನೂ ಮೂಡಿ ಬಂದಿಲ್ಲ. ಅಭಿವೃದ್ಧಿಗೆ

ಮಹಿಳೆಯ ಕೊಡುಗೆ ಅಪಾರ ಆದರೆ ಮಹಿಳೆಯು ಅಭಿವೃದ್ಧಿಯಲ್ಲಿ ಪರೋಕ್ಷವಾಗಿ ತನ್ನನ್ನು ತೊಡಗಿಸಿಕೊಂಡರೂ ಸಹ ಆಕೆಯ ಕೊಡುಗೆಯನ್ನು ಮೌಲ್ಯಾಧಾರಿತ ಎಂದು ಪರಿಗಣಿಸಲಾಗಿಲ್ಲ ಮತ್ತು ಆಕೆಯ ಆರೋಗ್ಯದ ಬಗ್ಗೆ ತಾತ್ಸಾರ ಮನೋಭಾವ ಇದೆ ಎಂದು ಚಿಂತಿಸಿದ್ದಾರೆ.

ಲೇಖಕರು ತಮ್ಮ ಉಪಸಂಹಾರದಲ್ಲಿ ಮಹಿಳೆಯರ ಅಭಿವೃದ್ಧಿಗೆ ರೂಪಿತಗೊಂಡ ಅಭಿವೃದ್ಧಿ ಸಿದ್ಧಾಂತಗಳೇ ಇಂದು ಅವಳ ಬದುಕಿಗೆ ಮಾರಕವೆನಿಸಿದೆ. ಮಹಿಳೆಯರು ಮುಖ್ಯವಾಹಿನಿಗೆ ಬರಬೇಕು. ಅವರ ಅಭಿವೃದ್ಧಿಯಲ್ಲಿನ ಸೂಕ್ಷ್ಮ ತಿರುವುಗಳ ಗಮನಹರಿಸುವಿಕೆ ಬಹು ಅಗತ್ಯವಾಗಿದೆ. ಮಹಿಳೆಯರ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯಾದಂತೆ ಎಂದು ಲೇಖಕರು ಅಭಿಪ್ರಾಯಪಟ್ಟಿರುತ್ತಾರೆ.[೩೩]

ಶ್ರೀದೇವಿ ಜೊಂಗನವರ (೨೦೨೦) ತಮ್ಮ ಲೇಖನ **"ಮಹಿಳಾ ಕೃಷಿ ಕಾರ್ಮಿಕರ ಬಿಕ್ಕಟ್ಟುಗಳು ಮತ್ತು ಸಾಮಾಜಿಕ ಸ್ಥಿತಿಗತಿ"** ಎಂಬ ತನ್ನ ಲೇಖನದಲ್ಲಿ ಮಹಿಳೆಯರು ಮೊಟ್ಟಮೊದಲು ಕೃಷಿಯನ್ನು ಪ್ರಾರಂಭಿಸಿದ್ದು, ಕೃಷಿಗೆ ಸೂಕ್ತವಾದ ವೈಜ್ಞಾನಿಕ ತಳಹದಿಯನ್ನು ಹಾಕಿದರು. ಕೃಷಿ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರು ಅಸಂಘಟಿತ ವಲಯಕ್ಕೆ ಸೇರಿದವರು. ಇಂದು ಅಸಂಘಟಿತ ವಲಯದಲ್ಲಿ ಬಹುಪಾಲ ದುಡಿಯುವವರು ಕೃಷಿಕಾರ್ಮಿಕರೇ ಆಗಿರುತ್ತಾರೆ. ಭಾರತದಲ್ಲಿ ಕೃಷಿಯು ಒಂದು ಸಾಂಪ್ರದಾಯಿಕ ಬೆಳೆಯಾಗಿದೆ. ಜನಸಂಖ್ಯೆಯ ಏರುಗತಿಯಿಂದಾಗಿ ಕೃಷಿ ಕಾರ್ಮಿಕರ ಸಂಖ್ಯೆಯು ಬೆಳೆಯುತ್ತಿವೆ. ಅಲ್ಲದೇ ಮಹಿಳಾ ಕಾರ್ಮಿಕರು ಮತ್ತು ಪುರುಷ ಕಾರ್ಮಿಕರ ನಡುವೆ ವೇತನ ತಾರತಮ್ಯ ಇದ್ದು ಮಹಿಳೆಯರು ಪುರುಷರ ವೇತನದಲ್ಲಿ ಕೇವಲ ೧೦ ಪ್ರತಿಶತದಷ್ಟು ಮಾತ್ರ ಗಳಿಸುತ್ತಾರೆ. ಭಾರತದಲ್ಲಿ ಅತೀ ಹೆಚ್ಚು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದು ಲಿಂಗತಾರತಮ್ಯವು ಸಾಮಾನ್ಯವಾದ ಸಂಗತಿಯಾಗಿದೆ. ಹೀಗಾಗಿ ಕೃಷಿಯಲ್ಲಿ ತೊಡಗಿರುವ ಮಹಿಳೆಯರ ವೇತನವನ್ನು ಹೆಚ್ಚಿಸುವುದು ಮತ್ತು ಅವರನ್ನು ಸಂಘಟಿತ ವಲಯದ ಕಾರ್ಮಿಕರನ್ನಾಗಿಸುವುದು ಬಹು ಅಗತ್ಯವಾಗಿದೆ. ಏಕೆಂದರೆ ಗ್ರಾಮಗಳ ಅಭಿವೃದ್ಧಿ ಆದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಗ್ರಾಮೀಣ ಅಭಿವೃದ್ಧಿಯ ಬೆನ್ನೆಲುಬು ಕೃಷಿ ಮಹಿಳೆಯರೇ ಆಗಿರುವುದರಿಂದ ಅವರ ಪರಿಸ್ಥಿತಿ ಸುಧಾರಿಸಿದರೆ ಮಾತ್ರ ದೇಶವು ಅಭಿವೃದ್ಧಿ ಹೊಂದಲು ಸಾಧ್ಯ[೩೪] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಜನಾರ್ದನ (೨೦೧೭) ಅವರ **"ಬಡತನದ ಪರಿಕಲ್ಪನೆ"** ಎಂಬ ಲೇಖನದಲ್ಲಿ ಬಡತನವೆಂದರೆ ಒಂದು ರೀತಿಯ ಅವಲಂಬನೆ. ಕೊರತೆ ಅಥವಾ ಅಭಾವದ ಭಾವನೆಯನ್ನು ಬಡತನದ ಸಾಮಾನ್ಯ ಸೂಚಕವೆಂದು ಕರೆಯಬಹುದಾಗಿದೆ. ಬಡತನದ ವಿವಿಧ ಆಯಾಮಗಳನ್ನು ಹೊಂದಿದ್ದು, ಅವುಗಳೆಂದರೆ ಬಹುತೇಕವಾದ ವಿಷಯಾಧಾರಿತ ಸ್ಥಿತಿ, ಬಡವರ ಬಗೆಗಿನ

ಇತರರ ದೃಷ್ಟಿಕೋನ ಹಾಗೂ ಬಡತನದ ವಿವಿಧ ಪ್ರಭಾವಗಳು ಎಂದು ಗುರುತಿಸಲಾಗಿದೆ. ಲೇಖಕರು ತಮ್ಮ ಉಪಸಂಹಾರದಲ್ಲಿ ಬಡತನವನ್ನು ನೋಡುವ ದೃಷ್ಟಿಕೋನವು ಬದಲಾಗಬೇಕಿದೆ. ಅಲ್ಲದೇ ಬಡತನದ ಹಳೆಯ ಸಂಪ್ರದಾಯವನ್ನು ಬದಲಾಯಿಸುವ ಪ್ರಕ್ರಿಯೆಗೆ ಚಾಲನೆ ದೊರಕಬೇಕಾಗಿದೆ. ಬಡತನವು ಇಂದು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದು ಅದರ ಪರಿಭಾವನೆ ಮತ್ತು ಜೀವನಶೈಲಿಗಳು ಹೊಸದೊಂದು ಮಾರ್ಗದರ್ಶಕ ರೂಪದಲ್ಲಿ ಬದಲಾಗಬೇಕೆಂದು ಅಷ್ಟೇ ಅಲ್ಲ ಬಡತನದಲ್ಲಿರುವ ಮಹಿಳೆಯರಿಗೆ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ತೋರದೆ ಬೇಗನೆ ಸಾಯುವಂತ ಉದಾಹರಣೆಗಳು ಇವೆ ಎಂದು ತಮ್ಮ ಲೇಖನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೩೭]

. **ಶಾಂತವೀರಭದ್ರಯ್ಯ ಎಸ್.ಎಂ** (೨೦೧೩) ಅವರ **"ವಾಣಿಜ್ಯ ಬೆಳೆಗಳು"** ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿ ಬೆಳೆಯುವ ಹಲವಾರು ಕೃಷಿ ಬೆಳೆಗಳ ಬಗ್ಗೆ ವಿವರವಾಗಿ ವಿಶ್ಲೇಷಣೆ ನೀಡಿರುತ್ತಾರೆ ಅದರಲ್ಲಿ ಮುಖ್ಯವಾಗಿ ಮೆಣಸಿನಕಾಯಿ ಬೆಳೆಯನ್ನು ಹಾಗೂ ಅದರ ವಿವಿಧ ತಳಿಗಳು ಬೆಳೆಯುವ ವಿಧಾನ ಮತ್ತು ಅದಕ್ಕೆ ಬೇಕಾದ ರಸ ಗೊಬ್ಬರಗಳ ಬಗೆಗೆ ಹೆಚ್ಚಿನ ಮಾಹಿತಿಯನ್ನು ನೀಡಿರುತ್ತಾರೆ. ಅಲ್ಲದೆ ಮೆಣಸಿನಕಾಯಿ ಬೆಳೆಗೆ ಬರುವ ರೋಗಗಳ ಬಗ್ಗೆ ವಿವರಿಸಿದ್ದು ಅದಕ್ಕೆ ಬೇಕಾದಂತಹ ಔಷಧಿಗಳ ಬಳಕೆಯನ್ನು ಸೂಚಿಸಿರುತ್ತಾರೆ. ಲೇಖಕರ ಪ್ರಕಾರ ಮೆಣಸಿನಕಾಯಿ ಬೆಳೆಯು ಒಂದು ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು ಇದು ದೇಹಕ್ಕೆ ಬೇಕಾಗುವ ಎ ಮತ್ತು ಸಿ ವಿಟಮಿನ್‌ಗಳು ಮೆಣಸಿನಕಾಯಿಯಲ್ಲಿ ಹೇರಳವಾಗಿ ದೊರಕುತ್ತದೆ. ಅಲ್ಲದೇ ಇದರಲ್ಲಿರುವ ಓಲಿಯೋರೆಸಿನ್‌ನ್ನು ಸಂಸ್ಕರಿಸಿ ಆಹಾರ ಮತ್ತು ಪಾನೀಯದ ಉದ್ಯಮಗಳಲ್ಲಿ ಬಳಸುತ್ತಾರೆ. ಕರ್ನಾಟಕದಲ್ಲಿ ಮೆಣಸಿನಕಾಯಿಯನ್ನು ಬಳ್ಳಾರಿ, ಗದಗ, ಹಾವೇರಿ, ತುಮಕೂರು, ಚಿಕ್ಕಮಗಳೂರು, ಧಾರವಾಡ, ಬೆಳಗಾಂ, ಚಿತ್ರದುರ್ಗ, ಶಿವಮೊಗ್ಗ, ಗುಲ್ಬರ್ಗ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇವರು ಬರಿ ಮಾರುಕಟ್ಟೆಗೆ ಸಂಬಂಧಪಟ್ಟಂತೆ ಚಿಂತನೆ ಮಾಡಿರುತ್ತಾರೆ. ಇವರೂ ಕೂಡ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಬಗ್ಗೆ ಅಷ್ಟೇನೂ ಒತ್ತು ಕೊಟ್ಟಿಲ್ಲ.[೩೮]

ಚಂದ್ರಶೇಖರ್ ಟಿ.ಆರ್. (೨೦೦೬) ಅವರು "ಅಮರ್ತ್ಯಸೇನ್ ಅವರ ಮಹಿಳೆಯರ ಕುರಿತಾದ ಅಭಿಪ್ರಾಯ"ಗಳನ್ನು ವಿಮರ್ಶಿಸುತ್ತಾ, ಅಮರ್ತ್ಯಸೇನ್ ಅವರು ಮೇರಿ ವುಲ್‌ಕ್ರಾಫ್ಟ್‌ರ 'ಇಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವುಮೆನ್' ಕೃತಿಯ ಬಗ್ಗೆ ಚರ್ಚಿಸಿದ್ದಾರೆ. ಮೇರಿ ವುಲ್‌ಕ್ರಾಫ್ಟ್‌ರ ಗ್ರಂಥಕ್ಕೆ ಮಹಿಳೆಯರ ಸ್ಥಾನಮಾನವನ್ನು ಎತ್ತಿಹಿಡಿದುದರ ಯಶಸ್ಸು ಸಲ್ಲುತ್ತದೆ. ಅಲ್ಲಿ ಮಹಿಳೆಯರ ಹಕ್ಕುಗಳು ಹಾಗೂ ಅದನ್ನು ಪಡೆಯುವಲ್ಲಿ ಮಹಿಳೆಯರ ಪಾತ್ರವನ್ನು

ಚರ್ಚಿಸಲಾಗಿದೆ. ನಿಯೋಗ ಹಾಗೂ ಉತ್ತಮ ಬದುಕು ಇದು ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿದೆ. ಅಲ್ಲದೇ, ಮಹಿಳೆಯರ ಬದುಕನ್ನು ಉತ್ತಮಪಡಿಸಲು ಅವರ ನಿಯೋಗವಾದಿ ಪಾತ್ರವು ಬಹಳ ಮುಖ್ಯ. ತಮ್ಮ ಉದ್ದೇಶಿತ ಬದಲಾವಣೆಯ ಸಾಧನೆಗೆ ಮಹಿಳೆಯರು ನಿಯೋಗವಾದಿ ಪಾತ್ರಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕಾಗುತ್ತದೆ. ನಿಯೋಗಿಯ ಪಾತ್ರವು ಒಂದು ರೀತಿಯಲ್ಲಿ ನೆರವನ್ನು ಬಯಸುವ ವ್ಯಕ್ತಿ ಎಂದು ಹೇಳಬಹುದು. ಇದೊಂದು ವಿಶಿಷ್ಟ ರೀತಿಯ ಭಾವನೆ. ಇದು ಸಂಕುಚಿತವಾಗಿ ಬಿಟ್ಟರೆ ಮಹಿಳೆಯರ ಹೋರಾಟದ ಬದುಕಿಗೆ ಅರ್ಥವಾಗಲೀ ಅಥವಾ ಆಕೆಯ ಸಮಸ್ಯೆಗಳನ್ನು ಸರಿಪಡಿಸಲು ಸಾಧ್ಯವಾಗದೇ ಹೋಗಬಹುದು. ಏಕೆಂದರೆ, ಮಹಿಳೆ ಮತ್ತು ಮಕ್ಕಳ ದುಸ್ಥಿತಿಗಳನ್ನು ಹೊಡೆದೋಡಿಸುವಲ್ಲಿ ಈ ಮಹಿಳಾ ನಿಯೋಗದ ಪಾತ್ರ ಪ್ರಮುಖವಾಗಿದೆ. ಮಹಿಳೆಯರ ಹೊರಜಗತ್ತಿನ ಬದುಕು ಹಾಗೂ ಇಂತಹ ನಿಯೋಗವಾದಿ ಅಂಶಗಳಿಗೆ ಮೌಲ್ಯವು ದೊರೆತಷ್ಟು ಅವಳ ಸಂಘರ್ಷದ ಬದುಕಿಗೆ ತಾರ್ಕಿಕ ಪರಿಹಾರವನ್ನು ಪಡೆಯಬಹುದು.

ಹಲವಾರು ಅಧ್ಯಯನಗಳು ಇಂದು ಮಹಿಳಾ ಸಬಲೀಕರಣದ ಬಗ್ಗೆಯೇ ಮಾತನಾಡುತ್ತಿವೆ. ಇದರಿಂದಾಗಿ ಕುಟುಂಬ, ಸಮಾಜ, ಸ್ವಾವಲಂಬನೆ ಮತ್ತು ಮಹಿಳಾ ವಿವೇಚನೆ ಈ ಎಲ್ಲಾ ಅಂಶಗಳಲ್ಲೂ ಉತ್ತಮ ಬದಲಾವಣೆಯನ್ನು ನಾವು ನಿರೀಕ್ಷಿಸಬಹುದಾಗಿದೆ. ಕುಟುಂಬದಲ್ಲಿ ತೆಗೆದುಕೊಳ್ಳುವ ತೀರ್ಮಾನ ಗಳಲ್ಲಿ ಮಹಿಳೆಯರ ಪಾತ್ರವು ಸಾಂಪ್ರದಾಯಿಕವಾಗಿ ಕಡಿಮೆಯಿರುತ್ತದೆ. ಅಲ್ಲದೇ ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆಯೂ ಆಕೆ ತನ್ನ ಪಿತ್ರಾರ್ಜಿತ ಹಕ್ಕನ್ನು ಪಡೆಯಲು ಅವಕಾಶವಂಚಿತಳಾಗಿರುತ್ತಾಳೆ. ಸಮಾಜದಲ್ಲಿ ಮಹಿಳೆಯರು ಪಡೆದಿರುವ ಸಾಮಾಜಿಕ ಸ್ಥಾನಮಾನ ಹಾಗೂ ಆರ್ಥಿಕ ಅಧಿಕಾರಗಳು ಸ್ತ್ರೀ ವಿರೋಧಿ ಅಂಶಗಳಿಗೆ ಕಾರಣವಾಗುತ್ತದೆ.

ಸಂತಾನೋತ್ಪತ್ತಿ ಪ್ರಮಾಣವನ್ನು ತಗ್ಗಿಸುವುದರಲ್ಲಿಯೂ ಮಹಿಳಾ ನಿಯೋಗವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಒಟ್ಟಾರೆಯಾಗಿ ಮಹಿಳಾ ಅಭಿವೃದ್ಧಿ ಮತ್ತು ನಿಯೋಗಗಳು ಒಂದಕ್ಕೊಂದು ಪೂರಕ ಸಂಬಂಧವನ್ನು ಹೊಂದಿವೆ ಎಂಬ ಅಮರ್ತ್ಯಸೇನ್‌ರವರ ಅಭಿಪ್ರಾಯವನ್ನು ಲೇಖಕರು ತಮ್ಮ ಅಧ್ಯಯನದಲ್ಲಿ ಉಲ್ಲೇಖಿಸಿರುತ್ತಾರೆ. ಇವರೂ ಕೂಡ ಅಭಿವೃದ್ದಿ ಪಥದಲ್ಲಿ ನೋಡಿರುತ್ತಾರೆ.[೨೭]

ಲೇಖಕರುಗಳಾದ **ಎಂ.ಎಂ. ಹೊಸಮನಿ, ಎಚ್.ಬಿ. ಬಿಬಿಲಾರ, ಬಿ.ಎಂ. ಚಿತ್ತಾಪೂರ ಮತ್ತು ವಿ.ಎಸ್. ಕನ್ನೂರರವರು (೧೯೮೬)** ತಮ್ಮ ಬರಹದಲ್ಲಿ ಮೆಣಸಿನಕಾಯಿ ಬೆಳೆ ಅದರ ಇತಿಹಾಸ, ರಫ್ತು, ಮುಂತಾದ ವಿಷಯಗಳ ಬಗ್ಗೆ ವಿವರಿಸುತ್ತಾರೆ. ದಕ್ಷಿಣ ಮತ್ತು ಮಧ್ಯ ಅಮೆರಿಕದ ಮೆಕ್ಸಿಕೊ, ಪೆರು, ಬೊಲಿವಿಯಾ ಮತ್ತು ಈಕ್ವೆಡಾರ್ ದೇಶಗಳು ಮೆಣಸಿನಕಾಯಿ ಬೆಳೆಯ ತವರುಮನೆ(ಮೂಲಸ್ಥಾನ) ಎನ್ನಲಾಗಿದೆ. ಅಲ್ಲಿಂದ ಸ್ಪೇನ್ ದೇಶಕ್ಕೆ ಬಂದ ಈ ಬೆಳೆ

ತೀವ್ರವಾಗಿ ಉಳಿದೆಲ್ಲ ಹಳೇ ಜಗತ್ತಿಗೆ ಪಸರಿಸಿತು. ಸ್ಪೇನ್ ದೇಶದ ಈ ಬೆಳೆ ಪೋರ್ಚುಗೀಸರ ಮುಖಾಂತರ ೧೬ನೇ ಶತಮಾನದ ಕೊನೆಯ ಭಾಗದಲ್ಲಿ ಭಾರತವನ್ನು ಪ್ರವೇಶಿಸಿತು. ಕೊಲಂಬಸ್‌ನು ತನ್ನ ಅಮೆರಿಕೆಯ ಪ್ರವಾಸದಿಂದ ಹಿಂದಿರುಗುವಾಗ ಮೆಣಸಿನಕಾಯಿ ಬೆಳೆಯನ್ನು ಯೂರೋಪಿಗೆ ತಂದನೆಂದು ನಂಬಲಾಗಿದೆ. ಇಲ್ಲಿಂದ ಈ ಬೆಳೆ ಬೇರೆ ದೇಶಗಳಿಗೆ ಹರಡಿತು.

ಉಷ್ಣಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಈಗ ಭಾರತದ ಎಲ್ಲ ರಾಜ್ಯಗಳಲ್ಲಿ, ಆಫ್ರೀಕಾದ ಕೆಲವು ಭಾಗಗಳಲ್ಲಿ, ಯೂರೋಪಿನಲ್ಲಿ ಹೆಚ್ಚಾಗಿ ಸರ್ಬ, ಕ್ರೊಯೇಶಿಯಾ, ಬೊಸ್ನಿಯಾ (ಯುಗೊಸ್ಲಾವಿಯಾ), ಸ್ಪೇನ್ ಮತ್ತು ರುಮೇನಿಯಾ ದೇಶಗಳಲ್ಲಿ, ಅಮೆರಿಕದ ಮೆಕ್ಸಿಕೊ, ಸಂಯುಕ್ತ ಸಂಸ್ಥಾನ ಮತ್ತು ದಕ್ಷಿಣ ಅಮೆರಿಕದ ಅನೇಕ ದೇಶಗಳಲ್ಲಿ ಮೆಣಸಿನಕಾಯಿ ಬೆಳೆ ಬೆಳೆಯಲಾಗುತ್ತಿದೆ. ಭಾರತದಲ್ಲಿ ಮೆಣಸಿನಕಾಯಿಬೆಳೆಯ ಬೆಳೆಯ ಒಟ್ಟು ಕ್ಷೇತ್ರದ ಶೇ. ೭೦ಕ್ಕಿಂತ ಹೆಚ್ಚಿನ ಭಾಗ ದಕ್ಷಿಣ ಭಾರತದ ಆಂಧ್ರಪ್ರದೇಶ, ಮಹಾರಾಷ್ಟ್ರ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿದೆ. ಕರ್ನಾಟಕದಲ್ಲಿ ಈ ಬೆಳೆಯನ್ನು ೧.೫ ಲಕ್ಷ ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತಿದ್ದು ೦.೪೫ ಲಕ್ಷ ಟನ್‌ಗಳಷ್ಟು ಒಣ ಮೆಣಸಿನಕಾಯಿ ಬೆಳೆಯಲಾಗುತ್ತದೆ. ನಮ್ಮ ದೇಶದಲ್ಲಿ ೧೦೦ಕ್ಕೂ ಹೆಚ್ಚು ತಳಿಗಳನ್ನು ರೈತರು ಬೆಳೆಯುತ್ತಿದ್ದಾರೆ. ಅವುಗಳೆಂದರೆ ಬ್ಯಾಡಗಿ, ಸಂಕೇಶ್ವರ, ಚಿಂಚೋಳಿ, ಮೈಸೂರು, ಜಿ–೩, ಜ್ವಾಲಾ, ಸಿಂಧೂರ, ಭಾಗ್ಯಲಕ್ಷ್ಮಿ, ಕದರೊಳ್ಳಿ, ಮತ್ತು ಇತರೆ ದೊಣ್ಣೆ ಮೆಣಸಿನಕಾಯಿ ತಳಿಗಳು ಅಲ್ಲದೆ ಲೇಖಕರು ಈ ಮೆಣಸಿನಕಾಯಿ ಬೆಳೆಯ ಗುಣಮಟ್ಟ, ಮಾರುಕಟ್ಟೆ ರಫ್ತು, ಕ್ರೋಢೀಕರಿಸುವ ವಿಧಾನ ಪೌಷ್ಟಿಕತೆ, ಇವುಗಳ ಖಾದ್ಯಗಳ ತಯಾರಿಯ ಬಗ್ಗೆಯು ಮಾಹಿತಿಯನ್ನು ನೀಡಿರುತ್ತಾರೆ. ಇವರು ಮೆಣಸಿನಕಾಯಿ ಬೆಳೆಯ ಬಗ್ಗೆ ಗಮನಹರಿಸಿದ್ದಾರೆ. ಆದರೆ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಆರೋಗ್ಯದ ಬಗ್ಗೆ ಚಿಂತಿಸಿಲ್ಲ.[೩೮]

.ಮೂರ್ತಿ ಟಿ.ಹೆಚ್ (೨೦೧೦) ಅವರು, 'ಮಾನವ ಸಂಪನ್ಮೂಲ ಅಭಿವೃದ್ಧಿ–ಕರ್ನಾಟಕದ ಒಂದು ತೌಲನಿಕ ವಿಶ್ಲೇಷಣೆ' ಎಂಬ ಪ್ರಬಂಧದಲ್ಲಿ, "ಮಾನವನ ಪ್ರಗತಿಗೆ ಕಂಡುಕೊಂಡ ಅಂಶಗಳಲ್ಲಿ ಮುಖ್ಯವಾದವು ದೀರ್ಘಾಯುಷ್ಯ, ಸಾಕ್ಷರತಾ ಶಿಕ್ಷಣ ಮತ್ತು ತಲಾ ಆದಾಯಗಳಾಗಿವೆ. ಯು.ಎನ್. ಡಿ.ಪಿ.ಯ ಮಾರ್ಗಸೂಚಿಯನ್ವಯ ಭಾರತದಲ್ಲಿ ಈ ಮಾರ್ಗಸೂಚಿಗಳ ಅಂತರಗಳು ಬಹಳವಾಗಿವೆ. ಮಾನವ ಅಭಿವೃದ್ಧಿ ಸೂಚಿಯಲ್ಲಿನ ಲಭ್ಯವಿರುವ ಅಂಶಗಳು ಈ ಅಂತರವನ್ನು ಸ್ಪಷ್ಟಪಡಿಸುತ್ತವೆ. ಇದರಲ್ಲಿ ಸಾಮಾಜಿಕ ಅಂಶಗಳ ಪಾಲು ಅಧಿಕವಾಗಿದ್ದು ಸಮಾಜದಲ್ಲಿ ಅವಕಾಶ ವಂಚಿತ ಹಾಗೂ ಶೋಷಿತ ವರ್ಗದವರ ಪಾಲು ಅಧಿಕವಾಗಿದೆ. ಸಮಾಜದಲ್ಲಿ ಉಂಟಾಗಿರುವ ಅಸಮಾನತೆಗಳನ್ನು ಹೋಗಲಾಡಿಸಿ ಮಾನವ ಅಭಿವೃದ್ಧಿ ನೀತಿಗೆ ಅನುಸಾರವಾಗಿ

ಹಲವಾರು ಯೋಜನೆಗಳು ರೂಪುಗೊಂಡರೂ ಸಹ ಇವುಗಳ ಸಾಮಾಜಿಕ ಪಿಡುಗುಗಳನ್ನು ದಾಟಿ ತನ್ನ ಗುರಿಯನ್ನು ಮುಟ್ಟಲು ಸಾಧ್ಯವಿಲ್ಲ. ಅಲ್ಲದೇ ಪ್ರಪಂಚದ ಬೇರೆ ರಾಷ್ಟ್ರಗಳಿಗೆ ಅನ್ವಯವಾಗುವಂತಹ ಮಾನವ ಅಭಿವೃದ್ಧಿ ಮಾರ್ಗಸೂಚಿಗಳು ಭಾರತದಂತಹ ದೇಶಗಳಲ್ಲಿ ಒಮ್ಮಿಂದೊಮ್ಮೆಲೇ ಅನುಷ್ಠಾನಗೊಳ್ಳುವುದು ಅಸಾಧ್ಯ. ಹೀಗಾಗಿ ಭಾರತದ ಮಾನವಾಭಿವೃದ್ಧಿಗೆ ಪ್ರತ್ಯೇಕವಾದ ಮಾರ್ಗಸೂಚಿಗಳು ಅಗತ್ಯವಾಗಿದ್ದು ಈ ಮಾರ್ಗಸೂಚಿಗಳಿಗೆ ಅನ್ವಯವಾಗುವಂತಹ ಪರಿಸರವನ್ನು ಮೊದಲು ನಿರ್ಮಿಸುವ ಅಗತ್ಯವಿದೆ" ಎಂಬುದನ್ನು ಲೇಖಕರು ತಿಳಿಸುತ್ತಾರೆ.[೫೯] ಆದರೆ ಇವರೂ ಕೂಡ ಮಹಿಳಾ ಕಾರ್ಮಿಕರ ಆರೋಗ್ಯದ ಬಗ್ಗೆ ಚಿಂತನೆ ಮಾಡಿಲ್ಲ.

ಚಂದ್ರ ಪೂಜಾರಿ ಎಂ. (೨೦೧೭) ಅವರ "ಅಭಿವೃದ್ಧಿ ಸಿದ್ಧಾಂತಗಳು" ಎಂಬ ಕೃತಿಯಲ್ಲಿ ಅಭಿವೃದ್ಧಿಯ ಕುರಿತಂತೆ ವಿವರಿಸುತ್ತಾ ಅಭಿವೃದ್ಧಿಯು ಜನರ ಬದುಕಿನೊಂದಿಗೆ ನೇರ ಸಂಬಂಧಗಳನ್ನು ಹೊಂದಿದೆ. ಇದು ಜನರ ಬದುಕಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಕಾರಾತ್ಮಕವಾಗಿ ಅಥವಾ ನಕರಾತ್ಮಕವಾಗಿ ಪ್ರಭಾವವನ್ನು ಬೀರುತ್ತದೆ. ಅಭಿವೃದ್ಧಿಯು ಕೇವಲ ವ್ಯಾಖ್ಯಾನಗಳಿಗೆ ಸೀಮಿತವಾದುದಲ್ಲ. ಇದು ಜನರ ಕಲ್ಪನೆಯಲ್ಲಿ ಮೂಡಿ ಬಂದಿರುವ ಬಗೆಯನ್ನು ಅರ್ಥೈಸಿಕೊಳ್ಳಬೇಕು. ಸಾಮಾನ್ಯವಾಗಿ ಅಭಿವೃದ್ಧಿ ಎರಡು ಪದಗಳ ಅರ್ಥಗಳನ್ನು ಒಳಗೊಡಿದೆ. ಒಂದು ಜೀವಿಗಳ ಅಭಿವೃದ್ಧಿ ಇನ್ನೊಂದು ಸಾಮಾಜಿಕ ಅಭಿವೃದ್ಧಿ, ಅಭಿವೃದ್ಧಿಯ ಹಲವು ಹಂತಗಳನ್ನು ದಾಟಿದ ಅಂತರವೇ ಪರಿಪೂರ್ಣ ಅಭಿವೃದ್ಧಿ ಸಾಧ್ಯ ಹಾಗೂ ಇದು ಸಂಬಂಧ, ಸಂಸ್ಥೆ, ಮೌಲ್ಯಗಳು, ಪ್ರಶ್ನೆಗಳು ಇವುಗಳನ್ನು ಒಳಗೊಂಡಿದೆ. ನಿಜವಾದ ಅಭಿವೃದ್ಧಿಯು ಸಂಘರ್ಷವನ್ನು ಹೊಂದಿರುತ್ತದೆ. ಅಮರ್ತ್ಯ ಸೇನ್‌ರವರ ಪ್ರಕಾರ ಆರ್ಥಿಕ ಅಭಿವೃದ್ಧಿಯನ್ನು ಜೀರ್ಣಿಸಿಕೊಳ್ಳುವ ಸಾಮರ್ಥ್ಯವಿರಬೇಕು ಆರ್ಥಿಕ ಅಭಿವೃದ್ಧಿಯಿಂದ ಎಲ್ಲರೂ ಅಭಿವೃದ್ಧಿ ಹೊಂದುವುದಿಲ್ಲ. ಹೆಚ್ಚಾದ ಸರಕು ಸೇವೆಗಳನ್ನು ಎಲ್ಲರೂ ಅನುಭವಿಸಬೇಕಾದರೆ ಎಲ್ಲರಿಗೂ ಆರ್ಥಿಕ ಅಭಿವೃದ್ಧಿಯನ್ನು ಜೀರ್ಣಿಸಿಕೊಳ್ಳುವ ಶಕ್ತಿ ಇರಬೇಕು.

ಆರ್ಥಿಕ ಅಭಿವೃದ್ಧಿಯಲ್ಲಿ ಎಲ್ಲರು ಪಾಲ್ಗೊಳ್ಳಲು ಸಾಧ್ಯವಾಗುವ ಸಾಮಾಜಿಕ ಪರಿಸರವನ್ನು ಮಾನವ ಅಭಿವೃದ್ಧಿ ರೂಪಿಸಿದೆ. ಅಲ್ಲದೇ ಒಂದು ನಿರ್ದಿಷ್ಟ ರೀತಿಯಲ್ಲಿ ಸೃಷ್ಟಿಯಾದ ಆದಾಯವು ಯಾವ ಉದ್ದೇಶಕ್ಕೆ ಬಳಕೆಯಾಗಿದೆ ಎಂಬುದನ್ನು ಮಾನವ ಅಭಿವೃದ್ಧಿ ಸೂಚಿಸುತ್ತದೆ. ಮಾನವ ಅಭಿವೃದ್ಧಿಯು ತನ್ನ ಆದಾಯದೊಂದಿಗೆ ಆರೋಗ್ಯ ಮತ್ತು ಶಿಕ್ಷಣವನ್ನು ತನ್ನ ವ್ಯಾಪ್ತಿಯಲ್ಲಿ ತಂದಿದೆ. ಇದು ಸಾಮಾಜಿಕ ಮೂಲ ಸೌಕರ್ಯಗಳ ಮೇಲೆಯು ಗಮನ ಹರಿಸುತ್ತದೆ. ಒಂದು ನಿರ್ದಿಷ್ಟ ಪ್ರದೇಶದೊಳಗೆ ಬರುವ ವಿವಿಧ ಸಮುದಾಯಗಳ, ದಲಿತ, ಬುಡಕಟ್ಟುಗಳ, ಅಲ್ಪ ಸಂಖ್ಯಾತರ, ಮಹಿಳೆಯರ ಮಾನವ ಅಭಿವೃದ್ಧಿಯಲ್ಲಿ ಸಾಕಷ್ಟು ವ್ಯತ್ಯಾಸಗಳು

ಇರಬಹುದು[10] ಎಂದು ಲೇಖಕರು ಅಭಿಪ್ರಾಯ ಪಟ್ಟಿರುತ್ತಾರೆ. ಆದರೆ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ ಬಹಳ ಮುಖ್ಯವಾಗಿದೆ ಎಂದರೇ ವಿನಃ ಅವರ ಆರೋಗ್ಯದ ಬಗ್ಗೆ ಚಿಂತನೆ ಮಾಡಿಲ್ಲ.

ಮುಜಾಫರ್ ಅಸ್ಸಾದಿರವರು (೨೦೦೨) ತಮ್ಮ "ಜಾಗತೀಕರಣ ಮತ್ತು ನಾಗರಿಕ ಸಮಾಜ ಭಾರತದ ಸಂದರ್ಭದಲ್ಲಿ ಸವಾಲುಗಳ ನಿರ್ವಹಣೆ" ಎಂಬ ಲೇಖನದಲ್ಲಿ ಜಾಗತೀಕರಣವು ಮಹಿಳಾವಾದದ ಮೇಲೆ ಅಥವಾ ಮಹಿಳೆ ಸಂಸ್ಕೃತಿಯ ಮೇಲೆ ಮಾಡಿದ ಪರಿಣಾಮಗಳ ಕುರಿತಂತೆ ವಿವರವಾಗಿ ಉಲ್ಲೇಖಿಸಿದ್ದಾರೆ. ಜಾಗತೀಕರಣವು ಪ್ರತಿಯೊಬ್ಬನ ಹೊಸ ಮಂತ್ರವಾಗಿದ್ದು ಜೀವನ, ಅನನ್ಯತೆ, ಸಂಸ್ಕೃತಿ, ಸಾಮಾಜಿಕ ಸಂರಚನೆ ಹೀಗೆ ಬಹುವಿಧವಾದ ಮಿಥ್ಯಗಳನ್ನು ಸೃಷ್ಟಿಸಿದೆಯೆಂದು ಹೇಳಬಹುದು. ಅದು ಜಗತ್ತಿನ ಹಸಿವನ್ನು ಅಲ್ಲದೇ ಇತರ ಅಸಂಖ್ಯಾತ ಸಮಸ್ಯೆಗಳನ್ನು ನಿವಾರಿಸಿದರೂ ಪಾಶ್ಚಿಮಾತ್ಯ ಸಂಸ್ಕೃತಿಯ ಬೆಂಬತ್ತುವಿಕೆಯಲ್ಲಿ "ವಸುಧೈವ ಕುಟುಂಬಕಂ" ಎಂಬ ವಾದದಲ್ಲಿ ಗುರುತಿಸಲ್ಪಡುವ ಭಾರತದ ಸಂಸ್ಕೃತಿಯಲ್ಲಿ ಹಲವಾರು ಏರಿಳಿತಗಳನ್ನು ಸೃಷ್ಟಿ ಮಾಡಿದೆ. ಮುಖ್ಯವಾಗಿ ನಾವು ಇಲ್ಲಿ ಮಹಿಳೆಯರ ಕುರಿತಂತೆ ಯೋಚಿಸಿದರೆ, ಜಾಗತೀಕರಣ ಪ್ರಕ್ರಿಯೆಯಲ್ಲಿ ಮಹಿಳಾ ವಿಷಯಗಳು ಬಹುಮುಖ್ಯವಾದವು. ಅದಕ್ಕೆ ಕಾರಣವೆಂದರೆ, ಜಾಗತಿಕ ಬಂಡವಾಳವು ಸಂಸ್ಕೃತಿಗೆ ಮುಖ್ಯವಾಗಿದ್ದ ಶರೀರ ಹಾಗೂ ಸ್ವಹಿತವನ್ನು ಅದರ ಸಾಂಸ್ಕೃತಿಕ ವಿಶಿಷ್ಟತೆಯನ್ನಾಗಿ ಮಾಡಿದುದರಿಂದಾಗಿ ಮಾಧ್ಯಮಗಳು ಶೃಂಗಾರ ಗೃಹಗಳು ಅಥವಾ ಚಿತ್ತಾರದ ಅಂಗಡಿಗಳು, ಸಾಂಸ್ಕೃತಿಕ ಕೈಗಾರಿಕೆಗಳು, ಸಾಂಸ್ಕೃತಿಕ ಕಟ್ಟಳೆಗಳನ್ನು ಹೆಚ್ಚಿಸಿದ್ದಷ್ಟೇ ಅಲ್ಲದೇ ಪಂಗಡಗಳ ಅನನ್ಯತೆಯನ್ನು ಆಧುನಿಕ ಮತ್ತು ಆಧುನಿಕೇತರ ಎಂಬಂತೆ ಬಿಂಬಿಸಿದವು. ಜಾಗತೀಕರಣ ನಿಧಾನವಾಗಿ ಬಾಹ್ಯನೋಟವನ್ನು ಶಕ್ತಿಯುತ ಗೊಳಿಸಲು ಆಂತರಿಕ ಶರೀರದೊಂದಿಗೆ ಕೂಡಿಕೊಳ್ಳುತ್ತದೆ. ಈ ಸಂದರ್ಭದಲ್ಲಿ ಶರೀರ ಎನ್ನುವುದು ಜೀವನ, ಸಾಮಾಜಿಕ ಕ್ರಿಯೆ-ಪ್ರತಿಕ್ರಿಯೆಗಳು ಮತ್ತು ಅನನ್ಯತೆಯನ್ನು ಅರ್ಥೈಸುವ ಅಂಶವಾಗಿದ್ದು, ಜಾಗತಿಕ ಬಂಡವಾಳಕ್ಕೆ ಸೂಕ್ಷ್ಮವಾದ ಸವಾಲನ್ನು ಸೃಷ್ಟಿಸಿದೆ. ಉದಾಹರಣೆಗೆ ಮಿಸ್ ವರ್ಲ್ಡ್ ಸ್ಪರ್ಧೆಯು ಅನೇಕ ಸವಾಲುಗಳನ್ನು ಎದುರಿಸಿದೆ.

ಈ ವಿಷಯದ ಕುರಿತಂತೆ ಚರ್ಚಿಸಲ್ಪಟ್ಟ ಅನೇಕ ವಿಷಯಗಳು ಗ್ರಾಹಕ ವೈಶಿಷ್ಟ್ಯತೆಗೆ ಸ್ತ್ರೀಯರ ಅನನ್ಯತೆಯ ವರ್ಗಾವಣೆ ಕುರಿತದ್ದಾಗಿದೆ. ಅಲ್ಲದೇ ಸಾಂಸ್ಕೃತಿಕ ನಷ್ಟದ ವಾತಾವರಣವನ್ನು ಸೃಷ್ಟಿಸಿದ್ದನ್ನು ಒಳಗೊಂಡಂತೆ ಪಾಶ್ಚಿಮಾತ್ಯ ಬಂಡವಾಳಕ್ಕೆ ಮಾರುಕಟ್ಟೆಯನ್ನು ಸ್ಥಾಪಿಸಿದ ರೂಪದಲ್ಲಿ ನೀಡಲಾಯಿತು. **'ಸೌಂದರ್ಯ'** ಎನ್ನುವುದು ಇಂದು ಜಗತ್ತಿನ ಬೃಹತ್ ಕೈಗಾರಿಕೆಯಾಗಿದೆ. ಇಂದು ಬಂಡವಾಳದ ಪರಿಣಾಮವಾಗಿ ಸ್ತ್ರೀಯರ ಶರೀರವು ಒಂದು

ಮಾರಾಟದ ಸರಕಾಗಿ ಪರಿವರ್ತನೆಯಾಗಿದೆ. ಅಲ್ಲದೇ ವಿಭಿನ್ನ ಭಾಗಗಳ ಗಾತ್ರ ಮತ್ತು ಸ್ವರೂಪದ ಮೇಲಿಂದ ಸ್ಥಾನಾಂಶ ನೀಡುವುದರ ಮೂಲಕ ಇನ್ನೂ ಅವಮಾನೀಯಗೊಳಿಸಲಾಗಿದೆ. ಇದರ ಸಂದೇಶವೇನೆಂದರೆ, ಸ್ತ್ರೀಯರು ಮಾನವರಲ್ಲ, ಬದಲಾಗಿ ಕೇವಲ ಗ್ರಾಹಕ ವಸ್ತುಗಳಂತೆ ಅವರನ್ನು ಈ ಜಾಗತೀಕರಣದ ಪ್ರಭಾವವು ಪರಿಭಾವಿಸಿಕೊಂಡಿದೆ. ಈ ಮಾರುಕಟ್ಟೆಯು ಸುಳ್ಳು ಸೌಂದರ್ಯದ ಕಲ್ಪನೆಯನ್ನು ನಿರ್ಮಿಸಿ ಸ್ತ್ರೀಯರನ್ನು ಪಡಿಯಚ್ಚಿನ ಅಧೀನ ಸ್ಥಾನಕ್ಕೆ ದೂಡುತ್ತದೆ.

ಇಲ್ಲಿ ಮಹಿಳೆಯರನ್ನು ಗ್ರಾಹಕ ಮಾರುಕಟ್ಟೆಯಲ್ಲಿ ಒಂದು ವ್ಯಾಪಾರಿ ಸರಕನ್ನಾಗಿ ಮಾಡುವುದರ ಮೂಲಕ ಅವರು ತಮ್ಮ ಶರೀರದ ಮೇಲೆ ಹೊಂದಿರುವ ಮೂಲಭೂತ ಹಕ್ಕನ್ನು ವಂಚಿಸುವ ಹುನ್ನಾರದ ವಾದವಿದೆ. ಇದಕ್ಕೆ ವಿರುದ್ಧವಾಗಿ ನಡೆದ ಹಲವಾರು ಮಹಿಳಾ ಚಳುವಳಿಗಳು ಜಾಗತೀಕರಣಕ್ಕೆ ಅಭಿಮುಖವಾಗಿ ಯಾವುದೇ ಪರ್ಯಾಯವನ್ನು ತೋರಿಸಲಿಲ್ಲ. ಆದರೆ ಹಲವೆಡೆ ಅಸಭ್ಯತೆಯ ವಿರುದ್ಧ, ವರದಕ್ಷಿಣೆ, ವಧು ದಹನದ ವಿರುದ್ಧ ವಿವಿಧ ಹಂತಗಳಲ್ಲಿ ಸ್ತ್ರೀ ವಿಷಯಗಳನ್ನು ಎತ್ತಲಾಯಿತು. ಈ ವಿಷಯಗಳು ನೇರವಾಗಿ ಜಾಗತೀಕರಣದ ಮೇಲೆ ಯಾವುದೇ ರೀತಿಯ ಪರಿಣಾಮವನ್ನು ಬೀರಲಿಲ್ಲ. ಹೀಗಾಗಿ ಇಲ್ಲಿ ಜನತೆ ಭೌತಿಕ ಮತ್ತು ಸಾಂಸ್ಕೃತಿಕ ಅನನ್ಯತೆ ಹಾಗೂ ಸ್ಥಳಾಂತರಗೊಳ್ಳುವುದನ್ನು ಕಾಣಬಹುದು. ಇಲ್ಲಿ ಸಂಸ್ಕೃತಿ ನಾಶ, ಅನನ್ಯತೆಯ ನಾಶ, ಸ್ವಾಯತ್ತತೆಯ ನಾಶ ಮತ್ತು ಹಕ್ಕುಗಳ ನಾಶದ ಕುರಿತಂತೆ ವಾದಗಳನ್ನು ಕಾಣಬಹುದು. ಆದರೆ ಮಹಿಳಾ ಆರೋಗ್ಯದ ಬಗ್ಗೆ ಚಿಂತಿಸಿಲ್ಲ.(೪೧)

ಚಂದ್ರಶೇಖರ್ ಟಿ.ಆರ್. (೨೦೦೨) ಅವರು ತಮ್ಮ **"ಪ್ರಚಲಿತ ಕರ್ನಾಟಕದಲ್ಲಿ ಬಡತನ ಯಾಕೆ ಕಡಿಮೆಯಾಗುತ್ತಿಲ್ಲ"** ಎಂಬ ಲೇಖನದಲ್ಲಿ ಅಭಿವೃದ್ಧಿ ಮತ್ತು ಬಡತನದ ಕುರಿತಂತೆ ಈ ರೀತಿಯಾಗಿ ಪ್ರಶ್ನಿಸಿದ್ದಾರೆ. ಬಡತನ ಹಾಗೂ ಅಭಿವೃದ್ಧಿಯ ಸಂಬಂಧಗಳು ವಿಲೋಮವಾಗಿದೆ. ಬಡತನಕ್ಕೆ ಇರುವ ಏಕೈಕ ಪರಿಹಾರವೆಂದರೆ ಅಭಿವೃದ್ಧಿ ಎಂದು ಬಿಂಬಿಸಲಾಗಿದೆ. ಆದರೆ ಲೇಖಕರು ಅಭಿವೃದ್ಧಿಯ ನಡೆಯಲ್ಲಿ ಭಾರತದಲ್ಲಾಗಲಿ, ಕರ್ನಾಟಕದಲ್ಲಾಗಲಿ ಬಡತನ ಕಡಿಮೆಯಾಗಿದೆಯೇ ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ.

೬೦-೭೦ರ ದಶಕದಲ್ಲಿ ಅಭಿವೃದ್ಧಿಯು ತಾನಾಗಿಯೇ ಬಡತನವನ್ನು ನಿವಾರಿಸುವುದಿಲ್ಲ ಎಂಬ ಅರಿವು ಉಂಟಾಗಿದ್ದು ಬಡತನವನ್ನು ಅನುಷಂಗಿಕ ಸಂಗತಿಯನ್ನಾಗಿ ಮಾಡದೇ ಅದನ್ನು ನೇರವಾಗಿ ಎದುರಿಸುವಂತಾಗಬೇಕು. ಇದರ ಸಲುವಾಗಿ ಸರಕಾರವು ಬಡತನವನ್ನು ನಿವಾರಣೆ ಮಾಡುವ ಸಲುವಾಗಿಯೇ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆದರೆ ಬಡತನದ ವಿರುದ್ಧದ ನೇರ ಹೋರಾಟದಿಂದ ಅಷ್ಟೇನೂ ಪ್ರಯೋಜನವಾಗಲಿಲ್ಲ. ಈಗ ಮತ್ತೆ

ಬಡತನದ ನಿವಾರಣೆಗೆ ಇರುವ ಏಕೈಕ ಅಸ್ತ್ರವೆಂದರೆ ಅಭಿವೃದ್ಧಿ ಎಂಬ ಸೂತ್ರಕ್ಕೆ ತಲೆಬಾಗಿದ್ದೇವೆ. ಜಾಗತೀಕರಣದ ಈ ಯುಗದಲ್ಲಿ ಮಾರುಕಟ್ಟೆ, ಮುಕ್ತ ವ್ಯಾಪಾರ, ಪೈಪೋಟಿ, ಖಾಸಗೀಕರಣ, ವಿದೇಶೀ ಬಂಡವಾಳದ ಮುಕ್ತ ಹರಿವು, ದಕ್ಷತೆ, ಲಾಭ ಮುಂತಾದ ಜಾಗತೀಕರಣದ ಪರಿಭಾಷೆಯಲ್ಲೇ ನಾವೀಗ ಬದುಕುತ್ತಿದ್ದೇವೆ. ಬಡತನ ನಿವಾರಣೆಯಂತಹ ವಿಷಯಗಳು ಇಂದು ಮೂಲೆಗುಂಪಾಗಿವೆ. ೧೯೫೦ರಲ್ಲಿ ಭಾರತದ ಜನಸಂಖ್ಯೆ ಎಷ್ಟಿತ್ತೋ ಅಷ್ಟು ಇಂದಿನ ಭಾರತದಲ್ಲಿನ ಬಡವರ ಸಂಖ್ಯೆಯಿದೆ. ಅಭಿವೃದ್ಧಿಯಿಂದಾಗಿ ವರಮಾನ, ಉದ್ಯೋಗ, ಉತ್ಪನ್ನ ಪ್ರಮಾಣ ಏರಿದ್ದರೂ, ಬಡತನ ಮಾತ್ರ ಕಡಿಮೆಯಾಗುತ್ತಿಲ್ಲ. ಜನರನ್ನು ಒಳಗೊಳ್ಳದ ಅಭಿವೃದ್ಧಿ ಚಟುವಟಿಕೆಯು ಎಂದಿಗೂ ಬಡತನವನ್ನು ನಿವಾರಿಸದು. ಇದು ಜನಮುಖಿ ಅಭಿವೃದ್ಧಿಯೋ ಅಥವಾ ಜನವಿಮುಖಿ ಅಭಿವೃದ್ಧಿಯೋ ತಿಳಿಯದು. ವಸಾಹತುಶಾಹಿ ಕಾಲದಲ್ಲಿ ಅಭಿವೃದ್ಧಿಯು ಜನವಿಮುಖಿ ಯಾಗಿತ್ತು. ಕರ್ನಾಟಕದಲ್ಲಿ ಇಂದು ಯಾವ ತೆರನಾದ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆಯೋ ಗೊತ್ತಾಗುವುದಿಲ್ಲ. ಅಭಿವೃದ್ಧಿಯಲ್ಲಿ ಕರ್ನಾಟಕಸ್ಥರು ಅನುಷಂಗಿಕವಾಗಿ ಬಿಟ್ಟಿದ್ದಾರೆ. ಅಭಿವೃದ್ಧಿಯನ್ನು ಕುರಿತಂತೆ ಸೈದ್ಧಾಂತಿಕವಾಗಿ ಜ್ಞಾನ ಶಿಸ್ತಿನ ನೆಲೆಯಲ್ಲಿ ಚಿಂತನೆ, ಚರ್ಚೆ, ಸಂವಾದ, ಅಧ್ಯಯನಗಳು ಎರಡು ಮೂರು ಶತಮಾನಗಳಿಂದ ನಡೆದುಕೊಂಡು ಬಂದಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ಅಭಿವೃದ್ಧಿ ಕುರಿತ ಅಧ್ಯಯನಗಳು ಸುಮಾರು ಒಂದು ಶತಮಾನದಿಂದ ನಡೆಯುತ್ತಾ ಬಂದಿದೆ. ಅಭಿವೃದ್ಧಿಯನ್ನು ಕುರಿತಂತೆ ಉತ್ಪಾದನೆಯಾಗುತ್ತಿರುವ ಜ್ಞಾನ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಕ್ರಿಯೆ ಇವುಗಳ ನಡುವೆ ದೊಡ್ಡ ಕಂದರ ಉಂಟಾಗಿರುವುದು ಒಂದು ಸಮಸ್ಯೆಯಾಗಿದೆ. ಅಭಿವೃದ್ಧಿಯ ಜ್ಞಾನ ಒಂದು ರೀತಿಯಾಗಿದ್ದರೆ, ಕ್ರಿಯೆಯು ಇನ್ನೊಂದು ತೆರನಾಗಿದೆ. ಇವೆರಡರ ನಡುವೆ ಸಮನ್ವಯತೆ ಇದ್ದಂತೆ ಕಾಣುವುದಿಲ್ಲ. ಈ ಕಂದರ ಉಂಟಾಗಲು ಅಭಿವೃದ್ಧಿಗೆ ಸಂಬಂಧಿಸಿದ ಜ್ಞಾನ ಪಾಶ್ಚಿಮಾತ್ಯದಲ್ಲಿ ಉಂಟಾಗಿ, ಅದರ ಕ್ರಿಯೆ ಅಭಿವೃದ್ಧಿಶೀಲ ದೇಶಗಳಲ್ಲಿ ನಡೆಯುವುದೇ ಮುಖ್ಯ ಕಾರಣವಾಗಿದೆ. ಇಲ್ಲಿ ಜ್ಞಾನದಿಂದ ಕ್ರಿಯೆಯೋ ಅಥವಾ ಕ್ರಿಯೆಯಿಂದ ಜ್ಞಾನವೋ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಜ್ಞಾನದ ಆಧಾರದಿಂದ ಕ್ರಿಯೆ ಉದ್ಭವಿಸಿದಾಗ ಅಲ್ಲಿ ಕಂದರ ಉಂಟಾಗುತ್ತದೆ ಎಂದು ಡಾ. ಟಿ.ಆರ್.ಚಂದ್ರಶೇಖರ್ ಹೇಳುತ್ತಾರೆ.

ಸಂಶೋಧನಾ ವಿದ್ಯಾರ್ಥಿಯಾದ **ಮಧುಮತಿ ಆನವೇರಿರವರು (೨೦೧೭-೧೮)** ನಡೆಸಿದ **"ಅಸಂಘಟಿತ ವಲಯದ ಮಹಿಳಾ ಕಾರ್ಮಿಕರು - ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯ ಒಂದು ಅಧ್ಯಯನ"**ದ ಕುರಿತಂತೆ ನಡೆಸಿರುವ ಸಂಶೋಧನೆಯಲ್ಲಿ ಮಹಿಳಾ ಕಾರ್ಮಿಕರ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೀಗೆಂದು ವಿವರಿಸಿರುತ್ತಾರೆ. "ಇಲ್ಲಿ ಕಾರ್ಮಿಕರು ಮಾರುಕಟ್ಟೆಯಲ್ಲಿ

ಅನುಭವಿಸುತ್ತಿರುವ ಸಮಸ್ಯೆಗಳು ಮತ್ತು ಮಾರುಕಟ್ಟೆಯಲ್ಲಿ ಅವರಿಗೆ ದೊರೆಯುವ ಕೆಲಸದ ಲಭ್ಯತೆ ಹಾಗೂ ಅವರ ವೇತನ, ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಡೆಸಲಾದ ಅಧ್ಯಯನದಿಂದ ಈ ಮಹಿಳೆಯರು ಸಧೃಡರಾಗಲು ಕೆಲವೊಂದು ಅಂಶಗಳನ್ನು ಕಂಡುಕೊಂಡಿದ್ದಾರೆ. ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯಿಂದ ಇಲ್ಲಿಯ ಮಹಿಳಾ ಕಾರ್ಮಿಕರ ಆರ್ಥಿಕ ಸ್ಥಿತಿಗತಿಯು ಸ್ವಲ್ಪ ಮಟ್ಟಿಗೆ ಉತ್ತಮವಾಗಲು ಕಾರಣವಾಗಿದೆ. ಏಕೆಂದರೆ ಈ ಕಾರ್ಮಿಕರಿಗೆ ದುಡಿಯುವ ಪ್ರದೇಶದಲ್ಲಿ ಅವರ ದುಡಿಮೆಯ ಮೇಲೆ ದುಡಿಸುವವರಿಂದ ಯಾವುದೇ ರೀತಿಯ ಒತ್ತಡಗಳು ಇರುವುದಿಲ್ಲ. ಇದರಿಂದ ತಮ್ಮ ಅನುಕೂಲಕ್ಕೆ ತಕ್ಕಂತೆ ಇಲ್ಲಿ ಬಂದು ದುಡಿಯಬಹುದಾಗಿದೆ. ಮಹಿಳೆಯರು ಅಲ್ಪಮಟ್ಟಿನ ಆದಾಯವನ್ನೂ ಗಳಿಸಬಹುದಾಗಿದೆ. ಏಕೆಂದರೆ ಈ ಮಾರುಕಟ್ಟೆಯಲ್ಲಿ ಕೆಲಸದ ಲಭ್ಯತೆಯು ಅಧಿಕವಾಗಿದೆ. ವರ್ಷಪೂರ್ತಿ ಇಲ್ಲಿ ಕೆಲಸ ಮಾಡಲು ಅವಕಾಶವಿದೆ. ಅಲ್ಲದೇ ಸುರಕ್ಷಿತ ರೀತಿಯಲ್ಲಿ ಕೆಲಸ ಮಾಡುವ ವಾತಾವರಣವು ಇಲ್ಲಿದೆ. ಮಹಿಳಾ ಕಾರ್ಮಿಕರಿಗೆ ದುಡಿಯುವ ಪ್ರದೇಶವು ಎಲ್ಲಾ ರೀತಿಯಲ್ಲಿಯೂ ಸುರಕ್ಷಿತವಾಗಬೇಕಾಗಿರುವುದು ಬಹುಅಗತ್ಯ. ಅಂತಹ ವಾತಾವರಣವು ಇಲ್ಲಿ ಇರುವುದರಿಂದ ಮಹಿಳೆಯರು ನಿರ್ಭೀತಿಯಿಂದ ಕೆಲಸ ಮಾಡಲು ಅವಕಾಶವಿದೆ. ಅಷ್ಟೇ ಅಲ್ಲದೇ ಹಳ್ಳಿ ಹಾಗೂ ಪಟ್ಟಣದ ಮಹಿಳೆಯರಿಗೆ ಈ ಮಾರುಕಟ್ಟೆಯು ಉದ್ಯೋಗದ ಆಗರವಾಗಿದೆ. ಮಹಿಳಾ ಕಾರ್ಮಿಕರ ಸಾಮಾಜಿಕ ಸ್ಥಿತಿಯು ಉತ್ತಮವಾಗಿದ್ದು, ಯಾವುದೇ ರೀತಿಯ ಲಿಂಗ, ಧರ್ಮ, ಜಾತಿ, ಭಾಷೆಯ ಆಧಾರದ ಮೇಲೆ ತಾರತಮ್ಯ ಮಾಡಿರುವುದು ಕಂಡುಬಂದಿರುವುದಿಲ್ಲ. ಕೃಷಿಯಲ್ಲಿ ವರ್ಷಪೂರ್ತಿ ಕೆಲಸವಿರುವುದು ಅಪರೂಪ. ಅಂತಹವರಿಗೆ ಹಾಗೂ ಅಂತಹ ಸಂದರ್ಭದಲ್ಲಿ ಇಲ್ಲಿಯವರಿಗೆ ಈ ಮಾರುಕಟ್ಟೆಯೇ ಜೀವನಾಧಾರ ಹಾಗೂ ಜೀವನಾಡಿಯೂ ಹೌದು. ಅಲ್ಲದೇ ಇವರು ತಮ್ಮ ಸಂಶೋಧನೆಯಲ್ಲಿ ಆರೋಗ್ಯದ ಕುರಿತಂತೆ ಮಹಿಳೆಯರಿಗೆ ಶ್ವಾಸಕೋಶ ಸಂಬಂಧಿ ಆರೋಗ್ಯ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ ಎಂಬುದಾಗಿ ತಿಳಿಸಿದ್ದು, ಈ ಎಲ್ಲದರ ಕುರಿತಂತೆ ಅವರು ನೀಡಿರುವ ಸಲಹೆಗಳು ಈ ರೀತಿಯಾಗಿವೆ. ಪ್ರಥಮವಾಗಿ, ಈ ಮಹಿಳಾ ಕಾರ್ಮಿಕರನ್ನು ಸಂಘಟಿತ ವಲಯಕ್ಕೆ ಸೇರಿಸಬೇಕು. ಸರಿಯಾದ ರೀತಿಯಲ್ಲಿ ಆರ್ಥಿಕ ಭದ್ರತೆಗಳನ್ನು ನೀಡುವುದರ ಮುಖಾಂತರ ಇವರ ಜೀವನಮಟ್ಟವನ್ನು ಸುಧಾರಿಸುವ ಅಗತ್ಯವಿದೆ. ಅಲ್ಲದೇ, ಇಲ್ಲಿರುವ ಮಹಿಳಾ ಕಾರ್ಮಿಕರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅನಕ್ಷರಸ್ಥರಿರುವುದರಿಂದ ಇವರಿಗೆ ಉತ್ತಮ ಶಿಕ್ಷಣವನ್ನು ನೀಡುವ ಅಗತ್ಯವಿದೆ. ಬೇಡಿಕೆ ಇಲ್ಲದಂತಹ ಸಂದರ್ಭದಲ್ಲೂ ಇಲ್ಲಿನ ಕಾರ್ಮಿಕರಿಗೆ ನಿಗದಿತ ಕೂಲಿ, ಉದ್ಯೋಗವನ್ನು ನೀಡಬೇಕು ಹಾಗೂ ಕೂಲಿಯ ಮಟ್ಟವನ್ನು ಏರಿಸಬೇಕು. ಅಲ್ಲದೇ, ದುಡಿಸುವ ಅಂಗಡಿಯ ಮಾಲೀಕರು ಮಹಿಳೆಯರ ಕಷ್ಟಕಾಲದ ಸಂದರ್ಭದಲ್ಲಿ

ಸಹಾಯ ಮಾಡುವಂತಹ ಉದಾರತೆಯನ್ನು ತೋರಿಸಬೇಕು. ಏಕೆಂದರೆ, ಇಲ್ಲಿನ ಮಹಿಳೆಯರಿಗೆ ಯಾವುದೇ ರೀತಿಯ ಆರ್ಥಿಕ ಭದ್ರತೆಯನ್ನು ನೀಡದಿರುವ ಕಾರಣ ಆರೋಗ್ಯ ಸಮಸ್ಯೆ, ಉದ್ಯೋಗ ಸಮಸ್ಯೆ, ಇನ್ನಿತರ ಸಮಸ್ಯೆಗಳು ಕಾಡುವಂತಹ ಸಂದರ್ಭದಲ್ಲಿ ಅವುಗಳ ನಿವಾರಣೆಗೆ ಉದ್ಯೋಗದಾತರ ನೆರವು ಬಹುಅಗತ್ಯವೆಂದು ಕಾರ್ಮಿಕರು ಅಭಿಪ್ರಾಯಪಟ್ಟಿದ್ದು, ಈ ನಿಟ್ಟಿನಲ್ಲಿ ಇಲ್ಲಿಯ ಮಾಲೀಕರು ಕಾರ್ಯಪ್ರವೃತ್ತರಾದರೆ, ಕಾರ್ಮಿಕರ ಬದುಕಿಗೊಂದು ಉತ್ತಮ ದಾರಿದೀಪವಾಗಬಹುದು"[೮೩] ಎಂದು ಮಧುಮತಿಯವರು ಅಭಿಪ್ರಾಯಪಟ್ಟಿರುತ್ತಾರೆ.

ಜನಾರ್ದನ (೨೦೧೮) ಅವರು ತಮ್ಮ ಕೃತಿ "ಕರ್ನಾಟಕದಲ್ಲಿ ಗ್ರಾಮೀಣ ಆರೋಗ್ಯ – ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಕೈಗೊಂಡ ಅಧ್ಯಯನ"ದಲ್ಲಿ ಗ್ರಾಮೀಣ ಪ್ರದೇಶದ ಆರೋಗ್ಯ ಸೌಲಭ್ಯಗಳು, ಅವುಗಳ ಲಭ್ಯತೆ, ಜನಸಾಮಾನ್ಯರ ತಿಳುವಳಿಕೆ, ಅಭಿವೃದ್ಧಿಯ ಪಾಲುದಾರರಾದ ವೈದ್ಯಕೀಯ ಸಿಬ್ಬಂದಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ಮಾಡಿದ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳ ಆಧಾರದ ಮೇಲೆ ಈ ರೀತಿಯಾದಂತೆ ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ. "ಕೇಂದ್ರ ಮತ್ತು ರಾಜ್ಯ ಸರಕಾರಗಳ ಮುಖಾಂತರ ಸಾಕಷ್ಟು ಆರೋಗ್ಯ ಕಾರ್ಯಕ್ರಮಗಳು ರೂಪಿತವಾದರೂ, ಅವುಗಳ ಸಮರ್ಪಕ ನಿರ್ವಹಣೆ ಆಗದೇ ಇರುವುದು, ವೈದ್ಯಕೀಯ ಕೇಂದ್ರಗಳಲ್ಲಿ ಇರಬೇಕಾದ ಎಲ್ಲಾ ರೀತಿಯ ಸೇವಾ ಸೌಲಭ್ಯಗಳು ಈ ಗ್ರಾಮೀಣ ಆರೋಗ್ಯ ಕೇಂದ್ರಗಳಲ್ಲಿ ಇಲ್ಲದಿರುವುದು ಕಂಡುಬಂದಿರುತ್ತದೆ. ಇಲ್ಲಿಯ ಜನಸಾಮಾನ್ಯರಿಗೆ ಆರೋಗ್ಯ ಸೌಲಭ್ಯಗಳ ಬಗ್ಗೆ ಅರಿವು ಇದ್ದು, ಪ್ರಯೋಜನ ಪಡೆಯುವಲ್ಲಿ ಮಾತ್ರ ಹಿಂದುಳಿದಿದ್ದಾರೆ. ಇಲ್ಲಿಯ ಆರೋಗ್ಯ ಕೇಂದ್ರಗಳಲ್ಲಿ ಇರುವ ದಾದಿಯರು, ಶುಶ್ರೂಷಕಿಯರು ಗ್ರಾಮಗಳಿಗೆ ಕ್ರಮಬದ್ಧ ಭೇಟಿಯನ್ನು ನೀಡದೇ ಇರುವುದು, ಉತ್ತಮ ಔಷಧೋಪಚಾರವನ್ನು ಪಡೆಯಲು ಸಾರಿಗೆ ಸೌಲಭ್ಯದ ಕೊರತೆ, ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಅನುಪಸ್ಥಿತಿ, ಸೂಕ್ತ ರೀತಿಯ ತಪಾಸಣೆಯ ಕೊರತೆ, ರೋಗಿಗಳಿಗೆ ಸರಿಯಾದ ರೀತಿಯಲ್ಲಿ ಶುಶ್ರೂಷೆಯನ್ನು ನೀಡದೇ ಇರುವ ಕಾರಣ ಊರಿನಲ್ಲಿ ಚಿಕಿತ್ಸೆಗಾಗಿ ಜನರು ಸಾರ್ವಜನಿಕ ಆಸ್ಪತ್ರೆಯನ್ನು ಹೆಚ್ಚಾಗಿ ಅವಲಂಬಿಸದೇ ಇರುವುದು ಕಂಡುಬಂದಿರುತ್ತದೆ. ಅಲ್ಲದೇ ಆರೋಗ್ಯ ಕೇಂದ್ರಗಳಿಗೆ ಸಮರ್ಪಕ ರೀತಿಯಲ್ಲಿ ಔಷಧಗಳು ಸರಬರಾಜ ಆಗದೇ ಇರುವುದು ಒಂದೆಡೆಯಾದರೆ, ಇರುವಂತಹ ಔಷಧಿಗಳನ್ನು ಹಣದ ಆಸೆಗೆ ಬೇರೆ ಕಡೆ ಮಾರಾಟ ಮಾಡಿರುವಂತಹ ಅಂಶಗಳು ಹಾಗೂ ದೂರುಗಳು ಗ್ರಾಮಸ್ಥರಿಂದ ಕೇಳಿ ಬಂದಿದ್ದು, ಸರಿಯಾದ ಸಿಬ್ಬಂದಿಗಳ ಕೊರತೆ, ಔಷಧಿಗಳ ದಾಸ್ತಾನು ಕೊರತೆಯು ಆಸ್ಪತ್ರೆಗಳಲ್ಲಿ ಕಂಡುಬರುವ ಪ್ರಮುಖ ಸಮಸ್ಯೆಗಳಾಗಿವೆ. ಹೊಸಪೇಟೆ ತಾಲೂಕಿನ ಶೇ. ೮೦ರಷ್ಟು ಜನರು ಚರ್ಮ ರೋಗದಿಂದ ಬಳಲುತ್ತಿದ್ದು, ಇಲ್ಲಿನ ವೈದ್ಯರ

ಅಭಿಪ್ರಾಯದ ಪ್ರಕಾರ ಇಲ್ಲಿಯ ಗಣಿಗಾರಿಕೆಯ ಧೂಳಿನ ಕಾರಣದಿಂದ ಉಂಟಾಗಿರುವ ಮಾಲಿನ್ಯದಿಂದ ಚರ್ಮ ರೋಗವು ಜನರನ್ನು ಬಾಧಿಸುತ್ತಿದ್ದು, ಇದಕ್ಕೆ ಸೂಕ್ತ ಔಷಧೋಪಚಾರದ ಅಗತ್ಯವಿದೆ. ಇಲ್ಲಿನ ಹಲವು ಆರೋಗ್ಯ ಕೇಂದ್ರಗಳಲ್ಲಿ ಪುರುಷ ವೈದ್ಯರು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಗ್ರಾಮೀಣ ಭಾಗದ ಮಹಿಳೆಯರು ತಮ್ಮ ಆರೋಗ್ಯ ಸಮಸ್ಯೆಗಳನ್ನು ಮುಕ್ತವಾಗಿ ವೈದ್ಯರ ಜೊತೆ ಚರ್ಚಿಸಿಕೊಳ್ಳಲು ಹಿಂಜರಿಯುತ್ತಿದ್ದು, ಇದು ಮಹಿಳೆಯರ ಅನಾರೋಗ್ಯ ವನ್ನು ಹೆಚ್ಚಿಸಲು ಕಾರಣವಾಗಿರುವುದಲ್ಲದೇ, ಮಹಿಳಾ ವೈದ್ಯರ ನೇಮಕದ ಅಗತ್ಯವನ್ನು ತೋರಿಸಿ ಕೊಟ್ಟಿರುತ್ತದೆ. ಸರಕಾರಿ ವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಹಿಂದೇಟು ಹಾಕುತ್ತಿರುವುದರಿಂದ ಅಲ್ಲಿನ ಜನರ ಆರೋಗ್ಯ ಸಮಸ್ಯೆಗಳ ಕುರಿತಂತೆ ಜ್ಞಾನದ ಕೊರತೆ ಇದ್ದು, ವೈದ್ಯರನ್ನು ಕಡ್ಡಾಯ ಗ್ರಾಮೀಣ ಸೇವೆಗೆ ಒಳಪಡಿಸುವುದು ಹಾಗೂ ವೈದ್ಯ ತರಬೇತಿ ಪಡೆಯುವಂತಹ ಸಂದರ್ಭದಲ್ಲಿಯೇ ಗ್ರಾಮೀಣ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಶೇಷ ಪಠ್ಯಕ್ರಮವನ್ನು ಅಳವಡಿಸುವ ಅಗತ್ಯವಿದೆ". ಒಟ್ಟಾರೆಯಾಗಿ ಹೇಳುವುದಾದರೆ, ಲೇಖಕರು ಕೈಗೊಂಡ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಅಧ್ಯಯನದಲ್ಲಿ, ಈ ತಾಲೂಕಿನ ಆರೋಗ್ಯ ಸೇವಾ ಸೌಲಭ್ಯಗಳು ಅತ್ಯಂತ ಹಿಂದುಳಿದಿದ್ದು, ಉತ್ತಮಗೊಳ್ಳುವಂತೆ ಹಾಗೂ ಸಮರ್ಪಕವಾಗಿ ಎಲ್ಲರಿಗೂ ದೊರಕುವಂತಾಗಬೇಕು ಎಂದು ಅಭಿಪ್ರಾಯಪಟ್ಟಿರುತ್ತಾರೆ.[೪೪]

ಅಮರ್ತ್ಯಸೇನ್‌ರವರು (೨೦೦೫) "ದ ಆರ್ಗ್ಯುಮೆಂಟೇಟಿವ್ ಇಂಡಿಯನ್" ಎಂಬ ತಮ್ಮ ಪುಸ್ತಕದಲ್ಲಿ ಭಾರತದ ಸಂಸ್ಕೃತಿ, ಚರಿತ್ರೆಯ ಗುರುತಿಸುವಿಕೆಯ ಕುರಿತಂತೆ ಹೀಗೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಮಹಿಳೆ ಮತ್ತು ಪುರುಷರ ಕುರಿತ ಲಿಂಗತಾರತಮ್ಯದ ಹಲವು ಮುಖಗಳ ಬಗ್ಗೆ ಚರ್ಚಿಸುತ್ತಾ, "ಮಹಿಳೆ ಮತ್ತು ಪುರುಷರ ನಡುವೆ ಅಸಮಾನತೆಯು ಹಲವಾರು ರೀತಿಯಲ್ಲಿ ಉದ್ಭವವಾಗುತ್ತದೆ. ಮುಖ್ಯವಾಗಿ ಮಹಿಳೆಯು ಸ್ವನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿನ ಕೊರತೆ, ಅಲ್ಲದೇ ಸಮಾಜದಲ್ಲಿನ ಪರಿಣಾಮಕಾರಿ ಮಾಧ್ಯಮವಾಗಿ ಕೆಲಸ ಮಾಡುವಲ್ಲಿ ಅವಳಿಗೆ ಉಂಟಾಗುವ ತೊಡಕುಗಳೆಲ್ಲವೂ ಅವಳ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅಡ್ಡಿಯಾಗುವ ಅಂಶಗಳೆಂದು ಪರಿಗಣಿಸಬಹುದು. ಮುಖ್ಯವಾಗಿ ಮಹಿಳೆಯು ಸಮಾಜದ ಉನ್ನತಿಯ ಹಾಗೂ ಕ್ಷೇಮದ ಕರ್ತೃವಾಗಿದ್ದಾಳೆ. ಏಕೆಂದರೆ, ಮಹಿಳಾ ಚಳುವಳಿಯು ಮನುಷ್ಯನ ಚಿಂತನೆಯ ದಿಕ್ಕುಗಳನ್ನೇ ಬದಲಿಸಬಲ್ಲಂತಹ ಸಾಮರ್ಥ್ಯವಿರುವ ಒಂದು ಪ್ರಕ್ರಿಯೆಯಾಗಿದೆ. ಆದರೆ, ಮಹಿಳಾ ಕಲ್ಯಾಣವು ಸಮರ್ಪಕವಾಗಿ ಆಗಬೇಕಾದರೆ ಮಹಿಳೆಯು ಸಮಾಜದಲ್ಲಿ ಕೇವಲ ಕರ್ತೃವಾಗಿದ್ದರೆ ಸಾಲದು. ತನ್ನ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವಹಿತಾಸಕ್ತಿಗಳನ್ನು ರಕ್ಷಿಸುವುದು ಹಾಗೂ ಗುರಿಯನ್ನು ಮುಟ್ಟುವುದು ಅಷ್ಟೇ ಪ್ರಮುಖವಾಗಿರುತ್ತದೆ.

ಆದರೆ, ಲಿಂಗತಾರತಮ್ಯದಂತಹ ಸಮಸ್ಯೆಯು ಅವಳ ಎಷ್ಟೋ ಪ್ರಯತ್ನಗಳನ್ನು ಫಲಪ್ರದವಾಗಿಸದಿರುವ ಸಾಧ್ಯತೆಯಿದೆ. ಸೇನ್ ತಮ್ಮ ಬರಹದಲ್ಲಿ **"ಮಿಸ್ಸಿಂಗ್ ವುಮೆನ್"** ಎಂಬ ಕಲ್ಪನೆಯೊಂದಿಗೆ ಪುರುಷರ ಪ್ರಾಬಲ್ಯದ ಕುರಿತಂತೆ ಯಾವಾಗಲೂ ಮಹಿಳೆಯು ಅಭಿವೃದ್ಧಿಯ ದೃಷ್ಟಿಕೋನದಲ್ಲಿ ಮತ್ತು ಅದರ ಪರಿಭಾಷೆಯಲ್ಲಿ ಅವಕಾಶವಂಚಿತಳಾಗಿರುತ್ತಾಳೆ ಅಲ್ಲದೇ ಅಭಿವೃದ್ಧಿ ಕುರಿತ ಯೋಜನೆಗಳಲ್ಲಿಯೂ ಅವಳು ಸಮರ್ಪಕ ಪಾಲುದಾರಳಾಗಿರುವುದಕ್ಕೆ ಲಿಂಗ ತಾರತಮ್ಯವೇ ಮುಖ್ಯ ಕಾರಣ ಎಂದು ಹೇಳಬಹುದು. ಅಲ್ಲದೇ ಕುಟುಂಬ ವರ್ಗದಲ್ಲಿಯೂ ಎಲ್ಲಾ ಜವಾಬ್ದಾರಿಗಳನ್ನು ಪುರುಷರಿಗಿಂತ ಮಹಿಳೆಯರೇ ಅಧಿಕ ಕ್ಷಮತೆಯಿಂದ ನಿಭಾಯಿಸಿದರೂ ಕೂಡಾ ಕುಟುಂಬದ ಉನ್ನತ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಆಕೆಯನ್ನು ಅಜ್ಞಾನಿ ಎಂಬಂತೆ ಬಿಂಬಿಸಲಾಗುತ್ತದೆ. ಈ ಎಲ್ಲಾ ಸಮಸ್ಯೆಗಳಿಗೆ ಮಹಿಳೆಯು ತನ್ನ ನಿರ್ಧಾರಗಳನ್ನು ತಾನೇ ತೆಗೆದುಕೊಳ್ಳುವಂತಹ ಸ್ವಸಾಮರ್ಥ್ಯವನ್ನು ಬೆಳೆಸಿಕೊಳ್ಳದ ಕೊರತೆ ಮುಖ್ಯ ಕಾರಣವಾಗಿದೆ. ಹೀಗಾಗಿ ಈ ಕೊರತೆಯನ್ನು ನೀಗಿಸಲು ಮಹಿಳೆಗೆ ಉತ್ತಮ ಶಿಕ್ಷಣವನ್ನು ನೀಡುವುದು, ಆ ಮೂಲಕ ಆಕೆಯನ್ನು ಸಬಲೀಕರಣ ಗೊಳಿಸುವುದು ಬಹು ಅಗತ್ಯ ಎಂದು ಸೇನ್‌ರವರು ಕಂಡುಕೊಂಡಿರುತ್ತಾರೆ. ಲಿಂಗ ತಾರತಮ್ಯವು ಮಹಿಳೆಗೆ ಹಲವಾರು ಸಮಸ್ಯೆಗಳನ್ನು ತಂದೊಡ್ಡುವುದರ ಜೊತೆಗೆ ಆಕೆಯ ಫರ್ಟಿಲಿಟಿ, ಹದಿಹರೆಯದ ಸಮಸ್ಯೆಗಳು ಅಲ್ಲದೇ ಇನ್ನಿತರ ಹಲವಾರು ಸಾಮಾಜಿಕ, ಕೌಟುಂಬಿಕ ಅಲ್ಲದೇ ಸ್ವತಹ ಆಕೆಯ ದೈಹಿಕ, ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಪ್ರಚೋದನೆಯನ್ನು ನೀಡುತ್ತದೆ. ಮಹಿಳೆಯರನ್ನು ಹೊರತುಪಡಿಸಿದ ಯಾವುದೇ ಅಭಿವೃದ್ಧಿ ಪ್ರಕ್ರಿಯೆಯು ಪೂರ್ಣವೆಂದೆನಿಸುವುದಿಲ್ಲ."[೫೫]

ಮೀರಾ ಕಾಮ್‌ದಾರ್‌ರವರು (೨೦೧೮) ತಮ್ಮ **"ಇಂಡಿಯಾ – ಇನ್ ದ ೨೧ಸ್ಟ್ ಸೆಂಚುರಿ"** ಎಂಬ ಕೃತಿಯಲ್ಲಿ ಇಪ್ಪತ್ತೊಂದನೇ ಶತಮಾನದ ಸಾಮಾಜಿಕ, ಆರ್ಥಿಕ, ರಾಜಕೀಯ, ಭೌಗೋಳಿಕ ಹಾಗೂ ಪರಿಸರಾತ್ಮಕ ಅಂಶಗಳ ಕುರಿತಾದ ವಿಶ್ಲೇಷಣೆಯನ್ನು ಈ ಕೆಳಗಿನಂತೆ ನೀಡಿರುತ್ತಾರೆ. "ಭಾರತವು ಲಿಂಗ ತಾರತಮ್ಯದಂತಹ ಸಮಸ್ಯೆಯನ್ನು ಅನುಭವಿಸುತ್ತಿದ್ದು, ಪುರುಷ ಹಾಗೂ ಮಹಿಳೆಯರ ಲಿಂಗಾನುಪಾತದ ಸಂಖ್ಯೆಯನ್ನು ಗಮನಿಸಿದರೆ, ಮಹಿಳೆಯರ ಪ್ರಮಾಣವು ಕಡಿಮೆಯಿರುವುದು ಕಂಡುಬಂದಿರುತ್ತದೆ. ಭಾರತವು ೧೩೫.೨೬ ಕೋಟಿ (೨೦೧೮ರ ಅಂಕಿಅಂಶ) ಜನಸಂಖ್ಯೆಯನ್ನು ಹೊಂದಿದ್ದು, ಬಡತನ, ನಿರುದ್ಯೋಗದಂತಹ ಸಮಸ್ಯೆಗಳಿಗೆ ಏರುತ್ತಿರುವ ಈ ಜನಸಂಖ್ಯೆಯೇ ಮುಖ್ಯ ಕಾರಣವೆಂದು ಹೇಳಬಹುದು. ಭಾರತದ ಸಂವಿಧಾನವು ಮಹಿಳೆಯರ ತಾರತಮ್ಯವನ್ನು ನಿವಾರಿಸುವ ನಿಟ್ಟಿನಲ್ಲಿ ಲಿಂಗತಾರತಮ್ಯದಂತಹ ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಸೂಚಿಸಿದೆ. ಮಹಿಳಾ ಶಿಕ್ಷಣವು ಇದರಲ್ಲಿ ಪ್ರಮುಖ ಪರಿಹಾರ

ಮಾರ್ಗವಾಗಿದ್ದು, ಹೆಣ್ಣುಮಕ್ಕಳು ಶಿಕ್ಷಣವನ್ನು ಪಡೆಯುವುದು ಕಡ್ಡಾಯವಾಗಿದೆ. ಆದಾಗಿಯೂ, ಮಹಿಳೆಯರು ಸಮಾಜದಲ್ಲಿ ತಾರತಮ್ಯದಿಂದ ಮುಕ್ತರಾಗಿಲ್ಲ. ಇದಕ್ಕೆ ಉದಾಹರಣೆಯಾಗಿ ನಾವು ಗಮನಿಸುವುದಾದರೆ, ಏರುಗತಿಯಲ್ಲಿರುವ ಹೆಣ್ಣು ಭ್ರೂಣ ಹತ್ಯೆ, ತಾಯಿಯ ಮರಣ ಪ್ರಮಾಣ, ಹೆಚ್ಚುತ್ತಿರುವ ಲಿಂಗಾನುಪಾತ ಇವೆಲ್ಲವೂ ಭಾರತವನ್ನು ಅತೀ ಕೆಳಮಟ್ಟಕ್ಕೆ ದೂಡಿವೆ ಎಂದು ಹೇಳಬಹುದು. ವರದಕ್ಷಿಣೆ ತಡೆ ಕಾಯ್ದೆಯು ರೂಪಿತವಾದರೂ ಅದರ ಸಮರ್ಪಕವಾದ ಅನುಷ್ಠಾನದ ಕೊರತೆಯು ಹೆಚ್ಚು ಹೆಚ್ಚು ವಧು ಹತ್ಯೆ, ವರದಕ್ಷಿಣೆ ಸಂಬಂಧಿತ ಪ್ರಕರಣಗಳು ಹೆಚ್ಚುವಲ್ಲಿ ಕಾರಣವಾಗಿದೆ. ಅಪರಾಧ ಪ್ರಕರಣಗಳ ದಾಖಲೆಗಳ ಪ್ರಕಾರ, ೨೦೦೯ರಿಂದ ೨೦೧೩ರವರೆಗೆ ಮಹಿಳೆಯರ ಮೇಲಿನ ದೌರ್ಜನ್ಯಗಳು ಅಧಿಕವಾಗುತ್ತಲೇ ಇವೆ. ಇದು ಪ್ರತಿ ಘಂಟೆಗೆ ಓರ್ವ ಮಹಿಳೆಯನ್ನು ಬಲಿ ತೆಗೆದುಕೊಳ್ಳುತ್ತಲೇ ಇದೆ. ವರ್ಷದಲ್ಲಿ ೮೦೦೦ ಮಹಿಳೆಯರು ಈ ಎಲ್ಲಾ ಕಾರಣಗಳ ಕುರಿತಂತೆ ಮರಣವನ್ನು ಅಪ್ಪುತ್ತಿದ್ದಾರೆ. ಭಾರತದ ಲಿಂಗಾನುಪಾತವು ಪ್ರತಿ ಸಾವಿರ ಪುರುಷರಿಗೆ ೯೪೫ ಮಹಿಳೆಯರು ಇದ್ದು, ಲಿಂಗಾನುಪಾತದಲ್ಲಿ ದೇಶವು ಅತೀ ಕೆಳಮಟ್ಟದಲ್ಲಿದೆ. ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳು ಹೆಚ್ಚುತ್ತಿದ್ದು, ಇದು ಒಟ್ಟಾರೆಯಾಗಿ ಭಾರತದ ಆರ್ಥಿಕತೆಯ ಮೇಲೆ ಪರಿಣಾಮವನ್ನು ಬೀರಿದೆ. ಓ.ಈ.ಸಿ.ಡಿ. (ದ ಆರ್ಗನೈಸೇಷನ್ ಫಾರ್ ಎಕನಾಮಿಕ್ ಕೋ–ಆಪರೇಷನ್ ಆ್ಯಂಡ್ ಡೆವಲಪ್‌ಮೆಂಟ್)ಯು ಭಾರತದ ನಿಧಾನಗತಿಯ ಆರ್ಥಿಕತೆಗೆ ಇಲ್ಲಿನ ಮಹಿಳೆಯರ ಕಡಿಮೆ ಭಾಗವಹಿಸುವಿಕೆಯು ಪ್ರಮುಖ ಕಾರಣವೆಂದು ಗುರುತಿಸಿದೆ. ಏಕೆಂದರೆ, ದೇಶದ ಕೇವಲ ಮೂರನೇ ಒಂದರಷ್ಟು ಮಹಿಳೆಯರು ವೇತನ ಪಡೆಯುವ ಉದ್ಯೋಗಿಗಳಾಗಿದ್ದು, ಇನ್ನುಳಿದಂತೆ ಬಹಳಷ್ಟು ಮಹಿಳೆಯರು ನಿರುದ್ಯೋಗಿಗಳಾಗಿದ್ದಾರೆ ಅಲ್ಲದೇ ದೇಶದ ಬಹುಪಾಲು ಮಹಿಳಾ ಕಾರ್ಮಿಕರು ಪ್ರಾಥಮಿಕ ವಲಯದ ಕೃಷಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು, ಇವರು ಅಸಂಘಟಿತ ವಲಯದ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರ ದುಡಿಮೆಯು ರಾಷ್ಟ್ರೀಯ ಆದಾಯಕ್ಕೆ ಕೊಡುಗೆ ನೀಡುವಲ್ಲಿ ಹಾಗೂ ರಾಷ್ಟ್ರದ ಅಭಿವೃದ್ಧಿ ಮಾಪನದಲ್ಲಿ ಇವರ ಗಳಿಕೆಯು ಸೇರದೇ ಇರುವುದರಿಂದ ದೇಶದ ಒಟ್ಟು ಉತ್ಪಾದನೆಯಲ್ಲಿ ಮಹಿಳೆಯರ ಉತ್ಪಾದನಾ ಪ್ರಮಾಣದ ಕೊಡುಗೆಯು ಬಹಳ ಕಡಿಮೆ ಎಂದೇ ಹೇಳಬಹುದು. ಅಲ್ಲದೇ ಶಿಕ್ಷಣವನ್ನು ಪಡೆದ ಮಹಿಳೆಯರು ಕೃಷಿಯೇತರ ಉದ್ಯೋಗ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ, ವೇತನ ತಾರತಮ್ಯದಂತಹ ವಿಷಯಗಳು ಇವರ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಿವೆ. ಅಲ್ಲದೇ ಮಹಿಳೆಯನ್ನು ಕೇವಲ ಜೈವಿಕ ಘಟಕವಾಗಿ ನೋಡುವುದರ ಪರಿಣಾಮ ಅವಳ ದಿನವಿಡೀ ದುಡಿತವು ವೇತನರಹಿತ ದುಡಿಮೆಯಾಗಿ ಪರಿಗಣಿಸಲ್ಪಡುತ್ತದೆ. ಈ ಎಲ್ಲಾ

ಕಾರಣಗಳಿಂದ ಭಾರತದ ಆರ್ಥಿಕತೆಯಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಕೊಡುಗೆ ಬಹಳ ಕಡಿಮೆಯೆಂದೇ ಹೇಳಬಹುದು. ಮಹಿಳೆಯು ಹೆಚ್ಚು ಉತ್ಪಾದಕವಾಗ ಬೇಕಾದರೆ, ಆಕೆಗೆ ತಾನು ಉತ್ಪಾದಕವಾಗಬಲ್ಲೆನೆಂಬ ಅರಿವು ಪ್ರಪ್ರಥಮವಾಗಿ ಮೂಡಬೇಕು ಎಂದು ಅಭಿಪ್ರಾಯಪಟ್ಟಿರುತ್ತಾರೆ.[೪೬]

ಅಗರ್ವಾಲ್ ಜೆ.ಸಿ. (೨೦೧೦) ಅವರು ಮಹಿಳೆಯರ ಕುರಿತಾದ ತಮ್ಮ ಬರಹದಲ್ಲಿ ಮಹಿಳೆಯರ ಅಭಿವೃದ್ಧಿ ಏಕೆ ಮುಖ್ಯ ಎಂಬುದರ ಬಗ್ಗೆ ಸಮಗ್ರವಾದ ವಿವರಣೆಯನ್ನು ನೀಡಿರುತ್ತಾರೆ. ಮಹಿಳೆಯರ ಸಬಲೀಕರಣವು ಸಮಾಜದ ಅಭಿವೃದ್ಧಿಗೆ ಬಹಳ ಅವಶ್ಯಕವಾಗಿದೆ. ಏಕೆಂದರೆ, ಇದು ಅಭಿವೃದ್ಧಿಗೆ ಲಭ್ಯವಿರುವ ಮಾನವ ಸಂಪನ್ಮೂಲಗಳ ಗುಣಮಟ್ಟ ಹಾಗೂ ಪ್ರಮಾಣಗಳೆರಡನ್ನೂ ಹೆಚ್ಚಿಸುತ್ತದೆ. ಮಾನವ ಹಕ್ಕುಗಳು ಮತ್ತು ಅಭಿವೃದ್ಧಿಯನ್ನು ಪರಿಶೀಲಿಸಿದಾಗ ಸಬಲೀಕರಣವು ಇದಕ್ಕೆ ಪೂರಕ ಮಾರ್ಗವೆಂಬಂತೆ ಬಳಸಲಾಗಿದೆ. ಭಾರತದಲ್ಲಿ ಮಹಿಳೆಯರು ಆಹಾರದ ಪ್ರಮುಖ ಉತ್ಪಾದಕರಾಗಿದ್ದಾರೆ. ಕೃಷಿ ಉತ್ಪಾದನೆಯಲ್ಲಿ ಗ್ರಾಮೀಣ ಮಹಿಳೆಯರು ಪ್ರಮುಖ ಹಾಗೂ ನಿರ್ಣಾಯಕ ಪಾತ್ರವನ್ನು ವಹಿಸುತ್ತಾರೆ. ಭಾರತದಲ್ಲಿ ಕೃಷಿಯೇತರ ವಲಯದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಸಂಖ್ಯೆಯು ಗಣನೀಯವಾಗಿ ಕಡಿಮೆಯಿದ್ದು, ಕೃಷಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮಹಿಳೆಯರ ಪ್ರಮಾಣವು ಅಧಿಕವಾಗಿದೆ. ಏಕೆಂದರೆ, ಕೃಷಿ ಚಟುವಟಿಕೆಯು ಯಾವುದೇ ರೀತಿಯ ಶೈಕ್ಷಣಿಕ ಗುಣಮಟ್ಟವನ್ನಾಗಲೀ ಅಥವಾ ಇನ್ನಿತರ ಅರ್ಹತೆಗಳನ್ನಾಗಲೀ ಬೇಡುವುದಿಲ್ಲ. ಮನುಷ್ಯನ ಜೀವನ ವಿಧಾನವಾಗಿ ಅಭ್ಯಾಸ ಮಾಡಲು ಕಲಿತಂತಹ ಸಂಸ್ಕೃತಿಯು ಪ್ರಪ್ರಥಮವಾಗಿ ಕೃಷಿಯಾಗಿದ್ದು, ಬಡತನದ ಸಮಸ್ಯೆಯನ್ನು ಎದುರಿಸುತ್ತಿರುವ ಭಾರತಕ್ಕೆ ಅದನ್ನು ನಿವಾರಿಸುವಂತಹ ಏಕೈಕ ಮಾರ್ಗ ಕೃಷಿ ಆಗಿದೆ. ಆದರೆ, ಕೃಷಿ ಚಟುವಟಿಕೆಗಳಲ್ಲಿ ಪುರುಷರಿಗಿಂತ ಬಹುಪಾಲು ಮಹಿಳಾ ಕಾರ್ಮಿಕರೇ ತುಂಬಿದ್ದು, ಮಹಿಳೆಯರು ಸಮಾಜದ ಬೆನ್ನೆಲುಬು ಮತ್ತು ಗ್ರಾಮೀಣ ಆರ್ಥಿಕತೆಯ ಪ್ರಮುಖ ಸಂಪನ್ಮೂಲವೆಂದರೂ ತಪ್ಪಿಲ್ಲ. ತನ್ನ ಕುಟುಂಬದ ಸದಸ್ಯರನ್ನು ನೋಡಿಕೊಳ್ಳುವುದೇ ಅಲ್ಲದೇ, ಕೃಷಿಯಲ್ಲಿಯೂ ಪ್ರಮುಖ ಪಾತ್ರವಹಿಸುತ್ತಿದ್ದು ಪುರುಷರಿಗೆ ಹೋಲಿಸಿದರೆ ಆಹಾರ ಉತ್ಪಾದನೆಯಲ್ಲಿ ಭಾರವಾದ ಕೆಲಸದ ಹೊರೆಯನ್ನು ಹೊರುತ್ತಾರೆ ಎಂದೇ ಹೇಳಬಹುದು. ಮಹಿಳೆಯರ ಬಹುಪಾತ್ರವು ಉತ್ಪಾದಕ ವ್ಯವಸ್ಥೆಗೆ ನೈಜ ದೃಷ್ಟಿಯಿಂದ ಮಹತ್ವದ ಕೊಡುಗೆಗೆ ಕಾರಣವಾಗಿದೆ. ಆದರೆ, ಪುರುಷ ಪ್ರಾಬಲ್ಯದ ಈ ಸಮಾಜದಲ್ಲಿ ಆಕೆಯ ಕೊಡುಗೆಯು ಸಮರ್ಪಕವಾಗಿ ಗುರುತಿಸಲ್ಪಡದೇ ಇರುವುದು ದುರದೃಷ್ಟಕರ. ಅಲ್ಲದೇ, ಕೃಷಿ ಉತ್ಪಾದನಾ ಸಂಪನ್ಮೂಲಗಳಿಗೆ ಇರುವ ಸೀಮಿತ ಪ್ರವೇಶ ಲಭ್ಯತೆಗಳಿಂದಾಗಿ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು,

ಅದು ಅವರ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ತಡೆಯೊಡ್ಡುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರೇ ಹೆಚ್ಚಾಗಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಶೇ. ೭೮ರಷ್ಟು ಮಹಿಳೆಯರು ನಿಯಮಿತವಾಗಿ ಕೆಲಸದಲ್ಲಿ ತೊಡಗಿರುತ್ತಾರೆ. ಆದರೆ, ಇಲ್ಲಿಯೂ ಲಿಂಗ ತಾರತಮ್ಯ ದಿಂದಾಗಿ ಮಹಿಳೆಯು ವೇತನ ತಾರತಮ್ಯಕ್ಕೆ ಒಳಗಾಗುತ್ತಾಳೆ ಎಂದು ಜೆ.ಸಿ. ಅಗರ್ವಾಲ್‌ರವರು ಅಭಿಪ್ರಾಯಪಟ್ಟಿರುತ್ತಾರೆ. ಮಹಿಳೆಯು ತನ್ನ ಕುಟುಂಬ ನಿರ್ವಹಣೆಯೊಂದಿಗೆ ಜಾನುವಾರುಗಳ ಸಾಕಣೆ, ಮೇವು ಒದಗಿಸುವುದು, ನೀರಾವರಿ, ಇಂಧನ ಪೂರೈಕೆಯಂತಹ ಚಟುವಟಿಕೆಗಳಲ್ಲಿಯೂ ದುಡಿಯುತ್ತಿದ್ದು, ದಿನದ ಇಪ್ಪತ್ತನಾಲ್ಕು ಗಂಟೆ ದುಡಿಯುವ ಇವಳ ದುಡಿತವು ಯಾವುದೇ ರೀತಿಯಲ್ಲಿ ಅಭಿವೃದ್ಧಿಯ ಮಾಪಕದಲ್ಲಿ ಗುರುತಿಸಲ್ಪಡದೇ ಇರುವುದು ವಿಪರ್ಯಾಸವೇ ಸರಿ. ಭಾರತದಲ್ಲಿ ಕೃಷಿ ಪದ್ಧತಿಯು ಹೆಚ್ಚಾಗಿ ಮಹಿಳೆಯರಿಂದ ನಿಭಾಯಿಸಲ್ಪಡುತ್ತಿದ್ದರೂ ಮಹಿಳೆಗೆ ಅಸಮಾನ ಭೂಹಕ್ಕುಗಳಿವೆ ಮತ್ತು ಆಕೆಯು ನೇರವಾಗಿ ತಮ್ಮ ಭೂಹಕ್ಕಿನ ಮಾಲೀಕತ್ವವನ್ನು ಅನುಭವಿಸುವುದಿಲ್ಲ. ಭಾರೀ ಕೆಲಸದ ಒತ್ತಡಗಳಿಂದಾಗಿ ಮಹಿಳಾ ರೈತರ ದೈಹಿಕ ಶ್ರಮವು ಹೆಚ್ಚೆಚ್ಚು ಕುಂದುತ್ತಿರುವುದು ಅನೇಕ ಸಂಶೋಧನೆಗಳಲ್ಲಿ ಸಾಬೀತಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.[೪೭]

ಸಂಶೋದಕಳಾದ ನಾನು ಹಲವಾರು ಸಂಶೋಧನೆಗಳನ್ನು ಪರಿಶೀಲಿಸಿದಾಗ ಮಹಿಳಾ ಅಭಿವೃದ್ಧಿ ಬಗೆಗಿನ ಸಾಹಿತ್ಯ ವಿಮರ್ಶೆ, ಮಹಿಳಾ ಸಬಲೀಕರಣ ಮತ್ತು ಮಹಿಳಾ ಕೃಷಿ ಕಾರ್ಮಿಕರ ಕುರಿತಾದ ಸಾಹಿತ್ಯ ವಿಮರ್ಶೆ ಹಾಗೂ ಅವರ ಸಮಸ್ಯೆಗಳ ಕುರಿತಾದ ಸಾಕಷ್ಟು ಸಾಹಿತ್ಯ ಪರಾಮರ್ಶೆ ನಡೆದಿರುತ್ತದೆ. ಹಾಗೂ ಸಂಶೋದಕಳಾದ ನಾನು ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಆರೋಗ್ಯ ಬಗ್ಗೆ ಚಿಂತನೆಯನ್ನು ನನ್ನ ಸಂಶೋಧನೆ ಮಾಡಿರುತ್ತೇನೆ.

ಕೊನೆಯ ಟಿಪ್ಪಣಿಗಳು

೧. ಕುಮಾರ್ ಆರ್., ನೊವಾಕ್ ಜೆ., ರಾಘವನ್ ಪಿ., "ಸ್ಟ್ರಕ್ಚರ್ ಆ್ಯಂಡ್ ಎವಲ್ಯೂಷನ್ ಆಫ್ ಬ್ಲಾಗ್ ಸ್ಪೇಸ್ ಕಮ್ಯುನಿಕೇಶನ್ ಆಫ್ ದ ಎ.ಸಿ.ಎಂ.", ೨೦೦೪. ಪುಟ ೩೫-೩೯.

೨. ಮೆಡ್ಡಾರೆಸ್, "ಹ್ಯೂಮನ್ ಡೆವಲಪ್‌ಮೆಂಟ್, ಪವರ್ಟಿ, ಹೆಲ್ತ್ ಆ್ಯಂಡ್ ನ್ಯೂಟ್ರಿಷನ್ ಸಿಚ್ಯುಯೇಷನ್ ಇನ್ ಇಂಡಿಯಾ", ಆಗಸ್ಟ್, ೨೦೦೮. ಪುಟ ೧೯೮-೨೦೫.

೩. ಪ್ರಶಾಂತ್, ಎಚ್.ಡಿ. "ಅಭಿವೃದ್ಧಿ ಮತ್ತು ಮಹಿಳೆ", ಅಭಿವೃದ್ಧಿ ಅಧ್ಯಯನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬. ಪುಟ ೧೮-೨೨.

೪. ಚಂದ್ರಶೇಖರ್, ಟಿ.ಆರ್. "ಲಿಂಗಸಂಬಂಧಗಳು ಮತ್ತು ಅಭಿವೃದ್ಧಿ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦. ಪುಟ ೮೧-೯೨.

೫. ಮೀರಾ ಸೇಥ್, "ವುಮೆನ್ ಆ್ಯಂಡ್ ಡೆವಲಪ್‌ಮೆಂಟ್ – ದ ಇಂಡಿಯನ್ ಎಕ್ಸ್‌ಪೀರಿಯನ್ಸ್", ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೨೦೦೧. ಪುಟ ೯-೮೬.

೬. ಅಗರ್ವಾಲ್ ಸೂರನ್, "ಸೆಕೆಂಡ್ ಹಿಸ್ಟೋರಿಕಲ್ ಸರ್ವೆ ಆಫ್ ವುಮನ್ ಎಜುಕೇಶನ್ ಇನ್ ಇಂಡಿಯಾ", ೧೯೯೪. ಪುಟ ೪೫-೫೨.

೭. .ಮಿಲ್, ಜೆ.ಎಸ್ "ದ ಸಬ್ಜೆಕ್ಷನ್ ಆಫ್ ವುಮೆನ್", ಪಬ್ಲಿಷ್‌ಡ್ ಬೈ ಲಾಂಗ್‌ಮ್ಯಾನ್ಸ್, ಗ್ರೀನ್, ರೀಡರ್ ಆ್ಯಂಡ್ ಡಯರ್, ೧೮೬೯. ಪುಟ ೨೫-೨೯.

೮. ಪಟ್ನಾಯಕ್, ಅವಯಾ ಕೇಸರಿ ಪರಿಚ್ಛಾ,"ವುಮನ್ ಇನ್ ಡೆವೆಲೆಪ್‌ಮೆಂಟ್ ಅನ್‌ಓರ್ಗನೈಸ್‌ಡ್ ವಿಮನ್ ಲೇಬರ್ ಇನ್ ಇಂಡಿಯಾ", ೨೦೦೬. ಪುಟ ೫೨-೬೭.

೯. ಕೊಲಿಯರ್ ಪಾಲ್ "ವುಮನ್ ಇನ್ ಡೆವೆಲೆಪ್‌ಮೆಂಟ್, ಡಿಫೈನಿಂಗ್ ಇಷ್ಯೂಸ್", ೨೦೦೭. ಪುಟ ೩೮-೪೫.

೧೦. ಹ್ಯಾರಿಟ್ ಬುಚರ್, "ವುಮನ್ ಇನ್ ಸ್ಯಾಕ್ರೆಡ್ ಹಿಸ್ಟರಿ: ಎ ಸೀರೀಸ್ ಆಫ್ ಸ್ಕೆಚಸ್ ಡ್ರಾನ್ ಫ್ರಂ ಸ್ಕ್ರಿಪ್ಚರಲ್, ಹಿಸ್ಟಾರಿಕಲ್ ಆ್ಯಂಡ್ ಲೆಜೆಂಡರಿ ಸೋರ್ಸಸ್", ಜೆ.ಬಿ.ಫೋರ್ಡ್ ಆ್ಯಂಡ್ ಕಂ., ನ್ಯೂಯಾರ್ಕ್, ೧೮೭೩. ಪುಟ ೧೪೫-೧೫೨.

೧೧. ಸುಶೀಲಾ ಕೌಶಿಕ್,"ವುಮನ್ ಡೆವೆಲೆಪ್‌ಮೆಂಟ್ ಸ್ಟಡೀಸ್ – ಪಂಚಾಯತ್‌ರಾಜ್ ಇನ್ ಹರಿಯಾಣ", ನ್ಯೂಡೆಲ್ಲಿ, ೨೦೧೨.

೧೨. ಜೋಕೇಸ್ ಸುಸಾನ್,"ಎಕರ್ಸೈಸ್ ಆನ್ ವಿಮನ್ ಇನ್ ಡೆವೆಲೆಪ್‌ಮೆಂಟ್ – ಇಂಟರ್‌ನ್ಯಾಶನಲ್ ಡೆವೆಲೆಪ್‌ಮೆಂಟ್ ಸ್ಟ್ರಾಟಜಿ ಫಾರ್ ಥರ್ಡ್ ನೇಶನ್ಸ್", ೨೦೦೮. ಪುಟ ೭೫-೮೨.

೧೩. ವಾಗ್ಲಿಯಾನಿ, ವಿನ್‌ಫ್ರೆಡ್ಸ್, "ದ ಇಂಟಿಗ್ರೇಶನ್ಸ್ ಆಫ್ ವುಮನ್ ಇನ್ ಡೆವಲೆಪ್‌ಮೆಂಟ್", ಡೆವಲಪ್‌ಮೆಂಟ್ ಜರ್ನಲ್, ೨೦೧೨. ಪುಟ ೧೧೨-೧೧೬.

೧೪. ಚಂದ್ರ ಪೂಜಾರಿ, ಎಂ. "ಅಭಿವೃದ್ಧಿ ಸಿದ್ಧಾಂತಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭. ಪುಟ ೩೬-೬೪.

೧೫. ಶೇಷಾದ್ರಿ, ಬಿ. "ಅಂಡರ್‌ಸ್ಟ್ಯಾಂಡಿಂಗ್ ಹ್ಯೂಮನ್ ಡೆವಲಪ್‌ಮೆಂಟ್ ಆ್ಯಂಡ್ ರೀಜನಲ್ ಡಿಸ್ಪಾರಿಟೀಸ್", ಪ್ರಸಾರಾಂಗ, ಕ.ವಿ.ಹಂ., ೨೦೧೦.

೧೬. ನೀಲ್ ಹಾಲ್ಫನ್ ಆ್ಯಂಡ್ ಮೈಲ್ಸ್ ಹಾಚ್‌ಸ್ಟೈನ್, "ಲೈಫ್ ಕೋರ್ಸ್ ಹೆಲ್ತ್ ಡೆವಲಪ್‌ಮೆಂಟ್: ಆ್ಯನ್ ಇಂಟಿಗ್ರೇಟೆಡ್ ಫ್ರೇಮ್ ವರ್ಕ್ ಫಾರ್ ಡೆವಲಪಿಂಗ್ ಹೆಲ್ತ್ ಪಾಲಿಸಿ ಆ್ಯಂಡ್ ರಿಸರ್ಚ್", ವಿಲ್ಲಿ ಆನ್ ಬಿಹಾಫ್ ಆಫ್ ಮಿಲ್‌ಬ್ಯಾಂಕ್ ಮೆಮೋರಿಯಲ್ ಫಂಡ್, ೨೦೦೨.

೧೭. ಚಂದ್ರ ಪೂಜಾರಿ, ಎಂ. "ಸಂಶೋಧನೆ ಏನು? ಏಕೆ? ಹೇಗೆ?", ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯. ಪುಟ ೧೫ -೪೦.

೧೮. ಚಂದ್ರಶೇಖರ, ಟಿ.ಆರ್ "ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦. ಪುಟ ೯೧-೯೮.

೧೯. ಸಂಗೊಳ್ಳಿ, ಎನ್.ಎಸ್. "ಮಾನವ ಹಕ್ಕುಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬. ಪುಟ ೧-೫೮.

೨೦. ಚಂದ್ರಶೇಖರ್, ಟಿ.ಆರ್ "ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗ ಸಂಬಂಧಿ ಸ್ವರೂಪ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೧೦. ಪುಟ ೭-೩೧.

೨೧. ಕೃಷ್ಣಯ್ಯ ಗೌಡ, ಎಚ್.ಆರ್ "ಕರ್ನಾಟಕ ಆರ್ಥಿಕತೆ", ಸ್ಪಂದನ ಪ್ರಕಾಶನ, ಬೆಂಗಳೂರು, ೨೦೦೮.ಪುಟ ೧೭೨-೧೭೩.

೨೨. ಅರ್ಜುನ್ ದೇವ್, ಇಂದಿರಾ ಅರ್ಜುನ್‌ದೇವ್, ಸುಪ್ತಾ ದಾಸ್, "ಮಾನವ ಹಕ್ಕುಗಳು – ಒಂದು ಆಕರ ಗ್ರಂಥ", ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೨೦೦೩. ಪುಟ ೬೫-೭೦.

೨೩. ಸಿದ್ಧಗಂಗಮ್ಮ, "ಕರ್ನಾಟಕದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯ ಸ್ಥಿತಿಗತಿ", ಪ್ರಬಂಧ ಲೇಖನ, ಅಭಿವೃದ್ಧಿ ಅಧ್ಯಯನ ವಿಭಾಗ, ಕ.ವಿ.ಹಂ., ೨೦೦೭.

೨೪. ಪ್ರಶಾಂತ್, ಎಚ್.ಡಿ. "ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ-ಸದಸ್ಯರೊಂದಿಗೆ ಸಂವಾದ", ಅಭಿವೃದ್ಧಿ ಅಧ್ಯಯನ ಸಂಯುಕ್ತ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೨೫. ಶ್ರೀಧರ್, ಎ. "ಬಹುಮುಖಿ ಚಿಂತನೆ ವೈಚಾರಿಕ ಲೇಖನಗಳ ಸಂಗ್ರಹ", ಗೌತಮ್ ಬುಕ್ ಹೌಸ್, ಕಮಲಾಪುರ, ೨೦೧೪. ಪುಟ ೭೦-೭೪.

೨೬. ಶೈಲಜಾ ವೇಣುಗೋಪಾಲ್,"ಮಕ್ಕಳ ಅಭಿವೃದ್ಧಿ ಮತ್ತು ದಲಿತ ಮಹಿಳೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.ಪುಟ ೭೫-೮೮.

೨೭. ಚೆನ್ನಮ್ಮ, ಕೆ.ಸಿ. "ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦. ಪುಟ ೧-೩೬.

೨೮. ಬಿಪನ್ ಚಂದ್ರ, ಮೃದುಲಾ ಮುಖರ್ಜಿ, ಆದಿತ್ಯ ಮುಖರ್ಜಿ, "ಇಂಡಿಯಾ ಸಿನ್ಸ್ ಇಂಡಿಪೆಂಡೆನ್ಸ್", ಪೆಂಗ್ವಿನ್ ಬುಕ್ಸ್, ನ್ಯೂಡೆಲ್ಲಿ, ೧೯೯೯. ಪುಟ ೭೫-೮೬.

೨೯. ವೀಣಾ ಭಾಸಿನ್,"ಸ್ಟೇಟಸ್ ಆಫ್ ಟ್ರೈಬಲ್ ವುಮನ್ ಇನ್ ಇಂಡಿಯಾ - ಸ್ಟಡೀಸ್ ಆನ್ ಹೋಮ್ ಆಂಡ್ ಕಮ್ಯುನಿಟಿ ಸಿನ್ಸ್ ೨೦೦೭". ಪುಟ ೧೮-೪೪.

೩೦. ಹಿರೆನ್ನಿಯಾ ಕಲೇಶ್ ಪಿ, "ಟ್ರೈಬಲ್ ಅಡ್ಮಿಶನ್ಸ್ ಆಂಡ್ ಪ್ರಾಬ್ಲಂಸ್", ರಾಜೀವ್ ಗಾಂಧಿ ನೇಶನಲ್ ಇನ್ಸ್ಟಿಟ್ಯೂಟ್ ಆಫ್ ಯೂತ್ ಡೆವೆಲೆಪ್‌ಮೆಂಟ್, ೨೦೧೯. ಪುಟ ೨೨-೪೫.

೩೧. ವಿದ್ಯಾರ್ಥಿ, ಎಲ್.ವಿ. "ಪ್ರಾಬ್ಲಮ್ಸ್ ಆ್ಯಂಡ್ ಪ್ರೋಜೆಕ್ಟ್ಸ್ ಆಫ್ ಟ್ರೈಬಲ್ ಡೆವೆಲೆಪ್‌ಮೆಂಟ್ಸ್ ಇನ್ ಇಂಡಿಯಾ", ಇಂಡಿಯಾನ್ ಅನ್‌ತ್ರೊಪೊಲಾಜಿಕಲ್‌ಅಸೊಸಿಯೇಶನ್, ೧೯೭೨. ಪುಟ.೮೦-೯೩.

೩೨. ಗುನ್ನಾರ್ ಮಿರ್ಡಲ್,"ದ ಚಾಲೆಂಜ್ ಆಫ್ ವರ್ಲ್ಡ್ ಪವರ್ಟಿ", ಪ್ಯಾಂಥನ್‌ಬುಕ್ ಹೌಸ್, ನ್ಯೂಯಾರ್ಕ್, ೧೯೭೦. ಪುಟ ೫-೩೧೦.

೩೩. ಬಸಪ್ಪ, ಎಸ್. "ಅಭಿವೃದ್ಧಿಯ ಆಯಾಮಗಳು", ಇಂದ್ರನೀಲಮಣಿಂ ಪ್ರಕಾಶನ, ಚಿಕ್ಕೋಡಿ ೨೦೨೦. ಪುಟ ೧-೬.

೩೪. ಶ್ರೀದೇವಿ ಜೊಂಗನವರ, "ಮಹಿಳಾ ಕೃಷಿ ಕಾರ್ಮಿಕರ ಬಿಕ್ಕಟ್ಟುಗಳು ಮತ್ತು ಸಾಮಾಜಿಕ ಸ್ಥಿತಿಗತಿ", ಇಂದ್ರನೀಲಮಣಿಂ ಪ್ರಕಾಶನ, ಚಿಕ್ಕೋಡಿ ೨೦೨೦. ಪುಟ ೧೨-೧೮.

೩೫. ಜನಾರ್ದನ, "ಬಡತನದ ಪರಿಕಲ್ಪನೆ", ಅಭಿವೃದ್ಧಿ ಅಧ್ಯಯನ ವಿಭಾಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭. ಪುಟ ೧೦೬-೧೦೮.

೩೬. ಶಾಂತವೀರ ಭದ್ರಯ್ಯ, ಎಸ್.ಎಂ "ವಾಣಿಜ್ಯ ಬೆಳೆಗಳು", ಕೃಷಿ ವಿಜ್ಞಾನ ವಾಹಿನಿ, ಸಂಜಯನಗರ, ಬೆಂಗಳೂರು, ೨೦೧೩. ಪುಟ ೪೮-೫೩.

೩೭. ಚಂದ್ರಶೇಖರ್, ಟಿ.ಆರ್. "ಅಭಿವೃದ್ಧಿ ಅಧ್ಯಯನ ಸಂಯುಕ್ತ ಸಂಚಿಕೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬. ಪುಟ ೨೩-೨೬.

೩೮. ಹೊಸಮನಿ, ಎಚ್.ಬಿ. ಬಬಲಾದ, ಬಿ.ಎಂ. ಚಿತ್ತಾಪೂರ ಮತ್ತು ವಿ.ಎಸ್. ಕನ್ನೂರ, "ಮೆಣಸಿನಕಾಯಿ ಬೆಳೆ", ೧೯೮೬. ಪುಟ ೧೫-೩೦.

೩೯. ಟಿ.ಹೆಚ್.ಮೂರ್ತಿ, "ಮಾನವ ಸಂಪನ್ಮೂಲ ಅಭಿವೃದ್ಧಿ-ಕರ್ನಾಟಕದ ಒಂದು ತೌಲನಿಕ ವಿಶ್ಲೇಷಣೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦. ಪುಟ ೧೫-೩೦.

೪೦. ಚಂದ್ರ ಪೂಜಾರಿ, ಎಂ. "ಅಭಿವೃದ್ಧಿ ಸಿದ್ಧಾಂತಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭. ಪುಟ ೩೬-೬೪.

೪೧. ಮುಜಾಫರ್ ಅಸ್ಸಾದಿ, "ಜಾಗತೀಕರಣ ಮತ್ತು ನಾಗರಿಕ ಸಮಾಜ ಭಾರತದ ಸಂದರ್ಭದಲ್ಲಿ ಸವಾಲುಗಳ ನಿರ್ವಹಣೆ", ಪ್ರಸಾರಾಂಗ, ಅಭಿವೃದ್ಧಿ ಅಧ್ಯಯನ ಸಂಯುಕ್ತ ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨. ಪುಟ ೯೪-೯೭.

೪೨. ಚಂದ್ರಶೇಖರ್, ಟಿ.ಆರ್. "ಪ್ರಚಲಿತ ಕರ್ನಾಟಕದಲ್ಲಿ ಬಡತನ ಯಾಕೆ ಕಡಿಮೆಯಾಗುತ್ತಿಲ್ಲ", ಪ್ರಸಾರಾಂಗ, ಅಭಿವೃದ್ಧಿ ಅಧ್ಯಯನ ಸಂಯುಕ್ತ ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨. ಪುಟ ೫-೮.

೪೩. ಮಧುಮತಿ ಆನವೇರಿ, "ಅಸಂಘಟಿತ ವಲಯದ ಮಹಿಳಾ ಕಾರ್ಮಿಕರು - ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯ ಅಧ್ಯಯನ", ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಲ್ಲಿಸಿದ ಅಪ್ರಕಟಿತ ಸಂಶೋಧನಾ ಪ್ರಬಂಧ, ೨೦೧೭-೧೮. ಪುಟ ೮-೫೮.

೪೪. ಜನಾರ್ದನ್, "ಕರ್ನಾಟಕದಲ್ಲಿ ಗ್ರಾಮೀಣ ಆರೋಗ್ಯ", ಜೀವನ್ ಪ್ರಕಾಶನ, ಹೊಸಪೇಟೆ, ೨೦೧೮. ಪುಟ ೧೭೯-೨೦೫.

೪೫. ಅಮರ್ತ್ಯಸೇನ್, "ದ ಆರ್ಗ್ಯುಮೆಂಟೇಟಿವ್ ಇಂಡಿಯನ್", ಪೆಂಗ್ವಿನ್ ಬುಕ್ಸ್, ಲಂಡನ್, ೨೦೦೫. ಪುಟ ೨೨೦-೨೪೫.

೪೬. ಮೀರಾ ಕಾಮ್‌ದಾರ್, "ಇಂಡಿಯಾ – ಇನ್ ದ ೨೧ಸ್ಟ್ ಸೆಂಚುರಿ – ವಾಟ್ ಎವರಿವನ್ ನೀಡ್ಸ್ ಟು ನೋ", ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ, ೨೦೧೮. ಪುಟ ೧೦೭-೧೪೦.


೪೭. ಅಗರ್ವಾಲ್, ಜೆ.ಸಿ. "ದ ರೋಲ್ ಆಫ್ ಕಲ್ಚರ್ ಇನ್ ವುಮೆನ್ಸ್ ಎಂಪವರ್‌ಮೆಂಟ್, ಗೂಗಲ್ ಸ್ಕಾಲರ್, ೨೦೧೦. ಪುಟ ೩೩-೪೨.

ಅಧ್ಯಾಯ - ಮೂರು

ಅಧ್ಯಯನದ ಕ್ಷೇತ್ರ ಪರಿಚಯ

ಅಧ್ಯಾಯ – ಮೂರು

ಅಧ್ಯಯನದ ಕ್ಷೇತ್ರ ಪರಿಚಯ



ಹಾವೇರಿ ಜಿಲ್ಲೆಯ



ಸಮೀಕ್ಷೆಗೊಳಪಡಿಸಿದ ಬ್ಯಾಡಗಿ ತಾಲೂಕಿನ ನಕಾಶೆ

೩.೧ ಚಾರಿತ್ರಿಕ ಹಿನ್ನೆಲೆ

ಸಂಶೋಧನಾ ಅಧ್ಯಯನವನ್ನು ಕೈಗೊಳ್ಳುವಾಗ ಪ್ರಾದೇಶಿಕ ಚೌಕಟ್ಟನ್ನು ಗುರುತಿಸುವ ಹಿನ್ನೆಲೆಯಲ್ಲಿ ಒಂದು ಉದ್ದೇಶಿತ ಸಮಸ್ಯೆಯಲ್ಲಿ ಅಡಗಿರುವ ಸೂಕ್ಷ್ಮ ವಿಷಯಗಳ ಬಗ್ಗೆ ಕೂಲಂಕುಷವಾಗಿ ಸಂಶೋಧಕರು ತಿಳಿದುಕೊಳ್ಳುವುದು ಅತ್ಯವಶ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ವಿಷಯವನ್ನು ತಿಳಿದುಕೊಳ್ಳಲು ಈ ಅಧ್ಯಯನ ಕ್ಷೇತ್ರದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಭೌಗೋಳಿಕ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಸ್ವ-ವಿವರಗಳನ್ನು ಪ್ರಸ್ತುತಪಡಿಸುವಲ್ಲಿ ಈ ಅಧ್ಯಾಯದಲ್ಲಿ ಸಂಶೋಧಕರು ವಿವರಣೆಯನ್ನು ಹಾಗೂ ಮಾಹಿತಿಯನ್ನು ಮತ್ತು ಸಂಶೋಧನೆಗೆ ಸಂಬಂಧಿಸಿದ ವಿಷಯಗಳನ್ನು ಈ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಸರಳೀಕರಿಸುವಂತಹ ನಿವಾರಣೋಪಾಯಗಳನ್ನು ಸಂಶೋಧಕರು ಕಂಡುಕೊಂಡಿದ್ದಾರೆ.

ಸಂಶೋಧನೆಗೆ ತೆಗೆದುಕೊಂಡಿರುವ ಕ್ಷೇತ್ರದ ಅಧ್ಯಯನ ಕರ್ನಾಟಕ ರಾಜ್ಯದ ಹಾವೇರಿ ಜಿಲ್ಲೆಯ ಬ್ಯಾಡಗಿ ಇದೊಂದು ಪಟ್ಟಣ ಪಂಚಾಯತ್ ಪ್ರದೇಶವಾಗಿದ್ದು, ಬ್ಯಾಡಗಿ ಪಟ್ಟಣವು ಮೆಣಸಿನಕಾಯಿ ಮಾರುಕಟ್ಟೆಗೆ ಪ್ರಸಿದ್ಧಿ ಪಡೆದಿದೆ. ಏಕೆಂದರೆ ಬ್ಯಾಡಗಿಯಲ್ಲಿ ವಿಶ್ವಪ್ರಸಿದ್ಧ ಮೆಣಸಿನಕಾಯಿ ಮಾರುಕಟ್ಟೆಯಿದೆ. ವಿಶ್ವದಲ್ಲಿಯೇ ೨ ನೇ ದೊಡ್ಡ ಮೆಣಸಿನಕಾಯಿ ಮಾರುಕಟ್ಟೆ ಇದಾಗಿದೆ. ಈ ಮಾರುಕಟ್ಟೆಯಿಂದ ಈ ಬ್ಯಾಡಗಿ ನಗರವು ಜಗತ್ತಿನಲ್ಲೇ ಗುರುತಿಸಿಕೊಳ್ಳುತ್ತದೆ. ಈ ಮಾರುಕಟ್ಟೆಯಲ್ಲಿ ಸಾವಿರಾರು ಕಾರ್ಮಿಕರು ಪ್ರತಿದಿನ ಕೆಲಸ ಮಾಡುತ್ತಾರೆ. ಈ ಮಾರುಕಟ್ಟೆಯು ಸುತ್ತಲಿನ ಹಳ್ಳಿಗಳಿಗೆ ಅಷ್ಟೇ ಅಲ್ಲದೆ ಸುತ್ತಲಿನ ತಾಲೂಕು ಹಾಗೂ ಬೇರೆ ಜಿಲ್ಲೆಗಳ ಜನರಿಗೂ ಕೆಲಸ ಕೊಡುವ ದೊಡ್ಡ ಮಾರುಕಟ್ಟೆ ಇದಾಗಿದೆ. ಸುಮಾರು ೫೦ ರಿಂದ ೬೦ ಕಿ.ಮೀ. ದೂರದ ಊರಿನಿಂದಲೂ ಈ ಮಾರುಕಟ್ಟೆಗೆ ಕೆಲಸಕ್ಕೆ ಬಂದು ಹೋಗುತ್ತಾರೆ ಮತ್ತು ಇಲ್ಲಿನ ಮೆಣಸಿನಕಾಯಿ ಜಗತ್ತಿನ ಬೇರೆ ಬೇರೆ ದೇಶಗಳಿಗೂ ರಫ್ತಾಗುತ್ತದೆ. ಜಪಾನ್, ಜರ್ಮನಿ, ಮಲೇಷಿಯಾ, ಅಮೇರಿಕಾ, ಫ್ರಾನ್ಸ್, ರಷ್ಯಾ, ಸೌದಿ ಅರೇಬಿಯಾ ಇನ್ನೂ ಹಲವಾರು ದೇಶಗಳಿಗೆ ಈ ಮೆಣಸಿನಕಾಯಿ ಮತ್ತು ಖಾರಪುಡಿ ಸಹ ರಫ್ತಾಗುತ್ತದೆ. ಇಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಬಗ್ಗೆ ಅಧ್ಯಯನವೇ ನಮ್ಮ ಸಂಶೋಧನೆಯ ವಿಷಯವಾಗಿದೆ. ಇಲ್ಲಿನ ಶೀಥಲ ಗೃಹಗಳು ಸಹ ಅತೀ ಪ್ರಮುಖವಾದವುಗಳಾಗಿವೆ ಎನ್ನಬಹುದು. ಏಕೆಂದರೆ ವರ್ಷವಿಡಿ ಇಲ್ಲಿ ಮೆಣಸಿನಕಾಯಿಯನ್ನು ಇರಿಸಲು ತುಂಬಾ ಅನುಕೂಲವಾಗಿದೆ ಎಂದು ಹೇಳಬಹುದು.

ಬ್ಯಾಡಗಿ ತಾಲೂಕಿನ ವಿಸ್ತೀರ್ಣ ೪೩೬ ಚದರ್ ಕಿ.ಮಿ. ಹೊಂದಿದ್ದು, ಈ ತಾಲೂಕು ಸುಮಾರು ೬೬ ಹಳ್ಳಿಗಳನ್ನೊಳಗೊಂಡಿದೆ. ಹಾಗೆಯೇ ೩ ಹೋಬಳಿ ಪ್ರದೇಶಗಳನ್ನು ಹೊಂದಿದೆ.

ಬ್ಯಾಡಗಿ ತಾಲೂಕಿನ ಒಟ್ಟು ಜನಸಂಖ್ಯೆ ೧೪೪೧೦೪೦ ಇದರಲ್ಲಿ ನಗರ ಪ್ರದೇಶದ ಒಟ್ಟು ಜನಸಂಖ್ಯೆ ೩೦೦೬೩ ಪುರುಷರು ೧೫೧೫೮ ಮಹಿಳೆಯರು ೧೪೯೦೫ ಇದ್ದಾರೆ. ಹಾಗೆಯೇ ತಾಲೂಕಿನ ಹಳ್ಳಿಯ ಒಟ್ಟು ಜನಸಂಖ್ಯೆ ೧೧೧೯೭೭ ಪುರುಷರು ಹಾಗೂ ೫೮೯೬೫೧ ಹಾಗೂ ಮಹಿಳೆಯರು ೫೪೦೨೬. ಇಷ್ಟೊಂದು ಜನಸಂಖ್ಯೆಯನ್ನು ಹೊಂದಿರುವಂತಹ ತಾಲೂಕಿಗೆ ಕೆಲಸಕ್ಕೆ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯೇ ಜೀವಾಳವೆಂದು ಹೇಳಬಹುದು. ಹಾಗೆಯೇ ಬ್ಯಾಡಗಿ ಪಟ್ಟಣವು ಹಾವೇರಿ ನಗರದಿಂದ ೧೮ ಕಿ.ಮೀ. ಅಂತರದಲ್ಲಿದೆ ಮತ್ತು ರಾಷ್ಟ್ರೀಯ ಹೆದ್ದಾರಿ ಬ್ಯಾಡಗಿ ಪಟ್ಟಣದಿಂದ ೫ ಕಿ.ಮಿ. ದೂರದಲ್ಲಿದೆ ಮತ್ತು ರಾಣೇಬೆನ್ನೂರು ನಗರವು ಬ್ಯಾಡಗಿಯಿಂದ ೧೯ ಕಿ.ಮೀ. ದೂರದಲ್ಲಿದೆ, ಹಿರೇಕೆರೂರು ೨೧ ಕಿ.ಮೀ, ಹಾನಗಲ್ ೪೦ ಕಿ.ಮೀ, ಸವಣೂರು ೪೨ ಕಿ.ಮೀ. ಕೂಡ ಬ್ಯಾಡಗಿಯ ನೆರೆಯ ತಾಲೂಕುಗಳಾಗಿವೆ. ೩ ಕಿ.ಮೀ. ದೂರದಲ್ಲಿ ರೈಲು ಮಾರ್ಗ ಹಾದು ಹೋಗಿದೆ. ಬ್ಯಾಡಗಿ ತಾಲೂಕಿನಲ್ಲಿ ಒಟ್ಟು ೬೫ ಗ್ರಾಮಗಳು ಮತ್ತು ಒಂದು ಪಟ್ಟಣವಿದ್ದು ಪಟ್ಟಣದ ಒಟ್ಟು ಜನಸಂಖ್ಯೆ ೨೫,೬೬೩ ಇದೆ. ಅದರಲ್ಲಿ ಪುರುಷರ ಸಂಖ್ಯೆ ೧೩,೧೨೪ ಮತ್ತು ಮಹಿಳೆಯರ ಸಂಖ್ಯೆ ೧೨,೫೪೯ ಒಟ್ಟು ತಾಲೂಕಿನ ವಿಸ್ತೀರ್ಣ ೪೩೬ ಚ.ಕಿ.ಮೀ. ಇಲ್ಲಿ ವ್ಯಾಪಾರದಷ್ಟು ಒಕ್ಕಲುತನಕ್ಕೆ ಪ್ರಾಮುಖ್ಯತೆಯಿದ್ದು, ಬ್ಯಾಡಗಿಯು ಕರ್ನಾಟಕದ ಅತ್ಯಂತ ಸುಪ್ರಸಿದ್ಧ ಮೆಣಸಿನಕಾಯಿ ವ್ಯಾಪಾರಿ ಕೇಂದ್ರವಾಗಿದೆ. ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬ್ಯಾಡಗಿ ಮೆಣಸಿನಕಾಯಿ ಎಂದೇ ಪ್ರಖ್ಯಾತಿಯನ್ನು ಹೊಂದಿದೆ.

ಭಾರತವು ಆಧುನಿಕ ಜಗತ್ತಿಗೆ ಸಂಯೋಜನೆಗೊಳ್ಳುತ್ತಿದ್ದು, ಇದು ಇಂದಿನ ದಿನದಲ್ಲಿ ಹೆಚ್ಚಿನ ವ್ಯಾಪಾರ (ಗ್ಯಾಟ್) ಮುಕ್ತತೆಯೊಂದಿಗೆ ಪ್ರಾರಂಭವಾಗಿದ್ದು, ಬೆಳೆಯುತ್ತಿರುವ ಜಾಗಿತಿಕ, ಆರ್ಥಿಕ ಏಕೀಕರಣಕ್ಕೆ ಪರಸ್ಪರ ಅವಲಂಬನೆಯಾಗಿದೆ. ತಾಂತ್ರಿಕ ಬೆಳವಣಿಗೆಯು ವೇಗವಾಗಿ ಹರಡುತ್ತಿದ್ದು, ಜನರ ಕಲಿಕಾ ವಿಧಾನ ಮತ್ತು ಸಂವಹನ ವಿಧಾನ ತೀವ್ರವಾಗಿ ಹೆಚ್ಚುತ್ತಿದೆ. ಜನರು ಉತ್ತಮ ಆರೋಗ್ಯವನ್ನು ಹೊಂದುವಲ್ಲಿ ಯಶಸ್ವಿಯಾಗಿದ್ದಾರೆ. ಸಂಯುಕ್ತ ರಾಷ್ಟ್ರದ ನೀತಿಗಳೂ ಕೂಡ ಮಹಿಳೆಯರಿಗೆ ಸಮಾನ ಅವಕಾಶ ಸಮಗ್ರ ಹಾಗೂ ಗುಣಮಟ್ಟದ ಆರೋಗ್ಯ ರಕ್ಷಣೆ ನೀಡುವಲ್ಲಿ ಶ್ರಮಿಸುತ್ತಿವೆ. ಭಾರತದಲ್ಲಿ ಪುರುಷರಿಗಿಂತ ಮಹಿಳೆಯರಿಗೆ ಆರೋಗ್ಯ ರಕ್ಷಣೆ ನೀಡುವಲ್ಲಿ ಅನಿವಾರ್ಯತೆ ಇದೆ. ಭಾರತದಲ್ಲಿ ೨೫% ಜನ ಮಹಿಳೆಯರು ಮಾತ್ರ ತಮ್ಮ ಆರೋಗ್ಯದ ಬಗ್ಗೆ ಕಾಳಜಿಯನ್ನು ವಹಿಸಿದ್ದಾರೆ. ಭಾರತವು ಪ್ರಪಂಚದಲ್ಲಿ ಭೌಗೋಳಿಕವಾಗಿ ೭ ನೇ ಅತಿ ದೊಡ್ಡ ರಾಷ್ಟ್ರವಾಗಿದೆ. ಜನಸಂಖ್ಯೆಯಲ್ಲಿ ಮೊದಲನೆಯದಾಗಿ ಚೀನಾ ಇದ್ದು, ಎರಡನೇ ಸ್ಥಾನವನ್ನು ನಮ್ಮ ದೇಶವು ಹೊಂದಿದೆ. ಉತ್ತರದಲ್ಲಿ ಹಿಮಾಲಯ

ಪ್ರದೇಶವಿದ್ದು, ಧಕ್ಷಿಣದಲ್ಲಿ ಹಿಂದೂ ಮಹಾಸಾಗರವಿದೆ. ಪೂರ್ವದಲ್ಲಿ ಅರಬ್ಬೀ ಸಮುದ್ರ ಮತ್ತು ಪಶ್ಚಿಮದಲ್ಲಿ ಬಂಗಾಳ ಕೊಲ್ಲಿ ಸಾಗರಗಳಿವೆ.

ಕೆಲವು ಸಣ್ಣಗುಡ್ಡಗಳನ್ನು ಬಿಟ್ಟರೆ ಬ್ಯಾಡಗಿ ತಾಲ್ಲೂಕಿನ ಬಹುಭಾಗ ಸುಮಾರು ಸಮತಟ್ಟಾದ ಪ್ರದೇಶ. ಈ ತಾಲ್ಲೂಕಿನ ಪಶ್ಚಿಮ ಭಾಗ ಮಸಾರಿ ಹಾಗೂ ಮಧ್ಯಭಾಗ ಎರೆಮಣ್ಣಿನಿಂದ ಕೂಡಿವೆ. ಎರೆ ಭೂಭಾಗ ಮಾತ್ರ ವ್ಯವಸಾಯ ಯೋಗ್ಯವಾಗಿದ್ದು, ರೈತರು ವ್ಯವಸಾಯಕ್ಕೆ ಮಳೆಯನ್ನೇ ಅವಲಂಬಿಸಿಕೊಂಡಿದ್ದಾರೆ. ಈ ತಾಲ್ಲೂಕಿನಲ್ಲಿ ದೊಡ್ಡ ನದಿಗಳಿಲ್ಲ, ಸಣ್ಣ ಹಳ್ಳಗಳು ಮಳೆಗಾಲದಲ್ಲಿ ತುಂಬಿ ಹರಿದು ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ಕೆರೆ, ಬಾವಿ ಇಲ್ಲಿನ ವ್ಯವಸಾಯಕ್ಕೆ ಆಧಾರ. ಸುಮಾರು ೭೧೧೨ ಎಕರೆಗಳಿಗೆ ಕೆರೆ, ಬಾವಿಗಳಿಂದ ನೀರನ್ನು ಒದಗಿಸಿಕೊಳ್ಳಲಾಗಿದೆ. ವಾರ್ಷಿಕ ಸರಾಸರಿ ಮಳೆ ೬೫೪ ಮಿ.ಮೀ. ಒಟ್ಟು ೧,೦೭,೮೭೪ ಎಕರೆ ಭೂಮಿಯಲ್ಲಿ ೮೧,೬೩೨ ಎಕರೆಯಲ್ಲಿ ವ್ಯವಸಾಯ ಮಾಡಿದ್ದು ೧೦,೨೪೯ ಎಕರೆ ಅರಣ್ಯ ಪ್ರದೇಶವು ೪೦೦೦ ಎಕರೆ ಹುಲ್ಲುಗಾವಲು ಇದೆ. ೫೦,೯೨ ಎಕರೆಗಳಲ್ಲಿ ಆಹಾರ ಧಾನ್ಯಗಳನ್ನು ೨೭,೫೧೬ ಎಕರೆಗಳಲ್ಲಿ ಆಹಾರೇತರ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಸಕಾಲದಲ್ಲಿ ಮಳೆ ಆದರೆ ಮೆಣಸಿನಕಾಯಿ, ಹತ್ತಿ, ರಾಗಿ, ಬಿಳಿಜೋಳ, ಶೇಂಗಾ, ಸಾವೆ ಹಾಗೂ ಅಲ್ಪಪ್ರಮಾಣದಲ್ಲಿ ಬತ್ತವನ್ನು ಬೆಳೆಯುತ್ತಾರೆ.

ಇಲ್ಲಿನ ಜನರ ಮುಖ್ಯ ಉದ್ಯೋಗ ಒಕ್ಕಲುತನವಾಗಿದ್ದು, ಮುಂಗಾರು ಹಾಗೂ ಹಿಂಗಾರು ಬೆಳೆಗಳನ್ನು ಬೆಳೆಯುವರು. ತಾಲ್ಲೂಕಿನಾದ್ಯಂತ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಭತ್ತ, ಕಬ್ಬು, ಜೋಳ, ಬಿಳಿಜೋಳ, ಹತ್ತಿ ಮತ್ತು ದ್ವಿದಳ ಧಾನ್ಯಗಳು. ಕೆಲವೊಂದು ಸೀಮಿತ ಪ್ರದೇಶಗಳಲ್ಲಿ ತೆಂಗು, ಬಾಳೆ ಮತ್ತು ವೀಳ್ಯದೆಲೆಗಳ ತೋಟಗಳನ್ನು ಕಾಣಬಹುದಾಗಿದೆ ಹಾಗೂ ಮುಂದಿನ ಕೋಷ್ಠಕದಲ್ಲಿ ಏಕದಳ, ದ್ವಿದಳ ಧಾನ್ಯಗಳನ್ನು ಸಂಶೋಧಕರು ತೋರಿಸಿದ್ದಾರೆ.

ಬ್ಯಾಡಗಿ ತಾಲೂಕಿನಲ್ಲಿ ತಾಲೂಕು ಸರ್ಕಾರಿ ಆಸ್ಪತ್ರೆ ಬ್ಯಾಡಗಿ ಪಟ್ಟಣದಲ್ಲಿದೆ. ಇಲ್ಲಿ ತಾಲೂಕಿನ ಪ್ರತಿಯೊಬ್ಬರಿಗೂ ಈ ಆಸ್ಪತ್ರೆಯ ಸೌಲಭ್ಯಗಳು ದೊರೆಯುತ್ತವೆ. ಈ ತಾಲ್ಲೂಕು ಆಸ್ಪತ್ರೆಯು ಹಲವಾರು ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿದ್ದು ಉಚಿತವಾಗಿ ದೊರೆಯುತ್ತವೆ. ಆಸ್ಪತ್ರೆಯಲ್ಲಿ ಪ್ರತಿಯೊಂದು ಖಾಯಿಲೆಗಳಿಗೆ ಪ್ರತ್ಯೇಕ ವೈದ್ಯರಿದ್ದಾರೆ. ಮತ್ತು ಖಾಸಗಿ ಆಸ್ಪತ್ರೆಗಳು ಅಷ್ಟೊಂದು ಸುಸಜ್ಜಿತವಾಗಿಲ್ಲ. ಹೀಗಾಗಿ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಸರ್ಕಾರಿ ಆಸ್ಪತ್ರೆಯ ವೈದ್ಯಕೀಯ ಉಪಚಾರವನ್ನೆ ಪಡೆಯಬೇಕಾಗಿರುತ್ತದೆ. ಮುಂದುವರೆದು ದೊಡ್ಡ ಖಾಯಿಲೆಗಳೇನಾದರೂ ಬಂದಲ್ಲಿ ಹಾವೇರಿ ಇಲ್ಲವೆ ಹತ್ತಿರದ ರಾಣೇಬೆನ್ನೂರು ಆಸ್ಪತ್ರೆಗಳಿಗೆ ಕಾರ್ಮಿಕರು ತೆರಳುತ್ತಾರೆ.

ಬ್ಯಾಡಗಿ ತಾಲೂಕು ಹಲವಾರು ಧರ್ಮ, ಜಾತಿಗಳನ್ನು ಒಳಗೊಂಡಿದ್ದು ಎಲ್ಲಾ ಸಂಸ್ಕೃತಿಯನ್ನು ಕಾಣಬಹುದು. ಇಲ್ಲಿನ ಪ್ರಮುಖ ಪ್ರವಾಸಿ ತಾಣಗಳು ಹಾಗೆಯೇ ಐತಿಹಾಸಿಕ ಸ್ಥಳಗಳು ಎಂದರೆ ಬ್ಯಾಡಗಿ ಪಟ್ಟಣದ ಪ್ರಮುಖ ಐತಿಹಾಸಿಕ ಸ್ಥಳ ಎಂದರೆ ವೀರಭದ್ರೇಶ್ವರ ದೇವಾಲಯ. ಇದು ತುಂಬಾ ಹಳೆಯ ದೇವಾಲಯವಾಗಿದ್ದು, ಈ ದೇವಾಲಯಕ್ಕೆ ಬ್ಯಾಡಗಿ ಅಷ್ಟೇ ಇತಿಹಾಸವನ್ನು ಹೊಂದಿದೆ ಎನ್ನಬಹುದು. ಈ ದೇವಾಲಯದ ಜಾತ್ರೆಯು ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಬ್ಯಾಡಗಿ ಪಟ್ಟಣದಲ್ಲಿ ದೊಡ್ಡ ಜಾತ್ರೆಯೆಂದೇ ಹೇಳಬಹುದು. ಹಾಗೆಯೇ ಮಾರುಕಟ್ಟೆಯೊಳಗೆ ಶ್ರೀ ಸಿದ್ದೇಶ್ವರ ದೇವಾಲಯವಿದೆ. ಈ ಸಿದ್ದೇಶ್ವರ ದೇವಾಲಯವು ಮೆಣಸಿನಕಾಯಿ ಮಾರುಕಟ್ಟೆಯ ಜನರ ಪ್ರಮುಖ ಆರಾಧ್ಯ ದೈವವೆಂದೆ ಹೇಳಬಹುದು. ಹೀಗೆ ಹಲವಾರು ದೇವಾಲಯಗಳು ಪಟ್ಟಣದೊಳಗಿವೆ.

ಕ್ರಿಸ್ತಶಕದ ಕಾಲದಿಂದಲೂ ಬ್ಯಾಡಗಿ ಕ್ಷೇತ್ರವು ವ್ಯಾಪಾರ ಮತ್ತು ವಹಿವಾಟುಗಳಿಗೆ ಪ್ರಸಿದ್ದಿಯನ್ನು ಪಡೆದಿದೆ ಎಂಬುದನ್ನು ಅನೇಕ ಐತಿಹಾಸಿಕ ದಾಖಲೆಗಳ ಮೂಲಕ ಕಂಡುಕೊಳ್ಳಬಹುದಾಗಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ಈ ಬ್ಯಾಡಗಿ ಎಂಬ ಪಟ್ಟಣವನ್ನೇ ತಮ್ಮ ಆಡಳಿತಕ್ಕೆ ಸೇರಿಸಿಕೊಂಡಿದ್ದರು ಎಂಬ ನಿದರ್ಶನವನ್ನು ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ಕ್ರಿ.ಶ. ೭ ನೇ ಶತಮಾನದಲ್ಲಿ ಬದಾಮಿ ಚಾಲುಕ್ಯರ ಪ್ರಸಿದ್ಧ ಅರಸನಾದ ೨ ನೇ ಪುಲಕೇಶಿಯು ಈ ಬ್ಯಾಡಗಿಯನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡಿದ್ದನು. ಅಷ್ಟೇ ಅಲ್ಲದೆ ರಾಷ್ಟ್ರಕೂಟರು ಕೂಡಾ ಈ ಬ್ಯಾಡಗಿ ನಾಡನ್ನು ಬದಾಮಿ ಚಾಲುಕ್ಯರೊಂದಿಗೆ ಸೆಣಸಾಡಿ ಗೆದ್ದುಕೊಂಡ ನಂತರ ೧೦೦ ವರ್ಷಗಳ ಸತತವಾಗಿ ಆಳ್ವಿಕೆ ನಡೆಸಿದ್ದು ಕಂಡುಬರುತ್ತದೆ. ಇದಾದ ನಂತರ ೧೦ ನೇ ಶತಮಾನದಲ್ಲಿ ಚಾಲುಕ್ಯರ ಪ್ರಸಿದ್ಧ ಅರಸನಾದ ಇಮ್ಮಡಿ ತೈಲಪನು ರಾಷ್ಟ್ರಕೂಟರನ್ನು ಪರಾಭವಗೊಳಿಸಿ ಕಳೆದುಕೊಂಡಿದ್ದ ಈ ನಾಡನ್ನು ಮರಳಿ ವಶಪಡಿಸಿಕೊಂಡು ಮತ್ತೆ ಒಡೆತನವನ್ನು ಪುನರಾರಂಭಿಸಿದನು.

ಮತ್ತೆ ಕೆಲವು ವರ್ಷಗಳು ಆದ ನಂತರ ಚಾಲುಕ್ಯ ತೈಲಪನು ತನ್ನ ಮಾಂಡಲೀಕರಾದ ಗುತ್ತಲದ ಗುತ್ತರಿಗೆ ಬ್ಯಾಡಗಿ ಒಡೆತನವನ್ನು ಬಿಟ್ಟುಕೊಟ್ಟನು. ಅದಾದ ನಂತರ ಕರಾವಳಿ ಪ್ರದೇಶಗಳ ಕಡೆಯಿಂದ ಲವಣ ವ್ಯಾಪಾರಿಗಳು ಎತ್ತು, ಆಕಳುಗಳ ಮೇಲೆ ಉಪ್ಪು, ಮಸಾಲೆ ಸಾಮಾನುಗಳನ್ನು ಹೇರಿಕೊಂಡು ಬ್ಯಾಡಗಿ ಮೂಲಕ ಬಳ್ಳಾರಿ ಕಡೆಯ ಬಯಲು ಸೀಮೆಗೆ ಹೋಗುವಾಗ ಇಲ್ಲಿಯೇ ಬೀಡು ಬಿಡುತ್ತಿದ್ದರಿಂದ ಬ್ಯಾಡಗಿಯು ಗುತ್ತರಿಗೆ ಹೆಚ್ಚು ಉಪಯುಕ್ತವಾಗಿತ್ತು. ಇದರಿಂದ ಕ್ರಿ.ಶ.೧೯೦೨ ರ ಹೊತ್ತಿಗೆ ಬ್ಯಾಡಗಿಯು ಕೆಳದಿ ನಾಯಕರ ರಾಜ್ಯಕ್ಕೆ ಸೇರಿತ್ತೆಂದು ಶಿಲಾಶಾಸನಗಳಲ್ಲಿ ಉಲ್ಲೇಖವಿದೆ ಎಂದು ಕಂಡುಬರುತ್ತದೆ. ಇಲ್ಲಿ

ಮಲೆನಾಡು ಪ್ರದೇಶಗಳಿಂದ ಅನೇಕ ರೈತ ವರ್ಗದವರು ತಾವು ತಮ್ಮ ಭೂಮಿಯಲ್ಲಿ ಬೆಳೆಯುತ್ತಿದ್ದ ಅಡಕೆ, ಭತ್ತ, ಕಬ್ಬು ಇನ್ನೂ ಮುಂತಾದ ಧವಸ, ದಾನ್ಯಗಳನ್ನು ಇಲ್ಲಿ ಮಾರಾಟ ಮಾಡಿ ಇಲ್ಲಿಂದ ಮೆಣಸಿನಕಾಯಿ ಮಸಾಲೆಯ ಪದಾರ್ಥ ವಸ್ತುಗಳು ಮತ್ತು ಕಿರಾಣಿ ಪದಾರ್ಥಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಹೀಗಾಗಿ ಅಂದಿನ ಕಾಲದಿಂದಲೂ ಬ್ಯಾಡಗಿ ಸುಪ್ರಸಿದ್ಧ ವಾಣಿಜ್ಯ ಕೇಂದ್ರವಾಗಿತ್ತು. ಇದಾದನಂತರ ಮತ್ತೆ ಮಧ್ಯಕಾಲಿನ ಭಾರತ ಇತಿಹಾಸದ ಸಮಯದಲ್ಲಿ ಕರ್ನಾಟಕ ಮುಸ್ಲಿಂರ ಹತೋಟಿಯಲ್ಲಿತ್ತು. ಮತ್ತೆ ೧೮೬೫ ರ ಅವಧಿಯ ನಂತರ ಬ್ಯಾಡಗಿಯು ಬಿಜಾಪುರ ಆದಿಲ್‌ಶಾಹಿಯ ಆಡಳಿತಕ್ಕೆ ಸೇರಿತ್ತು. ಆ ಅವಧಿಯಲ್ಲಿ ಬ್ಯಾಡಗಿಯು ಚಂದ್ರಗುತ್ತಿ ಪ್ರಾಂತಕ್ಕೆ ಸೇರಿ **'ಸಂತೆಬೆನ್ನೂರು'** ಕೆಂಗಪ್ಪ ನಾಯಕನ ಅಂಕಿತದಲ್ಲಿತ್ತು. ಈ ಅರಸನು ಇಲ್ಲಿಯ ಪ್ರಸಿದ್ಧ ದೇವರುಗಳಾದ ಗೋಣಿ ಬಸವೇಶ್ವರ ಮತ್ತು ಸಿದ್ಧರಾಮೇಶ್ವರ ದೇವರುಗಳಿಗೆ ಕೆಲವು ಭೂಮಿಗಳನ್ನು ಪೂಜಾ ವಸ್ತುಗಳ ಉಪಯೋಗಕ್ಕಾಗಿ ದಾನವಾಗಿ ನೀಡಿದ್ದರು.

ಮುಂದೆ ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಆ ಪ್ರದೇಶವನ್ನು ವಿಜಯನಗರದ ಅರಸರ ಆಳ್ವಿಕೆಗೆ ಸೇರಿದ ಪ್ರದೇಶವಾಗಿತ್ತು. ವಿಜಯನಗರ ಸಾಮ್ರಾಜ್ಯ ಪತನದ ನಂತರ ಮತ್ತೆ ಆ ಪ್ರದೇಶ ಮುಸ್ಲಿಂರ ಪ್ರಭಾವದಿಂದಾಗಿ ಸವಣೂರು ನವಾಬನ ಆಳ್ವಿಕೆಗೆ ಒಳಪಟ್ಟಿತ್ತು. ೧೯೧೮ ರ ಅವಧಿಯಲ್ಲಿ ಬ್ಯಾಡಗಿಯು ಬ್ರಿಟೀಷರ ಆಡಳಿತಕ್ಕೆ ಒಳಪಟ್ಟಿತ್ತು. ೧೮೫೭ ರಲ್ಲಿ ಸಿಪಾಯಿ ದಂಗೆಯ ನಂತರ ಬ್ಯಾಡಗಿಯು ಈಗಿನ ಧಾರವಾಡ ಜಿಲ್ಲೆಯ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು. ಈ ಊರಿನ ವ್ಯಾಪಾರದ ಸ್ಥಿತಿಗತಿಯು ಉತ್ತಮವಾಗಿ ಸಾಗುತ್ತಿತ್ತು. ಒಂದನೂರು ವರ್ಷ ಬ್ಯಾಡಗಿ ಒಂದು ಪ್ರಸಿದ್ಧ ಪಡಮೂಲಿ ವ್ಯಾಪಾರ ಕೇಂದ್ರವಾಗಿದ್ದಿತು. ಶಿವಮೊಗ್ಗ, ಸಾಗರ, ಶಿರ್ಶಿಗಳಿಂದ ಅಡಕಿ, ಭತ್ತ, ಬೆಲ್ಲ, ಮೆಣಸಿನಕಾಯಿ ಮುಂತಾದ ವಸ್ತುಗಳು ಮಾರಾಟಕ್ಕೆ ಬರುತ್ತಿದ್ದವು. ಇವುಗಳ ರಾಶಿಯಿಂದ ಮಾರುಕಟ್ಟೆಯಲ್ಲಿ ನಡೆದಾಡಲೂ ಜಾಗವಿರುತ್ತಿರಲಿಲ್ಲ ಇದಲ್ಲದೆ ಕಿರಾಣಿ ವ್ಯಾಪಾರಕ್ಕೂ ಪ್ರಸಿದ್ಧವಾಗಿತ್ತು. ದಾವಣಗೆರೆ, ರಾಣೇಬೆನ್ನೂರು, ಹಾವೇರಿ ಮುಂತಾದ ನಗರದ ವ್ಯಾಪಾರಸ್ತರು ಇಲ್ಲಿಂದ ಕಿರಾಣಿ ವಸ್ತುಗಳನ್ನು ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದರೆಂದರೆ ಈಗಿನ ಜನರು ನಂಬಲಾರರು. ಇನ್ನು ಮೆಣಸಿನಕಾಯಿಗಂತೂ ಇಡೀ ಭಾರತ ದೇಶದಲ್ಲಿಯೇ ಪ್ರಸಿದ್ಧವಾಯಿತು.

ಹೊರನಾಡಿನ ವ್ಯಾಪಾರಸ್ತರು ಸಾರ್ವಜನಿಕರು ಬ್ಯಾಡಗಿಯನ್ನು **"ಬ್ಯಾಡಗಿ ರೆಡ್ ಚಿಲ್ಲೀಸ್"** ಎಂದು ಅಭಿಮಾನದಿಂದ ಕರೆಯುತ್ತಿದ್ದರು. ಇದರಿಂದ ಈ ಮೆಣಸಿನಕಾಯಿ ದೇಶದ ವಿದೇಶದ ಮೂಲೆ ಮೂಲೆಗೂ ರೇಲ್ವೆ ವಾಗೀನುಗಳ ಮೂಲಕ ರಫ್ತಾಗುತ್ತಿದ್ದವು.

ಬ್ಯಾಡಗಿ ತಾಲ್ಲೂಕಿನ ಹಿಂದಿನ ಮೂಲ ನಿವಾಸಿಗಳು ದ್ರಾವಿಡರಾಗಿದ್ದರು. ಆರ್ಯರ ಸಂಪರ್ಕದಿಂದ ಹೊಸ ಮಳಿಗೆ ಉದ್ಭವಿಸಿತ್ತು. ಪುರಾತನ ಕಾಲದಲಿ ಜೈನರು ಸಹ ಬ್ಯಾಡಗಿಗೆ ಬಂದು ಇಲ್ಲಿಯ ಕೆಲವು ಹಳ್ಳಿಗಳಲ್ಲಿ ಇಂದಿಗೂ ವಾಸಿಸುತ್ತಿದ್ದಾರೆ. ಇಲ್ಲಿ ವೀರಶೈವ ಧರ್ಮವು ಪ್ರಭಲವೂ, ಪ್ರಭಾವಿಯೂ ಆಗಿರುವುದು. ಇವರೆಲ್ಲರಿಗೂ ದೇವರಲ್ಲಿ ವಿಶೇಷ ಭಕ್ತಿ ಇಂದಿನ ಬ್ಯಾಡಗಿ ತಾಲೂಕು ಸರ್ವಧರ್ಮೀಯರಿಗೂ ಆಶ್ರಯ ತಾಣವಾಗಿದ್ದು, ಎಲ್ಲರೂ ಸೌಹಾರ್ದ, ಸುಮಧುರ ಬಾಂಧವ್ಯದೊಂದಿಗೆ ಸುಖಕರ ಬದುಕನ್ನೇ ಸಾಗಿಸುತ್ತಿದ್ದಾರೆ.

ಬ್ಯಾಡಗಿ ತಾಲೂಕಿನ ಪ್ರಮುಖ ಪ್ರವಾಸಿ ತಾಣ ಹಾಗೂ ಐತಿಹಾಸಿಕ ಸ್ಥಳವೆಂದರೆ ಕನಕದಾಸರ ಕಾಗಿನೆಲೆ. ಈ ಸ್ಥಳ ದಾಸರ ಕಾಲದಿಂದಲೂ ಹೆಚ್ಚು ಪ್ರಸಿದ್ಧಿಯನ್ನು ಹೊಂದಿರುವಂತಹ ಸ್ಥಳ ಅಂದರೆ ಅಂದಿನ ದಿನಮಾನದಲ್ಲೇ ದಾಸ ಶ್ರೇಷ್ಠ ಕನಕದಾಸರು ಈ ಕಾಗಿನೆಲೆಯಲ್ಲಿ ಜಾತಿ ಮತಗಳನ್ನು ತೆಗೆಯಲು ಪ್ರಮುಖ ಚಳುವಳಿಯನ್ನೇ ಮಾಡಿರುವಂತಹ ಕ್ಷೇತ್ರ ಇದಾಗಿದೆ. ಇಲ್ಲಿ ಕನಕದಾಸರ ಸಮಾಧಿ ಇದೆ ಮತ್ತು ಜಿಲ್ಲೆಯಲ್ಲೇ ಬಹುದೊಡ್ಡದಾದ ಉದ್ಯಾನವನ ಇದೆ. ಜಿಲ್ಲೆಯ ಮತ್ತು ಬ್ಯಾಡಗಿ ತಾಲೂಕಿನ ಜನತೆಗೆ ಇದೊಂದು ಪ್ರಮುಖ ಐತಿಹಾಸಿಕ ಮತ್ತು ಪ್ರವಾಸಿ ತಾಣವೆಂದು ಹೇಳಬಹುದು. ಬ್ಯಾಡಗಿ ತಾಲೂಕಿನ ಮತ್ತೊಂದು ಪ್ರಮುಖ ಐತಿಹಾಸಿಕ ಸ್ಥಳ ಎಂದರೆ ಪಟ್ಟಣದಿಂದ ೫ ಕಿ.ಮೀ. ದೂರದಲ್ಲಿರುವ ಕದರಮಂಡಲಗಿ ಶ್ರೀ ಕಾಂತೇಶಸ್ವಾಮಿ ದೇವಾಲಯ. ಇದು ಸುಮಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಈ ದೇವಸ್ಥಾನಕ್ಕೆ ಬಹು ದೂರದಿಂದ ದೇವರ ದರ್ಶನಕ್ಕೆ ಆಗಮಿಸುತ್ತಾರೆ. ಪ್ರತಿವರ್ಷ ಇಲ್ಲಿ ಜಾತ್ರೋತ್ಸವ ನಡೆಯುತ್ತದೆ ಹಾಗೂ ಪ್ರತಿವರ್ಷ ನವ್ಹೆಂಬರ್ ತಿಂಗಳಲ್ಲಿ ಕಾಂತೇಶಸ್ವಾಮಿಯ ತೆಪ್ಪೋತ್ಸವ ಜರುಗುತ್ತದೆ. ಈ ತೆಪ್ಪೋತ್ಸವಕ್ಕೆ ಸಾವಿರಾರು ಜನರು ಆಗಮಿಸುತ್ತಾರೆ. ಈ ದೇವಸ್ಥಾನವು ತಾಲೂಕಿನಲ್ಲೇ ಬಹು ದೊಡ್ಡ ಗೋಪುರವನ್ನು ಹೊಂದಿರುವ ದೇವಾಲಯವಾಗಿದೆ.

ಪ್ರಸ್ತುತ ಅಧ್ಯಯನವು ಆರೋಗ್ಯ ಕ್ಷೇತ್ರದ ಮೇಲೆ ಹೆಚ್ಚು ಗಮನಹರಿಸುತ್ತಾ ಆರೋಗ್ಯದ ಅಭಿವೃದ್ಧಿಗೆ ಪೂರಕವಾದ ಅಂಶವನ್ನು ಮನಗಂಡು ಈ ಸಂಶೋಧನೆಯನ್ನು ಕೈಗೊಂಡಿದೆ.

೩.೨ ಭೌಗೋಳಿಕ ಹಿನ್ನೆಲೆ

ಬ್ಯಾಡಗಿ ತಾಲೂಕು ಉತ್ತರ ಅಕ್ಷಾಂಶ ೧೪೦-೧೫೦ ಪೂರ್ವದಲ್ಲಿ ಪೂರ್ವ ರೇಖಾಂಶ ೭೫೦-೭೬೦ ಮಧ್ಯದಲ್ಲಿ ಬರುತ್ತದೆ. ಇದು ಸಮುದ್ರ ಮಟ್ಟದಿಂದ ೬೨೯ ಮೀ ಎತ್ತರದಲ್ಲಿದೆ. ಮಲೆನಾಡು, ಗಡಿನಾಡು ಮತ್ತು ಬೆಳವಲುಗಳ ಸಮ್ಮಿಶ್ರಿತ ವಲಯದಲ್ಲಿ ಬರುತ್ತದೆ. ಸುಪ್ರಸಿದ್ಧ ಅರಣ್ಯ, ಗುಡ್ಡ-ಬೆಟ್ಟ, ಕೆರೆ, ಕಾಲುವೆ ಮುಂತಾದ ನೈಸರ್ಗಿಕ ಸುಂದರ ತಾಣಗಳನ್ನು ಹೊಂದಿರದೇ ಇದ್ದರೂ ಸಹ್ಯಾದ್ರಿ ಪರ್ವತ ಪ್ರದೇಶದಲ್ಲಿ ಹರಡಿಕೊಂಡಿದೆ.

ಬ್ಯಾಡಗಿ ತಾಲೂಕ ಉಷ್ಣವಲಯ ಮಾನ್ಸೂನ್ ವಾಯುಗುಣ ಹೊಂದಿದೆ. ಜೂನ್‌ನಿಂದ ನವ್ಹಂಬರ ತಿಂಗಳವರೆಗೆ ತಂಪು ಹವೆ ಹಾಗೂ ಅಕ್ಟೋಬರ್ ಮತ್ತು ನವ್ಹೆಂಬರ್ ತಿಂಗಳಲ್ಲಿ ಒಣ ಹವೆ ಹಾಗೂ ಉಳಿದ ತಿಂಗಳುಗಳಲ್ಲಿ ಉಷ್ಣ ಹವಾಮಾನದಿಂದ ಕೂಡಿರುತ್ತದೆ. ತಾಲೂಕಿನ ಸರಾಸರಿ ಉಷ್ಣತೆ ೩೦೦ ಸೆಲ್ಸಿಯಸ್ ಇರುತ್ತದೆ.

೨೦೧೧ ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಹಾವೇರಿ ಜಿಲ್ಲೆಯು ಒಟ್ಟು ಜನಸಂಖ್ಯೆಯು ೧೫,೯೭,೬೬೮ ಆಗಿದ್ದು, ಇದರಲ್ಲಿ ಗಂಡಸರು ೮,೧೯,೧೨೮ ಹಾಗೂ ಹೆಂಗಸರು ೭,೭೮,೫೪೦ ಇದ್ದಾರೆ. ತಾಲೂಕುವಾರು ಜನಸಂಖ್ಯೆಗೆ ಹೋಲಿಸಿದಾಗ ಬ್ಯಾಡಗಿ ತಾಲೂಕು ೭ ಸ್ಥಾನದಲ್ಲಿದೆ.

೨೦೧೧ ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯ ಜನಸಾಂದ್ರತೆಯು ಪ್ರತಿ ಚ.ಕಿ.ಮಿ.ಗೆ ೪೫೦ ಆಗಿದ್ದು, ಕರ್ನಾಟಕದಲ್ಲಿ ೨ ನೇ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ೮,೨೫,೦೯೧ ಜನರು ಅಕ್ಷರಸ್ಥರಾಗಿದ್ದು, ಇದರಲ್ಲಿ ೪,೬೫,೬೦೩ ಗಂಡಸರು, ೩,೫೯,೪೮೮ ಹೆಂಗಸರು ಆಗಿರುತ್ತಾರೆ. ಜಿಲ್ಲಾ ಸಾಕ್ಷರತಾ ಪ್ರಮಾಣವು ೬೭% ರಷ್ಟಿದ್ದು, ಇದು ಕರ್ನಾಟಕದಲ್ಲಿ ಮೊದಲ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ೦-೬ ವರ್ಷದ ಒಳಗಿನ ಮಕ್ಕಳ ಸಂಖ್ಯೆ ೧,೪೧,೧೧೨ ಆಗಿದ್ದು, ಇದರಲ್ಲಿ ೭೨,೬೧೩ ಬಾಲಕರು, ಮತ್ತು ೬೮,೪೯ ಬಾಲಕಿಯರು ಆಗಿರುತ್ತಾರೆ. ಜಿಲ್ಲೆಯ ಲಿಂಗಾನುಪಾತ ಪ್ರಮಾಣವು ಪ್ರತಿ ೧೦೦೦ ಹುಡುಗರಿಗೆ ೯೨೦ ಹುಡುಗಿಯರು ಇರುತ್ತಾರೆ.

ಜಿಲ್ಲೆಯ ಒಟ್ಟು ವಾರ್ಷಿಕ ಆದಾಯ ಮತ್ತು ತಲಾ ವರಮಾನವು ೨೦೧೮-೧೯ ರಲ್ಲಿ ರೂ.೮,೭೫,೯೮೧/- ಮತ್ತು ರೂ.೩೨,೫೭೭೫/- ಆಗಿರುತ್ತದೆ. ಗರಿಷ್ಠ ವಾರ್ಷಿಕ ಆದಾಯ ಮತ್ತು ತಲಾವರಮಾನದ ಲೆಕ್ಕಾಚಾರದಲ್ಲಿ ಬೆಂಗಳೂರು ನಗರ ಜಿಲ್ಲೆಯ ನಂತರದ ಸ್ಥಾನವನ್ನು ಸಂಶೋಧನಾ ಕ್ಷೇತ್ರ ಪಡೆದುಕೊಂಡಿದೆ. ಕೃಷಿ ಕ್ಷೇತ್ರದ ಅವಲಂಬನೆಯಿಂದ ಹೊರಬಂದು ಇತರೆ ಕ್ಷೇತ್ರಗಳಲ್ಲಿ ವಿಶೇಷವಾಗಿ ಕೈಗಾರಿಕೆಗಳ ಸ್ಥಾಪನೆಯ ಚಟುವಟಿಕೆಗಳು ಆರಂಭವಾದ ನಂತರ ಜಿಲ್ಲೆಯ ಹಾಗೂ ಬ್ಯಾಡಗಿಯ ತಲಾವರಮಾನವು ಏರಿಕೆಯಾಗಲು ಪ್ರಾರಂಭವಾಗಿರುತ್ತದೆ. ಮಾನವ ಅಭಿವೃದ್ಧಿ ಸೂಚ್ಯಾಂಕಗಳಿಗೆ ಸಂಬಂಧಪಟ್ಟಂತೆ ಜಿಲ್ಲೆಯು ರಾಜ್ಯದಲ್ಲಿ ತೃತೀಯ ಸ್ಥಾನವನ್ನು ಹೊಂದಿದ್ದು, ಮೌಲ್ಯವು ೦.೭೩ ರಷ್ಟಾಗಿರುತ್ತದೆ. ರಾಜ್ಯ ಸರ್ಕಾರ ನೇಮಿಸಿದ ಪ್ರಾದೇಶಿಕ ಅಸಮತೋಲನದ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಉನ್ನತ ಅಧಿಕಾರದ ಸಮಿತಿಯ ವರದಿಯು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ ಜಿಲ್ಲೆಯಲ್ಲಿ ೧೮.೫೦ ರಷ್ಟಿದೆ. ಬ್ಯಾಡಗಿ ತಾಲೂಕ ಒಂದರಲ್ಲಿಯೇ ಶೇಕಡಾ ೮೦% ರಷ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ ಎಂದು ತಿಳಿದುಬರುತ್ತದೆ.

೩.೩ ಶಿಕ್ಷಣ

೨೦೧೧ ರ ಜನಗಣತಿ ಪ್ರಕಾರ ಬ್ಯಾಡಗಿ ತಾಲೂಕಿನ ಸಾಕ್ಷರತೆ ಪ್ರಮಾಣ ಒಟ್ಟು ೭೭.೦%. ಅದರಲ್ಲಿ ಪುರುಷರ ಪ್ರಮಾಣ ೮೪.೬% ಹಾಗೂ ಮಹಿಳೆಯರ ಪ್ರಮಾಣ ೬೯.೨% ಇದೆ. ಬ್ಯಾಡಗಿ ತಾಲೂಕಿನಲ್ಲಿ ಒಟ್ಟು ೧೬೮ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿವೆ. ಹಾಗೆಯೇ ತಾಲೂಕಿನಲ್ಲಿ ೮ ಪದವಿ ಪೂರ್ವ ಕಾಲೇಜುಗಳಿವೆ. ಬ್ಯಾಡಗಿ ತಾಲೂಕಿನಲ್ಲಿ ಈಗ ಒಂದು ವೈದ್ಯಕೀಯ ವಿದ್ಯಾಲಯ ಕಾಗಿನೆಲೆಯಲ್ಲಿ ಪ್ರಾರಂಭವಾಗಲಿದೆ. ಬ್ಯಾಡಗಿ ಪಟ್ಟಣದಲ್ಲಿ ಒಟ್ಟು ೬ ಪ್ರೌಢಶಾಲೆಗಳಿವೆ. ಇಲ್ಲಿ ಎಸ್.ಜೆ. ಜೆ.ಎಂ ಸರ್ಕಾರಿ ಪ್ರೌಢಶಾಲೆಯು ೧೦೦ ವರ್ಷಗಳ ಇತಿಹಾಸವನ್ನು ಹೊಂದಿರುವ ಶಾಲೆಯಾಗಿದೆ. ಇಲ್ಲಿಯೇ ಪದವಿ ಪೂರ್ವ ಕಾಲೇಜು ಇದೆ. ಪಟ್ಟಣದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಇದೆ. ಹಾಗೆಯೇ ಇನ್ನೊಂದು ಪದವಿ ಪೂರ್ವ ಎಸ್.ಎಸ್.ಪಿ.ಎನ್. ಮಹಿಳಾ ಕಾಲೇಜು ಇದೆ. ಪಟ್ಟಣದಲ್ಲಿ ೨ ಪದವಿ ಕಾಲೇಜುಗಳಿವೆ. ೧ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಬಿ.ಇ.ಎಸ್.ಎಂ. ಮಹಾವಿದ್ಯಾಲಯವಿದೆ. ಇದು ಕೂಡಾ ಸುಮಾರು ವರ್ಷಗಳ ಇತಿಹಾಸ ಹೊಂದಿದೆ. ಹಾಗೆಯೆ ಬ್ಯಾಡಗಿ ತಾಲೂಕಿನಲ್ಲಿ ಒಂದು ಬಳ್ಳಾರಿ ರುದ್ರಪ್ಪ ಬಿ.ಇಡಿ. ಶಿಕ್ಷಣ ಸಂಸ್ಥೆಯು ಇದೆ. ಒಟ್ಟಾರೆ ಹೇಳಬೇಕೆಂದರೆ ಬ್ಯಾಡಗಿ ತಾಲೂಕಿನಲ್ಲಿ ಉತ್ತಮ ಶಿಕ್ಷಣವನ್ನು ಕಾಣಬಹುದು. ಬ್ಯಾಡಗಿ ತಾಲೂಕಿನಲ್ಲಿ ೪ ಮೊರಾರ್ಜಿ ದೇಸಾಯಿ ಶಾಲೆಗಳಿವೆ ಹಾಗೂ ೩ ಕಿತ್ತೂರು ಚೆನ್ನಮ್ಮ ವಸತಿ ಶಾಲೆಗಳೂ ಇವೆ.

ಕೋಷ್ಟಕ– ೩.೧ ಕರ್ನಾಟಕ ರಾಜ್ಯ ಮತ್ತು ಬ್ಯಾಡಗಿಯ ಸಾಮಾನ್ಯ ವಿವರಗಳು.

ಕ್ರ.ಸಂ	ವಿವರಗಳು	ಕರ್ನಾಟಕ ರಾಜ್ಯ	ಬ್ಯಾಡಗಿ
೧	ವಿಸ್ತೀರ್ಣ (ಚ.ಕಿ.ಮಿ.ಗಳಲ್ಲಿ)	೧,೯೧,೭೯೧	೪,೭೮೮
೨	ಜನಸಂಖ್ಯೆ	೬,೧೧,೩೦,೭೦೪	೧೭,೭೬,೦೭೭
೩	ತಲಾವರಮಾನ	೩೬,೯೫೪	೪೭,೧೮೧
೪	ಜನಸಾಂದ್ರತೆ (ಪ್ರತಿ ಕಿ.ಮೀ.ಗಳಲ್ಲಿ)	೩೧೯	೪೧೮
೫	ಒಟ್ಟು ಆದಾಯ (ಲಕ್ಷಗಳಲ್ಲಿ)	೨,೧೧,೬೬,೨೫೩	೮,೯೮,೬೫೫
೬	ಲಿಂಗಾನುಪಾತ	೯೭೩	೧೦೧೮

(ಮೂಲ: ೨೦೧೧ ರ ಜನಗಣತಿ)

ಮೇಲಿನ ಕೋಷ್ಟಕವು ಕರ್ನಾಟಕ ರಾಜ್ಯದ ಹಾಗೂ ಸಂಶೋಧಕರ ಕ್ಷೇತ್ರವಾದ ಹಾವೇರಿ ಜಿಲ್ಲೆಯ ಬ್ಯಾಡಗಿಯ ವಿಸ್ತೀರ್ಣ, ಜನಸಂಖ್ಯೆ, ತಲಾವರಮಾನ, ಜನಸಾಂದ್ರತೆ, ಒಟ್ಟು ಆದಾಯ, ಲಿಂಗಾನುಪಾತಗಳನ್ನು ತಿಳಿಸುತ್ತದೆ.

ಮಳೆಯ ಪ್ರಮಾಣ

ಬ್ಯಾಡಗಿ ತಾಲ್ಲೂಕಿನಾದ್ಯಂತ ಜೂನ್‌ದಿಂದ ಸೆಪ್ಟಂಬರ್‌ವರೆಗೆ ನೈಋತ್ಯ ಮಾರುತಗಳು ಮುಂಗಾರು ಮಳೆ ಸುರಿಸುತ್ತವೆ. ಅಕ್ಟೋಬರ್ ಮತ್ತು ನವ್ಹಂಬರ್ ತಿಂಗಳುಗಳಲ್ಲಿ ಅಲ್ಪ ಪ್ರಮಾಣದ ಹಿಂಗಾರು ಮಳೆ ಬರುತ್ತದೆ. ತಾಲೂಕಿನಲ್ಲಿ ಬೀಳುವ ಸರಾಸರಿ ಮಳೆಯ ಪ್ರಮಾಣ ಪ್ರಸ್ತುತ ಸಾಲಿನಲ್ಲಿ ೨೦೧೭-೧೮ ರ ಸಾಲಿನಲ್ಲಿ ಬಿದ್ದಿರುವ ಮಳೆಯ ಪ್ರಮಾಣ ೭೦೨.೪೧ ಸೆಂ.ಮೀ. ಇರುತ್ತದೆ.

ಕೋಷ್ಟಕ ೩.೨ ರಾಜ್ಯದ ಒಟ್ಟು ಆದಾಯ ಮತ್ತು ಸರಾಸರಿ ಮಳೆ ಪ್ರಮಾಣ ಹಾಗೂ ಹಾವೇರಿ ಜಿಲ್ಲೆಯ ಆದಾಯ, ಮತ್ತು ಸರಾಸರಿ ಮಳೆಯ ಪ್ರಮಾಣದ ವಿವರ.

ಕ್ರ ಸಂ	ವಿವರಗಳು	ಒಟ್ಟು ಆದಾಯ ಕೋಟಿಗಳಲ್ಲಿ	ತಲಾ ಆದಾಯ ಕೋಟಿಗಳಲ್ಲಿ	ಮಳೆಯ ಪ್ರಮಾಣ (ಮಿ.ಮೀ.ಗಳಲ್ಲಿ)	ವಾಸ್ತವಿಕ ಮಳೆ ಮಿ.ಮೀ.ಗಳಲ್ಲಿ
೧	ಕರ್ನಾಟಕ	೧೦೫೬೫೭೭೫	೧೭೪೮೨	೧೧೩೯ ಮಿ.ಮೀ.	೮೧೯ ಮಿ.ಮೀ.
೨	ಹಾವೇರಿ	೪೨೬೭೫೩	೧೭೭೮೯	೭೯೨.೭ ಮಿ.ಮೀ.	೬೫೬.೧ ಮಿ.ಮೀ

ಮೂಲ: ಕರ್ನಾಟಕ ಅಂಕಿ ಅಂಶಗಳ ನೋಟ ೨೦೧೭-೧೮

ಈ ಮೇಲಿನ ಕೋಷ್ಟಕವು ಹಾವೇರಿ ಜಿಲ್ಲೆಯ ಒಟ್ಟು ಸರಾಸರಿ ಆದಾಯವನ್ನು ತಿಳಿಸಿಕೊಡುತ್ತದೆ. ಜಿಲ್ಲೆಯ ಪ್ರಧಾನ ಉದ್ಯೋಗ, ಕೃಷಿ ಚಟುವಟಿಕೆಯಾಗಿದೆ. ಇಲ್ಲಿ ಕೃಷಿ ಚಟುವಟಿಕೆಗಳೆಲ್ಲವೂ ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿರುತ್ತದೆ. ಜಿಲ್ಲೆಯಲ್ಲಿ ಬೀಳುವ ಸರಾಸರಿ ಮಳೆಯ ವಾರ್ಷಿಕ ಪ್ರಮಾಣವು ಈ ಭಾಗದ ಜನರ ಮುಖ್ಯ ದುಡಿಮೆ, ಆದಾಯ, ವೆಚ್ಚಗಳನ್ನು ನಿರ್ಧರಿಸುವುದರಿಂದ ಕಳೆದ ೨೦೧೫-೧೬ ನೇ ಸಾಲಿನಲ್ಲಿ ವಾಸ್ತವಿಕ ಮಳೆಯ ಪ್ರಮಾಣ ೬೫೬.೧ ಮಿ.ಮೀ. ಗೆ ಸೀಮಿತಗೊಂಡಿದೆ.

- **ಮಣ್ಣು**

ಸಾಮಾನ್ಯವಾಗಿ ಬ್ಯಾಡಗಿ ತಾಲ್ಲೂಕಿನಲ್ಲಿ ಮೂರು ರೀತಿಯ ಮಣ್ಣು ಇರುವುದು ಕಂಡುಬರುತ್ತದೆ. ಕಪ್ಪು ಎರೆ ಮಣ್ಣು, ಮರಳು ಮಿಶ್ರಿತ ಮಸಾರೆ ಕೆಂಪು ಗೊರಚು ಮಣ್ಣು.

ಕೋಷ್ಟಕ – ೩.೩ಜಿಲ್ಲೆಯ ಸಾಕ್ಷರತೆ ಪ್ರಮಾಣ, ಜನಸಾಂದ್ರತೆ ಹಾಗೂ ಲಿಂಗಾನುಪಾತ ಪ್ರಮಾಣದ ವಿವರ

ಕ್ರ ಸಂ	ವಿವರ	ಗಂಡು	ಹೆಣ್ಣು	ಒಟ್ಟು ಶೇ.	ಜನಸಾಂದ್ರತೆ ಶೇ	ಒಟ್ಟು	೦-೬ ಮಕ್ಕಳ ಲಿಂಗಾನುಪಾತ
೦೧	ಕರ್ನಾಟಕ	೭೬.೨೯	೫೭.೨೯	೬೭.೦೪	೨೭೫	೯೬೪	೯೪೧
೦೨	ಹಾವೇರಿ	೭೧.೪೦	೬೯.೩೦	೭೦.೩೫	೨೫೧	೯೭೫	೯೨೧

ಆಧಾರ : ಕರ್ನಾಟಕ ರಾಜ್ಯ ಅಂಕಿ ಅಂಶಗಳ ಸಂಗ್ರಹ ೨೦೧೭-೧೮

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣ ೭೦.೩೫% ರಷ್ಟಿದೆ. ಅದರಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಕೇವಲ ೬೯.೩೦% ರಷ್ಟಿದೆ. ರಾಜ್ಯದ ಒಟ್ಟು ಸಾಕ್ಷರತೆ ೬೭.೦೪% ರಷ್ಟಿದೆ. ರಾಜ್ಯಕ್ಕೂ, ಜಿಲ್ಲೆಗೂ ಇರುವ ಅಂತರ ಸುಮಾರು ೨.೨೬% ರಷ್ಟು. ಇದನ್ನು ಆದಷ್ಟು ಕಡಿಮೆಗೊಳಿಸಬೇಕು. ಇಲ್ಲವೆ ರಾಜ್ಯಮಟ್ಟಕ್ಕೆ ಹೆಚ್ಚಿಸಲು ಇನ್ನೂ ಸ್ವಲ್ಪ ಶ್ರಮ ಅಗತ್ಯವಿದೆ.

ಕೋಷ್ಟಕ -೩.೪ ಹಾವೇರಿ ಜಿಲ್ಲೆಯ ತಾಲೂಕವಾರು ಜನಸಂಖ್ಯೆ ಮತ್ತು ಸಾಕ್ಷರತೆ ಲಿಂಗವಾರು ವಿವರ – ೨೦೧೯-೨೦

ಕ್ರ ಸಂ	ತಾಲ್ಲೂಕುಗಳು	ಒಟ್ಟು ಜನಸಂಖ್ಯೆ			ಒಟ್ಟು ಸಾಕ್ಷರತೆ		
		ಪುರುಷರು	ಮಹಿಳೆಯರು	ಒಟ್ಟು	ಪುರುಷರು	ಮಹಿಳೆಯರು	ಒಟ್ಟು
೧	ಹಾವೇರಿ	೧೪೩೬೦೦	೧೩೬೭೬೨	೨೮೦೩೬೨	೮೩.೩	೬೯.೬	೭೬.೬
೨	ಶಿಗ್ಗಾಂವ	೯೬೭೩೫	೯೧೧೭೫	೧೮೦೭೯೧೦	೮೨.೩	೬೯.೪	೭೬.೧
೩	ಸವಣೂರ	೮೩೧೫೦	೭೮೩೭೧	೧೬೧೫೨೧	೭೭.೭	೬೪.೨	೭೧.೨
೪	ರಾಣೇಬೆನ್ನೂರು	೧೭೨೦೧೦	೧೬೩೨೭೧	೩೩೫೨೮೧	೮೫.೬೦	೭೧.೪೦	೭೮.೭೦
೫	ಬ್ಯಾಡಗಿ	೭೨೧೪೩	೬೮೮೮೧	೧೪೧೦೨೪	೮೪.೯	೬೯.೮೦	೭೭.೫೦
೬	ಹಿರೇಕೆರೂರು	೧೧೮೩೧೯	೧೧೨೭೯೬	೨೩೧೧೧೫	೮೮.೧೦	೭೪.೩೦	೮೧.೪೦
೭	ಹಾನಗಲ್ಲ	೧೩೩೧೭೧	೧೨೭೨೮೪	೨೬೦೪೫೫	೮೩.೬೦	೭೧.೬೦	೭೭.೭೦
	ಹಾವೇರಿ ಜಿಲ್ಲೆ	೮೧೯೧೨೮	೭೭೮೫೪೦	೧೫೯೭೬೬೮	೮೪.೦	೭೦.೪೬	೭೭.೪೦
	ಕರ್ನಾಟಕ ರಾಜ್ಯ	೨೬೮೫೬೩೪೩	೨೫೮೭೭೬೧೫	೫೨೭೩೩೯೫೮	೧೭೮೧೭೬೮೨ (೭೬.೨೯)	೧೨೯೫೭೩೦೬ (೫೭.೪೫)	೩೦೭೭೪೯೮೮ (೬೭.೦೪)

ಮೂಲ : ಹಾವೇರಿ ಜಿಲ್ಲೆ ಅಂಕಿ ಅಂಶಗಳ ನೋಟ ೨೦೧೭-೧೮

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಹಾವೇರಿ ಜಿಲ್ಲೆಯಲ್ಲಿ ತಾಲೂಕವಾರು ಜನಸಂಖ್ಯೆ ಮತ್ತು ಸಾಕ್ಷರತೆ ಲಿಂಗವಾರು ವಿವರ ಸಂಶೋಧನಾ ಕ್ಷೇತ್ರವಾದ ಬ್ಯಾಡಗಿಯ ಒಟ್ಟು ಜನಸಂಖ್ಯೆಯಲ್ಲಿ ಪುರುಷರು ೭೨,೧೪೩ ಇದ್ದರೆ, ಮಹಿಳೆಯರು ೬೮,೮೮೧ ಹಾಗೂ ಒಟ್ಟಾರೆ ಸಾಕ್ಷರತೆಯ ಪ್ರಮಾಣ ಪುರುಷರು ೮೪.೯ ಇದ್ದರೆ, ಮಹಿಳೆಯರು ೬೯.೮೦ ಪ್ರತಿಶತ ಇದ್ದಾರೆ ಎಂದು ತಿಳಿದುಬರುತ್ತದೆ.

ಕೋಷ್ಟಕ –೩.೪ ಹಾವೇರಿ ಜಿಲ್ಲೆಯ ಅಕ್ಷರಸ್ಥರ ವಿವರ

ಕ್ರ ಸಂ	ತಾಲೂಕುಗಳು	ಗ್ರಾಮೀಣ			ನಗರ			ಒಟ್ಟು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಹಾವೇರಿ	೭೭೦೬೮	೫೮೧೯೨	೧೩೫೨೬೦	೨೭೬೩೦	೨೫೨೦೧	೫೨೮೩೧	೧೦೪೬೯೮	೮೩೩೯೩	೧೮೮೦೯೧
೨	ಶಿಗ್ಗಾಂವ	೫೦೨೨೩	೩೮೮೫೩	೮೯೦೭೬	೧೮೯೧೮	೧೬೨೭೫	೩೫೧೯೩	೬೯೧೪೧	೫೫೧೨೮	೧೨೪೨೬೯
೩	ಸವಣೂರ	೪೩೧೪೯	೩೨೦೭೮	೭೫೨೨೭	೧೨೮೭೯	೧೧೪೪೪	೨೪೩೨೩	೫೬೦೨೮	೪೩೫೨೨	೯೯೫೫೦
೪	ರಾಣೇಬೆನ್ನೂರು	೮೧೪೧೪	೬೦೮೫೬	೧೪೨೨೭೦	೪೮೫೬೦	೪೨೩೮೦	೯೦೯೪೦	೧೨೯೯೭೪	೧೦೩೨೩೬	೨೩೩೨೧೦
೫	ಬ್ಯಾಡಗಿ	೪೨೩೬೮	೩೨೫೨೦	೭೪೮೮೮	೧೧೫೫೩	೯೮೭೯	೨೧೪೩೨	೫೩೯೨೧	೪೨೩೯೯	೯೬೩೨೦
೬	ಹಿರೇಕೆರೂರು	೮೪೭೨೭	೬೭೨೫೬	೧೫೧೯೮೩	೭೯೦೦	೭೨೧೯	೧೫೧೧೯	೯೨೬೨೭	೭೪೪೭೫	೧೬೭೧೦೨
೭	ಹಾನಗಲ್ಲ	೮೬೫೫೪	೬೯೭೪೩	೧೫೬೩೯೭	೧೦೭೫೦	೯೭೫೧	೨೦೫೦೧	೯೭೪೦೪	೭೯೪೯೭	೧೭೬೯೦೧
	ಒಟ್ಟು	**೪೬೫೬೦೩**	**೩೫೯೪೯೮**	**೮೨೫೧೦೧**	**೧೩೮೧೯೦**	**೧೨೨೧೫೨**	**೨೬೦೩೪೨**	**೬೦೩೭೯೩**	**೪೮೧೬೫೦**	**೧೦೮೫೪೪೩**

ಮೂಲ : ಜನಗಣತಿ ೨೦೧೧.

ಸಾಮಾಜಿಕ ಅಭಿವೃದ್ಧಿಯಲ್ಲಿ ಶಿಕ್ಷಣವು ಅತ್ಯಂತ ಅವಶ್ಯಕವಾಗಿದೆ. ಅಧ್ಯಯನ ಕ್ಷೇತ್ರದ ಹಾವೇರಿ ಜಿಲ್ಲೆಯ ಬ್ಯಾಡಗಿ ಭಾಗದ ಜನರ ಶಿಕ್ಷಣಮಟ್ಟವನ್ನು ಅವಲೋಕಿಸಿದಾಗ ನಗರಕ್ಕಿಂತ ಗ್ರಾಮೀಣ ಜನರ ಶಿಕ್ಷಣವೇ ಮುಂದಿದೆ. ಬ್ಯಾಡಗಿ ತಾಲೂಕಿನ ಹಳ್ಳಿಗಳಲ್ಲಿ ೭೪೮೮೮ ಜನರು ಅಕ್ಷರಸ್ಥರಿದ್ದು, ಬ್ಯಾಡಗಿ ಪಟ್ಟಣವನ್ನು ನೋಡಿದಾಗ ೨೧೪೩೨ ಜನರು ಅಕ್ಷರಸ್ಥರಿರುವುದು ಕಂಡುಬರುತ್ತದೆ. ಹಾಗೆಯೇ ಹೆಣ್ಣುಮಕ್ಕಳು (೪೨೩೯೧) ಹಾಗೂ ಗಂಡುಮಕ್ಕಳಿಗೆ ಹೋಲಿಸಿದಾಗ ಅಷ್ಟೇನು ವ್ಯತ್ಯಾಸ (೫೩೯೨೧) ಇರುವುದಿಲ್ಲ.

ಕೋಷ್ಟಕ-೩.೫ ಹಾವೇರಿ ಜಿಲ್ಲೆಯ ಅಂಗನವಾಡಿ ಕೇಂದ್ರಗಳು

ಕ್ರ ಸಂ	ತಾಲ್ಲೂಕುಗಳು	ಸ್ವಂತ ಕಟ್ಟಡ	ಶಾಲಾ ಕಟ್ಟಡ	ಇತರೆ	ಒಟ್ಟು	ಶಿಕ್ಷಕಿಯರ ಸಂಖ್ಯೆ	ಕಾರ್ಯಕರ್ತರ ಸಂಖ್ಯೆ
೧	ಬ್ಯಾಡಗಿ	೧೫೦	೧	೧೧	೧೬೨	೧೬೨	೧೫೩
೨	ಹಾನಗಲ್ಲ	೨೫೦	೪	೬೫	೩೧೯	೩೧೩	೩೦೭
೩	ಹಾವೇರಿ	೧೯೦	೮	೮೫	೨೮೩	೨೭೭	೨೭೧
೪	ಹಿರೇಕೆರೂರು	೨೨೬	೧೫	೯೮	೩೩೯	೩೩೨	೩೩೩
೫	ರಾಣೇಬೆನ್ನೂರು	೨೫೧	೮	೧೧೪	೩೭೩	೩೬೩	೩೪೩
೬	ಸವಣೂರ	೧೩೦	೬	೬೯	೨೦೫	೨೦೨	೧೯೭
೭	ಶಿಗ್ಗಾಂವ	೧೪೭	೫	೮೧	೨೩೩	೨೩೧	೨೧೬
	ಒಟ್ಟು	೧೩೪೪	೪೭	೫೨೩	೧೯೧೪	೧೮೮೦	೧೮೨೨

ಮೂಲ : ಜನಗಣತಿ ೨೦೧೧.

ಮೇಲಿನ ಕೋಷ್ಟಕವನ್ನು ನೋಡಿದಾಗ ಹಾವೇರಿ ಜಿಲ್ಲೆಯ ಎಲ್ಲ ತಾಲ್ಲೂಕುಗಳ ಅಂಗನವಾಡಿ ಕೇಂದ್ರಗಳು, ಶಿಕ್ಷಕಿಯರು ಹಾಗೂ ಕಾರ್ಯಕರ್ತರ ಮಾಹಿತಿಯು ತಿಳಿದುಬರುತ್ತದೆ. ಬ್ಯಾಡಗಿ ತಾಲೂಕಿನಲ್ಲಿ ೧೫೦ ಅಂಗನವಾಡಿ ಕಟ್ಟಡಗಳನ್ನು ಹೊಂದಿದ್ದು, ಒಂದು ಕೇಂದ್ರ ಮಾತ್ರ ಪ್ರಾಥಮಿಕ ಶಾಲಾ ಕಟ್ಟಡದಲ್ಲಿದ್ದು, ಇತರೆ ೧೧ ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿವೆ. ಒಟ್ಟಾರೆಯಾಗಿ ೧೬೨ ಅಂಗನವಾಡಿಗಳಲ್ಲಿ ಶಿಕ್ಷಕಿಯರ ಸಂಖ್ಯೆ ಪ್ರತಿ ಅಂಗನವಾಡಿಗೆ ಒಬ್ಬರಂತೆ ಇದ್ದು, ಸಹಾಯಕಿಯರು ಮಾತ್ರ ೧೫೩ ಜನರಿದ್ದಾರೆ ಎಂದು ತೋರಿಸುತ್ತದೆ.

ಕೋಷ್ಟಕ – ೩.೬ ಹಾವೇರಿ ಜಿಲ್ಲೆಯ ಸಾಮಾನ್ಯ ಪದವಿ ಕಾಲೇಜುಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ

ಕ್ರ. ಸಂ	ತಾಲ್ಲೂಕುಗಳು	ಸಾಮಾನ್ಯ ಪದವಿ ಕಾಲೇಜುಗಳು–ಸರ್ಕಾರಿ				ಸಾಮಾನ್ಯ ಪದವಿ ಕಾಲೇಜುಗಳು–ಖಾಸಗಿ			
		ಕಾಲೇಜುಗಳ ಸಂಖ್ಯೆ	ಮೊದಲ ವರ್ಷದಿಂದ ಅಂತಿಮ ವರ್ಷದವರೆಗೆ			ಕಾಲೇಜುಗಳ ಸಂಖ್ಯೆ	ಮೊದಲ ವರ್ಷದಿಂದ ಅಂತಿಮ ವರ್ಷದವರೆಗೆ (ಅನುದಾನಿತ+ಅನುದಾನರಹಿತ)		
			ಹುಡುಗರು	ಹುಡುಗಿಯರು	ಒಟ್ಟು		ಹುಡುಗರು	ಹುಡುಗಿಯರು	ಒಟ್ಟು
೧	ಬ್ಯಾಡಗಿ	೨	೧೪೯	೧೪೭	೨೯೬	೧	೩೩೫	೩೨೫	೬೬೦
೨	ಹಾನಗಲ್ಲ	೩	೭೮೧	೯೨೫	೧೭೦೬	೨	೩೩೮	೩೦೨	೬೪೦
೩	ಹಾವೇರಿ	೨	೧೫೦೭	೧೧೪೨	೨೬೪೯	೧	೪೬೯	೬೮೦	೧೧೪೯
೪	ಹಿರೇಕೆರೂರು	೧	೪೭೦	೨೭೭	೭೪೭	೨	೬೦೧	೬೧೨	೧೨೧೩
೫	ರಾಣೇಬೆನ್ನೂರು	೨	೬೩೩	೩೦೮	೯೪೧	೧	೬೬೭	೨೧೩	೮೮೦
೬	ಸವಣೂರ	೧	೨೩೭	೨೯೪	೫೩೧	೦	೦	೦	೦
೭	ಶಿಗ್ಗಾಂವ	೨	೬೦೩	೭೨೭	೧೩೩೦	೧	೧೮೩	೧೭೪	೩೫೭
	ಒಟ್ಟು	೧೩	೪೩೮೦	೩೮೨೦	೮೨೦೦	೮	೨೫೯೩	೨೩೦೬	೪೮೯೯

ಮಾಹಿತಿ ಮೂಲ : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಒಟ್ಟಾರೆಯಾಗಿ ಹಾವೇರಿ ಜಿಲ್ಲೆಯಲ್ಲಿ ಪದವಿ ಶಿಕ್ಷಣವನ್ನು ಪಡೆಯುತ್ತಿರುವವರ ಮಾಹಿತಿಯನ್ನು ಗಮನಿಸಿದಾಗ ಇತ್ತೀಚಿನ ದಿನಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದು ಕಂಡುಬರುತ್ತದೆ. ಅಧ್ಯಯನ ಕ್ಷೇತ್ರವಾದ ಬ್ಯಾಡಗಿಯಲ್ಲಿ ೨ ಪ್ರಥಮ ದರ್ಜೆ ಕಾಲೇಜುಗಳಿದ್ದು, ಒಟ್ಟಾರೆಯಾಗಿ ಹುಡುಗರು ೩೩೫ ಮತ್ತು ಹುಡುಗಿಯರು ೩೨೫ ಇದ್ದು, ಹುಡುಗಿಯರೂ ಕೂಡ ಹುಡುಗರ ಸರಿಸಮಾನವಾಗಿ ಅಭ್ಯಸಿಸುತ್ತಿರುವುದು ಗಮನಾರ್ಹವಾದ ಸಂಗತಿಯಾಗಿದೆ.

೩.೪ ಭೂ-ಬಳಕೆ

ಕೋಷ್ಟಕ – ೩.೭ ಹಾವೇರಿ ಜಿಲ್ಲೆಯ ತಾಲೂಕವಾರು ಭೂ-ಬಳಕೆ ೨೦೧೯-೨೦

ಕ್ರ ಸಂ	ತಾಲೂಕುಗಳು	ಬೀಳು ಭೂಮಿ			ಬಿತ್ತನೆಯಾದ ಪ್ರದೇಶ		
		ಚಾಲ್ತಿ	ಇತರೆ	ಒಟ್ಟು	ನಿವ್ವಳ	ಒಂದಕ್ಕಿಂತ ಹೆಚ್ಚು	ಒಟ್ಟು
೧	ಬ್ಯಾಡಗಿ	೭೮೨	೭೯೮	೧೫೮೦	೩೩೨೧೫	೫೭೭೩	೩೮೯೮೮
೨	ಹಾನಗಲ್ಲ	೪೦೨೮	೧೮೪೮	೫೮೭೬	೫೦೪೫೨	೧೧೧೫೬	೬೧೬೦೮
೩	ಹಾವೇರಿ	೨೪೬೬	೮೬೫	೩೩೩೧	೬೩೮೭೫	೧೪೨೩೭	೭೮೧೧೨
೪	ಹಿರೇಕೆರೂರು	೧೧೦೯	೭೮೨	೧೮೯೧	೫೯೩೯೪	೧೦೭೦೯	೭೦೧೦೩
೫	ರಾಣೇಬೆನ್ನೂರು	೩೫೮೧	೧೭೮೦	೫೩೬೧	೬೪೩೧೨	೧೩೫೯೩	೭೭೯೦೫
೬	ಸವಣೂರ	೧೯೮	೩೨೧	೫೧೯	೪೮೪೬೫	೮೨೭೨	೫೬೭೩೭
೭	ಶಿಗ್ಗಾಂವ	೪೭೩	೧೨೫	೫೯೮	೪೨೧೯೫	೬೫೧೬	೪೮೭೧೧
	ಜಿಲ್ಲಾ ಒಟ್ಟು	೧೨೬೩೭	೬೫೧೯	೧೯೧೫೬	೩೬೧೯೦೮	೭೦೨೫೬	೪೩೨೧೬೪

ಆಧಾರ ಮೂಲ : ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಹಾವೇರಿ.

೩.೫ ಬೆಳೆಗಳು

ಇಲ್ಲಿನ ಜನರ ಮುಖ್ಯ ಉದ್ಯೋಗ ಒಕ್ಕಲುತನವಾಗಿದ್ದು, ಮುಂಗಾರು ಹಾಗೂ ಹಿಂಗಾರು ಬೆಳೆಗಳನ್ನು ಬೆಳೆಯುವರು. ತಾಲ್ಲೂಕಿನಾದ್ಯಂತ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಭತ್ತ, ಕಬ್ಬು, ಜೋಳ, ಬಿಳಿಜೋಳ, ಹತ್ತಿ ಮತ್ತು ದ್ವಿದಳ ಧಾನ್ಯಗಳು. ಕೆಲವೊಂದು ಸೀಮಿತ ಪ್ರದೇಶಗಳಲ್ಲಿ ತೆಂಗು, ಬಾಳೆ ಮತ್ತು ವೀಳ್ಯದೆಲೆಗಳ ತೋಟಗಳನ್ನು ಕಾಣಬಹುದಾಗಿದೆ ಹಾಗೂ ಮುಂದಿನ ಕೋಷ್ಟಕದಲ್ಲಿ ಏಕದಳ, ದ್ವಿದಳ ಧಾನ್ಯಗಳನ್ನು ಸಂಶೋಧಕರು ತೋರಿಸಿದ್ದಾರೆ.

ಕೋಷ್ಟಕ -೩.೮ ೨೦೧೯-೨೦ ನೇ ಸಾಲಿನ ಪ್ರಮುಖ ಬೆಳೆಗಳ (ಏಕದಳ) ವಿಸ್ತೀರ್ಣ

ಕ್ರ ಸಂ	ತಾಲೂಕುಗಳು	ಪ್ರಮುಖ ಬೆಳೆಗಳ ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)						
		ಭತ್ತ	ಜೋಳ	ಮು. ಜೋಳ	ರಾಗಿ	ಗೋದಿ	ಇತರೆ ತೃಣ ಧಾನ್ಯಗಳು	ಒಟ್ಟು
೧	ಬ್ಯಾಡಗಿ	೮೧೯	೨೩೦೯	೨೨೮೬೨	೮	೦	೨	೨೬೦೦೦
೨	ಹಾನಗಲ್	೨೯೮೭	೫೭೮	೧೮೭೦೨	೬	೦	೦	೪೦೨೭೩
೩	ಹಾವೇರಿ	೫೬೭	೯೩೫೧	೩೫೯೨೭	೬	೪೭	೨೮	೪೫೯೨೬
೪	ಹಿರೇಕೆರೂರು	೩೪೮೦	೨೧೦೮	೩೬೭೩೧	೧೫	೦	೦	೪೨೩೩೪
೫	ರಾಣೇಬೆನ್ನೂರ	೧೧೩೧೭	೭೯೭೨	೩೧೩೨೮	೬	೧೦	೭೫	೫೦೭೦೮
೬	ಸವಣೂರ	೬೪	೮೫೨೨	೧೩೪೭೦	೨೯	೩೨೨	೪೪೪	೨೨೮೫೧
೭	ಶಿಗ್ಗಾಂವ	೭೭೩೪	೪೩೪೬	೧೧೬೭೬	೮೪	೬೦೪	೫೯೪	೨೫೦೩೮
	ಒಟ್ಟು	೪೪೯೬೮	೩೫೧೮೬	೧೭೦೬೯೬	೧೫೪	೯೮೩	೧೧೪೩	೨೫೩೧೩೦

ಮೂಲ : ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿಸಂಖ್ಯೆಗಳ ವಿಭಾಗ, ಹಾವೇರಿ.

ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಏಕದಳ ಧಾನ್ಯ ಭತ್ತ, ಜೋಳ, ಮುಸುಕಿನ ಜೋಳ, ರಾಗಿ, ಗೋದಿ ಇತರೆ ತೃಣಧಾನ್ಯಗಳಾದ ಕಾಳುಕಡಿಗಳನ್ನು ೨೬೦೦೦ ಹೆಕ್ಟೇರ್‌ಗಳಲ್ಲಿ ಬೆಳೆದಿದ್ದಾರೆ. ಅದೇ ರೀತಿಯಾಗಿ ಹಾವೇರಿ ಜಿಲ್ಲೆಯನ್ನು ವೀಕ್ಷಿಸಿದಾಗ ಒಟ್ಟಾರೆಯಾಗಿ ಭತ್ತ ೪೪೯೬೮, ಜೋಳ ೩೫೧೮೬, ಮುಸುಕಿನ ಜೋಳ ೧೭೦೬೯೬, ರಾಗಿ ೧೫೪, ಗೋದಿ ೯೮೨, ಇತರೆ ತೃಣಧಾನ್ಯಗಳಾದ ಕಾಳುಕಡಿ ೧೧೪೩ ಒಟ್ಟಾರೆಯಾಗಿ ಜಿಲ್ಲೆಯಲ್ಲಿ

೨,೫೨೩೧೩೦ ಹೆಕ್ಟೇರ್‌ಗಳಲ್ಲಿ ಬಿತ್ತನೆಯಾಗಿದ್ದು, ಬ್ಯಾಡಗಿ ತಾಲೂಕಿನಲ್ಲಿ ೨೦೧೭-೧೮ ನೇ ಸಾಲಿನಲ್ಲಿ ಮುಸುಕಿನ ಜೋಳ ಪ್ರಮುಖ ಬೆಳೆಯಾಗಿದೆ ಎಂದು ತಿಳಿದುಬರುತ್ತದೆ. ಇದರ ಸಂಪೂರ್ಣ ಮಾಹಿತಿಯನ್ನು ಈ ಕೆಳಗೆ ಕಾಣಿಸಿದ ಸಂಯುಕ್ತ ಸ್ಥಂಭ ಲೇಖದ ಮೂಲಕ ತೋರಿಸಲಾಗಿದೆ.

ಕೋಷ್ಟಕ – ೩.೯ ೨೦೧೯-೨೦ ನೇ ಸಾಲಿನ ಪ್ರಮುಖ ಬೆಳೆಗಳ (ದ್ವಿ ದಳ) ವಿಸ್ತೀರ್ಣ

ಕ್ರ ಸಂ	ತಾಲೂಕುಗಳು	ಪ್ರಮುಖ ಬೆಳೆಗಳ ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)									
		ತೊಗರಿ	ಹೆಸರು	ಉದ್ದು	ಹುರುಳಿ	ಅವರೆ	ಅಲಸಂದೆ	ಕಡಲೆ	ಬಟಾಣಿ	ಒಟ್ಟು ದ್ವಿದಳ ಧಾನ್ಯ ಗಳು	ಒಟ್ಟು ಆಹಾರ ಧಾನ್ಯಗಳು
೧	ಬ್ಯಾಡಗಿ	೨೨	೬೮೬	೧೮	೧೧೮	೩೩	೧೪	೩೬	–	೯೨೭	೨೬೯೨೭
೨	ಹಾನಗಲ್	೯	೧೯೪	೯೧	೯೫೯	೫	೧೨೭	೨೮	–	೧೪೧೩	೪೧೬೮೬
೩	ಹಾವೇರಿ	೫೬೦	೫೩	೧	೨೨೧	೬	೩೬೯	೪೮೦	–	೧೬೯೦	೪೭೬೧೬
೪	ಹಿರೇಕೆರೂರು	೧೯೪	೨೭೭೦	೦	೧೦೩	೭೮	೫೭	೧೩೯	–	೩೩೪೧	೪೫೬೭೫
೫	ರಾಣೇಬೆನ್ನೂರ	೨೫೪	೧೭೫	೦	೩೫	೧೪೧	೧೦೯	೯೧೬	–	೧೬೩೦	೫೨೩೩೮
೬	ಸವಣೂರ	೫೨೫	೩೩೦	೧೯	೭೦೮	೨	೨೪೦	೧೦೮	೨	೧೯೩೪	೨೪೭೮೫
೭	ಶಿಗ್ಗಾಂವ	೧೭೫	೬೭	೧೧	೪೭೨	೧೧೨	೪೨	೨೮೪	೮	೧೧೭೧	೨೬೨೦೯
	ಒಟ್ಟು	೧೭೩೯	೪೨೭೫	೧೪೦	೨೬೧೬	೩೭೭	೯೫೮	೧೯೯೧	೧೦	೧೨೧೦೬	೨೬೫೨೩೬

ಮೂಲ : ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿಸಂಖ್ಯೆಗಳ ವಿಭಾಗ, ಹಾವೇರಿ.

ಸಂಶೋಧಕರು ಮೇಲಿನ ಕೋಷ್ಟಕವನ್ನು ಅವಲೋಕಿಸಿದಾಗ ಒಟ್ಟು ದ್ವಿದಳ ಧಾನ್ಯಗಳ ವಿಸ್ತೀರ್ಣದಲ್ಲಿ ಹುರಳಿ, ಹೆಸರು, ಕಡಲೆ, ತೊಗರಿ ಬ್ಯಾಡಗಿ ತಾಲೂಕಿನಲ್ಲಿ ೨೦೧೭-೧೮ ನೇ ಸಾಲಿನ ಬಿತ್ತನೆಯಾದ ದ್ವಿದಳ ಬೆಳೆಯಾಗಿದೆ ಎಂದು ತಿಳಿದುಬರುತ್ತದೆ. ಇದರ ಸಂಪೂರ್ಣ ಮಾಹಿತಿಯನ್ನು ಈ ಕೆಳಗೆ ಕಾಣಿಸಿದ ಸಂಯುಕ್ತ ಸ್ಥಂಭ ಲೇಖದ ಮೂಲಕ ತೋರಿಸಲಾಗಿದೆ. ಒಟ್ಟಾರೆಯಾಗಿ ಸಂಶೋಧಕರು ಅವಲೋಕಿಸಿದಾಗ ಬ್ಯಾಡಗಿ ತಾಲೂಕಿನಲ್ಲಿ ಮೆಣಸಿನಕಾಯಿ ಬೆಳೆಯನ್ನು ಬೆಳೆಯದಿದ್ದರೂ ಕೂಡ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮೆಣಸಿನಕಾಯಿ ಮಾರುಕಟ್ಟೆಗೆ ಪ್ರಸಿದ್ಧಿ ಪಡೆದಿದೆ.

ಕೋಷ್ಟಕ ೩.೧೧ ಹಾವೇರಿ ಜಿಲ್ಲೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ತಾಲೂಕುವಾರು ಅಂಕಿಅಂಶ

ಕ್ರಸಂ.	ತಾಲೂಕುಗಳು	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
		ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು
೧	ಬ್ಯಾಡಗಿ	೧೩೭೦೫	೩೨೦೭	೧೬೯೧೨	೧೫೭೬೭	೩೩೭೮	೧೯೧೪೫
೨	ಹಾನಗಲ್	೩೬೬೪೦	೧೯೭೨	೩೮೬೧೨	೨೦೬೦೯	೩೭೪	೨೦೯೮೩
೩	ಹಾವೇರಿ	೨೮೫೮೩	೮೨೧೯	೩೬೮೦೨	೨೧೬೩೭	೩೩೧೫	೨೪೯೫೨
೪	ಹಿರೇಕೆರೂರು	೨೮೭೫೮	೧೮೯೨	೩೦೬೫೦	೨೩೨೧೮	೧೫೨೬	೨೪೭೪೪
೫	ರಾಣೆಬೆನ್ನೂರು	೩೭೪೮೯	೮೧೯೬	೪೫೬೮೫	೨೨೪೭೭	೫೪೨೧	೨೭೮೯೮
೬	ರಟ್ಟೀಹಳ್ಳಿ	೦	೦	೦	೦	೦	೦
೭	ಸವಣೂರ	೨೧೫೨೭	೩೯೨೮	೨೫೪೫೫	೧೧೯೮೦	೫೧೦	೧೨೪೯೦
೮	ಶಿಗ್ಗಾಂವ	೨೧೪೫೯	೪೪೦೧	೨೫೮೬೦	೧೦೫೬೧	೬೦೭	೧೧೧೬೮
ಒಟ್ಟು		೧೮೮೧೬೧	೩೧೮೧೫	೨೧೯೯೭೬	೧೨೬೨೪೯	೧೫೧೩೧	೧೪೧೩೮೦

(ಮೂಲ: ಹಾವೇರಿ ಜಿಲ್ಲಾ ಅಂಕಿಅಂಶಗಳು ೨೦೧೧)

ಹಾವೇರಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯಾ ವಿವರಣೆಯನ್ನು ಮೇಲಿನ ಕೋಷ್ಟಕವು ವಿವರಿಸುತ್ತದೆ. ಪರಿಶಿಷ್ಟ ಜಾತಿ ಜನಸಂಖ್ಯೆಯು ಬ್ಯಾಡಗಿ ತಾಲೂಕಿನಲ್ಲಿ ಒಟ್ಟು ೧೬೯೧೨ ಇದ್ದು ಪರಿಶಿಷ್ಟ ಪಂಗಡವು ೧೯೧೪೫ ಇದೆ. ಹಾನಗಲ್ ತಾಲೂಕಿನಲ್ಲಿ ಪರಿಶಿಷ್ಟ ಜಾತಿ ೩೮೬೧೨ ಮತ್ತು ಪರಿಶಿಷ್ಟ ಪಂಗಡವು ೨೦೯೮೩ ಇದೆ. ಹಾವೇರಿ ತಾಲೂಕಿನಲ್ಲಿ ಪರಿಶಿಷ್ಟ ಜನಸಂಖ್ಯೆಯು ೩೬೮೨೦ ಇದ್ದು ಪರಿಶಿಷ್ಟ ಪಂಗಡವು ೨೪೯೫೨ ಇದೆ. ಹೀರೆಕೆರೂರ್ ತಾಲೂಕಿನ ಪರಿಶಿಷ್ಟ ಜಾತಿಯ ಜನಸಂಖ್ಯೆಯು ೩೦೬೫೦ ಇದ್ದು ಪರಿಶಿಷ್ಟ ಪಂಗಡವು ೨೪೭೪೪ ಇದೆ. ರಾಣೆಬೆನ್ನೂರು ತಾಲೂಕಿನಲ್ಲಿ

ಹಾವೇರಿ ತಾಲೂಕು ೨೮೦೩೬೭ ಜನಸಂಖ್ಯೆಯನ್ನು ಹೊಂದಿದ್ದು, ಇದರಲ್ಲಿ ೧೦೫೪೦೧ ಮುಖ್ಯ ಕೆಲಸಗಾರರಾಗಿದ್ದಾರೆ. ಇವರ ಶೇಕಡಾವಾರು ಪ್ರಮಾಣವು ೩೭.೫೯ರಷ್ಟಿದೆ. ಹಿರೇಕೆರೂರು ತಾಲೂಕಿನ ಒಟ್ಟು ಜನಸಂಖ್ಯೆಯು ೨೩೧೧೧೫ ಆಗಿದ್ದು, ೮೬೬೬೩ ಜನರು ಮುಖ್ಯ ಕಾರ್ಮಿಕರಾಗಿದ್ದಾರೆ. ಇವರು ಒಟ್ಟು ಜನಸಂಖ್ಯೆಯ ಶೇ. ೩೭.೪೯ರಷ್ಟಾಗುತ್ತಾರೆ.

ರಾಣೆಬೆನ್ನೂರು ತಾಲೂಕಿನ ೩೩೫೨೮೧ ಒಟ್ಟು ಜನಸಂಖ್ಯೆಯಲ್ಲಿ ೧೨೭೮೮೦ ಮಂದಿ ಮುಖ್ಯ ಕಾರ್ಮಿಕರಾಗಿ ದುಡಿಯುತ್ತಿದ್ದು ಇವರ ಶೇಕಡಾವಾರು ಪ್ರಮಾಣವು ೩೮.೧೪ ಆಗಿದೆ. ರಟ್ಟೀಹಳ್ಳಿ ತಾಲೂಕಿನ ಕುರಿತಾದ ಮಾಹಿತಿ ಹಾಗೂ ಅಂಕಿಅಂಶಗಳು ದೊರಕಿಲ್ಲದ ಕಾರಣ ಇಲ್ಲಿನ ಮುಖ್ಯ ಕಾರ್ಮಿಕರ ಅಂಕಿಅಂಶವನ್ನು ಉಲ್ಲೇಖಿಸಲಾಗಿಲ್ಲ. ಸವಣೂರ ತಾಲೂಕು ಒಟ್ಟು ೧೬೧೫೨೧ ಜನಸಂಖ್ಯೆಯನ್ನು ಹೊಂದಿದ್ದು ಇದರಲ್ಲಿ ೬೨೨೮೯ ಮಂದಿ ಮುಖ್ಯ ಕಾರ್ಮಿಕರಾಗಿದ್ದಾರೆ. ಇವರು ತಾಲೂಕಿನ ಒಟ್ಟು ಜನಸಂಖ್ಯೆಯ ಶೇ. ೩೮.೫ರಷ್ಟಾಗುತ್ತಾರೆ. ಅಂತೆಯೇ ಶಿಗ್ಗಾಂವ ತಾಲೂಕಿನ ಒಟ್ಟು ಜನಸಂಖ್ಯೆಯು ೧೮೭೯೧೦ ಆಗಿದ್ದು, ಇದರಲ್ಲಿ ೭೦೩೪೩ ಮಂದಿ ಮುಖ್ಯ ಕಾರ್ಮಿಕರಾಗಿ ಜೀವನ ನಡೆಸುತ್ತಿದ್ದಾರೆ. ಇವರ ಶೇಕಡಾವಾರು ಅನುಪಾತವು ತಾಲೂಕಿನ ಜನಸಂಖ್ಯೆಯ ೩೭.೪೩ರಷ್ಟಿದೆ.

ಒಟ್ಟಿನಲ್ಲಿ ಹಾವೇರಿ ಜಿಲ್ಲೆಯ ಒಟ್ಟು ಜನಸಂಖ್ಯೆಯು ೧೫೯೭೬೬೮ ಆಗಿದ್ದು, ಅದರಲ್ಲಿ ಮುಖ್ಯ ಕಾರ್ಮಿಕರಾಗಿ ದುಡಿಯುತ್ತಿರುವವರ ಸಂಖ್ಯೆಯು ೬೦೧೯೫೧ ಆಗಿದ್ದು, ಇದು ಒಟ್ಟು ಜನಸಂಖ್ಯೆಯ ಶೇ. ೩೭.೬೭ರಷ್ಟಾಗುತ್ತದೆ.

ಮುಂದಿನ ಕೋಷ್ಟಕ ೩.೮.ರಲ್ಲಿ ೨೦೧೧ರ ಜನಗಣತಿಯ ಆಧಾರದ ಮೇಲೆ ಜಿಲ್ಲೆಯಲ್ಲಿನ ಒಟ್ಟು ಕೆಲಸಗಾರರ ವಿವರಣೆಯನ್ನು ಒದಗಿಸುತ್ತದೆ. ಬ್ಯಾಡಗಿ ತಾಲೂಕಿಗೆ ಸಂಬಂಧಿಸಿದಂತೆ ೩೪೪೩೮ ಪುರುಷ ಕಾರ್ಮಿಕರು ಹಾಗೂ ೧೯೦೩೮ ಮಹಿಳಾ ಕಾರ್ಮಿಕರು ಒಟ್ಟು ೫೩೪೭೬ ಗ್ರಾಮೀಣ ಭಾಗದಲ್ಲಿ ಕಾರ್ಮಿಕರಿರುತ್ತಾರೆ. ನಗರ ಭಾಗದಲ್ಲಿ ೮೫೨೭ ಪುರುಷರು, ೩೧೭೫ ಮಹಿಳೆಯರು ಒಟ್ಟು ೧೧೭೦೨ ಕಾರ್ಮಿಕರಿರುತ್ತಾರೆ. ನಗರ ಹಾಗೂ ಗ್ರಾಮೀಣ ಭಾಗಗಳೆರದರಲ್ಲೂ ಒಟ್ಟು ೪೨೯೬೫ ಪುರುಷರು ಹಾಗೂ ೨೨೨೧೩ ಮಹಿಳೆಯರು ಒಟ್ಟು ೬೫೧೭೮ ಕಾರ್ಮಿಕರು ಲಭ್ಯವಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು ೪೯೦೭೩೧ ಪುರುಷ ಕಾರ್ಮಿಕರು ಹಾಗೂ ೨೩೯೩೩೫ ಮಹಿಳಾ ಕಾರ್ಮಿಕರು ಒಟ್ಟು ೭೩೦೦೬೬ ಕಾರ್ಮಿಕರು ಇರುತ್ತಾರೆ. ಇಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆಯು ಪುರುಷರಿಗೆ ಹೋಲಿಸಿದರೆ ಕಡಿಮೆಯಿದ್ದು ಇದು ಬ್ಯಾಡಗಿ ತಾಲೂಕಿಗೆ ಸಂಬಂಧಿಸಿದಂತೆ ಇಲ್ಲಿಯೂ ಮಹಿಳಾ ಕಾರ್ಮಿಕರ ಸಂಖ್ಯೆಯು ಪುರುಷ ಕಾರ್ಮಿಕರಿಗೆ ಹೋಲಿಸಿದರೆ ಕಡಿಮೆ ಇದೆ.

ಕೋಷ್ಟಕ – ೩.೧೨ ಹಾವೇರಿ ಜಿಲ್ಲೆಯಲ್ಲಿನ ಒಟ್ಟು ಕೆಲಸಗಾರರು

(೨೦೧೧ರ ಜನಗಣತಿಯ ಅನುಗುಣವಾಗಿ)

ಕ್ರ ಸಂ	ತಾಲೂಕುಗಳು	ಗ್ರಾಮೀಣ			ನಗರ			ಒಟ್ಟು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಬ್ಯಾಡಗಿ	೩೪೪೩೮	೧೯೦೩೮	೫೩೪೭೬	೮೫೨೭	೩೧೭೫	೧೧೭೦೨	೪೨೯೬೫	೨೨೨೧೩	೬೫೧೭೮
೨	ಹಾನಗಲ್	೭೨೭೯೧	೩೩೨೮೮	೧೦೬೦೭೯	೮೦೧೩	೧೩೬೭	೯೩೮೦	೮೦೮೦೪	೩೪೬೫೫	೧೧೫೪೫೯
೩	ಹಾವೇರಿ	೬೭೪೦೯	೩೪೯೦೬	೧೦೨೩೧೫	೧೮೫೭೭	೪೭೯೫	೨೩೩೭೨	೮೫೯೮೬	೩೯೭೦೧	೧೨೫೬೮೭
೪	ಹಿರೇಕೆರೂರು	೬೬೬೮೫	೪೦೩೩೨	೧೦೭೦೧೭	೫೧೭೧	೧೨೦೭	೬೩೭೮	೭೧೮೫೬	೪೧೫೩೯	೧೧೩೩೯೫
೫	ರಾಣೆಬೆನ್ನೂರು	೬೭೯೯೯	೩೯೫೧೨	೧೦೭೫೧೧	೩೪೦೭೧	೧೦೪೯೯	೪೪೫೭೦	೧೦೨೦೭೦	೫೦೦೧೧	೧೫೨೦೮೧
೬	ಸವಣೂರ	೩೭೪೮೬	೧೯೫೮೫	೫೭೦೭೧	೧೧೬೭೧	೪೪೪೪	೧೬೧೧೫	೪೯೧೫೭	೨೪೦೨೯	೭೩೧೮೬
೭	ಶಿಗ್ಗಾಂವ	೪೩೦೬೩	೨೨೬೨೦	೬೫೬೮೩	೧೪೮೩೦	೪೫೬೭	೧೯೩೯೭	೫೭೮೯೩	೨೭೧೮೭	೮೫೦೮೦
	ಒಟ್ಟು	೩೮೯೮೭೧	೨೦೯೨೮೧	೫೯೯೧೫೨	೧೦೦೮೬೦	೩೦೦೫೪	೧೩೦೯೧೪	೪೯೦೭೩೧	೨೩೯೩೩೫	೭೩೦೦೬೬

(ಮೂಲ: ಹಾವೇರಿ ಜಿಲ್ಲಾ ಅಂಕಿಅಂಶಗಳ ಸಂಗ್ರಹ ೨೦೧೮-೧೯)

೩.೬ ತಾಲೂಕಿನ ಜನರ ದುಡಿಮೆ

ಬ್ಯಾಡಗಿ ತಾಲೂಕಿನಲ್ಲಿ ಒಟ್ಟು ಜನಸಂಖ್ಯೆಯಲ್ಲಿ ೩೫.೬% ಜನರು ಮುಖ್ಯ ಕೆಲಸಗಾರರು ಇದ್ದಾರೆ. ಇದರಲ್ಲಿ ಪುರುಷರು ೫೧.೦% ಹಾಗೆ ಮಹಿಳೆಯರು ೧೯.೩% ಜನರಿದ್ದಾರೆ. ಹಾಗೆ ೧೨.೫% ಒಟ್ಟು ಇತರೆ ಕೆಲಸಗಾರರು ಇದ್ದಾರೆ. ಇದರಲ್ಲಿ ಪುರುಷರು ೬.೯% ಮಹಿಳೆಯರು ೧೮.೫% ಮತ್ತು ೫೧.೯% ಒಟ್ಟು ಜನರು ಕೆಲಸಗಾರರಲ್ಲದವರು ಇದ್ದಾರೆ. ಇದರಲ್ಲಿ ಪುರುಷರು ೪೨.೧% ಮಹಿಳೆಯರು ೬೨.೨% ಜನರಿದ್ದಾರೆ. ಒಟ್ಟು ಕೆಲಸಗಾರರಲ್ಲಿ ೩೫.೦% ಜನರು ಸಾಗುವಳಿದಾರರಿದ್ದಾರೆ. ೪೨.೩% ಕೃಷಿ ಕಾರ್ಮಿಕರಿದ್ದಾರೆ. ಬ್ಯಾಡಗಿ ಪಟ್ಟಣದಲ್ಲಿ ಸುತ್ತಮುತ್ತಲಿನ ಜನರಿಗೂ ಹಾಗೂ ಪಟ್ಟಣದ ಜನರಿಗೂ ಉದ್ಯೋಗ ಒದಗಿಸುವಲ್ಲಿ ಒಂದು ಬಟ್ಟೆ ಕಾರ್ಖಾನೆ ಪ್ರಮುಖವಾಗಿದೆ. ಜೊತೆಗೆ ಕೃಷಿ ಉತ್ಪನ್ನ ಮಾರುಕಟ್ಟೆ ಉದ್ಯೋಗ ಒದಗಿಸುವಲ್ಲಿ ಪ್ರಮುಖವಾಗಿದೆ.

೩.೭ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು

ಒಣಮೆಣಸಿನಕಾಯಿ ಪ್ರಮುಖವಾದ ಕೃಷಿ ಉತ್ಪನ್ನವಾಗಿದ್ದು, ಈ ಪ್ರದೇಶದಲ್ಲಿ ಮೆಕ್ಕೆಜೋಳ ಮತ್ತು ಹತ್ತಿ ವಾಣಿಜ್ಯ ಬೆಳೆಯಾಗಿದ್ದು, ಇವುಗಳಲ್ಲಿ ಒಣಮೆಣಸಿನಕಾಯಿ ಸಮಿತಿಯ ಮುಖ್ಯಮಾರುಕಟ್ಟೆ ಪ್ರಾಂಗಣದಲ್ಲಿಯೇ ಇ-ಟೆಂಡರ್ ಪದ್ಧತಿಯ ಮೂಲಕ ವ್ಯಾಪಾರ-ವಹಿವಾಟು ನಡೆಯುತ್ತದೆ. ಉಳಿದ ಉತ್ಪನ್ನಗಳು ಮಾರುಕಟ್ಟೆ ಕ್ಷೇತ್ರದಲ್ಲಿ ಪರಸ್ಪರ ಒಪ್ಪಂದದ ಮೂಲಕ ವ್ಯಾಪಾರ ವಹಿವಾಟು ಜರುಗುತ್ತದೆ. ಬ್ಯಾಡಗಿ ಕ್ಷೇತ್ರದಲ್ಲಿ ಖಾಸಗಿ ಒಡೆತನದಲ್ಲಿ ೨೧ ಕೋಲ್ಡ್ ಸ್ಟೋರೇಜ್‌ಗಳು ಇದ್ದು, ವ್ಯಾಪಾರಸ್ಥರು ತಾವು ಖರೀದಿಸಿದ ಒಣ ಮೆಣಸಿನಕಾಯಿ ಹಾಗೂ ಇತರೆ ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡುತ್ತಿದ್ದು, ರೈತ ಬಾಂಧವರು ಸಹ ಉತ್ತಮ ಧಾರಣೆ ಬರುವವರೆಗೂ ದಾಸ್ತಾನು ಮಾಡಲು ಖಾಸಗಿ ಒಡೆತನದಲ್ಲಿ ಇರುವ ಕೋಲ್ಡ್ ಸ್ಟೋರೇಜ್‌ಗಳು ಸಹಕಾರಿಯಾಗಿವೆ. ಉತ್ತಮ ವ್ಯಾಪಾರ ವಹಿವಾಟಿನ ಮೂಲಕ ಒಣಮೆಣಸಿನಕಾಯಿ ಉತ್ಪನ್ನಕ್ಕೆ ಉತ್ತಮ ಧಾರಣೆ ದೊರೆಯಲು ಸಹಕಾರಿಯಾಗಿದೆ.

ಆರ್.ಇ.ಎಂ.ಎಸ್. ವತಿಯಿಂದ ಈ ಸಮಿತಿಯಿಂದ ಇ-ಟೆಂಡರಿಂಗ್ ಪದ್ಧತಿಯನ್ನು ದಿನಾಂಕ:೦೮-೧೧-೨೦೧೪ ರಿಂದ ಅನುಷ್ಠಾನಗೊಳಿಸಲಾಗಿದ್ದು, ಪ್ರಾಂಗಣದಲ್ಲಿ ಒಣಮೆಣಸಿನಕಾಯಿ ಹುಟ್ಟುವಳಿಗಳ ವ್ಯಾಪಾರ-ವಹಿವಾಟು ಇ-ಟೆಂಡರ್ ಮೂಲಕವೇ ನಡೆಯುತ್ತಿದೆ. ಸಮಿತಿಯಲ್ಲಿ ಇ-ಟೆಂಡರ್ ಮುಖಾಂತರ ಈ ಮಾರುಕಟ್ಟೆಯ ಹಾಗೂ ರಾಜ್ಯದ ಇತರೆ ಮಾರುಕಟ್ಟೆಗಳಲ್ಲಿ ನಡೆಯುವ ವ್ಯಾಪಾರ ವಹಿವಾಟಿನ ಮತ್ತು ಪ್ರತಿ ದಿನದ ಕೃಷಿ ಹುಟ್ಟುವಳಿಗಳ ಆವಕ-ಜಾವಕ, ಧಾರಣೆಗಳ ಮಾಹಿತಿಯನ್ನು ಕೃಷಿ ಮಾರಾಟ ವಾಹಿನಿ ವೆಬ್‌ಸೈಟ್ ಮೂಲಕ ವೀಕ್ಷಿಸುವ ವ್ಯವಸ್ಥೆಯನ್ನು ರೈತ ಬಾಂಧವರಿಗೆ ಕಲ್ಪಿಸಲಾಗಿದೆ.

ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಪುರುಷ ಹಮಾಲರು ತಮ್ಮದೇ ಆದ ಒಕ್ಕೂಟವನ್ನು ರಚಿಸಿಕೊಂಡಿದ್ದು, ಆದರೆ ಮಹಿಳೆಯರಿಗೆ ಯಾವುದೇ ರೀತಿಯ ಸೌಲಭ್ಯಗಳು ಹಾಗೂ ಒಕ್ಕೂಟವಿಲ್ಲದ್ದು ಕಂಡುಬರುತ್ತದೆ. ಈ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಯಾವುದೇ ರೀತಿಯಲ್ಲಿ ಕೆಲಸದ ಭದ್ರತೆ ಇರುವುದಿಲ್ಲ ಹಾಗೂ ಕಾರ್ಮಿಕರು ಏನಾದರೂ ಸಮಸ್ಯೆಗಳು ಬಂದಾಗ ತಾವೇ ಬಗೆಹರಿಸಿಕೊಳ್ಳುವ ವ್ಯವಸ್ಥೆ ಇರುತ್ತದೆ. ಕೃಷಿ ಮಾರುಕಟ್ಟೆಯಲ್ಲಿ ಮಹಿಳಾ ಕಾರ್ಮಿಕರಿಗೆ ಶೌಚಾಲಯ ವ್ಯವಸ್ಥೆ, ಬಾಲಗೃಹದ ವ್ಯವಸ್ಥೆ ಇರುವುದಿಲ್ಲ ಎಂದು ತಿಳಿದುಬರುತ್ತದೆ. ಲೈಸೆನ್ಸ್ ಪಡೆದ ಹಮಾಲರುಗಳಿಗೆ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಶ್ರಮಿಕ ಭವನವನ್ನು ನಿರ್ಮಿಸಲಾಗಿದೆ. ನಿಯಂತ್ರಿತ ಹುಟ್ಟುವಳಿಗಳ ದೈನಂದಿನ ಪೇಟೆ ಧಾರಣೆಯ ಮಾಹಿತಿಯ ವಿವರಗಳನ್ನು ಕೃಷಿ ಮಾರಾಟವಾಹಿನಿ, ಮಾರ್ಕೆಟ್ ರಿಪೋರ್ಟ, ದಿನಪತ್ರಿಕೆಯಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಲಾಗಿದೆ. ದೈನಂದಿನ ವಾರಾಂತ್ಯದ, ಪಾಕ್ಷಿಕ, ಮಾಸಿಕ ಹಾಗೂ ವಾರ್ಷಿಕ ವರದಿಗಳನ್ನು ಸಿದ್ಧಪಡಿಸಿ ಸಂಬಂಧಿಸಿದ ಇಲಾಖೆಗಳಿಗೆ ಪೂರೈಸಲಾಗುತ್ತಿದೆ. ಜೊತೆಗೆ ಪ್ರತಿದಿನ ಸಂಜೆ ಎಸ್.ಎಂ.ಎಸ್. ಮೂಲಕ ಮಾರುಕಟ್ಟೆ ಕ್ಷೇತ್ರದ ಯಾವುದೇ ಭಾಗದ ರೈತರು ಮಾಹಿತಿಯನ್ನು ಪಡೆದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ರೈತರು ಕೃಷಿ ಹುಟ್ಟುವಳಿಗಳ ದೈನಂದಿನ ಮಾರುಕಟ್ಟೆ ಧಾರಣೆಯನ್ನು ವೀಕ್ಷಿಸಲು ಅನುಕೂಲವಾಗುವಂತೆ ಎಲೆಕ್ಟ್ರಾನಿಕ್ ಪ್ರೈಸ್ ಟಿಕ್ಕರ್ ಬೋರ್ಡನ್ನು ಅಳವಡಿಸಲಾಗಿದೆ.

ಸಮಿತಿಯಿಂದ ಅಧಿಕೃತ ಪರವಾನಿಗೆ ಪಡೆದ ೬೪ ಮಂದಿ ತೂಕದವರಿಂದ ಹುಟ್ಟುವಳಿಗಳ ತೂಕ ಮಾಡಲ್ಪಡುತ್ತದೆ. ರೈತರ ಹುಟ್ಟುವಳಿಗಳನ್ನು ತಮ್ಮ ಗೋದಾಮುಗಳಲ್ಲಿ ದಾಸ್ತಾನು ಮಾಡಲು ದಲ್ಲಾಲರಿಗೆ ಮಾರುಕಟ್ಟೆ ಸಮಿತಿಯು ಪರವಾನಿಗೆಯನ್ನು ನೀಡಿರುತ್ತದೆ. ರೈತರ ಹುಟ್ಟುವಳಿಯು ವ್ಯಾಪಾರವಾದ ನಂತರ ೨ ನೇ ಬಾರಿ ತೂಕ ಮಾಡಲ್ಪಟ್ಟು ತೂಕದ ಬಗ್ಗೆ ರೈತರಿಗೆ ತೂಕದ ಬಿಲ್ಲನ್ನು ನೀಡಲಾಗುವುದು. ಎಲ್ಲಾ ದಲ್ಲಾಲರು ಮತ್ತು ವ್ಯಾಪಾರಸ್ಥರ ಅಂಗಡಿಗಳಲ್ಲಿ ಕಡ್ಡಾಯವಾಗಿ ಎಲೆಕ್ಟ್ರಾನಿಕ್ ತೂಕದ ಯಂತ್ರದ ಮೂಲಕವೇ ತೂಕ ಮಾಡುವ ವ್ಯವಸ್ಥೆ ಕಲ್ಪಿಸಿದ್ದು, ಅದರಂತೆ ನಿಖರವಾದ ತೂಕ ರೈತ ಬಾಂಧವರಿಗೆ ಸಿಗುವಂತೆ ನೋಡಿಕೊಳ್ಳಲಾಗುತ್ತಿದೆ.

೩.೮ ಕೈಗಾರಿಕೆಗಳು

ಹಾವೇರಿ ಜಿಲ್ಲೆಯು ಕೈಗಾರಿಕಾಭಿವೃದ್ಧಿಯಲ್ಲಿ ಅಷ್ಟೇನು ಮುಂದುವರೆದಿಲ್ಲ. ಜಿಲ್ಲೆಯಲ್ಲಿ ಹತ್ತಿ ಗಿರಣಿ, ಮುಸುಕಿನ ಜೋಳದ ಪ್ರೊಸೆಸಿಂಗ್ ಯುನಿಟ್, ಕುಮಾರಪಟ್ಟಣಂ ಗ್ರಾಸೀಂ

ಇಂಡಸ್ಟ್ರಿ, ಕೈಮಗ್ಗದ ಯುನಿಟ್, ಚಿಕನ್ ಫ್ಯಾಕ್ಟರಿ, ಕುರಿ ಉಣ್ಣೆ ಕೇಂದ್ರ, ಕುರಿ ಸಾಕಾಣಿಕೆ ಕೇಂದ್ರ, ಏಷ್ಯಾದಲ್ಲಿಯೇ ಬೀಜೋತ್ಪಾದನೆ ನಿಗಮ ಹೆಚ್ಚು ಪ್ರಾಮುಖ್ಯತೆ ಹೊಂದಿವೆ. ಜಿಲ್ಲೆಯಲ್ಲಿ ಹಲವಾರು ಕಂಪನಿಯ ಬೀಡಿ ಉದ್ದಿಮೆಯು ಮಹಿಳೆಯರ ಸ್ವಾವಲಂಬನೆಯ ಬದುಕಿಗೆ ಆಸರೆಯಾಗಿವೆ. ಮುಂದುವರೆದು ಹೋಟೆಲ್ ಉದ್ದಿಮೆ, ರಿಯಲ್ ಎಸ್ಟೇಟ್ ಉದ್ದಿಮೆಗಳು ಜಿಲ್ಲೆಯ ಆರ್ಥಿಕ ಪರಿಸ್ಥಿತಿಗೆ ಮುನ್ನೆಡೆಯಾಗಲು ಕಾರಣವಾಗಿವೆ. ಇಷ್ಟನ್ನು ಬಿಟ್ಟರೆ ಹಾವೇರಿ ಜಿಲ್ಲೆಯು ಕೈಗಾರಿಕೆಯಲ್ಲಿ ಮುಂದುವರೆದಿಲ್ಲ. ಒಟ್ಟಾರೆ ಈ ಪ್ರಸ್ತುತ ಅಧ್ಯಾಯದಲ್ಲಿ ಸಂಶೋಧಕರ ಅವಲೋಕನವು ಹಾವೇರಿ ಜಿಲ್ಲೆಯ ಹಾಗೂ ಬ್ಯಾಡಗಿ ತಾಲೂಕಿನ ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬ್ಯಾಡಗಿ ತಾಲೂಕಿನ ಆರೋಗ್ಯ ಕೇಂದ್ರಗಳ ಸೂಕ್ಷ್ಮ ನೋಟವನ್ನು ನೀಡುವಲ್ಲಿ ಪ್ರಯತ್ನಿಸಲಾಗಿದೆ. ಚಾರಿತ್ರಿಕವಾಗಿ ಈ ಪ್ರದೇಶ ಬ್ಯಾಡಗಿ ತಾಲೂಕಿನ ಕನಕದಾಸರ (ಬಾಡ) ಕಾಗಿನೆಲೆ ಹಾಗೂ ಕದರಮಂಡಲಗಿಯ ಕಾಂತೇಶ ದೇವಸ್ಥಾನಗಳಿಂದ ಪ್ರಸಿದ್ಧಿಯಾಗಿದೆ. ಹಾಗೂ ಸ್ವಾತಂತ್ರ್ಯ ಹೋರಾಟಕ್ಕಾಗಿ ಹೋರಾಡಿದ ಧೀಮಂತ ನಾಯಕರಾದ ಶ್ರೀ ಮೈಲಾರ ಮಹದೇವಪ್ಪನವರು ಮತ್ತು ಸಾತನಗೌಡ ಹನುಮಂತಗೌಡ ಪಾಟೀಲ ಇನ್ನೂ ಮುಂತಾದವರು ಕೂಡ ಈ ತಾಲೂಕಿನಲ್ಲಿದ್ದಾರೆ.

ಸ್ವಾತಂತ್ರ್ಯಾನಂತರವೂ ಕೂಡ ಜಿಲ್ಲೆಯು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಬಹಳ ಹಿಂದುಳಿದಿರುವುದು ಕಂಡುಬರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯು ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ.

ಬ್ಯಾಡಗಿ ಪಟ್ಟಣದಲ್ಲಿ ಆರೋಗ್ಯ ತಪಾಸಣೆಗೆ ಅಷ್ಟೊಂದು ಮಹತ್ವ ನೀಡಿಲ್ಲದಿರುವುದು ಕಂಡುಬರುತ್ತದೆ. ಹಾಗಾಗಿ ಜನರು ಹೆಚ್ಚಿನ ಆರೋಗ್ಯ ತಪಾಸಣೆಯ ಸಲುವಾಗಿ ಹಾವೇರಿ ನಂತರ ರಾಣೇಬೆನ್ನೂರು, ದಾವಣಗೆರೆ, ಹುಬ್ಬಳ್ಳಿಗಳಿಗೆ ಹೋಗಬೇಕಾಗಿರುತ್ತದೆ. ಆರೋಗ್ಯ ಕ್ಷೇತ್ರದಲ್ಲಿ ಬ್ಯಾಡಗಿ ಪಟ್ಟಣವು ಕ್ಷೇತ್ರದ ಸಾಧನೆಯು ಕಡಿಮೆಯಾಗಿದೆ. ಹತ್ತಿರದ ಹಾವೇರಿಯೂ ಕೂಡ ಆರೋಗ್ಯ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವುದನ್ನು ತೋರಿಸುತ್ತದೆ. ಜಿಲ್ಲೆಯಲ್ಲಿ ಇನ್ನೂ ಹೆಚ್ಚು ಉತ್ತಮವಾದ ಆರೋಗ್ಯ ಸೇವಾ ಸೌಕರ್ಯಗಳನ್ನು ಹೊಂದಬೇಕಾಗಿದೆ. ಹಾವೇರಿ ನಗರದಲ್ಲಿ ಜಿಲ್ಲಾ ಆಸ್ಪತ್ರೆಯನ್ನು ಬಿಟ್ಟರೆ ಅಂತಹ ಮತ್ಯಾವುದೇ ಬಡವರಿಗೆ ಕೈಗೆಟಕುವಂತಹ ಆರೋಗ್ಯ ಸೇವೆ ಸಿಗುತ್ತಿಲ್ಲ. ಆದ್ದರಿಂದ ಸಾರ್ವಜನಿಕ ಹಾಗೂ ಖಾಸಗಿ ವಲಯಗಳೆರಡೂ ಆರೋಗ್ಯ ಸೇವೆಯನ್ನು ಸಲ್ಲಿಸುವಲ್ಲಿ ಮುಂಚೂಣಿಗೆ ಬರಬೇಕಾಗಿದೆ. ಸರ್ಕಾರಿ ವಲಯವು ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳು ಜನರಿಗೆ ಸೇವೆಯನ್ನು ಸಲ್ಲಿಸಲು ಇನ್ನೂ ಹೆಚ್ಚಿನ ಪ್ರಯತ್ನ ಮಾಡಬೇಕಾಗಿದೆ.

ಮಹಿಳೆ ಎಂಬುದು ಒಂದು ದೊಡ್ಡ ಶಕ್ತಿ ಅಂತಾನೇ ಹೇಳಬಹುದು. ಏಕೆಂದರೆ ಅವಳ ಕಾರ್ಯಕ್ಷಮತೆ ಅಷ್ಟೊಂದು ಮಹತ್ವದ್ದಾಗಿದೆ ಎನ್ನಬಹುದು. ಮಹಿಳೆಯನ್ನು ಸಬಲಳನ್ನಾಗಿ ಮಾಡಲು ಹಲವಾರು ಕಾರ್ಯಕ್ರಮಗಳು ಪ್ರಮುಖವಾಗಿವೆ. ಮತ್ತು ಭಾರತದ ಕೃಷಿಕ್ಷೇತ್ರದಲ್ಲಿ ಮಹಿಳೆಯ ಪಾತ್ರ ಶ್ರೇಷ್ಠವಾದದ್ದು. ಮಹಿಳೆಯನ್ನು ಆರ್ಥಿಕವಾಗಿ, ಸದೃಢವಾಗಿ ಮಾಡಲು ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯ ಪಾತ್ರ ಪ್ರಮುಖವಾಗಿದೆ. ಮಾರುಕಟ್ಟೆ ಕ್ಷೇತ್ರದಲ್ಲಿನ ಎಲ್ಲಾ ರೈತರಿಗೂ ಹಾಗೂ ಪೇಟೆ ಕಾರ್ಯಕರ್ತರಿಗೂ ಕೃಷಿ ಹುಟ್ಟುವಳಿಗಳ ವ್ಯಾಪಾರ ವಹಿವಾಟು ನಡೆಸಲು ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ತಮ್ಮ ಕಾರ್ಯಚಟುವಟಿಕೆಯನ್ನು ವಿಸ್ತರಿಸಬೇಕು. ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ಉಪ ಮಾರುಕಟ್ಟೆ ಪ್ರಾಂಗಣಗಳ ಉಪಯೋಗವನ್ನು ಹೆಚ್ಚಿಸಿ ಸಮಸ್ತ ರೈತವರ್ಗದ ಹಾಗೂ ವರ್ತಕರ ಸಹಕಾರದೊಂದಿಗೆ ಮೂಲಭೂತ ಧ್ಯೇಯವಾದ **"ರೈತರ ಏಳಿಗೆ"** ಅಪೇಕ್ಷಿಸಿ ಯಶಸ್ಸು ಸಾಧಿಸುವುದೇ ಈ ಮಾರುಕಟ್ಟೆ ಸಮಿತಿಯ ಮುಖ್ಯ ಉದ್ದೇಶವಾಗಿರುತ್ತದೆ.

ಈ ಅಧ್ಯಾಯದಲ್ಲಿ ಸಂಶೋದನೆಯ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಕ್ಷೇತ್ರವಾದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಕಾರ್ಮಿಕ ಮಹಿಳೆಯರ ಆರೋಗ್ಯದ ವಿಷಯದ ಬಗ್ಗೆ ಇಲ್ಲಿ ವಿವರಿಸಲಾಗಿದೆ. ಈ ಅಧ್ಯಯನವು ಸಂಶೋಧನೆಗೆ ಮುಖ್ಯವಾಗಿದೆ.

ಕೊನೆಯ ಟಿಪ್ಪಣಿಗಳು

೧. ಹಾವೇರಿ ಜಿಲ್ಲಾ ಅಂಕಿ ಅಂಶಗಳ ಮಾಹಿತಿ, ೨೦೧೭-೧೮.
೨. ಅದೇ. ಪುಟ
೩. ಎಂ.ಎಂ. ಹೊಸಮನಿ, ಎಚ್.ಬಿ. ಬಬಲಾದ, ಬಿ.ಎಂ. ಚಿತ್ತಾಪೂರ ಮತ್ತು ವಿ.ಎಸ್. ಕನ್ನೂರ, "ಮೆಣಸಿನಕಾಯಿ ಬೆಳೆ", ೧೯೮೬. ಪುಟ ೧೫-೨೦.
೪. ಹಾವೇರಿ ಜಿಲ್ಲಾ ಅಂಕಿಅಂಶಗಳ ನೋಟ, ೨೦೧೭-೧೮.
೫. ಶಾಂತವೀರ ಭದ್ರಯ್ಯ, ಎಸ್.ಎಂ. "ವಾಣಿಜ್ಯ ಬೆಳೆಗಳು", ಕೃಷಿ ವಿಜ್ಞಾನ ವಾಹಿನಿ, ಸಂಜಯನಗರ, ಬೆಂಗಳೂರು, ೨೦೧೩. ಪುಟ ೪೮-೫೩.
೬. ಹಾವೇರಿ ಜಿಲ್ಲಾ ಅಂಕಿಅಂಶಗಳ ನೋಟ, ೨೦೧೭-೧೮.
೭. ಹೊಸಮನಿ, ಎಚ್.ಬಿ. ಬಬಲಾದ, ಬಿ.ಎಂ. ಚಿತ್ತಾಪೂರ ಮತ್ತು ವಿ.ಎಸ್. ಕನ್ನೂರ, "ಮೆಣಸಿನಕಾಯಿ ಬೆಳೆ", ೧೯೮೬. ಪುಟ ೧೨-೧೮.
೮. ಮಧುಮತಿ ಆನವೇರಿ, "ಅಸಂಘಟಿತ ವಲಯದ ಮಹಿಳಾ ಕಾರ್ಮಿಕರು: ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯ ಒಂದು ಅಧ್ಯಯನ", ಅಪ್ರಕಟಿತ ಸಂಶೋಧನಾ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೭-೧೮. ಪುಟ ೩೧-೪೫.
೯. ಅದೇ.

ಅಧ್ಯಾಯ – ನಾಲ್ಕು

ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ, ಆರ್ಥಿಕ ಹಿನ್ನೆಲೆ.

೪.೧ ಪ್ರಸ್ಥಾವನೆ

೪.೨ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ವಿಶ್ಲೇಷಣೆ ;

೪.೨.೧ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ ಅಂಶಗಳ ವಿಶ್ಲೇಷಣೆ

೪.೨.೨ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರ್ಥಿಕ ಅಂಶಗಳ ವಿಶ್ಲೇಷಣೆ

೪.೩ ಭಾರತದಲ್ಲಿ ಮಹಿಳೆಯರ ಸ್ಥಾನಮಾನ

೪.೪ ಔದ್ಯೋಗೀಕರಣದಲ್ಲಿ ಮಾಹಿಳೆಯರ ಸ್ಥಾನಮಾನ

೪.೫ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲಿ ಸ್ತ್ರೀಯರ ಸಾಧನೆಗಳು

೪.೬ ಕಾನೂನುಗಳ ನಿರ್ಮಾಣ

೪.೭ ಮಹಿಳಾ ನಿರ್ಣಾಯಕ ಪಾತ್ರ

೪.೮ ಮಹಿಳಾ ಸಬಲೀಕರಣ

೪.೯ ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆ

೪.೧೧ ಮಹಿಳಾ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳು

೪.೧೨ ಆರ್ಥಿಕ ಅಭಿವೃದ್ಧಿ ಮತ್ತು ಮಾನವ

ಅಧ್ಯಾಯ – ನಾಲ್ಕು

ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ, ಆರ್ಥಿಕ ಹಿನ್ನೆಲೆ.

೪.೧ ಪ್ರಸ್ತಾವನೆ

ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ಕಾರ್ಮಿಕರ ಸಾಮಾಜಿಕ, ಆರ್ಥಿಕ ಹಿನ್ನೆಲೆಯ ಕುರಿತು ಅಧ್ಯಯನವನ್ನು ಮಾಡಲಾಗಿದೆ. ಸಂಶೋಧಕರು ಯಾವುದೇ ಅಧ್ಯಯನವನ್ನು ಕೈಗೊಂಡಾಗ ಆ ವಿಷಯದ ನಿಜವಾದ ಸ್ಥಿತಿ ಅರಿಯಲು ಮತ್ತು ಮಹಿಳೆಯರ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು ಅತ್ಯವಶ್ಯವಕ. ಆಗ ಮಾತ್ರ ಆ ವಿಷಯದ ಬಗೆಗೆ ಸಂಪೂರ್ಣ ಮಾಹಿತಿ ಲಭ್ಯವಾಗಲು ಸಾಧ್ಯ. ಈ ಅಧ್ಯಯನವನ್ನು ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಆರೋಗ್ಯದ ಸ್ಥಿತಿಗತಿ ಎಂಬ ವಿಷಯದ ಕುರಿತು ಸಂಶೋಧನೆ ಮಾಡಲಾಗಿದೆ. ಮಹಿಳಾ ಕಾರ್ಮಿಕರ ಜೀವನದ ಶೈಲಿ ಅವರ ವಾಸ್ತವ ಸ್ಥಿತಿಯನ್ನು ಅರಿಯಲು ಮಾರುಕಟ್ಟೆಗೆ ಬೇಟಿ ಕೊಟ್ಟಾಗ ಅವರ ಆರ್ಥಿಕ, ಸಾಮಾಜಿಕ ಜೀವನ ತಿಳಿದು ಬರುತ್ತದೆ. ಆರೋಗ್ಯದ ಬಗೆಗೆ ಕಾರ್ಮಿಕರಿಗೆ ಇರುವ ಜ್ಞಾನ, ಅವರ ಜೀವನಶೈಲಿ ಸಂಶೋಧಕರಿಗೆ ತಿಳಿದು ಬರುತ್ತದೆ.

ಮಹಿಳೆಯರನ್ನು ಪ್ರಬಲರನ್ನಾಗಿ ಮಾಡುವುದು ಅಥವಾ ಅವರ ಶಕ್ತಿಯನ್ನು ಹೆಚ್ಚಿಸುವ ಕಾರ್ಯಕ್ರಮವನ್ನು ಮಹಿಳಾ ಸಬಲೀಕರಣ ಎಂದು ಕರೆಯುತ್ತಾರೆ. ಮಹಿಳೆಯರು ಎಲ್ಲಾ ರಂಗಗಳಲ್ಲಿಯೂ ದುರ್ಬಲಳಾಗಿದ್ದಾಳೆ. ಆದರೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಅವರ ಪಾಲು ದೊಡ್ಡದು. ಮಹಿಳೆಯು ಸಂಪೂರ್ಣ ನಿರ್ಲಕ್ಷಕ್ಕೆ ಒಳಗಾಗಿದ್ದಾಳೆ. ಆದರೆ ಇತ್ತೀಚಿನ ದಿವಸಗಳಲ್ಲಿ ಆಕೆಯ ಸಬಲೀಕರಣದ ಪ್ರಯತ್ನಗಳು ನಡೆಯುತ್ತಿವೆ ಮತ್ತು ಮಹಿಳೆಯರು ಅನೇಕ ಕ್ಷೇತ್ರಗಳಲ್ಲಿ ತಮ್ಮ ಸಾಧನೆಯನ್ನು ತೋರಿಸಿದ್ದಾರೆ.

ಪ್ರಪಂಚದಲ್ಲಿರುವ ಒಟ್ಟು ಅನಕ್ಷರಸ್ಥರಲ್ಲಿ ಮೂರನೇ ಎರಡರಷ್ಟು ಮಹಿಳೆಯರಾಗಿದ್ದಾರೆ. ಪ್ರಪಂಚದ ಒಟ್ಟು ಬಡವರಲ್ಲಿ ಶೇಕಡ ೭೦ ರಷ್ಟು ಮಹಿಳೆಯರಾಗಿದ್ದಾರೆ. ಭಾರತದಲ್ಲಿಯೂ ಇದೇ ಸ್ಥಿತಿ ಇದೆ. ಸ್ತ್ರೀಯರ ಮೇಲೆ ದೌರ್ಜನ್ಯಗಳು ಮತ್ತು ಕ್ರೌರ್ಯಗಳು ಹೆಚ್ಚುತ್ತಿವೆ. ಮಧ್ಯದಲ್ಲಿ ಶಾಲೆಯನ್ನು ಬಿಡುವ ಮಕ್ಕಳಲ್ಲಿ ಹುಡುಗಿಯರ ಸಂಖ್ಯೆಯೇ ಹೆಚ್ಚು. ಕೆಲವೊಂದು ಕ್ಷೇತ್ರಗಳಲ್ಲಿ ಭಾಗವಹಿಸಲು ಮಹಿಳೆಗೆ ಅವಕಾಶಗಳಿರುವುದಿಲ್ಲ.

ಈ ನಿಟ್ಟಿನಲ್ಲಿ ಮಹಿಳೆಯರನ್ನು ಆರ್ಥಿಕವಾಗಿ ಸದೃಢರನ್ನಾಗಿ ಮಾಡಲು ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯು ಪ್ರಮುಖವಾದ ಪಾತ್ರವಹಿಸಿದೆ. ಇಲ್ಲಿ ಮಹಿಳಾ ಕಾರ್ಮಿಕರಿಗೆ ಕೆಲಸದ ಲಭ್ಯತೆ ಅಧಿಕವಾಗಿದೆ. ವರ್ಷವಿಡೀ ಕೆಲಸ ದೊರೆಯುವುದರೊಂದಿಗೆ ಅಧಿಕ ಪ್ರಮಾಣದ ವೇತನವು ಇಲ್ಲಿ ದೊರೆಯುತ್ತದೆ. ಹಾಗಾಗಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಸುಧಾರಣೆಗೆ ಈ ಮಾರುಕಟ್ಟೆಯು ಮುಖ್ಯವಾಗಿದೆ ಎಂದು ಹೇಳಬಹುದು. ಮಹಿಳಾ ಕಾರ್ಮಿಕರು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿರುವುದರಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿರುವುದನ್ನು ಕಾಣಬಹುದು.

೪.೨ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ವಿಶ್ಲೇಷಣೆ ;

ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ಇಟ್ಟುಕೊಂಡು ಅಧ್ಯಯನಕೈಗೊಂಡು ಸರಕಾರದ ಸೌಲಭ್ಯಗಳು ಎಷ್ಟರ ಮಟ್ಟಿಗೆ ಕಾರ್ಮಿಕರಿಗೆ ತಲುಪಿವೆ ಎನ್ನುವುದು ಕ್ಷೇತ್ರಕಾರ್ಯದಿಂದ ಬಂದ ದತ್ತಾಂಶಗಳನ್ನು ಬಳಸಿಕೊಂಡು ಮಹಿಳಾ ಕಾರ್ಮಿಕರ ಆರ್ಥಿಕ, ಸಾಮಾಜಿಕ ಸ್ಥಿತಿ ಮತ್ತು ಅವರ ಹಿನ್ನೆಲೆಯನ್ನು ಅರಿಯಲು ಸಂಶೋಧಕಳಾದ ನಾನು ಅಧ್ಯಯನ ಕೈಗೊಂಡಾಗ ಅವರ ವೈಯಕ್ತಿಕ ಮಾಹಿತಿಯ ಮೇರೆಗೆ ಹಾಗೂ ವಾಸ್ತವಿಕ ಮಾಹಿತಿಯನ್ನು ಅಧ್ಯಯದಲ್ಲಿ ವಿಶ್ಲೇಷಿಸಿದ್ದೇನೆ. ಈ ಕೆಳಕಂಡ ಕೋಷ್ಟಕಗಳ ಮೂಲಕ

೪.೨.೧ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ ಅಂಶಗಳ ವಿಶ್ಲೇಷಣೆ

ಕೋಷ್ಠಕ ೪.೧ ಮಹಿಳಾ ಕಾರ್ಮಿಕರ ಧರ್ಮದ ಮಾಹಿತಿ

ಅ.ನಂ	ಧರ್ಮ	ಮಹಿಳಾ ಕಾರ್ಮಿಕರು	ಪ್ರತಿಶತ
೧	ಹಿಂದೂ	೪೫೦	೯೦%
೨	ಮುಸ್ಲಿಂ	೨೦	೦೪%
೩	ಕ್ರಿಶ್ಚಿಯನ್	೧೦	೦೪%
೪	ಇತರೆ	೨೦	೦೪%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಕೋಷ್ಟಕ ೪.೧ ರಲ್ಲಿ ಕಾರ್ಮಿಕರ ಧರ್ಮವನ್ನು ಸೂಚಿಸುತ್ತದೆ. ಪ್ರತಿಶತ ೯೦.೦೦ ರಷ್ಟು ಹಿಂದೂ ಮಹಿಳೆಯರಿದ್ದರೆ ಪ್ರತಿಶತ ೪.೦೦ರಷ್ಟು ಮುಸ್ಲಿಂ ಮಹಿಳೆಯರು ಇದ್ದಾರೆ. ಪ್ರತಿಶತ ೦೨.೦೦ ರಷ್ಟು ಕ್ರಿಶ್ಚಿಯನ್ ಮಹಿಳೆಯರು ಇಲ್ಲದೇ ಇರುವುದು ತಿಳಿದು ಬರುತ್ತದೆ. ಆದರೆ ಇತರೆ ಧರ್ಮೀಯರು ಪ್ರತಿಶತ ೦೪.೦೦ ರಷ್ಟು ಇದ್ದು. ಒಟ್ಟಿನಲ್ಲಿ ಹಿಂದೂ ಮಹಿಳೆಯರೇ ಅಧಿಕವಾಗಿರುವುದು ತಿಳಿಯುತ್ತದೆ.

ಕೋಷ್ಟಕ ೪.೨ ಮಹಿಳಾ ಕಾರ್ಮಿಕರ ಜಾತಿ

ಅ.ನಂ	ಜಾತಿ	ಮಹಿಳಾ ಕಾರ್ಮಿಕರು	ಪ್ರತಿಶತ
೧	ಲಿಂಗಾಯತ	೪೦	೦೮%
೨	ವಾಲ್ಮೀಕಿ	೨೦೫	೪೧%
೩	ಹರಿಜನ	೬೫	೧೩%
೪	ಕುರುಬ	೯೫	೧೯%
೫	ಮಡಿವಾಳ	೩೦	೦೬%
೬	ಮುಸ್ಲಿಂ	೧೦	೦೨%
೭	ಕ್ರಿಶ್ಚಿಯನ್	೧೦	೦೨%
೮	ಇತರೆ	೪೫	೦೯%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಪ್ರಸ್ತುತ ಅಧ್ಯಯನದಲ್ಲಿ ಮೇಲಿನ ಕೋಷ್ಟಕದ ಅಂಕಿ ಸಂಖ್ಯೆಗಳಂತೆ ಮಾಹಿತಿದಾರರು ಯಾವ ಜಾತಿಗಳಲ್ಲಿ ಎಷ್ಟು ಜನರಿರುವರು ಎಂಬುದು ತಿಳಿದುಬರುತ್ತದೆ. ಪ್ರತಿಶತ ೮.೦೦ ರಷ್ಟು ಮಹಿಳೆಯರು ಲಿಂಗಾಯತ, ಪ್ರತಿಶತ ೪೧.೦೦ ರಷ್ಟು ಮಹಿಳೆಯರು ವಾಲ್ಮೀಕಿ, ಪ್ರತಿಶತ ೧೩.೦೦ ರಷ್ಟು ಮಹಿಳೆಯರು ಹರಿಜನ, ಪ್ರತಿಶತ ೧೯.೦೦ ರಷ್ಟು ಕುರುಬ, ಪ್ರತಿಶತ ೦೬.೦೦ ಮಡಿವಾಳ, ಪ್ರತಿಶತ ೦೨.೦೦ ಮುಸ್ಲಿಂ, ಪ್ರತಿಶತ ೦೨.೦೦ ಕ್ರಿಶ್ಚಿಯನ್ ೦೨.೦೦, ಪ್ರತಿಶತ ೦೯.೦೦ ರಷ್ಟು ಮಹಿಳೆಯರು ಇತರೆ ಜಾತಿಗೆ ಸೇರಿದವರಾಗಿದ್ದಾರೆ. ಮೇಲಿನ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಮಾಹಿತಿದಾರರಲ್ಲಿ ವಾಲ್ಮೀಕಿ ಸಮುದಾಯದ ಮಹಿಳೆಯರೇ ಅಧಿಕವಾಗಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಕೋಷ್ಟಕ ೪.೩ ಮಹಿಳಾ ಕಾರ್ಮಿಕರ ವಯಸ್ಸಿನ ಮಾಹಿತಿ

ಅ.ನಂ	ವಯಸ್ಸು	ಮಹಿಳಾ ಕಾರ್ಮಿಕರು	ಪ್ರತಿಶತ
೧	೧೦-೨೦	೫೦	೧೦%
೨	೨೧-೩೦	೨೧೦	೪೨%
೩	೩೧-೪೦	೧೨೦	೨೪%
೪	೪೧-೫೦	೮೦	೧೬%
೫	೫೦ ಕ್ಕಿಂತ ಹೆಚ್ಚು	೪೦	೦೮%
	ಒಟ್ಟು	೫೦೦	೧೦೦%

ಮಾಹಿತಿ : ಕ್ಷೇತ್ರ ಕಾರ್ಯ

ಕೋಷ್ಟಕ ೪.೩ ಮಹಿಳಾ ಕಾರ್ಮಿಕರ ವಯಸ್ಸನ್ನು ತಿಳಿಸುತ್ತದೆ. ಕೋಷ್ಟಕದಲ್ಲಿ ೧೦ ರಿಂದ ೨೦ ವಯೋಮಾನದ ಮಹಿಳೆಯರು ಪ್ರತಿಶತ ೧೦.೦೦ ರಷ್ಟಿದ್ದಾರೆ. ಪ್ರತಿಶತ ೪೨.೦೦ ಮಹಿಳೆಯರು ೨೧-೩೦ ವರ್ಷದ ವಯೋ ಗುಂಪಿನವರಾಗಿದ್ದಾರೆ. ಪ್ರತಿಶತ ೨೪.೦೦ ರಷ್ಟು ಮಹಿಳೆಯರು ೩೧ ರಿಂದ ೪೦ ವರ್ಷದವರಾಗಿದ್ದಾರೆ. ಪ್ರತಿಶತ ೧೬.೦೦ ರಷ್ಟು ವಯೋಗುಂಪಿನವರು ೪೧ ರಿಂದ ೫೦ ವರ್ಷದವರಾಗಿದ್ದಾರೆ. ಪ್ರತಿಶತ ೧೬.೦೦ ರಷ್ಟು ವಯೋಗುಂಪಿನವರು ೪೧ ರಿಂದ ೫೦ ವರ್ಷದವರಾಗಿದ್ದಾರೆ. ಪ್ರತಿಶತ ೮.೦೦ ರಷ್ಟು ಮಹಿಳೆಯರು ೫೦ ಕ್ಕಿಂತ ಹೆಚ್ಚು ವಯೋಮಾನದವರು ಆಗಿದ್ದಾರೆ. ಅಂದರೆ ಮಹಿಳಾ ಕಾರ್ಮಿಕರಲ್ಲಿ ೨೧ ರಿಂದ ೩೦ ವರ್ಷದ ಮಹಿಳೆಯರು ಹೆಚ್ಚು ಕಂಡು ಬರುತ್ತಾರೆ.

ಕೋಷ್ಟಕ ೪.೪ ಮಹಿಳಾ ಕಾರ್ಮಿಕರ ಶೈಕ್ಷಣಿಕ ಮಾಹಿತಿ

ಅ.ನಂ	ಶಿಕ್ಷಣ	ಮಹಿಳಾ ಕಾರ್ಮಿಕರು	ಪ್ರತಿಶತ
೧	ಅನಕ್ಷರಸ್ಥರು	೨೯೫	೫೯%
೨	ಪ್ರಾಥಮಿಕ	೧೯೦	೩೮%
೩	ಪ್ರೌಢ	೧೫	೦೩%
೪	ಪದವಿ ಪೂರ್ವ	-	೦೦%
೫	ಇತರೆ	-	೦೦%
	ಒಟ್ಟು	೫೦೦	೧೦೦-೦೦

ಮಾಹಿತಿ : ಕ್ಷೇತ್ರ ಕಾರ್ಯ

ಕೋಷ್ಟಕ ೪.೪ ಗಮನಿಸಿದಾಗ ಇಲ್ಲಿಯೂ ಅನಕ್ಷರಸ್ಥರ ಪ್ರಮಾಣಕ್ಕೇನು ಕೊರತೆ ಇರಲಾರದು. ಪ್ರತಿಶತ ೫೯.೦೦ ರಷ್ಟು ಅನಕ್ಷರಸ್ಥರಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಪಡೆದವರು

ಪ್ರತಿಶತ ೩೮.೦೦ ರಷ್ಟು ಮಹಿಳೆಯರಿದ್ದಾರೆ. ಪ್ರತಿಶತ ೩.೦೦ ರಷ್ಟು ಮಹಿಳಾ ಕಾರ್ಮಿಕರು ಪ್ರೌಢಶಾಲೆ ಶಿಕ್ಷಣವನ್ನು ಪಡೆದವರಾಗಿದ್ದಾರೆ. ಯಾವೊಬ್ಬ ಮಹಿಳೆಯೂ ಪದವಿ ಅಥವಾ ಮೇಲ್ಪಟ್ಟು ಶಿಕ್ಷಣವನ್ನು ಪಡೆದಿರುವುದಿಲ್ಲ.

ಕೋಷ್ಟಕ ೪.೫ ಮಹಿಳಾ ಕಾರ್ಮಿಕರ ಮನೆಯ ರಚನೆಯ ಮಾಹಿತಿ

ಅ.ನಂ	ವಾರ್ಷಿಕ ಆದಾಯ	ಮಹಿಳಾ ಕಾರ್ಮಿಕರು	ಪ್ರತಿಶತ
೧	ಗುಡಿಸಲು	೨೫	೦೫%
೨	ಹಂಚಿನ ಮನೆ	೩೯೫	೭೯%
೩	ಆರ್.ಸಿ.ಸಿ.	೧೫	೦೩%
೪	ಮಣ್ಣಿನ ಮನೆ	೨೦	೦೪%
೫	ಇತರೆ ಶೈಲಿ	೪೫	೦೯%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಕೋಷ್ಟಕ ೪.೫ ಮಹಿಳಾ ಕಾರ್ಮಿಕರ ಮನೆಯ ರಚನೆಯನ್ನು ಸೂಚಿಸುತ್ತದೆ. ಪ್ರತಿಶತ ೫.೦೦ ರಷ್ಟು ಮಹಿಳಾ ಕಾರ್ಮಿಕರು ಮನೆಗಳು ಗುಡಿಸಲುಗಳಾಗಿದ್ದರೆ, ಪ್ರತಿಶತ ೭೯.೦೦ ರಷ್ಟು ಮನೆಗಳು ಹಂಚಿನ ಮನೆಗಳಾಗಿರುತ್ತವೆ. ಇಲ್ಲಿ ಪ್ರತಿಶತ ೩.೦೦ ರಷ್ಟು ಆರ್.ಸಿ.ಸಿ., ಪ್ರತಿಶತ ೪.೦೦ ರಷ್ಟು ಮಣ್ಣಿನ ಮನೆ ಇರುತ್ತವೆ. ಪ್ರತಿಶತ ೯.೦೦ ರಷ್ಟು ಮಹಿಳಾ ಕಾರ್ಮಿಕರು ಇತರೆ ಶೈಲಿಯ ಮನೆಗಳನ್ನು ಹೊಂದಿರುತ್ತಾರೆ. ಒಟ್ಟಾರೆಯಾಗಿ ಪ್ರತಿಶತ ೭೯.೦೦ ರಷ್ಟು ಮಹಿಳಾ ಕಾರ್ಮಿಕರು ಹಂಚಿನ ಮನೆಯನ್ನು ಹೊಂದಿರುತ್ತಾರೆ ಎಂದು ತಿಳಿದುಬರುತ್ತದೆ. ಮಹಿಳಾ ಕಾರ್ಮಿಕರು ವರ್ಷದಲ್ಲಿ ಎಷ್ಟು ತಿಂಗಳ ಕೆಲಸ ಮಾಡುತ್ತಾರೆ ಎಂದು ಸೂಚಿಸುತ್ತದೆ. ಪ್ರತಿಶತ ೧೮.೦೦ರಷ್ಟು ಮಹಿಳೆಯರು ೨ ರಿಂದ ೪ ತಿಂಗಳು ಕೆಲಸವನ್ನು ನಿರ್ವಹಣೆ ಮಾಡಿದರೆ, ಪ್ರತಿಶತ ೪೩.೦೦ರಷ್ಟು ಮಹಿಳೆಯರು ೪ ರಿಂದ ೫ ತಿಂಗಳು ಕೆಲಸವನ್ನು ನಿರ್ವಹಿಸುವರು. ಇಲ್ಲಿನ ಮಾರುಕಟ್ಟೆಯು ವರ್ಷದಲ್ಲಿ ೬ ತಿಂಗಳು ಅತಿ ಹೆಚ್ಚು ಭರದಿಂದ ವಹಿವಾಟು ನಡೆಯುತ್ತದೆ. ಇನ್ನು ೬ ತಿಂಗಳ ಅವಧಿಯಲ್ಲಿ ಸಾಧಾರಣ ವಹಿವಾಟು ಇರುತ್ತದೆ. ಪ್ರತಿಶತ ೧೯.೦೦ ರಷ್ಟು ಮಹಿಳೆಯರು ೬ ರಿಂದ ೭ ತಿಂಗಳ ಕೆಲಸ ನಿರ್ವಹಿಸುವರು ಎಂದು ತಿಳಿದುಬರುತ್ತದೆ ಹಾಗೂ ಪ್ರತಿಶತ ೨೦ ರಷ್ಟು ಮಹಿಳೆಯರು ೭ ಕ್ಕಿಂತ ಹೆಚ್ಚು ತಿಂಗಳು ಕೆಲಸವನ್ನು ನಿರ್ವಹಿಸುವರು ಎಂದು ಕ್ಷೇತ್ರ ಕಾರ್ಯದಿಂದ ತಿಳಿಯಬಹುದು.

ಕೋಷ್ಟಕ-೪.೬ ಹಾವೇರಿ ಜಿಲ್ಲೆಯ ಕುಡಿಯುವ ನೀರಿನ ವ್ಯವಸ್ಥೆ

ಕ್ರ ಸಂ	ತಾಲೂಕು	ಉಪಗ್ರಾಮ ಸೇರಿ	ಕುಡಿಯುವ ನೀರಿನ ಸೌಲಭ್ಯವಿರುವ ಜನವಸತಿಗಳ ಗ್ರಾಮಗಳ ಸಂಖ್ಯೆ				
೧	ಬ್ಯಾಡಗಿ	೬೪	೧	೨೭	೨೧೨	೧೨	೨
೨	ಹಾನಗಲ್ಲ	೧೬೧	೦	೪೫	೪೫	೭೦	೧
೩	ಹಾವೇರಿ	೯೨	೦	೧೯	೨೯	೨೧	೨೩
೪	ಹಿರೇಕೆರೂರು	೧೩೧	೦	೪೨	೫೧	೮	೩೦
೫	ರಾಣೇಬೆನ್ನೂರು	೧೦೮	೦	೧೪	೮	೧೭	೬೯
೬	ಸವಣೂರ	೬೪	೦	೧೫	೨೭	೧೧	೧೧
೭	ಶಿಗ್ಗಾಂವ	೯೧	೧	೫೧	೩೨	೬	೧
	ಜಿಲ್ಲಾ ಒಟ್ಟು	೭೧೧	೨	೨೧೩	೨೧೪ ಮಾಹಿತಿ	೧೪೫ ಮೂಲ :	೧೩೭ ಜಿಲ್ಲಾ

ಪಂಚಾಯತ್ ಇಲಾಖೆ, ಹಾವೇರಿ.

ಮೇಲಿನ ಕೋಷ್ಟಕವು ಹಾವೇರಿ ಜಿಲ್ಲೆಯಲ್ಲಿನ ಎಲ್ಲಾ ೭ ತಾಲೂಕುಗಳಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಸೂಚಿಸುತ್ತದೆ. ಬ್ಯಾಡಗಿ ತಾಲೂಕಿನಲ್ಲಿ ಉಪಗ್ರಾಮ ಸೇರಿ ೬೪ ಹಳ್ಳಿಗಳಿಗೆ ನೀರಿನ ಸರಬರಾಜು ವ್ಯವಸ್ಥೆ ಮಾಡಿದ್ದು, ಒಟ್ಟಾರೆಯಾಗಿ ಜಿಲ್ಲೆಯಲ್ಲಿ ೭೧೧ ಗ್ರಾಮಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವಲ್ಲಿ ಯಶಸ್ವಿಯಾಗಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ತೊಂದರೆ ಆದರೆ ಪುರಸಭೆಯವರು ಬಾಡಿಗೆ ಟ್ರ್ಯಾಕ್ಟರ್ ಮುಖಾಂತರ ಹಾಗೂ ತಮ್ಮ ಸ್ವಂತ ಟ್ರ್ಯಾಕ್ಟರ ಮುಖಾಂತರ ನೀರನ್ನು ಒದಗಿಸುವಲ್ಲಿ ಸಹಾಯ ಮಾಡುತ್ತಾರೆ. ಹಾವೇರಿ ಜಿಲ್ಲೆಯಲ್ಲಿನ ಅಭಿವೃದ್ಧಿ ಕಾರ್ಯದಲ್ಲಿ ಒಂದಾದ ಕುಡಿಯುವ ನೀರಿನ ವ್ಯವಸ್ಥೆಯು ಮುಂದುವರೆದಿದ್ದು ಅದರಲ್ಲಿ ಬ್ಯಾಡಗಿಯಲ್ಲಿ ಕೊಳವೆ ಬಾವಿಯಿಂದ ಹಾಗೂ ಸಣ್ಣ ನೀರಾವರಿ ಯೋಜನೆಗಳಿಂದ ಬ್ಯಾಡಗಿ ಪುರುಸಭೆಯು ಜನರಿಗೆ ಕುಡಿಯುವ ನೀರು ಒದಗಿಸುವಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಿದೆ ಹಾಗೂ ಬೇಸಿಗೆಯಲ್ಲಿ ಜನರಿಗೆ ನೀರಿನ ತೊಂದರೆ ಆದಾಗ ಟ್ರ್ಯಾಕ್ಟರ್ ಮುಖಾಂತರ ಜನರಿಗೆ ನೀರನ್ನು ಒದಗಿಸುತ್ತದೆ. ಮೂಲಭೂತ ಸೌಕರ್ಯವಾದ ನೈರ್ಮಲ್ಯದ ವಿವರವನ್ನು ತೋರಿಸುತ್ತದೆ. ಅಧ್ಯಯನ ಕ್ಷೇತ್ರವಾದ ಬ್ಯಾಡಗಿಯಲ್ಲಿ ವೈಯಕ್ತಿಕ ಕುಟುಂಬ ಶೌಚಾಲಯಗಳು ೨೯೦೯ ಇದ್ದು, ಶಾಲಾ ಶೌಚಾಲಯಗಳು ೨೪೦, ಮತ್ತು ಅಂಗನವಾಡಿ ಶೌಚಾಲಯಗಳು ೨೯೦೯ ಇದ್ದು, ಇಲ್ಲಿಯ ಜನತೆಯು ಸರ್ಕಾರದಿಂದ

ಸೌಲಭ್ಯವನ್ನು ಪಡೆದು ಶೌಚಾಲಯ ನಿರ್ಮಿಸಿಕೊಂಡು ಗ್ರಾಮೀಣ ಹಾಗೂ ಪಟ್ಟಣ ಪಂಚಾಯತಿಯಲ್ಲಿ ನೈರ್ಮಲ್ಯ ಹೋಗಲಾಡಿಸುವಲ್ಲಿ ಇಲ್ಲಿನ ಜನರು ಮುಂದೆ ಬಂದಿದ್ದಾರೆ ಹಾಗೂ ಬ್ಯಾಡಗಿಯಲ್ಲಿ ೪ ಸಮುದಾಯ ಶೌಚಾಲಯಗಳಿವೆ. ಕಾರ್ಮಿಕರು ವಾಸಿಸುವ ಪ್ರತಿಶತ ೫೬.೦೦ ರಷ್ಟು ಮನೆಗಳು ಸ್ವಂತದ್ದಾಗಿರುತ್ತವೆ. ಪ್ರತಿಶತ ೪೪.೦೦ ರಷ್ಟು ಮಾಹಿತಿದಾರರ ಮನೆಗಳು ಬಾಡಿಗೆ ಅಲ್ಲವಿದ್ದರೂ ಬೇರೆಯವರ ಜಾಗಗಳಲ್ಲಿ ಜೋಪಡಿಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಾರೆ. ಕೆಲವರು ಊರ ಹೊರಗೆ ಸರಕಾರಿ ಜಾಗದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ತಮ್ಮ ಜೀವನವನ್ನು ಸಾಗಿಸುವುದು ತಿಳಿದು ಬರುತ್ತದೆ.

೪.೨.೨ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರ್ಥಿಕ ಅಂಶಗಳ ವಿಶ್ಲೇಷಣೆ ;

ಕೋಷ್ಟಕ ೪.೭ ಮಹಿಳಾ ಕಾರ್ಮಿಕರ ಉದ್ಯೋಗದ ಮಾಹಿತಿ

ಅ.ನಂ	ಉದ್ಯೋಗ	ಮಹಿಳಾ ಕಾರ್ಮಿಕರು	ಪ್ರತಿಶತ
೧	ಕೃಷಿ	೩೫	೦೭%
೨	ವ್ಯಾಪಾರ	೧೦	೦೨%
೩	ಕೂಲಿ	೪೪೦	೮೮%
೪	ಇತರೆ	೧೫	೦೩%
	ಒಟ್ಟು	೫೦೦	೧೦೦.೦೦%

ಮಾಹಿತಿ : ಕ್ಷೇತ್ರ ಕಾರ್ಯ

ಕೋಷ್ಟಕ ೪.೭ ರಲ್ಲಿ ಮಹಿಳಾ ಕಾರ್ಮಿಕರ ಮನೆಯಲ್ಲಿ ಇರುವ ಇತರೆ ಸಂಖ್ಯೆಯನ್ನು ಅವಲೋಕಿಸಿದಾಗ ಅವರ ಉದ್ಯೋಗವನ್ನು ಸೂಚಿಸುತ್ತದೆ. ಮೇಲಿನ ಕೋಷ್ಟಕದಲ್ಲಿ ಪ್ರತಿಶತ ೭.೦೦ ರಷ್ಟು ಮಹಿಳೆಯರು ಕೃಷಿ ಕೆಲಸವನ್ನು ಮಾಡುವವರಾಗಿದ್ದಾರೆ. ಪ್ರತಿಶತ ೨.೦ ರಷ್ಟು ಮಹಿಳೆಯರು ವ್ಯಾಪಾರ ಕೆಲಸ ಮಾಡುವವರಾಗಿದ್ದಾರೆ. ಪ್ರತಿಶತ ೮೮.೦೦ ರಷ್ಟು ಮಹಿಳೆಯರು ಕೂಲಿ ಕೆಲಸ ಮಾಡುವವರಾಗಿದ್ದಾರೆ. ಪ್ರತಿಶತ ೩.೦೦ ರಷ್ಟು ಇತರೆ ಕೆಲಸ ಮಾಡುವವರಾಗಿದ್ದಾರೆ. ಇಲ್ಲಿ ದುಡಿಯುವ ಮಹಿಳೆಯರಿಗೆ ಯಾವುದೇ ರೀತಿಯ ಸಾಮಾಜಿಕ ಭದ್ರತೆಯನ್ನು ನೀಡುವುದಿಲ್ಲ. ಅಲ್ಲದೇ ಖಾಯಿಲೆ ಬಿದ್ದಾಗಲೂ ದುಡಿಯುವ ಸಂಬಳವನ್ನು ಹೊರತುಪಡಿಸಿ ಯಾವುದೇ ರೀತಿಯ ಭತ್ಯೆಗಳನ್ನು ನೀಡುವುದಿಲ್ಲ. ಶೇ.೯೯.೨ ಮಂದಿ ಕಾರ್ಮಿಕ ಮಹಿಳೆಯರು ತಮಗೆ ಯಾವುದೇ ರೀತಿಯ ಪಿಂಚಣಿ, ಭತ್ಯೆ ಅಥವಾ ವೇತನಗಳು ಹೆಚ್ಚುವರಿಯಾಗಿ ನೀಡುವುದಿಲ್ಲ. ಸಂದರ್ಶನಕ್ಕೊಳಪಟ್ಟ ಶೇ.೦.೮ ಮಹಿಳೆಯರು ಮಾತ್ರ ತಮ್ಮ ಇಳಿವಯಸ್ಸಿನಿಂದಾಗಿ ಕೆಲವೊಂದು ಬಾರಿ ದುಡಿಸಿಕೊಳ್ಳುವ ಅಂಗಡಿ ಯಜಮಾನರು ಆರ್ಥಿಕ ಸಹಾಯವನ್ನು ಮಾಡಿರುತ್ತಾರೆ. ಆದರೆ ಅದನ್ನು ನಮ್ಮ ಸಂಬಳದಲ್ಲಿ ಕಡಿತಗೊಳಿಸಿಕೊಳ್ಳುತ್ತಾರೆ ಎಂದಿದ್ದಾರೆ.

ಕೋಷ್ಟಕ ೪.೮ ದಿನದ ಎಷ್ಟು ಗಂಟೆ ದುಡಿಯುತ್ತೀರಿ.

ಕ್ರಸಂ.	ದುಡಿಮೆಯ ಸಮಯ	ಸಂಖ್ಯೆ	ಶೇಕಡಾ
೧.	೫ ರಿಂದ ೬ ಗಂಟೆಗಳು	೫೨	೧೦.೪
೨.	೬ ರಿಂದ ೭ ಗಂಟೆಗಳು	೩೨೦	೬೪
೩.	೭ ರಿಂದ ೮ ಗಂಟೆಗಳು	೪೦	೮
೪.	೮ ರಿಂದ ೯ ಗಂಟೆಗಳು	೮೮	೧೭.೬
ಒಟ್ಟು		೫೦೦	೧೦೦

ಮೂಲ : ಕ್ಷೇತ್ರ ಕಾರ್ಯ.

ಮೇಲಿನ ಕೋಷ್ಟಕವು ಮಹಿಳೆಯರು ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ದುಡಿಯುವ ಸಮಯದ ಬಗೆಗಿನ ಮಾಹಿತಿಯನ್ನು ಒದಗಿಸುತ್ತದೆ. ಇಲ್ಲಿ ಮುಖ್ಯವಾಗಿ ಇವರ ದುಡಿಯುವ ಅವಧಿಗೆ ಯಾವುದೇ ನಿರ್ಬಂಧಗಳಿರುವುದಿಲ್ಲ. ಕೆಲವು ಮಹಿಳೆಯರು ಮುಂಜಾನೆ ಬೇಗನೆ ಎದ್ದು ಕೆಲಸಕ್ಕೆ ಹಾಜರಾಗುತ್ತಾರೆ. ಮಧ್ಯಾಹ್ನದವರೆಗೆ ದುಡಿದು ಮತ್ತೆ ವಿಶ್ರಾಂತಿ ಪಡೆಯಲು ಮನೆಗೆ ತೆರಳುತ್ತಾರೆ. ಇವರಲ್ಲಿ ವಯಸ್ಸಾದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶೇ.೧೦.೪ರಷ್ಟು ಮಹಿಳೆಯರು ಈ ವರ್ಗಕ್ಕೆ ಸೇರಿದವರಾಗಿದ್ದಾರೆ. ಬಿಸಿಲಿನ ಝಳದಿಂದ ರಕ್ಷಣೆ ಪಡೆಯುವ ಸಲುವಾಗಿ ಬೇಗ ಕೆಲಸಕ್ಕೆ ಹಾಜರಾಗುತ್ತಾರೆ. ಶೇ.೬೪ಕ್ಕೂ ಹೆಚ್ಚಿನ ಮಹಿಳೆಯರು ೬ ರಿಂದ ೭ ಗಂಟೆಗಳವರೆಗೂ ದುಡಿಯುತ್ತಾರೆ. ಇವರಲ್ಲಿ ಮಧ್ಯ ವಯಸ್ಸಿನ ಮಹಿಳೆಯರು ಜಾಸ್ತಿ ಪ್ರಮಾಣದಲ್ಲಿರುವುದು ಕಂಡುಬಂದಿರುತ್ತದೆ. ಶೇ.೮ರಷ್ಟು ಮಹಿಳೆಯರು ೭ ರಿಂದ ೮ ಗಂಟೆವರೆಗೂ ದುಡಿಯುತ್ತಾರೆ. ಶೇ.೧೭.೬ರಷ್ಟು ಮಹಿಳೆಯರು ೮ ರಿಂದ ೯ ಗಂಟೆವರೆಗೂ ದುಡಿಯುತ್ತಾರೆ. ಈ ವರ್ಗವು ತೀವ್ರ ಹಣದ ಅಭಾವ, ಬಡತನದಿಂದ ಕೂಡಿದ ಮಹಿಳೆಯರ ವರ್ಗವಾಗಿದೆ. ಇವರು ರಜೆ ಪಡೆದುಕೊಳ್ಳುವುದೂ ವಿರಳವಾಗಿದೆ. ಮಾರುಕಟ್ಟೆಯಲ್ಲಿ ತಂತ್ರಜ್ಞಾನದ ಅಳವಡಿಕೆಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಮೆಣಸಿನಕಾಯಿ ಉತ್ಪನ್ನವನ್ನು ರಫ್ತು ಮಾಡಲು ಅದು ಹಲವಾರು ರೀತಿಯಲ್ಲಿ ಸಂಸ್ಕರಣೆಗೊಳಪಡುತ್ತದೆ. ಆದರೆ ಈ ಎಲ್ಲಾ ಸಂಸ್ಕರಣಾ ವಿಧಾನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾರ್ಮಿಕ ಬಲವು ಕೆಲಸ ಮಾಡುತ್ತದೆ. ಯಂತ್ರೋಪಕರಣದ ಬಳಕೆಯನ್ನು ಕೆಲವು ವಿಧಾನಗಳಲ್ಲಿ ಅನುಸರಿಸಲಾಗುತ್ತದೆ. ಆದರೆ ಮೆಣಸಿನಕಾಯಿ ತೊಟ್ಟು ಬಿಡಿಸಲು ಹೆಚ್ಚಾಗಿ ಮಹಿಳಾ ಕಾರ್ಮಿಕರೇ ಉಪಯೋಗಿಸಲ್ಪಡುತ್ತಾರೆ. ಇನ್ನುಳಿದಂತೆ ಕಸ ವಿಂಗಡಣೆ, ಒಣಗಿಸುವುದು, ಪಾಲಿಶ್ ಮಾಡುವ ಹಂತಗಳಲ್ಲಿ ತಂತ್ರಜ್ಞಾನದ ಬಳಕೆಯನ್ನು ಮಾಡಲಾಗುತ್ತದೆ. ಆದರೆ ಅತೀ ಹೆಚ್ಚು ಶೇ.೮೬.೨ರಷ್ಟು

ಕಾರ್ಮಿಕ ಬಲವು ತಂತ್ರಜ್ಞಾನದ ಉಪಯೋಗವಿಲ್ಲದ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ದುಡಿಯುತ್ತಿದ್ದು, ಶೇ.೧೩.೮ರಷ್ಟು ಕಾರ್ಮಿಕರು ದುಡಿಯುವ ಸ್ಥಳದಲ್ಲಿ ತಂತ್ರಜ್ಞಾನದ ಬಳಕೆಯನ್ನು ನಾವು ಇಲ್ಲಿ ಗುರುತಿಸಬಹುದಾಗಿದೆ.

ಕೋಷ್ಟಕ ೪.೯ ಮಾಹಿತಿದಾರರ ಕುಟುಂಬದ ಆದಾಯದ ಮೂಲ

ಕ್ರ.ಸಂ.	ಆದಾಯ ಮೂಲ	ಸಂಖ್ಯೆ	ಶೇಕಡಾ
೧.	ಕೃಷಿ	೨೪	೪.೮
೨.	ವ್ಯಾಪಾರ	೮	೧.೬
೩.	ಖಾಸಗಿ ಉದ್ಯೋಗ	೩	೦.೬
೪.	ಕೂಲಿ	೪೪೭	೮೯.೪
೫.	ಮನೆಗೆಲಸ	೨೦೬	೪೧.೨

ಮೂಲ : ಕ್ಷೇತ್ರ ಕಾರ್ಯ.

ಮೇಲಿನ ಕೋಷ್ಟಕವು ಬ್ಯಾಡಗಿ ತಾಲೂಕಿನ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಆದಾಯದ ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ಶೇ.೪.೮ ಮಂದಿ ತಮಗೆ ಕೃಷಿ ಆದಾಯವಿದೆ ಎಂದೂ, ಶೇ.೧.೬ರಷ್ಟು ಮಹಿಳೆಯರು ವ್ಯಾಪಾರದಿಂದ, ಶೇ.೦.೬ ಮಹಿಳೆಯರು ಖಾಸಗಿ ಉದ್ಯೋಗ ಮಾಡುವುದರಿಂದ ಆದಾಯವನ್ನು ಗಳಿಸುತ್ತಿದ್ದೇವೆ ಎಂದಿದ್ದಾರೆ. ಆದರೆ ಸಂದರ್ಶಿತ ಮಹಿಳೆಯರಲ್ಲಿ ಹೆಚ್ಚಿನವರು ಕೂಲಿ ಕೆಲಸದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ಅತ್ಯಧಿಕ ಶೇ.೮೯.೪ರಷ್ಟಿದ್ದಾರೆ. ಅಂತೆಯೇ ಮನೆಗೆಲಸ ಮಾಡುವ ಮುಖಾಂತರವೂ ಜೀವನೋಪಾಯಕ್ಕೆ ಶೇ.೪೧.೨ ಮಹಿಳೆಯರು ಆದಾಯವನ್ನು ಹೊಂದಿದ್ದಾರೆ. ಈ ಮಾಹಿತಿಯನ್ನು ವಿಮರ್ಶಿಸಿದಾಗ ಅಧ್ಯಯನದ ಸಂದರ್ಶಿತರಲ್ಲಿ ಅತ್ಯಧಿಕ ಮಹಿಳೆಯರು ಕೂಲಿ ಕೆಲಸವನ್ನೇ ನಂಬಿ ಬದುಕು ನಡೆಸುವವರಾಗಿದ್ದಾರೆ ಎಂಬುದು ಕಂಡುಕೊಳ್ಳಲಾಗಿದೆ. ಇಲ್ಲಿನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ವೇತನದ ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ಕಾರ್ಮಿಕರಿಗೆ ನೀಡುವ ವೇತನವು ತೃಪ್ತಿ ತಂದಿದೆಯೇ ಎಂಬ ಪ್ರಶ್ನೆಗೆ ಶೇ.೧೦.೪ ಮಂದಿ ಹೌದು ಎಂದು ಉತ್ತರಿಸಿದ್ದು, ಸಿಗುವ ವೇತನ ತೃಪ್ತಿ ತಂದಿದೆ ಎಂದು ಹೇಳಿರುತ್ತಾರೆ. ಆದರೆ ಅತ್ಯಧಿಕ ಶೇ.೮೨ರಷ್ಟು ಮಹಿಳೆಯರು ನೀಡಲ್ಪಡುವ ವೇತನವು ತೃಪ್ತಿಕರವಾಗಿಲ್ಲ ಎಂದಿದ್ದು, ಶೇ.೭.೬ರಷ್ಟು ಮಾಹಿತಿದಾರರು ದೊರಕುವ ವೇತನವು ಸಮಾಧಾನಕರ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇಲ್ಲಿ ಕಾರ್ಮಿಕರಿಗೆ ದಿನಗೂಲಿಯನ್ನು ನೀಡುತ್ತಿದ್ದು ಸರಿಯಾಗಿ ದಿನಾಂತ್ಯದಲ್ಲಿ ಅಂದಿನ ವೇತನ ಅಂದೇ ಪಾವತಿಸಲ್ಪಡುವುದು ಕೆಲಸಗಾರರಿಗೆ ತುಂಬಾ ತೃಪ್ತಿ ತಂದ ವಿಷಯವಾಗಿದೆ.

ಕೋಷ್ಟಕ ೪.೧೦ ಉದ್ಯೋಗಕ್ಕೆ ಸೇರಲು ಕಾರಣ

ಕ್ರ.ಸಂ.	ಕಾರಣ	ಸಂಖ್ಯೆ	ಶೇಕಡಾ
೧.	ಆಸಕ್ತಿ	೨೬	೫.೨
೨.	ಆದಾಯ	೩೬೦	೭೨
೩.	ವೃತ್ತಿಗೋಸ್ಕರ	೧೧೪	೨೨.೮
ಒಟ್ಟು		೫೦೦	೧೦೦

ಮೂಲ : ಕ್ಷೇತ್ರ ಕಾರ್ಯ.

ಕೋಷ್ಟಕ ೪.೧೦ ರಲ್ಲಿ ಕೃಷಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳೆಯರ ದುಡಿಮೆಗೆ ಕಾರಣಗಳನ್ನು ಕಂಡುಕೊಳ್ಳುವ ಅಂಕಿ ಅಂಶಗಳನ್ನು ವಿವರಿಸಲಾಗಿದೆ. ಅಧ್ಯಯನದಲ್ಲಿ ಕಂಡುಕೊಂಡ ಪ್ರಕಾರ ಬೇರೆ ಬೇರೆ ಕಾರಣಗಳಿಂದ ಈ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ಮಹಿಳೆಯರು ದುಡಿಯುತ್ತಿದ್ದಾರೆ. ಮುಖ್ಯವಾಗಿ ಆಸಕ್ತಿಯಿಂದ ಈ ದುಡಿಮೆಯನ್ನು ಆಯ್ಕೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ೨೬ ಮಹಿಳೆಯರು (ಶೇ.೫.೨) ಈ ಉದ್ಯೋಗವನ್ನು ಆರಿಸಿಕೊಂಡಿರುತ್ತಾರೆ. ಸಂದರ್ಶಿಸಿದವರಲ್ಲಿ ಸುಮಾರು ೩೬೦ ಮಹಿಳೆಯರು (ಶೇ.೭೨) ಆದಾಯದ ದೃಷ್ಟಿಯಿಂದ ಈ ಉದ್ಯೋಗವನ್ನು ಆಯ್ಕೆ ಮಾಡಿರುತ್ತಾರೆ. ಉಳಿದ ಸುಮಾರು ೧೧೪ ಮಹಿಳೆಯರು (ಶೇ.೨೨.೮) ಈ ಉದ್ಯೋಗವನ್ನು ವೃತ್ತಿಯಾಗಿಯೇ ತೆಗೆದುಕೊಂಡಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಹೆಚ್ಚಿನ ಮಹಿಳೆಯರು (ಶೇ. ೭೨) ಆದಾಯದ ದೃಷ್ಟಿಯಿಂದ ಈ ಉದ್ಯೋಗವನ್ನು ಅವಲಂಬಿಸಿರುತ್ತಾರೆ. ಮೆಣಸಿನಕಾಯಿ ತೊಟ್ಟು ಬಿಡಿಸುವುದು, ತುಂಬು ತೆಗೆಯುವುದು, ಸ್ವಚ್ಛ ಮಾಡುವುದು, ಇತ್ಯಾದಿ ಕೆಲಸಗಳಿಗೆ ಕೆ.ಜಿ.ಗೆ ಎಂಟರಿಂದ ಹತ್ತು ರೂಪಾಯಿವರೆಗೆ ಕೂಲಿಯನ್ನು ನಿಗದಿಪಡಿಸಲಾಗಿದ್ದು ಅವರವರ ಸಾಮರ್ಥ್ಯಕ್ಕನುಗುಣವಾಗಿ ದಿನದಲ್ಲಿ ಎಷ್ಟು ಕೆ.ಜಿ ಮೆಣಸಿನಕಾಯಿ ತೊಟ್ಟು, ತುಂಬು ತೆಗೆಯಬಲ್ಲರೇ ಅಷ್ಟೇ ಪ್ರಮಾಣದಲ್ಲಿ ಕೂಲಿಯನ್ನು ಮಹಿಳೆಯರು ಪಡೆಯುತ್ತಾರೆ. ಹೀಗಾಗಿ ಮಹಿಳೆಯರ ದೈಹಿಕ ಸಾಮರ್ಥ್ಯವೇ ಆದಾಯವನ್ನು ನಿರ್ಧರಿಸುತ್ತದೆ. ಮಹಿಳೆಗೆ ಹೊರಗಡೆ ದುಡಿಯಲು ಕುಟುಂಬ ವರ್ಗದ ಪ್ರೋತ್ಸಾಹ ಅತೀ ಅಗತ್ಯ. ಅದರಲ್ಲಿ ತಾಯಂದಿರು ಉದ್ಯೋಗದ ಒತ್ತಡದಲ್ಲಿ ಇರುವಾಗ ಅವರ ಮಕ್ಕಳ ಲಾಲನೆ ಪಾಲನೆ ಅತೀ ಅಗತ್ಯ. ಅದರಲ್ಲೂ ಅದೆಷ್ಟೋ ಮಹಿಳೆಯರು ತಮ್ಮ ಕುಟುಂಬ ವರ್ಗ, ಮಕ್ಕಳ ಆರೈಕೆಯ ಕಾರಣದಿಂದ ಉದ್ಯೋಗಿಯಾಗಿರಲು ಇಷ್ಟಪಡುವುದಿಲ್ಲ. ಗಂಡ ದುಡಿಯದೇ ಇದ್ದಂತಹ ಸಂದರ್ಭದಲ್ಲಿ ಮಹಿಳೆಗೆ ದುಡಿಮೆ ಅನಿವಾರ್ಯವಾಗುತ್ತದೆ. ಇಂತಹ ಸಮಯದಲ್ಲಿ ಕುಟುಂಬ ವರ್ಗದ ಪ್ರೋತ್ಸಾಹ, ಅವಳ

ಮಕ್ಕಳ ಲಾಲನೆ ಪಾಲನೆ ಅತೀ ಅಗತ್ಯ. ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ಸಂದರ್ಶಿಸಿದ ೫೦೦ ಮಹಿಳೆಯರಲ್ಲಿ ೩೫೦ ಮಹಿಳೆಯರು (ಶೇ.೭೦) ತಮ್ಮ ದುಡಿಮೆಗೆ ಕುಟುಂಬ ವರ್ಗದ ಸಹಕಾರ ಇದೆ ಎಂದು ಹೇಳಿರುತ್ತಾರೆ. ಆದರೆ ೬೦ ಮಂದಿ ಮಹಿಳೆಯರು (ಶೇ.೧೨) ಮನೆಯವರಿಂದ ನಮಗೆ ಯಾವುದೇ ರೀತಿಯ ಸಹಕಾರ ಇಲ್ಲ ಎಂದಿದ್ದು, ಉಳಿದ ೯೦ ಮಹಿಳೆಯರು (ಶೇ.೧೮) ತಮ್ಮ ಕುಟುಂಬ ವರ್ಗವು ತಕ್ಕಮಟ್ಟಿಗೆ ನಮ್ಮ ದುಡಿಮೆಗೆ ಸಹಕಾರವನ್ನು ನೀಡುತ್ತದೆ ಎಂದಿದ್ದಾರೆ.

ಇಲ್ಲಿ ದುಡಿಯುವ ಎಲ್ಲಾ ಮಹಿಳೆಯರು ತಾತ್ಕಾಲಿಕ ನೆಲೆಯಲ್ಲಿ ಉದ್ಯೋಗ ಹೊಂದಿದ್ದು ಕೆಲವು ಮಹಿಳೆಯರು ಸುಮಾರು ೩೦-೪೦ ವರ್ಷಗಳಿಂದಲೂ ಇಲ್ಲಿ ದುಡಿಯುತ್ತಿದ್ದಾರೆ. ಇಲ್ಲಿ ದುಡಿಯುವ ಮಹಿಳೆಯರಲ್ಲಿ ಶೇ.೬೭.೪ರಷ್ಟು ಜನರ ಗಂಡಂದಿರು ಕೂಲಿ ವೃತ್ತಿಯಲ್ಲಿದ್ದು, ಉಳಿದಂತೆ ಡ್ರೈವರ್, ಹಮಾಲಿ ಕೆಲಸ, ಸೆಕ್ಯೂರಿಟಿಗಳಾಗಿ, ಪೈಂಟಿಂಗ್ ವೃತ್ತಿಯಲ್ಲಿ ತೊಡಗಿಸಿಕೊಂಡಿರುತ್ತಾರೆ.

ಕೋಷ್ಟಕ ೪.೧೧ ಮಹಿಳಾ ಕಾರ್ಮಿಕರು ವೈವಾಹಿಕ ಸ್ಥಿತಿಗತಿ

ಅ.ನಂ	ವೈವಾಹಿಕ ಸ್ಥಿತಿ	ಮಹಿಳಾ ಕಾರ್ಮಿಕರು	ಪ್ರತಿಶತ
೧	ವಿವಾಹಿತೆ	೩೫೫	೭೧%
೨	ವಿಧವೆ	೧೦೫	೨೧%
೩	ವಿಚ್ಛೇಧಿತ	-	೦೦%
೪	ಅವಿವಾಹಿತೆ	೪೦	೦೮%
	ಒಟ್ಟು	೫೦೦	೧೦೦.೦೦

ಕೋಷ್ಟಕ ೪.೧೧ ರಲ್ಲಿ ಮಹಿಳಾ ಕಾರ್ಮಿಕರ ವೈವಾಹಿಕ ಸ್ಥಿತಿಯನ್ನು ಕುರಿತಂತೆ ಮಾಹಿತಿಯನ್ನು ಸಂಗ್ರಹಿಸಿದಾಗ ಪ್ರತಿಶತ ೭೧.೦೦ ರಷ್ಟು ಮಹಿಳಾ ಕಾರ್ಮಿಕರು ವಿವಾಹವಾಗಿದ್ದು, ಪ್ರತಿಶತ ೨೧.೦೦ ರಷ್ಟು ಮಹಿಳೆಯರು ವಿಧವೆಯರಾಗಿದ್ದಾರೆ ಹಾಗೂ ವಿಚ್ಛೇದಿತೆಯರು ಇರುವುದಿಲ್ಲ. ಪ್ರತಿಶತ ೦೮.೦೦ ರಷ್ಟು ಮಹಿಳೆಯರು, ಅವಿವಾಹಿತ ಮಹಿಳೆಯರಾಗಿದ್ದಾರೆ. ಒಟ್ಟಿನಲ್ಲಿ ವಿವಾಹಿತೆಯರ ಪ್ರಮಾಣ ಪ್ರತಿಶತ ೭೧.೦೦ ರಷ್ಟು ಇದೆ. ಮಹಿಳಾ ಕಾರ್ಮಿಕರ ಕುಟುಂಬದ ಸ್ವರೂಪದ ಬಗೆಗೆ ವಿವರಣೆಯನ್ನು ಕೊಡುತ್ತದೆ. ಈ ಕೋಷ್ಟಕದ ಅಂಕಿ ಅಂಶಗಳ ಪ್ರಕಾರ ಪ್ರತಿಶತ ೧೭.೦೦ರಷ್ಟು ಮಹಿಳೆಯರ ಕುಟುಂಬಗಳು ಅವಿಭಕ್ತ ಕುಟುಂಬಗಳಾಗಿರುತ್ತವೆ. ಪ್ರತಿಶತ ೮೩.೦೦ ರಷ್ಟು ಮಹಿಳೆಯರು ವಿಭಕ್ತ ಕುಟುಂಬಗಳಾಗಿರುತ್ತವೆ.

ಕೋಷ್ಟಕ ೪.೧೨ ಮಹಿಳಾ ಕಾರ್ಮಿಕರ ವಾರ್ಷಿಕ ಆದಾಯ

ಅ.ನಂ	ವಾರ್ಷಿಕ ಆದಾಯ	ಮಹಿಳಾ ಕಾರ್ಮಿಕರು	ಪ್ರತಿಶತ
೧	೫೦೦೦ ರಿಂದ ೧೦೦೦೦	೩೩೫	೬೭%
೨	೧೦೦೦೦ ರಿಂದ ೧೫,೦೦೦	೧೫೦	೩೦%
೩	೧೬೦೦೦ ರಿಂದ ೨೦,೦೦೦	೧೫	೦೩%
೪	೨೦,೦೦೦ ಕ್ಕಿಂತ ಹೆಚ್ಚು	–	೦೦%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಕೋಷ್ಟಕ ೪.೧೨ ರಲ್ಲಿ ೪೦೦ ಮಹಿಳಾ ಕಾರ್ಮಿಕರನ್ನು ಸಂದರ್ಶನ ಮಾಡಿದಾಗ ಅವರ ವಾರ್ಷಿಕ ಆದಾಯದ ಮಾಹಿತಿಯನ್ನು ಕೊಟ್ಟಿರುತ್ತಾರೆ. ಈ ಕೋಷ್ಟಕದ ಪ್ರಕಾರ ಪ್ರತಿಶತ ೬೭.೦೦ ರಷ್ಟು ಮಹಿಳೆಯರು ೫೦೦೦ ರಿಂದ ೧೦೦೦೦ ವಾರ್ಷಿಕ ಆದಾಯವನ್ನು ಹೊಂದಿರುತ್ತಾರೆ. ಪ್ರತಿಶತ ೩೦.೦೦ ರಷ್ಟು ಮಹಿಳೆಯರು ೧೦,೦೦೦ ರಿಂದ ೧೫,೦೦೦ ರೂ. ವಾರ್ಷಿಕ ಆದಾಯವನ್ನು ಹೊಂದಿರುತ್ತಾರೆ. ಪ್ರತಿಶತ ೩.೦೦ ರಷ್ಟು ಮಹಿಳೆಯರು ೧೫,೦೦೦ ರಿಂದ ೨೦,೦೦೦ ಕ್ಕಿಂತಲೂ ಹೆಚ್ಚು ವಾರ್ಷಿಕ ಆದಾಯವನ್ನು ಹೊಂದಿರುತ್ತಾರೆ. ೨೦,೦೦೦ ಕ್ಕಿಂತಲೂ ಹೆಚ್ಚು ವಾರ್ಷಿಕ ಆದಾಯವನ್ನು ಗಳಿಸಿರುವುದಿಲ್ಲ. ಆದ್ದರಿಂದ ಪ್ರತಿಶತ ೬೭.೦೦ ರಷ್ಟು ಮಹಿಳೆಯರು ೫,೦೦೦ ರಿಂದ ೧೦,೦೦೦ ರೂ. ವಾರ್ಷಿಕ ಆದಾಯವನ್ನು ಹೊಂದಿದವರೇ ಅಧಿಕವಾಗಿರುವುದನ್ನು ಗಮನಿಸಬಹುದಾಗಿದೆ. ೫೦೦ ಮಹಿಳಾ ಕಾರ್ಮಿಕರ ಸಂದರ್ಶನ ಮಾಡಿದಾಗ ಅವರ ಕುಟುಂಬದಲ್ಲಿ ದುಡಿಯುವವರ ಸಂಖ್ಯೆಯನ್ನು ತಿಳಿಸಿರುತ್ತಾರೆ. ಇಲ್ಲಿ ಪ್ರತಿಶತ ೧೬.೦೦ ರಷ್ಟು ಮಹಿಳೆಯರ ಕುಟುಂಬದಲ್ಲಿ ಒಬ್ಬರು ಇರುತ್ತಾರೆ. ಅದೇ ರೀತಿ ಪ್ರತಿಶತ ೭೮.೦೦ ರಷ್ಟು ಕಾರ್ಮಿಕರ ಮನೆಯಲ್ಲಿ ದುಡಿಯುವವರ ಸಂಖ್ಯೆ ೨ ರಿಂದ ೩ ಜನರ ಸಂಖ್ಯೆಯನ್ನು ಸೂಚಿಸುತ್ತದೆ. ಪ್ರತಿಶತ ೬.೦೦ ರಷ್ಟು ಕಾರ್ಮಿಕರ ಕುಟುಂಬದಲ್ಲಿ ೪ ರಿಂದ ೬ ಜನ ದುಡಿಯುವವರ ಸಂಖ್ಯೆಯನ್ನು ತೋರಿಸುತ್ತದೆ. ಕ್ಷೇತ್ರ ಅಧ್ಯಯನ ಮಾಡಿದಾಗ ಮಹಿಳಾ ಕಾರ್ಮಿಕರ ಮನೆಯಲ್ಲಿ ಹೊರಗಡೆ ದುಡಿಯುವವರ ಸಂಖ್ಯೆ ಹೆಚ್ಚಾಗಿದೆ ಎಂದು ತಿಳಿದುಬರುತ್ತದೆ.

ಕೋಷ್ಟಕ ೪.೧೩ ಮಹಿಳಾ ಕಾರ್ಮಿಕರ ಉದ್ಯೋಗದ ಸ್ವರೂಪದ ಮಾಹಿತಿ

ಅ.ನಂ	ಉದ್ಯೋಗದ ಸ್ವರೂಪ	ಮಹಿಳಾ ಕಾರ್ಮಿಕರು	ಪ್ರತಿಶತ
೧	ತುಂಬು ತೆಗೆಯುವುದು	೩೪೫	೬೯%
೨	ಪ್ಯಾಕಿಂಗ್ ಮಾಡುವುದು	೩೦	೦೬%
೩	ಚೀಲ ತುಂಬುವುದು	೦೫	೦೧%
೪	ಕಸ ಗೂಡಿಸುವುದು	೬೫	೧೩%
೫	ಇತರೆ	೫೫	೧೧%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಕೋಷ್ಟಕ ೪.೧೩ ರಲ್ಲಿ ಮಹಿಳಾ ಕಾರ್ಮಿಕರ ಉದ್ಯೋಗದ ಸ್ವರೂಪವನ್ನು ತಿಳಿಸುತ್ತದೆ. ಕಾರ್ಯಕ್ಷೇತ್ರದಲ್ಲಿ ನಾನು ೫೦೦ ಮಹಿಳಾ ಕಾರ್ಮಿಕರನ್ನು ಭೇಟಿಯಾದಾಗ ಪ್ರತಿಶತ ೬೯.೦೦ ರಷ್ಟು ಮಹಿಳೆಯರು ತುಂಬು ತೆಗೆಯುವವರಿದ್ದಾರೆ. ಪ್ರತಿಶತ ೬.೦೦ ರಷ್ಟು ಮಹಿಳೆಯರು ಮಾರುಕಟ್ಟೆಯಲ್ಲಿ ಖಾರದ ಪುಡಿಯನ್ನು ಪ್ಯಾಕಿಂಗ್ ಮಾಡುವುದು ಕಂಡುಬರುತ್ತದೆ. ಪ್ರತಿಶತ ೧.೦೦ ರಷ್ಟು ಮಹಿಳೆಯರು ಮೆಣಸಿನಕಾಯಿಯನ್ನು ಚೀಲ ತುಂಬುವವರು ಕಂಡು ಬರುವರು. ಪ್ರತಿಶತ ೧೩.೦೦ ರಷ್ಟು ಮಹಿಳಾ ಕಾರ್ಮಿಕರು ಮಾರುಕಟ್ಟೆಯಲ್ಲಿ ಇದ್ದ ಅಂಗಡಿಗಳಲ್ಲಿ ಹಾಗೂ ಖಾರದಪುಡಿ ಮಿಲ್ಲುಗಳಲ್ಲಿ ಕಸವನ್ನು ಗೂಡಿಸುವವರು ಇರುತ್ತಾರೆ. ಪ್ರತಿಶತ ೧೧.೦೦ ರಷ್ಟು ಮಹಿಳೆಯರು ಇತರೆ ಕೆಲಸಗಳಾದ ಒಣಮೆಣಸಿನಕಾಯಿಯನ್ನು ಸ್ವಚ್ಛಗೊಳಿಸುವುದು ಖಾರಪುಡಿ ಹದಗೊಳಿಸುವುದು, ಕಸಗೂಡಿಸುವುದನ್ನು ಮಾಡುತ್ತಾರೆ. ಒಟ್ಟಾರೆಯಾಗಿ ಈ ಕೋಷ್ಟಕದಲ್ಲಿ ಪ್ರತಿಶತ ೬೯.೦೦ ಕ್ಕೂ ಹೆಚ್ಚು ಮಹಿಳೆಯರು ಮಾರುಕಟ್ಟೆಯಲ್ಲಿ ಒಣಮೆಣಸಿನಕಾಯಿಯನ್ನು ತುಂಬು ತೆಗೆಯುವ ಕೆಲಸ ನಿರ್ವಹಣೆ ಮಾಡುತ್ತಾರೆ. ಪ್ರತಿಶತ ೮೩.೦೦ ರಷ್ಟು ಮಹಿಳಾ ಕಾರ್ಮಿಕರು ಪಡಿತರ ಚೀಟಿಯನ್ನು ಹೊಂದಿದ್ದಾರೆ. ಪ್ರತಿಶತ ೧೭.೦೦ ರಷ್ಟು ಮಹಿಳಾ ಕಾರ್ಮಿಕರು ಕುಟುಂಬ ಪಡಿತರ ಚೀಟಿಯನ್ನು ಪಡೆದುಕೊಂಡಿರುವುದಿಲ್ಲ ಎಂದು ತಿಳಿದಿದ್ದು, ನಾನೂ ಅಂತಹ ಕುಟುಂಬದವರಿಗೆ ಪಡಿತರ ಚೀಟಿಯನ್ನು ಪಡೆಯಲು ಮಾರ್ಗದರ್ಶನ ಮಾಡಿದೆ.

ಕೋಷ್ಟಕ ೪.೧೪ ಮಹಿಳಾ ಕಾರ್ಮಿಕರ ಹೊಂದಿರುವ ಪಡಿತರ ಚೀಟಿ

ಅ.ನಂ	ಪಡಿತರ ಚೀಟಿ	ಮಹಿಳಾ ಕಾರ್ಮಿಕರು	ಪ್ರತಿಶತ
೧	ಎ.ಪಿ.ಎಲ್.	೨೧೫	೩೪%
೨	ಬಿ.ಪಿ.ಎಲ್.	೧೭೫	೩೫%
೩	ಅಂತ್ಯೋದಯ	೬೦	೧೨%
೪	ಇತರೆ	೧೦	೦೨%
೫	ಯಾವುದೂ ಇಲ್ಲ	೮೫	೧೭%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಕೋಷ್ಟಕ ಸಂಖ್ಯೆ ೪.೧೪ ಮಾಹಿತಿದಾರರು ಹೊಂದಿರುವ ಪಡಿತರ ಚೀಟಿಯ ವಿವರಣೆಯನ್ನು ಸೂಚಿಸುವುದಾಗಿದೆ. ಪ್ರತಿಶತ ೩೪.೦೦ ರಷ್ಟು ಮಹಿಳೆಯರು ಎ.ಪಿ.ಎಲ್. ಚೀಟಿಯನ್ನು ಹೊಂದಿದ್ದರೆ, ಪ್ರತಿಶತ ೩೫.೦೦ ರಷ್ಟು ಮಹಿಳೆಯರು ಬಿ.ಪಿ.ಎಲ್. ಚೀಟಿಯನ್ನು ಹೊಂದಿದವರಾಗಿದ್ದಾರೆ. ಪ್ರತಿಶತ ೧೨.೦೦ ರಷ್ಟು ಮಹಿಳೆಯರು ಅಂತ್ಯೋದಯ ಚೀಟಿಗಳನ್ನು ಹೊಂದಿದ್ದರೆ, ಪ್ರತಿಶತ ೨.೦೦ರಷ್ಟು ಮಹಿಳೆಯರು ಇತರೆ ಚೀಟಿಗಳನ್ನು ಹೊಂದಿದವರಾಗಿದ್ದಾರೆ. ಪ್ರತಿಶತ ೧೭.೦೦ ರಷ್ಟು ಮಹಿಳೆಯರು ಯಾವುದೇ ಚೀಟಿಯನ್ನು ಪಡೆಯದೇ ಇದ್ದಾರೆ. ಈ ಕೋಷ್ಟಕದಲ್ಲಿರುವ ಅಂಕಿ – ಅಂಶಗಳ ಪ್ರಕಾರ ಪ್ರತಿಶತ ೩೫.೦೦ ರಷ್ಟು ಮಹಿಳೆಯರು ಅತ್ಯಾಧಿಕ ಬಿ.ಪಿ.ಎಲ್. ಚೀಟಿಗಳನ್ನು ಹೊಂದಿದ್ದಾರೆ ಎಂದು ಕಾರ್ಯಕ್ಷೇತ್ರವನ್ನು ಅಧ್ಯಯನ ಮಾಡುವಾಗ ತಿಳಿದುಬರುತ್ತದೆ.

ಕೋಷ್ಟಕ ೪.೧೫ ಮಹಿಳಾ ಕಾರ್ಮಿಕರ ನಿರ್ವಹಿಸುವ ಕೆಲಸದಿಂದ ಬರುವ ಆದಾಯ

ಅ.ನಂ	ಆದಾಯ	ಮಹಿಳಾ ಕಾರ್ಮಿಕರು	ಪ್ರತಿಶತ
೧	೧೦೦೦ ರಿಂದ ೨೦೦೦	೩೧೫	೬೩%
೨	೨೦೦೦ ರಿಂದ ೩೦೦೦	೧೨೫	೨೫%
೩	೩೦೦೦ ರಿಂದ ೪೦೦೦	೬೦	೧೨%
೪	೪೦೦೦ ಕ್ಕಿಂತ ಹೆಚ್ಚು	–	೦೦%
	ಒಟ್ಟು	೫೦೦	೧೦೦.೦೦

ಕೋಷ್ಟಕ ೪.೧೫ ರಲ್ಲಿ ಮಹಿಳಾ ಕೆಲಸಗಾರರು ಕೆಲಸ ನಿರ್ವಹಿಸುವುದರಿಂದ ತಿಂಗಳ ವೇತನವನ್ನು ಸೂಚಿಸುತ್ತದೆ. ಪ್ರತಿಶತ ೬೩.೦೦ ರಷ್ಟು ಮಹಿಳೆಯರು ೧೦೦೦ ರಿಂದ ೨೦೦೦ ರೂ. ತಿಂಗಳಿಗೆ ಪಡೆಯುತ್ತಾರೆ. ಪ್ರತಿಶತ ೨೫.೦೦ ರಷ್ಟು ಮಹಿಳೆಯರು ೨೦೦೦

ರಿಂದ ೩೦೦೦ ರೂ. ತಿಂಗಳಿಗೆ ಪಡೆಯುತ್ತಾರೆ. ಪ್ರತಿಶತ ೧೨.೦೦ ರಷ್ಟು ಮಹಿಳೆಯರು ತಿಂಗಳಿಗೆ ೩೦೦೦ ರಿಂದ ೪೦೦೦ ರೂ. ಪಡೆದುಕೊಳ್ಳುತ್ತಾರೆ. ಆದರೆ ಯಾವೊಬ್ಬ ಮಹಿಳೆಯು ತಿಂಗಳಿಗೆ ೪೦೦೦ ಕ್ಕಿಂತ ಹೆಚ್ಚು ತೆಗೆದುಕೊಳ್ಳುವವರು ಯಾರೂ ಸಿಗುವುದಿಲ್ಲ. ಮುಖ್ಯವಾಗಿ ಮಾರುಕಟ್ಟೆಯಲ್ಲಿ ತಂತ್ರಜ್ಞಾನದ ಬಳಕೆಗಾಗಿ ಇತ್ತೀಚಿನ ದಿನಗಳಲ್ಲಿ ಅತ್ಯಂತ ಮಹತ್ವವನ್ನು ನೀಡಲಾಗುತ್ತಿದ್ದು, ಅದರ ಬಳಕೆಯ ವಿಧಾನ ಅಥವಾ ಶಿಕ್ಷಣ ಇಲ್ಲಿನ ಮಹಿಳಾ ಕಾರ್ಮಿಕರಿಗೆ ಅತೀ ಅಗತ್ಯವಾಗಿದೆ. ಇದರ ಕುರಿತಂತೆ ಕೇಳಲಾದ ಪ್ರಶ್ನೆಗೆ ಶೇ.೮೪ರಷ್ಟು ಜನರು ತಂತ್ರಜ್ಞಾನದ ಬಳಕೆಯ ಅಗತ್ಯವಿದೆ ಹಾಗೂ ಅದರ ಬಳಕೆಯ ಜ್ಞಾನವೂ ತಮಗೆ ಬೇಕಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಆದರೆ ಶೇ.೧೬ರಷ್ಟು ಜನರು ತಂತ್ರಜ್ಞಾನದ ಬಳಕೆ ಬಂದರೆ ತಮ್ಮ ಉದ್ಯೋಗಕ್ಕೆ ಹಾನಿಯಾಗಬಹುದೆಂದು, ಹಾಗೆಯೇ ಅದನ್ನು ಬಳಸಲು ಹಾಗೂ ನಿಭಾಯಿಸಲು ಬಹಳ ಕಷ್ಟ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಕೋಷ್ಟಕ – ೪.೧೬ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳು ಹಾಗೂ ಸದಸ್ಯರ ಸಂಖ್ಯೆ

ಕ್ರ ಸಂ	ತಾಲ್ಲೂಕು	ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ಸಂಖ್ಯೆ	ಸ್ವ–ಸಹಾಯ ಸಂಘಗಳ ಸದಸ್ಯರ ಸಂಖ್ಯೆ			
೧	ಬ್ಯಾಡಗಿ	೪೩೦	೮೨೧	೧೦೩೪	೪೬೫೦	೬೫೦೫
೨	ಹಾನಗಲ್ಲ	೭೬೩	೨೨೦೫	೧೫೯೦	೮೫೧೪	೧೨೩೮೯
೩	ಹಾವೇರಿ	೮೧೮	೧೯೮೦	೧೮೦೪	೯೬೩೦	೧೩೪೧೪
೪	ಹಿರೇಕೆರೂರು	೮೧೩	೧೩೫೮	೧೫೨೧	೯೫೬೨	೧೨೪೪೧
೫	ರಾಣೇಬೆನ್ನೂರು	೮೭೦	೨೧೪೯	೧೮೧೨	೧೦೧೦೦	೧೪೦೬೧
೬	ಸವಣೂರ	೪೨೭	೧೩೩೪	೭೫೮	೩೮೯೭	೫೯೮೯
೭	ಶಿಗ್ಗಾಂವ	೫೩೮	೧೩೮೭	೭೮೨	೫೬೬೨	೭೮೩೧
	ಜಿಲ್ಲಾ ಒಟ್ಟು	**೪೬೫೯**	೧೧೨೩೪	೯೩೦೧	೫೨೦೧೫	೭೨೫೫೦

ಮಾಹಿತಿ ಮೂಲ : ಜಿಲ್ಲಾ ಪಂಚಾಯತ್ ಇಲಾಖೆ, ಹಾವೇರಿ.

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಹಾವೇರಿ ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಸ್ವ–ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಹಾವೇರಿ ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಸ್ವ–ಸಹಾಯ ಸಂಘಗಳು ಹಾಗೂ ಸದಸ್ಯರ ಮಾಹಿತಿಯನ್ನು ತಿಳಿಸುತ್ತದೆ. ಸಂಶೋಧಕರ ಅಧ್ಯಯನ ಕ್ಷೇತ್ರವಾದ ಬ್ಯಾಡಗಿ ತಾಲೂಕಿನಲ್ಲಿ ಸಂಘಗಳ ಸಂಖ್ಯೆ ೪೩೦ ಇದ್ದು, ಅದರಲ್ಲಿ ಪರಿಶಿಷ್ಟ ಜಾತಿ ಮಹಿಳೆಯರು ೮೨೧, ಪರಿಶಿಷ್ಟ ಪಂಗಡದ ಮಹಿಳೆಯರು ೧೦೩೪ ಹಾಗೂ ಇತರೆ

ಮಹಿಳೆಯರು ೪೬೫೦ ಇದ್ದು, ಒಟ್ಟಾರೆಯಾಗಿ ಬ್ಯಾಡಗಿ ತಾಲೂಕಿನಲ್ಲಿ ೬೫೦೫ ಸದಸ್ಯರ ಸಂಖ್ಯೆ ಇದ್ದು, ಸದಸ್ಯರು ಸರ್ಕಾರದಿಂದ ಸಹಾಯ ಧನವನ್ನು ಪಡೆದು ಗ್ರಾಮವನ್ನು ಹಾಗೂ ದೇಶದ ಪ್ರಗತಿಯಲ್ಲಿ ಮುಂದುವರೆಯಲು ಸಹಾಯಕರಾಗಿದ್ದಾರೆ.

೪.೩ ಭಾರತದಲ್ಲಿ ಮಹಿಳೆಯರ ಸ್ಥಾನಮಾನ

ಮಾನವ ಜನಾಂಗವನ್ನು ಜೈವಿಕ ಆಧಾರದ ಮೇಲೆ 'ಪುರುಷರು' ಮತ್ತು 'ಸ್ತ್ರೀಯರು' ಎಂದು ಎರಡು ಸಮೂಹಗಳಾಗಿ ಕಾಣುವರು. ಸ್ತ್ರೀ ಮತ್ತು ಪುರುಷರಲ್ಲಿ ಪರಸ್ಪರ ವ್ಯತ್ಯಾಸವಿದೆ. ಅವರವರ ಪಾತ್ರ – ಅಂತಸ್ತುಗಳು, ಉಡಿಗೆ – ತೊಡುಗೆಗಳು, ಧ್ಯೇಯ –ಧೋರಣೆಗಳು ಬೇರೆ ಬೇರೆಯಾಗಿವೆ. ಅನಾದಿಕಾಲದಿಂದ ಆಧುನಿಕ ಕಾಲದವರೆಗೆ ಸ್ತ್ರೀಯರನ್ನು ನೋಡುವ ದೃಷ್ಟಿಕೋನ ಒಂದೆ ತೆರನಾಗಿಲ್ಲ. ಅದರ ಸ್ವರೂಪ ಬೇರೆ ಬೇರೆಯಾಗಿದೆ.

ಸಮಾಜದ ನಿರಂತರತೆಗೆ ಸ್ತ್ರೀ ಮತ್ತು ಪುರುಷ ಅಗತ್ಯ ಹಾಗೂ ಅನಿವಾರ್ಯ. ಪ್ರತಿಯೊಂದು ಸಮಾಜಕ್ಕೆ ಎರಡು ಸಮೂಹಗಳ ಕೊಡುಗೆ ಅಪಾರವಾಗಿದೆ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಚಲಿಸುವ ರಥಕ್ಕೆ **'ಪುರುಷ'** ಮತ್ತು **"ಸ್ತ್ರೀ"** ಎರಡು ಗಾಲಿಗಳಿದ್ದಂತೆ. ಅನನ್ಯ ಕಾರಣಗಳಿಂದ ಇವೆರಡು ಸಮೂಹಗಳಲ್ಲಿ ಉಂಟಾದ ವ್ಯತ್ಯಾಸವೇ ಸ್ತ್ರೀ ಮತ್ತು ಪುರುಷರ ಸ್ಥಾನಮಾನದಲ್ಲಾದ ಪರಿವರ್ತನೆ.

ಸ್ಥಾನಮಾನ ಅಥವಾ ಅಂತಸ್ತು ಎನ್ನುವುದು ಜನರಿಗೆ ನೀಡುವ ಹಕ್ಕುಗಳು ಮತ್ತು ಅನುಸರಿಸುವ ಕರ್ತವ್ಯಗಳಿಗೆ ಸಂಬಂಧಿಸಿದಂತೆ ಪರಸ್ಪರವಾಗಿ ಹೋಲಿಕೆ ಅಥವಾ ತುಲನೆ ಮಾಡಿದಾಗ ಕಂಡುಬರುವ ಸ್ಥಿತಿಗತಿಗಳನ್ನು ಸೂಚಿಸುತ್ತದೆ. ಬಡವರನ್ನು ಹೋಲಿಸಿದರೆ ಪರಸ್ಪರವಾಗಿ ಹೋಲಿಕೆ ಅಥವಾ ತುಲನೆ ಮಾಡಿದಾಗ ಕಂಡುಬರುವ ಸ್ಥಿತಿಗತಿಯನ್ನು ಸೂಚಿಸುತ್ತದೆ. ಬಡವರನ್ನು ಹೋಲಿಸಿದರೆ ಶ್ರೀಮಂತರು, ದುಷ್ಟರನ್ನು ಹೋಲಿಸಿದರೆ ಶಿಷ್ಟರು, ಅಶಕ್ತರನ್ನು ಹೋಲಿಸಿದರೆ ಸಶಕ್ತರು, ಫೇಲಾದವರನ್ನು ಹೋಲಿಸಿದರೆ ಪಾಸಾದವರು, ಇತ್ಯಾದಿಗಳಂತೆ ಮಹಿಳೆಯರ ಸ್ಥಾನಮಾನವನ್ನು ಕುರಿತು ಚರ್ಚಿಸುವಾಗ ಅಥವಾ ಪ್ರಸ್ತಾಪಿಸುವಾಗ ಪುರುಷರ ಸ್ಥಾನಮಾನಕ್ಕೆ ತುಲನೆ ಮಾಡಿ ಅಭ್ಯಸಿಸುವುದಾಗಿದೆ.

ಸಮಾಜವು ಸಾಮಾಜಿಕ ಸಂಬಂಧಗಳ ಬಲೆಯಾಗಿದೆ. ಈ ಸಂಬಂಧಗಳಲ್ಲಿ ಸ್ತ್ರೀ–ಪುರುಷರ ಸಂಬಂಧವು ಅತ್ಯಂತ ಪ್ರಮುಖವಾಗಿದೆ. ಸ್ತ್ರೀ–ಪುರುಷರಿಗೆಲ್ಲ ಅಂತಸ್ತನ್ನು ಮಾನದಂಡವಾಗಿ ವೀಕ್ಷಿಸಿದ್ದಾದರೆ ಸ್ತ್ರೀಯರಿಗೆ ತೋರುವ ಅಸಮಾನತೆ, ಶೋಷಣೆ, ಪುರುಷ ಶ್ರೇಷ್ಠ ಎನ್ನುವ ಮನೋಭಾವನೆ, ದಬ್ಬಾಳಿಕೆ, ತಾರತಮ್ಯ ಪರಂಪರಾಗತಿಯಿಂದ ನಡೆದುಕೊಂಡು ಬಂದ ರೂಢಿ, ಸಂಪ್ರದಾಯ, ಆಚರಣೆ, ಇತ್ಯಾದಿ ವಿಪರ್ಯಾಸಗಳು ಕಂಡುಬರುತ್ತವೆ.

ಪುರುಷರಿಗಿಂತ ಸ್ತ್ರೀಯರ ಸ್ಥಾನಮಾನದಲ್ಲಾದ ಏರುಪೇರುಗಳು ಆಯಾ ಸಮಾಜದ ಸಾಂಸ್ಕೃತಿಕ ಮಟ್ಟದ ಮೇಲೆ ಗಮನಾರ್ಹವಾದ ಪರಿಣಾಮ ಬೀರುವುದು ಯಾವ ಕುಟುಂಬ ಅಥವಾ ಸಮಾಜದಲ್ಲಿ ಸ್ತ್ರೀ-ಪುರುಷರು ಪರಸ್ಪರ ಸಹಕಾರ, ನೆಮ್ಮದಿ ಮತ್ತು ಗೌರವಗಳಿಂದ ಸಕ್ರೀಯವಾಗಿ ಸಮಾಜಕಾರ್ಯದಲ್ಲಿ ತೊಡಗಿದಾಗ ಮಾತ್ರ ಸಮಾಜದ ಏಳಿಗೆಯಾಗಲು ಸಾಧ್ಯ. ಹೀಗಾಗಿ ಸಮಾಜದಲ್ಲಿ ಸ್ತ್ರೀಯರಿಗಿರುವ ಸ್ಥಾನಮಾನದ ಆಧಾರದ ಮೇಲೆ ಆಯಾ ಸಮಾಜದ ಸಾಂಸ್ಕೃತಿಕ ಗುಣಮಟ್ಟವನ್ನು ತಿಳಿಯಬಹುದಾಗಿದೆ ಅಂತೆಯೇ ಡಾ॥ ಮೀರಾ ದೇಸಾಯಿಯವರು "ಸಮಾಜವು ಸ್ತ್ರೀಯರಿಗೆ ನೀಡಿರುವ ಸ್ಥಾನಮಾನವು ಆ ಸಮಾಜದ ಸಾಂಸ್ಕೃತಿಕ ಮಟ್ಟದ ಸೂಚಿಯಾಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ವೇದಗಳ ಕಾಲದಿಂದ ಇಂದಿನ ಆಧುನಿಕ ಕಾಲದವರೆಗೆ ಸ್ತ್ರೀಯರು ಸಮಾಜದ ವಿವಿಧ ರಂಗಗಳಾದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ಕಾಲಕಾಲಕ್ಕೆ ತಕ್ಕಂತೆ ವಿಭಿನ್ನ ಸ್ಥಾನಮಾನವನ್ನು ಹೊಂದಿದ್ದಾಗಿದೆ. ಭಾರತೀಯ ಮಹಿಳೆಯ ಸೇವೆ, ಶಾಂತಿ, ತ್ಯಾಗ, ಸಹಿಷ್ಣುತೆ, ಮತ್ತು ಸಹನೆ ಮುಂತಾದ ಪರಿಸ್ಥಿತಿಗಳ ಮೂಲಕ ಸ್ಥಾನಮಾನಗಳಲ್ಲಿ ಸಾಧಿಸಿಕೊಂಡ ಮುನ್ನಡೆ ಹಾಗೂ ಅವಳು ಅನುಭವಿಸಿದ ಕಷ್ಟ ಕಾರ್ಪಣ್ಯಗಳ, ಕಠೋರ ಮತ್ತು ಕರುಣಾಜನಕ ಸ್ಥಿತಿ-ಗತಿಗಳನ್ನು ಐತಿಹಾಸಿಕವಾಗಿ ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಅಭ್ಯಸಿಸುವುದಾಗಿದೆ. ಪ್ರಾಚೀನ ಭಾರತದ ಅವಧಿ ಅತಿ ದೀರ್ಘವಾಗಿದೆ. ಈ ಅವಧಿ ವೇದಗಳ ಕಾಲದಿಂದ ಪ್ರಾರಂಭವಾಗಿ ಉಪನಿಷತ್ತುಗಳು, ವೀರಕಾವ್ಯಗಳು, ಪುರಾಣಗಳ ಅವಧಿಯನ್ನೆಲ್ಲ ದಾಟಿ ಇಸ್ಲಾಂ ಆಳ್ವಿಕೆಯ ಕಾಲದವರೆಗೂ ಮುಂದುವರೆದಿರುತ್ತದೆ. ಹೀಗೆಯೆ ಇದನ್ನು ಸೂಕ್ಷ್ಮವಾಗಿ ಹೇಳುವುದಾದರೆ, ವೇದಗಳ ಪ್ರಾರಂಭದಿಂದ ಹಿಡಿದು ಇಸ್ಲಾಂರು ಭಾರತದ ಆಳ್ವಿಕೆಗೆ ಆಗಮಿಸಿದವರೆಗಿನ ಅವಧಿಯನ್ನು **"ಪ್ರಾಚೀನ ಕಾಲ"**ವೆಂದು ಪರಿಗಣಿಸಲಾಗಿದೆ.(೧) ವೇದಗಳ ಕಾಲದಲ್ಲಿ ಪ್ರಾರಂಭದಿಂದ ಹಿಡಿದು ವೇದಗಳ ಅಂತ್ಯದ ಕಾಲದವರೆಗಿನ ಅವಧಿಯನ್ನು ವೇದಗಳ ಕಾಲವೆಂದು ಕರೆಯಲಾಗುವುದು. ಇದು ಕ್ರಿ.ಪೂ.೩೦೦ ವರ್ಷಗಳಿಂದ ಕ್ರಿ.ಪೂ.೬೦೦ ವರ್ಷಗಳವರೆಗೆ ಎಂದು ಗುರುತಿಸಲಾಗಿದೆ. ಹಿಂದೂಗಳ ತಾತ್ವಿಕ ಸಾಹಿತ್ಯಗಳಾದ 'ಶ್ರುತಿ' ಮತ್ತು 'ಸ್ಮೃತಿ'ಗಳಿಗೆ ಸಂಬಂಧಪಟ್ಟ ಗ್ರಂಥಗಳ ಅವಲೋಕನೆಯಿಂದ ವೇದಗಳ ಕಾಲದ ಸ್ತ್ರೀಯರು ಪುರುಷರಿಗೆ ಸಮಾನವಾಗಿ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಚಟುವಟಿಕೆಗಳಲ್ಲಿ ಸ್ಥಾನಮಾನಗಳನ್ನು ಪಡೆದುಕೊಂಡಿದ್ದರೆಂದು ಸ್ಪಷ್ಟವಾಗುತ್ತದೆ. ಈ ಕಾರಣಕ್ಕಾಗಿ ವೇದಗಳ ಕಾಲವನ್ನು ಸ್ತ್ರೀಯರಿಗೆ ದೊರೆತ ಸುವರ್ಣಕಾಲವೆಂದು ವರ್ಣಿಸಿದ್ದಾಗಿದೆ.(೨) ವೇದಗಳ ಕಾಲದ ಸ್ತ್ರೀಯರಿಗೂ ಹಾಗೂ ಪುರುಷರಿಗೂ ಶಿಕ್ಷಣ

ಪಡೆಯುವಲ್ಲಿ ಭೇದ-ಭಾವಗಳಿರಲಿಲ್ಲ, ಬಾಲಕರಂತೆ - ಬಾಲಕಿಯರಿಗೂ - ಉಪನಯನ ಸಂಸ್ಕಾರ, ನೀಡಿ ಗುರುಕುಲಗಳಿಗೆ ಕಳುಹಿಸುವ ಪರಿಪಾಠವಿತ್ತು. ಬಾಲಕನನ್ನು ಬ್ರಹ್ಮಚಾರಿಯೆಂದು ಕರೆದರೆ-ಬಾಲಕಿಯನ್ನು 'ಬ್ರಹ್ಮಚಾರಿಣಿ' ಎಂದು ಕರೆಯಲಾಗುತ್ತಿತ್ತು. ಬ್ರಹ್ಮಚರ್ಯಾಶ್ರಮದಲ್ಲಿ ಅವಳು ಪಡೆದ ಶಿಕ್ಷಣ ಹಾಗೂ ತರಬೇತಿಯನ್ನು ಕೌಟುಂಬಿಕ ಜೀವನದ ನಿರ್ವಹಣೆಯಲ್ಲಿ ವಿವಾಹಿತ ಸ್ತ್ರೀಯ ಯಶಸ್ಸಿಗೆ ಆಧಾರವಾಗಿದೆ ಎಂದು ಅಥರ್ವಣವೇದದಲ್ಲಿ ತಿಳಿಸಿದೆ. ಸ್ತ್ರೀಯು ಪುರುಷನಂತೆ ಪ್ರವಚನ, ಚರ್ಚೆ, ಗೋಷ್ಠಿ ಹಾಗೂ ಗ್ರಂಥ ರಚನೆಯಲ್ಲಿಯೂ ಪಾಲ್ಗೊಳ್ಳುತ್ತಿದ್ದಳು. ಋಗ್ವೇದದ ಮಂತ್ರಗಳನ್ನು ರಚಿಸಿದವರಲ್ಲಿ ಇಪ್ಪತ್ತಕ್ಕೂ ಹೆಚ್ಚು ಸ್ತ್ರೀಯರು ಭಾಗಿಗಳಾಗಿದ್ದರೆಂದು ನಂಬಲಾಗಿದೆ. ಶಿಕ್ಷಣದ ಅವಕಾಶ ಮಹಿಳೆಗೆ ಸ್ವಾತಂತ್ರ್ಯಾನಂತರದಲ್ಲಿ ಹೆಚ್ಚು ಕಲ್ಪಿಸಲಾಯಿತು. ಅನೇಕ ಸಮಾಜಸುಧಾರಕರ ನಿರಂತರ ಹೋರಾಟ ಹಾಗೂ ಅವಿರತ ಪರಿಶ್ರಮಗಳು ಕಾರಣವಾಗಿವೆ. ಮಹಿಳೆಯರಿಗೆ ವಿಶೇಷ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಉದಾಹರಣೆಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣದತ್ತ ಆಕರ್ಷಿಸಲು ವಿದ್ಯಾರ್ಥಿವೇತನ, ಸಾಲ ಸೌಲಭ್ಯ, ವಸತಿ ನಿಲಯದ ವ್ಯವಸ್ಥೆ ಹಾಗೂ ಶುಲ್ಕ ರಿಯಾಯಿತಿ ಇತ್ಯಾದಿ, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಶಾಲಾ ಕಾಲೇಜುಗಳು ಪ್ರಾರಂಭವಾಗಿ ಮಹಿಳಾ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟಿವೆ.

ಸ್ತ್ರೀಯರು ವಿವಾಹವಾಗದೆ ಉಳಿಯುವ ಸ್ವಾತಂತ್ರ್ಯವಿತ್ತು. ಸತಿಪದ್ಧತಿ, ಬಾಲ್ಯವಿವಾಹ, ಪರದಾ ಪದ್ಧತಿ, ವಿಧವಾ ಪುನರ್‌ವಿವಾಹ ಮುಂತಾದ ಸ್ತ್ರೀ-ಸಂಬಂಧಿತ ಸಮಸ್ಯೆಗಳು ವೇದಗಳ ಕಾಲದಲ್ಲಿ ಇರಲಿಲ್ಲ. ಜೀವನ ಸಂಗಾತಿಯ ಆಯ್ಕೆಯ ನಿರ್ಧಾರ ಕೂಡ ಸ್ತ್ರೀಗೆ ಬಿಟ್ಟ ವಿಷಯವಾಗಿತ್ತು. **'ಸ್ವಯಂವರ'** ಪದ್ಧತಿಯ ಉಲ್ಲೇಖ ಕೂಡಾ ವ್ಯಕ್ತವಾದುದು ಕಂಡುಬರುತ್ತದೆ. ಪತಿ-ಪತ್ನಿಯರ ಸಂಬಂಧಕ್ಕೆ ಸಮಾನ ಸ್ಥಾನಮಾನ ನೀಡಿದ **'ದಂಪತಿ' 'ಅರ್ಧಾಂಗಿನಿ'** ಪದಕಲ್ಪನೆಗಳು ಸ್ತ್ರೀಯು ಹೊಂದಿದ ಹೊಣೆಗಾರಿಕೆಯನ್ನು ಸೂಚಿಸುತ್ತದೆ. ವಿವಾಹವು ಒಂದು ಪವಿತ್ರವಾದ ಧಾರ್ಮಿಕ ಬಂಧನವಾಗಿತ್ತು. ಏಕ ವಿವಾಹ ಪದ್ಧತಿ ರೂಢಿಯಲ್ಲಿತ್ತು. ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಪುರುಷರಿಗೆ ಸಮಾನವಾದ ಸ್ಥಾನಮಾನವಿತ್ತು. ಸ್ತ್ರೀಯರಿಗೆ **'ಮಾತೆ' 'ದೇವತೆ'** ಎಂದು ಪೂಜನೀಯ ಭಾವನೆಯಿತ್ತು.(೪) ವೇದಗಳ ಕಾಲದಲ್ಲಿ ಸ್ತ್ರೀಯು ಆರ್ಥಿಕವಾಗಿ ಸ್ವಾತಂತ್ರ್ಯವನ್ನು ಪಡೆದಿದ್ದಳು. ಪುರುಷರು ಆರ್ಥಿಕ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದರು. ಸ್ತ್ರೀಯು ಪುರುಷನಿಗೆ ಬೆಂಗಾವಲಾಗಿ ಇರುತ್ತಿದ್ದಳು. ಮಹಿಳೆ ಆಸ್ತಿಯಲ್ಲಿ ಹಕ್ಕನ್ನು ಪಡೆದಿದ್ದರೂ ಸಹ ಸ್ತ್ರೀ-ಪುರುಷರ ಆಸ್ತಿಯ ವಿಷಯದಲ್ಲಿ ತಾರತಮ್ಯವಿರುವುದನ್ನು

ಅಲ್ಲಗಳೆಯುವಂತಿಲ್ಲ. (೫) ಸ್ತ್ರೀಯರಿಗೂ ಪುರುಷರಿಗೆ ಸಮಾನವಾದ ಧಾರ್ಮಿಕ ಸ್ವಾತಂತ್ರ್ಯವನ್ನು ವೇದಗಳ ಕಾಲದಲ್ಲಿ ನೀಡಲಾಗಿತ್ತು. ಧಾರ್ಮಿಕ ಕ್ರಿಯಾವಿಧಿಗಳಲ್ಲಿ ಪತಿ–ಪತ್ನಿಯರು ಕೂಡಿಯೇ ಕಾರ್ಯನಿರ್ವಹಿಸುತ್ತಿದ್ದರು. ಪತ್ನಿಯ ಸಹಭಾಗಿತ್ವವಿಲ್ಲದೆ ಯಾವುದೇ ಧಾರ್ಮಿಕ ಕ್ರಿಯೆ ನಡೆಯುತ್ತಿರಲಿಲ್ಲ. 'ಸಹಧರ್ಮಿಣಿ' "ಧರ್ಮಪತ್ನಿ" ಪಾವಿತ್ರತೆಯ ಹೊಣೆಗಾರಿಕೆಯ ಪದಕಲ್ಪನೆಗಳಾಗಿವೆ. ವೇದಗಳ ಕಾಲದಲ್ಲಿ ಮಹಿಳೆ ರಾಜಕಿಯ ಸಹಭಾಗಿತ್ವಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಅವಕಾಶಗಳು ಇಲ್ಲದಿದ್ದರೂ ಸಾರ್ವಜನಿಕ ಜೀವನ ನಡೆಸಲು ಯಾವುದೇ ತರಹದ ನಿರ್ಬಂಧನೆಗಳು ಇರಲಿಲ್ಲ. ಸಾರ್ವಜನಿಕ ರಂಗದಲ್ಲಿ ಸ್ತ್ರೀಯರನ್ನು ಪ್ರತ್ಯೇಕಗೊಳಿಸಿರಲಿಲ್ಲ, ಪತಿ–ಪತ್ನಿಯರು ನಿಸ್ಸಂಕೋಚವಾಗಿ ವಿಹರಿಸಬಹುದಾಗಿತ್ತು. ಧರ್ಮಶಾಸ್ತ್ರಗಳ, ಪುರಾಣಗಳ, ಆಗಮಗಳ, ದರ್ಶನಗಳ ಯುಗವನ್ನು ವೇದೋತ್ತರ ಯುಗವೆಂದು ಕರೆಯುಲಾಗಿದೆ. ಇದು ಕ್ರಿ.ಶ.೩೦೦ ರಿಂದ ೫೦೦ ರವರೆಗಿನ ಅವಧಿಯೆಂದು ಗುರುತಿಸಲಾಗಿದೆ. ಈ ಕಾಲದಲ್ಲಿ ಸ್ತ್ರೀಯರ ಸ್ವಾತಂತ್ರ್ಯ ಹಾಗೂ ಸ್ಥಾನಮಾನಗಳು ಬರಬರುತ್ತಾ ಕ್ಷೀಣಿಸತೊಡಗಿದವು. ಪುರುಷ ಶ್ರೇಷ್ಠವೆಂಬ ಭಾವನೆಗಳು ಹೆಚ್ಚಾಗತೊಡಗಿದವು. ಹಿಂದೆ ಅನುಭವಿಸುತ್ತಿದ್ದ ಶಿಕ್ಷಣ, ಧಾರ್ಮಿಕ, ಕೌಟುಂಬಿಕ ಹೊಣೆಗಾರಿಕೆ, ಜೀವನ ಸಂಗಾತಿಯ ಆಯ್ಕೆ, ವಿವಾಹ ವಿಚ್ಛೇಧನ, ವಿಧವಾ ಪುನರ್‌ವಿವಾಹ ಇತ್ಯಾದಿ ಸ್ವಾತಂತ್ರ್ಯಗಳ ಮೇಲೆ ಸ್ಮೃತಿಕಾರರಾದ ಮನು, ಯಾಜ್ಞವಲ್ಕ, ಅಂಗಿರಸ ಪರಾಶರ ಮುಂತಾದವರು ಸ್ತ್ರೀಯರಲ್ಲಿಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ಸ್ಥಾನಮಾನಕ್ಕೆ ಕುಂದು ತಂದವು.[೬]

ವೇದೋತ್ತರ ಕಾಲದಲ್ಲಿ ಮಹಿಳೆಯರ ಮೇಲೆ ಅನೇಕ ನಿಬಂಧನೆಗಳನ್ನು ಹೇರಲಾಗಿತ್ತು. ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗಿತ್ತು. ಬಾಲ್ಯವಿವಾಹ, ಸತಿ ಆಚರಣೆ, ಶಿಕ್ಷಣದ ನಿರಾಕರಣೆ ಮುಂತಾದ ಸಮಸ್ಯೆಗಳಿಗೆ ಅವಕಾಶವಾಯಿತು. ಇವೆಲ್ಲಾ ಸಮಸ್ಯೆಗಳಿಗೆ ಪ್ರತ್ಯುತ್ತರವಾಗಿ ಎಂಬಂತೆ ಬೌದ್ಧಧರ್ಮವು ಗೌತಮಬುದ್ಧನಿಂದ ಸ್ಥಾಪಿತವಾಯಿತು. ಇದರ ಕಾಲಾವಧಿ ಕ್ರಿ.ಪೂ. ಆರನೆಯ ಶತಮಾನದಿಂದ ಎಂಟನೆಯ ಶತಮಾನದವರೆಗೆ ಆಗಿತ್ತು. ಈ ಅವಧಿಯಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆಗಳಾದವು. ಮುಸ್ಲಿಮರ ಆಗಮನದ ಕಾಲದಿಂದ ಹಿಡಿದು ಆಂಗ್ಲರ ಆಳ್ವಿಕೆಯ ಆರಂಭದವರೆಗಿನ ಕಾಲವನ್ನು ಮಧ್ಯಕಾಲೀನ ಯುಗವೆಂದು ಕರೆಯಲಾಗುತ್ತದೆ. ಈ ಕಾಲದಲ್ಲಿ (ಘಜ್ನಿ ಮಹಮ್ಮದ್ ಅವಧಿ) ಭಾರತೀಯ ಸಮಾಜವು ಧಾರ್ಮಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾಗಿ ಯಾವುದೇ ಪ್ರಗತಿಯನ್ನು ಕಾಣಲು ಸಾಧ್ಯವಾಗಲಿಲ್ಲ. ಸ್ತ್ರೀಯರ ಸ್ಥಾನಮಾನ ಇನ್ನಷ್ಟು ಕುಸಿಯಿತು. ಇಡೀ ಸಾಮಾಜಿಕ ವ್ಯವಸ್ಥೆ ಏರುಪೇರಾಯಿತು. ಆದ್ದರಿಂದಲೇ ಚರಿತ್ರಕಾರರು ಈ ಯುಗವನ್ನು "ಅಂಧಕಾರ

ಯುಗ" ಅಥವಾ **"ಕತ್ತಲೆಯ ಯುಗ"** ವೆಂದು ಕರೆದಿದ್ದಾರೆ. ಈ ಯುಗದಲ್ಲಿ ಸ್ತ್ರೀಯು ಸಂಪೂರ್ಣವಾಗಿ ತನ್ನ ಘನತೆ, ಗೌರವಗಳನ್ನು ಕಳೆದುಕೊಂಡು ಪುರುಷನ ಅಡಿಯಾಳಾಗಿ, ಸ್ವಾತಂತ್ರ್ಯ, ಹಕ್ಕು ಹಾಗೂ ಮತ್ತಿತರ ಅವಕಾಶಗಳಿಗೆ ವಂಚಿತಳಾಗಿದ್ದಾಳೆ.[೭] ಬ್ರಿಟೀಷರ ಆಳ್ವಿಕೆಯಲ್ಲಿ ಸ್ತ್ರೀ ಪುರುಷರಲ್ಲಿ ಅಸಮಾನತೆ ಕಡಿಮೆಯಾಯಿತು. ಪುರುಷರಂತೆ ಸ್ತ್ರೀಯರು ಶಿಕ್ಷಣ, ಉದ್ಯೋಗ, ವಿವಾಹ, ಸಾರ್ವಜನಿಕ ಜೀವನದ ಎಲ್ಲ ರಂಗಗಳಲ್ಲಿ ಹಕ್ಕುಗಳನ್ನು ಪಡೆಯಲಾರಂಭಿಸಿದಳು. ಸ್ತ್ರೀಯರು ಅನುಭವಿಸುತ್ತಿದ್ದ ಸಮಸ್ಯೆಗಳಾದ ಬಾಲ್ಯವಿವಾಹ, ವಿಧವಾ ಪುನರ್ವಿವಾಹ ಪದ್ಧತಿ, ಸತಿ ಸಹಗಮನ ಪದ್ಧತಿ, ಪರದಾ ಪದ್ಧತಿ ಮತ್ತು ದೇವದಾಸಿ ಪದ್ದತಿಗಳನ್ನು ಶಾಸನಗಳ ಮೂಲಕ ತೊಡೆದು ಹಾಕಲು ಯತ್ನಿಸಿದರು. ಬ್ರಿಟೀಷ್ ಅಧಿಕಾರಿಗಳ ಜೊತೆಗೆ ಭಾರತೀಯ ಜನನಾಯಕರುಗಳ ಸಹಕಾರದ ಫಲವಾಗಿ ಸ್ತ್ರೀಯರಲ್ಲಿ ಜಾಗೃತಿ ಮೂಡಿಸಿ, ಅಂತಸ್ತು ಮತ್ತು ಸ್ಥಾನಮಾನಗಳಲ್ಲಿ ಬದಲಾವಣೆಗಳನ್ನು ತಂದರು. ಆಧುನಿಕ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ೧೯೪೭ ಅಗಸ್ಟ್ ೧೫ ರಂದು ಭಾರತ ಸ್ವತಂತ್ರವಾಯಿತು. ನಂತರ ಭಾರತದ ಸಂವಿಧಾನವು ಜನವರಿ ೨೬ ೧೯೫೦ ರಂದು ಜಾರಿಗೆ ಬಂದ ಮೇಲೆ ಅಂದಿನಿಂದ ಸ್ತ್ರೀ–ಪುರುಷರ ತಾರತಮ್ಯಗಳನ್ನು ಕಡೆಗಣಿಸಿ ಸ್ತ್ರೀ–ಪುರುಷರಿಗೆ ಸಮಾನವಾದ ಹಕ್ಕು ಮತ್ತು ಕರ್ತವ್ಯಗಳನ್ನು ಜಾರಿಗೆ ತರಲಾಯಿತು.[೮]

೪.೪ ಔದ್ಯೋಗೀಕರಣದಲ್ಲಿ ಮಾಹಿಳೆಯರ ಸ್ಥಾನಮಾನ

ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿಯೂ ಕೈಗಾರಿಕೀಕರಣಕ್ಕೆ ಪ್ರೇರಣೆ ನೀಡಿತು. ಚಿಕ್ಕ ಮಧ್ಯಮ ಹಾಗೂ ಬೃಹತ್ ಗಾತ್ರದ ಕೈಗಾರಿಕೆಗಳು ವ್ಯಾಪಕವಾಗಿ ತಲೆದೋರಿದವು. ಇದರ ಫಲವಾಗಿ ನಗರಗಳಲ್ಲಿ ಹಾಗೂ ಪಟ್ಟಣಗಳಲ್ಲಿ ನಾನಾ ಬಗೆಯ ಉದ್ದಿಮೆಗಳು ಹೆಚ್ಚಾಗತೊಡಗಿದವು. ಮಹಿಳೆಯೂ ಕೂಡಾ ಉದ್ದಿಮೆ ರಂಗಗಳಲ್ಲಿ ದುಡಿಯಲಾರಂಭಿಸಿದಳು. ಅಗತ್ಯ ಜೀವನೋಪಾಯಕ್ಕೆ ಮಹಿಳೆ ಇನ್ನೊಬ್ಬರ ಮೇಲೆ ಅವಲಂಬಿತಳಾಗುವುದು ಕಡಿಮೆಯಾಯಿತು. ದುಡಿಮೆಯಿಂದ ವಿಶ್ವಾಸ ಹೆಚ್ಚಾಗತೊಡಗಿತು. ಪುರುಷನಿಗೆ ಸಮವಾಗಿ ದುಡಿಯುವುದರಿಂದ ಸ್ತ್ರೀಯು ಆರ್ಥಿಕವಾಗಿ ಸಬಲಳಾಗತೊಡಗಿದಳು. ಸಾರ್ವಜನಿಕ ರಂಗದಲ್ಲಿ ತನ್ನನ್ನು ತಾನು ಗುರುತಿಸಲಾರಂಭಿಸಿದಳು. ಸ್ತ್ರೀಯ ಅವಲಂಬನೆ ಕಡಿಮೆಯಾಗತೊಡಗಿತು. ಸಮಾಜ ಸ್ತ್ರೀಯನ್ನು ನೋಡುವ ದೃಷ್ಟಿಕೋನ ಬದಲಾಯಿಸಿತು. ಇದರ ಪರಿಣಾಮವಾಗಿ ಸ್ತ್ರೀಯ ಅಂತಸ್ತು ಹೆಚ್ಚಾಯಿತು. ಕೈಗಾರಿಕೀಕರಣದ ಪರಿಣಾಮವಾಗಿ ನಗರಗಳ ಬೆಳವಣಿಗೆ ತ್ವರಿತಗತಿಯಿಂದ ಸಾಗಿದೆ. ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವವರ ಪ್ರಮಾಣ ಹೆಚ್ಚಾಗುತ್ತಿದೆ. ನಗರಗಳು ಹೊಸ ಉದ್ಯೋಗಗಳನ್ನು ಹಾಗೂ ಶಿಕ್ಷಣದ ಸೌಲಭ್ಯಗಳನ್ನು

ಒದಗಿಸುತ್ತವೆ. ಗ್ರಾಮೀಣ ಜನರು ಶಿಕ್ಷಣ, ವೃತ್ತಿ ಹಾಗೂ ಇನ್ನಿತರ ಕಾರಣಗಳಿಂದ ನಗರಗಳತ್ತ ವಲಸೆ ಬರುವುದು ಸಾಮಾನ್ಯವಾಗಿದೆ. ಪ್ರಾರಂಭದಲ್ಲಿ ಸ್ತ್ರೀಯು ವಲಸೆ ಬರುವುದು ಕಡಮೆಯಿದ್ದರೂ ಕಾಲಾನಂತರದಲ್ಲಿ ವೃದ್ಧಿಸುತ್ತಾ ಹೋಯಿತು. ಬರಬರುತ್ತಾ ಸಹಜವಾಯಿತು. ನಗರದ ಜೀವನಕ್ಕೆ ಅಣಿಯಾಗಲಾರಂಭಿಸಿದಳು. ತಾನು ಪುರುಷನಂತೆ ಎಲ್ಲಾ ರಂಗಗಳಲ್ಲೂ ಪ್ರವೇಶಿಸತೊಡಗಿದಳು. ಸ್ವಾತಂತ್ರ್ಯ ಹಾಗೂ ಸಮಾನತೆಗಳು ಬೆಳೆದು, ಜಾತಿ ಮತ್ತು ಧರ್ಮದ ನಿರ್ಬಂಧನೆಗಳು ಹಾಗೂ ಸಾಂಪ್ರದಾಯಿಕವಾದ ಆಚರಣೆಗಳಿಂದ ಮಹಿಳೆಯೂ ಹೊರಬರಲಾರಂಭಿಸಿದಳು. ಆಧುನಿಕ ಸಮಾಜದಲ್ಲಿ ಸ್ವಂತ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಸ್ವಾತಂತ್ರ್ಯ ಪಡೆಯಲಾರಂಭಿಸಿದಳು. ನಗರ ಜೀವನದ ಆಕರ್ಷಣೆಗಳು ಅವಳಿಗೆ ಮುಕ್ತವಾಗಿ ಪಡೆಯಲು ಅನುಕೂಲವಾಗತೊಡಗಿತು. ಹೀಗಾಗಿ ನಗರೀಕರಣದಿಂದ ಸ್ತ್ರೀಯರ ಅಂತಸ್ತು ಮತ್ತು ಸ್ಥಾನಮಾನಗಳು ಹೆಚ್ಚಾಗತೊಡಗಿದವು.[೯] ಉದ್ಯೋಗಂ ಪುರುಷ ಲಕ್ಷಣಂ ಎಂಬ ಮಾತು ಅರ್ಥಹೀನವಾಗಿದೆ. ಆಧುನಿಕ ಸುಶಿಕ್ಷಿತೆ ಮಹಿಳೆಯು ಪುರುಷನಿಗೆ ಸರಿಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದ್ದಾಳೆ. ಶಿಕ್ಷಣ ಸಾರ್ವತ್ರಿಕವಾಗಿರುವುದರಿಂದ ಸುಶಿಕ್ಷಿತ ಮಹಿಳೆ ಖಾಸಗಿ ಹಾಗೂ ಸರ್ಕಾರಿ ರಂಗದಲ್ಲಿ ವಿವಿಧ ಇಲಾಖೆಗಳಲ್ಲಿ ಹಾಗೂ ಉದ್ದಿಮೆಗಳಲ್ಲಿ ಉದ್ಯೋಗಗಳನ್ನು ಪಡೆದುಕೊಂಡು ಆರ್ಥಿಕವಾಗಿ ಸ್ವಾವಲಂಬಿಯಾಗುತ್ತಿದ್ದಾಳೆ.

೪.೫ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲಿ ಸ್ತ್ರೀಯರ ಸಾಧನೆಗಳು

ಸ್ವಾತಂತ್ರ್ಯಾನಂತರ ಭಾರತದಲ್ಲಿ ಸಂವಿಧಾನ ಜನವರಿ ೨೬, ೧೯೫೦ ರಲ್ಲಿ ಜಾರಿಗೆ ಬಂದಿದೆ. ಇದರ ಪರಿಣಾಮವಾಗಿ ಜಾತಿ, ಮತ, ಪಂಥ, ವರ್ಣ ಹಾಗೂ ಲಿಂಗಬೇಧವಿಲ್ಲದೆ ಸಮಾಜದ ಎಲ್ಲಾ ವರ್ಗಗಳ ಸ್ತ್ರೀ – ಪುರುಷರಿಗೆ ಸಮಾನವಾದ ಹಕ್ಕು ಹಾಗೂ ಕರ್ತವ್ಯಗಳನ್ನು ನೀಡಿದೆ. ಸರ್ಕಾರವು ಸ್ತ್ರೀಯರ ಹಿತಾಸಕ್ತಿಯನ್ನು ರಕ್ಷಿಸಲು ಅನೇಕ ಕಾನೂನುಗಳನ್ನು ರೂಪಿಸಲಾಗಿದೆ. ಸ್ತ್ರೀಯರು ಶಿಕ್ಷಣದ ಬಲದಿಂದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗುತ್ತಿದ್ದಾಳೆ. ಸ್ತ್ರೀಯು ಸಮಾಜದ ಸರ್ವಕ್ಷೇತ್ರಗಳಲ್ಲಿ ಕೈಗಾರಿಕೆ, ಗಣಿ, ಕಛೇರಿ, ಕೃಷಿ, ಬ್ಯಾಂಕ್, ಅಧ್ಯಾಪನೆ, ಆಸ್ಪತ್ರೆ ಹಾಗೂ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ವೈದ್ಯಕೀಯ, ಇಂಜನೀಯರ್, ಪೊಲೀಸ್, ಸೈನ್ಯ, ವಾಯುಪಡೆ ಇತ್ಯಾದಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತ ಸರ್ಕಾರವು ಹಲವಾರು ಉಪಯುಕ್ತ ಯೋಜನೆಗಳನ್ನು ಹಾಗೂ ಸ್ತ್ರೀ ಉದ್ಯೋಗಿಗಳ ಶೋಷಣೆಯನ್ನು ತಪ್ಪಿಸಲು ಅನೇಕ ಶಾಸನಗಳನ್ನು ಜಾರಿ ಮಾಡಲಾಗಿದೆ. ಪ್ರಸೂತಿಕಾ ಸೌಲಭ್ಯ ಕಾಯ್ದೆ, ಸಮಾನ ವೇತನ ಕಾಯ್ದೆ, ಕಾರ್ಖಾನೆಯ ತಿದ್ದುಪಡಿ ಕಾಯ್ದೆ ಹಾಗೂ ಹಿಂದೂ ಉತ್ತರಾಧಿಕಾರಿ ಕಾಯ್ದೆ

ಇತ್ಯಾದಿಗಳು ಉದ್ಯೋಗದಲ್ಲಿ ನಿರತ ಮಹಿಳೆಯರ ಶೋಷಣೆಯನ್ನು ತಪ್ಪಿಸಿ ಅವರ ಆರೋಗ್ಯವನ್ನು ಕಾಪಾಡಲಾಗುತ್ತದೆ. ಸ್ತ್ರೀಯರ ಅಭಿವೃದ್ಧಿ ಮತ್ತು ಕಲ್ಯಾಣವನ್ನು ಸಾಧಿಸಲು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.[೧೦] ಮಹಿಳೆಯರಿಗೆ ಪುರುಷ ಸಮಾನವಾದ ರಾಜಕೀಯ ಹಕ್ಕುಗಳನ್ನು ಸಂವಿಧಾನದಲ್ಲಿ ನೀಡಲಾಗಿದೆ. ಮತದಾನವನ್ನು ಮಾಡುವ ಹಾಗೂ ಚುನಾವಣೆಗೆ ಸ್ಪರ್ಧಿಸುವ ರಾಜಕೀಯ ಸ್ವಾತಂತ್ರ್ಯವನ್ನು ನೀಡಿದೆ. ಇದರ ಪರಿಣಾಮವಾಗಿ ಗ್ರಾಮ ಪಂಚಾಯತ್, ತಾಲೂಕ ಪಂಚಾಯತ್, ಜಿಲ್ಲಾ ಪಂಚಾಯತ್, ಪುರಸಭೆ, ನಗರಸಭೆ, ವಿಧಾನಸಭಾ, ವಿಧಾನಪರಿಷತ್ ಹಾಗೂ ಲೋಕಸಭೆಯ ಚುನಾವಣೆಯಲ್ಲಿ ಮಹಿಳೆ ಭಾಗವಹಿಸಿದ್ದಾಳೆ ಹಾಗೂ ಅಧಿಕಾರವನ್ನು ಪಡೆದಿದ್ದಾಳೆ.

ಸಮಾಜದಲ್ಲಿ ಸ್ತ್ರೀಯು ಸಾಂಸ್ಕೃತಿಕ ಪ್ರತೀಕವಾಗಿದ್ದಾಳೆ. ಪರಂಪರಾನುಗತವಾಗಿ ಸಂಸ್ಕೃತಿಯನ್ನು ಉಳಿಸುವಲ್ಲಿ ಬೆಳೆಸುವಲ್ಲಿ ಸ್ತ್ರೀಯ ಪಾಲುಗಾರಿಕೆ ವಿಶೇಷವಾಗಿದೆ. ಕಲೆ, ಸಾಹಿತ್ಯ, ಆಟೋಟಗಳು, ವೈದ್ಯಕೀಯ, ವಿಜ್ಞಾನ ಹಾಗೂ ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಾದ ಮುನ್ನಡೆಯನ್ನು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾಳೆ. ಮಹಿಳೆ ಮತ್ತು ಪುರುಷರ ಮಧ್ಯೆ ಇರುವ ಭೇದವನ್ನು ಗುರುತಿಸಿ ಲಿಂಗ ಅಸಮಾನತೆಯನ್ನು ಹುಟ್ಟುಹಾಕಿದ್ದಾಳೆ. ವಿವಿಧ ಕ್ಷೇತ್ರಗಳಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಕಂಡುಬರುವ ಲಿಂಗ ಅಸಮಾನತೆಯನ್ನು ಖಂಡಿಸಿ, ಅವುಗಳ ವಿರುದ್ಧ ಹೋರಾಡಿ ಇಂದು ಸಮಾಜದಲ್ಲಿ ತನ್ನದೇ ಆದ ಛಾಪುಗಾಲು ಮೂಡಿಸಿದ್ದಾಳೆ.[೧೧] ಮಹಿಳೆಯರಿಗೆ ಆತಂಕವಾಗಿ ಕಾಡುತ್ತಿರುವ ಅಜ್ಞಾನ, ಅನಕ್ಷರತೆ, ಮೌಢ್ಯತೆ ಪರಾವಲಂಬನೆ, ಮಾನಸಿಕ ದಾಸ್ಯತೆ, ಇತ್ಯಾದಿ ಅಂಶಗಳಿಂದಲೇ ಮಹಿಳೆ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾಳೆಂಬುದನ್ನು ಗುರುತಿಸಿ, ಶಿಕ್ಷಣ, ಸಾಕ್ಷರತೆ, ವಿಶ್ವಾಸ, ಜ್ಞಾನ, ಸ್ವಂತಿಕೆಗಳನ್ನು ಪೋಷಿಸಲು ಸಹಾಯಕವಾಗುವ ಅವಕಾಶಗಳನ್ನು ಕಲ್ಪಿಸುವ ಮೂಲಕ ಪರಿಹಾರ ಕಾಣುವ ಯತ್ನ ಸಾಗಿದೆ. ಆದರೆ ಇದು ಒಮ್ಮಿಂದೊಮ್ಮೆಲೆ ಘಟಿಸುವಂತಹದ್ದಲ್ಲ. ಇದಕ್ಕೆ ಕಾಲಾವಕಾಶ ಬೇಕಾಗುತ್ತದೆ. ವಿವಿಧ ಕ್ಷೇತ್ರಗಳಾದ ಆರ್ಥಿಕ, ಸಾಮಾಜಿಕ, ರಾಜಕೀಯ ಮುಂತಾದ ಜೀವನಕ್ರಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ದಾಸ್ಯಸಂಕೋಲೆಯಿಂದ ಮುಕ್ತಿಯಾಗುವ ಉಪಾಯಗಳೆ ಜಾಗೃತಿಯನ್ನು ಮೂಡಿಸಬಲ್ಲವುಗಳಾಗಿವೆ.

ಮಹಿಳೆಯನ್ನು ಪ್ರಧಾನವಾಗಿಟ್ಟುಕೊಂಡು ನಾನಾ ಕ್ಷೇತ್ರಗಳಲ್ಲಿ ಅವರ ಹಿತಾಸಕ್ತಿಗಳನ್ನು ಕಾಪಾಡಿದಾಗ ಮಾತ್ರ ದೇಶದ ಪ್ರಗತಿ ಸಾಧ್ಯ. ಮಹಿಳೆಯಲ್ಲಿ ಅಡಗಿರುವ ಶಕ್ತಿ, ಸಾಮರ್ಥ್ಯ, ಪ್ರತಿಭೆಗೆ ಅವಕಾಶಕೊಟ್ಟಾಗ ಉತ್ಪಾದನಾ ಸಾಮರ್ಥ್ಯ ಹೆಚ್ಚಾಗುತ್ತದೆ. ರಚನಾತ್ಮಕ ಕೌಶಲ್ಯಗಳಿಂದ ಪ್ರೋತ್ಸಾಹ ದೊರೆತು ಸಬಲ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ. ಮಹಿಳೆಯ

ಹಿತಾಸಕ್ತಿಯ ನೋಟವಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಕಲೆ, ಸಂಗೀತ, ಚಿತ್ರರಂಗ, ಸಾಹಿತ್ಯ, ಆಟೋಟಗಳು ಇತ್ಯಾದಿಯಾಗಿ ಸಾಧನೆಯು ಮುಖ್ಯ.

೪.೬ ಕಾನೂನುಗಳ ನಿರ್ಮಾಣ

ಜೀವನದ ದೃಷ್ಟಿಕೋನಕ್ಕನುಗುಣವಾಗಿ ಸಮಾನತೆಯ ನೋಟ, ವೈಚಾರಿಕತೆಯ ಹಿರಿಮೆ, ಶಿಕ್ಷಣದ ಸಮಾನತೆ, ಹಾಗೂ ಮನೋಭಾವದಲ್ಲಿ ಸುಧಾರಣೆಯನ್ನು ತರಬೇಕಾದರೆ ಕಾನೂನುಗಳು ಬಹಳ ಮುಖ್ಯ. ಇದರಿಂದಾಗಿ ಸುಧಾರಣಾ ಚಿಂತನೆಗೆ ಪ್ರೋತ್ಸಾಹವಾಗುತ್ತದೆ.[೧೨] ಮಹಿಳೆಯರ ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಮನ್ನಣೆ ಲಭಿಸಿದಂತಾಗುತ್ತದೆ. ಇದರಿಂದಾಗಿ ಉದ್ಯೋಗ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ವಿಶೇಷ ಕಾನೂನಿನ ಸಹಾಯದಿಂದ ಮಹಿಳೆಗೆ ಹೆಚ್ಚೆಚ್ಚು ನೆರವಾಗುವುದು. ಇತ್ತೀಚಿನ ದಿನಮಾನಗಳಲ್ಲಿ ಮಹಿಳಾ ವೇದಿಕೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಕಾನೂನಿನ ಮನ್ನಣೆಯೇ ಪ್ರೋತ್ಸಾಹದಾಯಕವಾಗಿದೆ.

೪.೭ .ಮಹಿಳಾ ನಿರ್ಣಾಯಕ ಪಾತ್ರ

ಪ್ರತಿಯೊಬ್ಬ ಪುರುಷರ ಬೆಳವಣಿಗೆಯ ಹಿಂದೆ ಒಬ್ಬ ಸ್ತ್ರೀಯ ಪಾತ್ರ ವಿಶೇಷವಾಗಿರುತ್ತದೆ. ಮಹಿಳೆ ಎಲ್ಲ ಹಂತಗಳಲ್ಲಿ ಪತ್ನಿಯಾಗಿ, ಮಾತೆಯಾಗಿ, ಸೋದರಿಯಾಗಿ, ಸೊಸೆಯಾಗಿ ಹಾಗೂ ಇನ್ನಿತರ ಪಾತ್ರಗಳಲ್ಲಿ ಅವಳು ಸ್ಪಂದಿಸುವ ಸಂದರ್ಭ ಇದ್ದಾಗ ಪುರುಷನ ಜೊತೆ ವ್ಯವಹಾರ ಹಾಗೂ ಇನ್ನಿತರ ವಿಷಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಸ್ತ್ರೀಯ ಪಾತ್ರ ವಿಶೇಷ.

ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಗಣಕಯಂತ್ರ, ವೈದ್ಯಕೀಯ ಕ್ಷೇತ್ರ, ಅಭಿಯಂತರ, ಕಲೆ, ಸಾಹಿತ್ಯ, ಸಂಗೀತ, ಆಟೋಟಗಳು, ನೌಕರಶಾಹಿ, ರಾಜಕೀಯ, ಇತ್ಯಾದಿ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯ ಸಾಧನೆ ಗುರುತಿಸಿ ಗೌರವಿಸಬೇಕು.[೧೩] ಭಾರತದ ಸ್ವಾತಂತ್ರ್ಯ ಮತ್ತು ಸಂವಿಧಾನದ ಪರಿಣಾಮವಾಗಿ ಸ್ತ್ರೀಯರಿಗೆ ಸಮಾನವಾದ ಹಕ್ಕು ಮತ್ತು ಕರ್ತವ್ಯಗಳನ್ನು ನೀಡಿದೆ. ಸ್ತ್ರೀಯರ ಹಿತಾಸಕ್ತಿಯನ್ನು ರಕ್ಷಿಸಲು ಅನೇಕ ಕಾನೂನುಗಳನ್ನು ರೂಪಿಸಲಾಗಿದೆ.

೪.೮ ಮಹಿಳಾ ಸಬಲೀಕರಣ

ಮಹಿಳೆಯರಲ್ಲಿ ಬೌದ್ಧಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಬಲವನ್ನು ಹೆಚ್ಚಿಸುವುದಕ್ಕೆ ಮಹಿಳಾ ಸಬಲೀಕರಣ ಎನ್ನುತ್ತಾರೆ. ೨೦೦೧ ನೇ ವರ್ಷವನ್ನು ಮಹಿಳಾ ಸಬಲೀಕರಣ ವರ್ಷವೆಂದು ಕರೆಯುತ್ತಾರೆ. ಸಬಲೀಕರಣ ಎನ್ನುವುದು ಸಾಮಾನ್ಯವಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ. ೨೧ ನೇ ಶತಮಾನದಲ್ಲಿ ಲಿಂಗ ಸಮಾನತೆ, ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ, ರಾಜಕೀಯ ಅಸಮಾನತೆ

ಮತ್ತು ಬಡತನ ನಿರ್ಮೂಲನೆ ಮಾಡಲು ಮಹಿಳಾ ಸಬಲೀಕರಣ ಸಾಧಿಸುವುದು ಅತ್ಯಂತ ಮುಖ್ಯವಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ಸುಮಾರು ೭೩ ವರ್ಷಗಳು ಕಳೆದಿವೆ. ಆದರೂ ಸಹ ಪುರುಷ ಮತ್ತು ಮಹಿಳಾ ನಡುವಿನ ಲಿಂಗ ತಾರತಮ್ಯ ಇನ್ನೂ ಮುಂದುವರೆದಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ಮಹಿಳೆಯರಿಗೆ ವಿಶೇಷ ಸವಲತ್ತುಗಳು ಮತ್ತು ವಿವಿಧ ರಂಗಗಳಲ್ಲಿ ಮೀಸಲಾತಿಯನ್ನು ನೀಡಿದೆ. ಅದರಲ್ಲೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ನೀಡಿರುವುದು ಒಂದು ಮುಖ್ಯವಾಗಿದೆ. ೭೩ ನೇ ತಿದ್ದುಪಡಿ ಜಾರಿಗೆ ಬಂದು ಸುಮಾರು ೨೫ ವರ್ಷ ಕಳೆದಿವೆ.[೧೩]

ಹಳ್ಳಿಯಿಂದ ದಿಲ್ಲಿಯವರೆಗೆ ಎನ್ನುವಂತೆ ಮನೆಗೆಲಸದಿಂದಾಗಿ ದೇಶವನ್ನಾಳುವ ಕಾರ್ಯದವರೆಗೂ ಸಹ ಮಹಿಳೆಯರಿದ್ದಾರೆ. ಕೇವಲ ಮನೆ ಕೆಲಸಕ್ಕೆ ಸೀಮಿತರಾಗಿರುವಂತಹ ಸ್ತ್ರೀಯರು ಇಂದು ದೇಶದ ಆಡಳಿತದ ಚುಕ್ಕಾಣಿ ಹಿಡಿಯುವಲ್ಲಿ ಗಡಿ ರಕ್ಷಣೆಯಲ್ಲಿ ದೇಶದ ವೈಜ್ಞಾನಿಕ ಅಂತರಿಕ್ಷ ಕಾರ್ಯದಲ್ಲಿ ಮಹಿಳೆಯ ಪಾತ್ರ ಮುಖ್ಯವಾಗಿದೆ. ಮಹಿಳೆಯು ಕೇವಲ ಅಡುಗೆ ಮನೆಗೆ ಸೀಮಿತವಾಗಿಲ್ಲ ಕಾಲ ಕಾಲಕ್ಕೆ ಅವಳು ಅಡುಗೆ ಮನೆಯಿಂದ ಆಚೆಗೆ ಬಂದು ದೇಶಕ್ಕೆ ಕೊಡುಗೆ ನೀಡುವುದರಲ್ಲಿ ಅವಳ ಪಾತ್ರ ಹೆಚ್ಚಾಗುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ದೇಶದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಹಿಳೆಯರ ಸಾಧನೆಯನ್ನು ಗಮನಿಸಿದಾಗ ಹಲವಾರು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾಳೆ. ಅಭಿವೃದ್ಧಿಶೀಲ ದೇಶಗಳಲ್ಲಿ ಮಹಿಳೆಯರಿಗೆ ಉದ್ಯೋಗದ ಅವಕಾಶಗಳು ಪುರುಷರಿಗಿಂತ ಅರ್ಧಕ್ಕಿಂತ ಕಡಿಮೆ, ಜೊತೆಗೆ ದುಡಿಯುವ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ಪರಿಗಣಿಸಲಾಗಿದೆ. ಮಹಿಳೆಯರ ರಕ್ಷಣೆ–ಪೋಷಣೆ ಎಲ್ಲವೂ ಪುರುಷ ವರ್ಗದ ಮೇಲೆಯೇ ಅವಲಂಬಿಸಿದ್ದಾಗಿದೆ. ದೇಶದಲ್ಲಿ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳಾ ಕಾರ್ಮಿಕರನ್ನು ಹೆಚ್ಚು ನಿರ್ಲಕ್ಷಿಸಲಾಗುತ್ತಿದೆ. ಭಾರತವನ್ನು ಒಳಗೊಂಡಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳಾ ಕಾರ್ಮಿಕರು ಉದ್ಯೋಗಾವಕಾಶಗಳಲ್ಲಿ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ. ಪ್ರಾರಂಭದಿಂದಲೂ ಪುರುಷರ ಮತ್ತು ಮಹಿಳೆಯರ ನಡುವೆ ಅಸಮಾನ ಶ್ರಮವಿಭಜನೆ ಏರ್ಪಟ್ಟಿದೆ. ಮಹಿಳೆಯು ದುಡಿಮೆಯ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ೨೧ ನೇ ಶತಮಾನದ ಅದ್ಭುತವೇನಲ್ಲ. ಸಮಾಜ ಜೀವನದ ಆರಂಭದಿಂದಲೂ ಪುರುಷರೊಂದಿಗೆ ಅವಳು ದುಡಿಯುತ್ತಿದ್ದಾಳೆ. ಆದರೆ ಇಂದು ಅವಳನ್ನು ವಿವಿಧ ಶ್ರಮ ವರ್ಗಗಳಲ್ಲಿ ವಿವಿಧ ಸ್ತರಗಳಲ್ಲಿ ಗುರುತಿಸಬಹುದು. ಮಹಿಳೆ ಹುಟ್ಟಿನಿಂದ ಸಾವಿನವರೆಗೆ ಮಾನವ ಸಮಾಜದಲ್ಲಿ ಬದುಕಬೇಕಾಗಿರುವುದರಿಂದ ಅವಳು ದುಡಿಯುವ ರಂಗದಲ್ಲಿ ಪ್ರವೇಶ ಪಡೆಯಬೇಕಾಗಿದೆ. 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ

ತತ್ರ ದೇವತಾ' ಎಂದು ಒಂದು ಕಡೆ, ಇನ್ನೊಂದು ಕಡೆ 'ನಸ್ತ್ರೀ ಸ್ವಾತಂತ್ರ್ಯ ಮರ್ಹತೆ' ಎಂಬ ಮಾತುಗಳು ದ್ವಂದ್ವವಾಗಿ ಸಮಾಜವನ್ನು ಕಾಡುತ್ತಿವೆ.[೪]

೪.೯ ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆ

ಭಾರತದಲ್ಲಿ ಮಹಿಳೆ ದುಡಿಯುವ ರಂಗವನ್ನು ಹೇಗೆ? ಎಂದು ಪ್ರವೇಶಿಸಿದಳು ಎಂಬ ಪ್ರಶ್ನೆಗೆ ಸರಿಯಾದ ಉತ್ತರವಿಲ್ಲ. ಬೀಜ ಬಿತ್ತುವುದು, ಕಳೆ ಕೀಳುವುದು, ನೀರು ಹಾಕುವುದು, ಕೋಯ್ಲು ಮಾಡುವುದು, ಸಂಗೋಪನೆ, ಕೋಳಿ ಸಾಕಾಣಿಕೆಗಳಲ್ಲಿ ತನ್ನ ಮನೆಯ ಪುರುಷರ ಜೊತೆ ದುಡಿಯಲಾರಂಬಿಸಿದ್ದೇ ಅಲ್ಲದೆ ಗುಡಿ ಕೈಗಾರಿಕೆಗಳಾದ ಬೀಡಿ ಕಟ್ಟುವುದು, ಹಗ್ಗ ಹೊಸೆಯುವುದು, ಮಡಿಕೆ ಮಾಡುವುದು ಮುಂತಾದ ಕೆಲಸಗಳನ್ನು ಮಾಡಲು ಪ್ರಾರಂಭಿಸಿದಳು. ಅದರಲ್ಲೂ ಕೆಳವರ್ಗದ ಮಹಿಳೆಯರಿಗೆ ಉದ್ಯೋಗ ಅನಿವಾರ್ಯ. ಹಳ್ಳಿಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರಿಂದ ಹಿಡಿದು ಪಟ್ಟಣಗಳಲ್ಲಿ ಮನೆಗೆಲಸ, ಚಿಕ್ಕಪುಟ್ಟ ಕಾರ್ಖಾನೆಗಳಲ್ಲಿ ದುಡಿಯುವುದು, ಕಟ್ಟಡ ನಿರ್ಮಾಣ ಕೆಲಸ ಇತ್ಯಾದಿ ಕಡಿಮೆ ವರಮಾನ ಬರುವ ಕೆಲಸಗಳಲ್ಲಿ ತೊಡಗಿರುವ ಮಹಿಳೆಯರಿಗೆ ಉದ್ಯೋಗ ಅನಿವಾರ್ಯ. ಇಂತಹ ವರ್ಗದ ಮಹಿಳೆಯರು ಮನೆಯ ಒಳಗೂ ಹಾಗೂ ಹೊರಗೂ ದುಡಿಯಬೇಕಾಗಿರುವುದರಿಂದ ಒಂದು ರೀತಿಯ ಚಲನಶೀಲತೆ ಹೊಂದಿರುತ್ತಾರೆ.

ಕೆಳವರ್ಗದ ಕುಟುಂಬಗಳಲ್ಲಿ ಮನೆಯ ಜವಾಬ್ದಾರಿಯು ದುಡಿಯುವ ಮಹಿಳೆಯ ಹೆಗಲ ಮೇಲೆ ಬಿದ್ದಿರುತ್ತದೆ. ಕೆಳವರ್ಗದ ಮಹಿಳೆಯರು ಅಥವಾ ಕಾರ್ಮಿಕ ಮಹಿಳೆಯರು ದುಡಿಯುವ ಕ್ಷೇತ್ರದಲ್ಲಿನ ಅನ್ಯಾಯವನ್ನು ಮತ್ತು ಮನೆಯಲ್ಲಿ ಗಂಡನಿಂದ ನಡೆಯುವ ದೌರ್ಜನ್ಯವನ್ನು ಅನುಭವಿಸಿದರು. ತಮ್ಮ ಸಂಸಾರದ ಆಗು ಹೋಗುಗಳನ್ನು ತಾವೇ ಸ್ವತಂತ್ರ್ಯವಾಗಿ ನಿರ್ವಹಿಸುತ್ತಾರೆ. ಹಿಂದೆ ಮನೆಯಲ್ಲಿ ಒಬ್ಬರು ದುಡಿದರೆ ಸಾಕಿತ್ತು. ಮಹಿಳೆ ಅವಶ್ಯಕತೆ ಇರಲಿಲ್ಲ. ಆದರೆ ಕಾಲ ಕಳೆದಂತೆ ವಿಪರೀತ ಬೆಲೆ ಏರಿಕೆ ದೆಸೆಯಿಂದ ಒಬ್ಬ ವ್ಯಕ್ತಿ ದುಡಿದು ತಂದ ಹಣದಿಂದ ಸಂಸಾರ ನಡೆಸುವುದು ಇಂದು ಬಹಳ ಕಷ್ಟವಾಗಿದೆ. ಪರಿಸರದ ಒತ್ತಡದಿಂದ ಇಷ್ಟ ಇರಲಿ ಇಲ್ಲದೇ ಇರಲಿ ಅನಿವಾರ್ಯವಾಗಿ ಅವಳು ದುಡಿಯುವ ಪರಿಸ್ಥಿತಿಯುಂಟಾಗಿದೆ. ಹೀಗಾಗಿ ಭಾರತದ ಮಹಿಳೆ "ಆಡು ಮುಟ್ಟದ ಸೊಪ್ಪಿಲ್ಲ" ಎನ್ನುವ ಗಾದೆಯಂತೆ ಇಂದು ಮಹಿಳೆ ಪ್ರವೇಶಿಸದೇ ಇರುವ ರಂಗಗಳೇ ಇಲ್ಲ.

ಮಹಿಳೆ ಹೊರಗೆ ಹೋಗಿ ದುಡಿಯುವುದು ಇತ್ತೀಚಿನ ಬದಲಾದ ಪರಿಸರದಲ್ಲಿ ಕಾಣಿಸಿಕೊಂಡಿದ್ದು ಎಂದು ಅನೇಕರು ಬಯಸಬಹುದು. ಆದರೆ ದುಡಿಯುವ ಮಹಿಳೆ ದುಡಿಯುವ ವಿಚಾರವೇನು ಹೊಸದಲ್ಲ. ಆಫೀಸು, ಕಛೇರಿಗಳಲ್ಲಿ ಕಾಗದ ಪತ್ರಗಳ ಮಧ್ಯೆ

ಕುಳಿತು ಹೊರಗೆ ದುಡಿಯುವುದು ಹೊಸದಿರಬಹುದು. ಆದರೆ ಪುರಾತನ ಕಾಲದಿಂದ ಮಹಿಳೆ ದೈಹಿಕ ಹಾಗೂ ಮಾನಸಿಕ ಶ್ರಮದಿಂದ ಆರ್ಥಿಕ ಲಾಭವನ್ನು ಪಡೆಯುತ್ತಿಲ್ಲದ್ದನ್ನು ನೋಡಬಹುದು. ಹಿಂದೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದು ಕಠಿಣ. ಅದು ಗಂಡಸರಿಗಷ್ಟೇ ಸಾಧ್ಯ ಎಂಬ ಭಾವನೆ ಇತ್ತು. ಇಂದು ನಿರುದ್ಯೋಗ ಸಮಸ್ಯೆಯ ದೃಷ್ಟಿಯಿಂದ ವಿದ್ಯಾವಂತ ಮಹಿಳೆಯರು ಕೆಲಸಕ್ಕಾಗಿ ಅಲೆಯುತ್ತಿದ್ದಾರೆ. ಅವಕಾಶ ಸಿಕ್ಕಾಗ ಗತ್ಯಂತರವಿಲ್ಲದೆ ಯಾವ ಕೆಲಸವಾದರೂ ಸರಿಯೆಂದು ಒಪ್ಪಿಕೊಳ್ಳುವ ಮಹಿಳೆಯರು ಇದ್ದಾರೆ. ಮಹಿಳೆ ಎಂದೊಡನೆ ಕೋಮಲತೆ, ಮೃದುಸ್ವಭಾವ ಮನಸ್ಸಿಗೆ ಬರುವುದರೊಡನೆ ಕೈಗಳು ಈಗ ಯಂತ್ರಗಳನ್ನು ನಡೆಸಬಲ್ಲವು. ರಿಪೇರಿ ಮಾಡಬಲ್ಲವು. ಭಾರತ ಎಲೆಕ್ಟ್ರಾನಿಕ್ಸ್‌ನಂತಹ ಕೈಗಾರಿಕೆಗಳಲ್ಲಿ ಹೆಣ್ಣುಮಕ್ಕಳು ತುಂಬಿ ಹೋಗಿದ್ದಾರೆ. ವಿಮಾನ, ಟೆಲಿಫೋನ್, ಕಾಗದ, ಬಟ್ಟೆ ಕಾರ್ಖಾನೆಗಳಲ್ಲಿ ಯಂತ್ರೋಪಕರಣಗಳ ಕಾರ್ಖಾನೆಯಲ್ಲಿ ಅನೇಕ ಜನ ಮಹಿಳೆಯರು ದುಡಿಯುತ್ತಿದ್ದಾರೆ. ಅಂದರೆ ಮಹಿಳೆಯರು ಬಹುತೇಕ ರಂಗಗಳಲ್ಲಿಯೂ ಪುರುಷರಂತೆಯೇ ಶಕ್ತಳಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹಿಂದಿನಂತೆ ನಾಲ್ಕು ಗೋಡೆಗಳ ಮಧ್ಯೆ ದುಡಿದು ಉತ್ತಮ ಗೃಹಿಣಿಯ ಪಟ್ಟವೇರಿ ತಕ್ಕಮಟ್ಟಿಗೆ ವಿಶ್ರಾಂತಿ ಪಡೆಯುತ್ತಿದ್ದ ಮಹಿಳೆಗೆ ಇಂದು ವಿಶ್ರಾಂತಿ ಎಂಬುದು ಮರೀಚಿಕೆಯಾಗಿದೆ. ದುಡಿಯುವ ಯಂತ್ರವಾಗಿ ಪರಿಸ್ಥಿತಿಯ ಕೈಗೊಂಬೆಯಾಗಿ ಮಹಿಳೆಯರು ಬದಲಾವಣೆಗಳಿಗೆ ಪರಿಪೂರ್ಣವಾಗಿ ಹೊಂದಿಕೊಳ್ಳಲಾಗದೆ ತಡವರಿಸುತ್ತಿದ್ದಾಳೆ. ದುಡಿಮೆ ತಂದುಕೊಟ್ಟಿರುವ ಆರ್ಥಿಕ ಸ್ವಾತಂತ್ರ್ಯದಿಂದಾಗಿ ಮಹಿಳೆ ಸ್ವಾವಲಂಬಿಯಾಗಿದ್ದರೂ ಗಂಡ ಹೆಂಡತಿ ಸಂಸಾರ ಸಾಮರಸ್ಯದ ಸುಖದಿಂದ ಮಹಿಳೆ ವಿಮುಖಳಾಗುತ್ತಿದ್ದಾಳೆ. ಅಲ್ಲದೆ ಮಹಿಳೆಯ ಸಾಮಾಜಿಕ ಉತ್ಪಾದನಾ ಕಾರ್ಯಗಳಿಂದ ದೂರವಿರಿಸಿ ಕೌಟುಂಬಿಕ ಕೆಲಸಗಳಲ್ಲಿ ತೊಡಗಿಸಿದ್ದರಿಂದಲೆ ಅವರ ಶೋಷಣೆ ಪ್ರಾರಂಭವಾಯಿತು ಎಂದು ಎಂಗೆಲ್ಸ್‌ರವರು ಹೇಳುತ್ತಾರೆ. ಹೀಗೆ ಕುಟುಂಬವು ಸ್ತ್ರೀ ಶೋಷಣೆಯ ಮೂಲವಾಗಿದೆ ಎಂಬುದನ್ನು **'ದಿ ಓರಿಜಿನ್ ಆಫ್ ಫ್ಯಾಮಿಲಿ ಪ್ರೈವೇಟ್ ಪ್ರಾಪರ್ಟಿ ಆಂಡ್ ದಿ ಸ್ಟೈಟ್"** ಎಂಬ ಮಹಾ ಪ್ರಬಂಧದಲ್ಲಿ ವ್ಯವಸ್ಥಿತವಾಗಿ ಪ್ರತಿಪಾದಿಸಿದ್ದಾರೆ.

೪.೧೦ ದುಡಿಮೆ ಮತ್ತು ಮಹಿಳೆ

ನಮ್ಮ ದೇಶದಲ್ಲಿ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣ ಕಡಿಮೆ ಇರುವುದು ಕಂಡುಬರುತ್ತದೆ. ೨೦೦೧ ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ ಒಟ್ಟು ೧೦೨,೭೦,೧೫,೨೪೭ ಇದರಲ್ಲಿ ಪುರುಷರು ೫೩,೧೨,೭೭,೦೭೮ ಹಾಗೂ ಮಹಿಳೆಯರು ೪೯,೫೭,೩೮,೧೬೯ ಇದ್ದಾರೆ. ಲಿಂಗಾನುಪಾತ ೯೩೩ ರಷ್ಟು ಇದೆ. ಅಲ್ಲದೆ ಭಾರತದ

ಅನಕ್ಷರತೆಯಲ್ಲಿ ಪುರುಷರದು ಶೇಕಡಾ ೬೭.೨೦ ಹಾಗೂ ಮಹಿಳೆಯರದು ಶೇಕಡಾ ೪೪.೩೪ ರಷ್ಟು ಇದೆ. ಈ ಅಂಕಿ ಅಂಶಗಳು ರಾಜ್ಯವಾರುಗಳಲ್ಲಿ ವ್ಯತ್ಯಾಸವನ್ನು ಕಾಣಬಹುದು. ೨೦೦೧ ರ ಜನಗಣತಿಯ ಪ್ರಕಾರ ಕರ್ನಾಟಕದ ಜನಸಂಖ್ಯೆ ೫,೨೭,೩೩,೯೫೮. ಇದರಲ್ಲಿ ಪುರುಷರು ೨,೫೮,೭೭,೬೧೫ ರಷ್ಟು, ಇದ್ದಾರೆ. ಲಿಂಗಾನುಪಾತ ಉತ್ತಮ ಮಟ್ಟದಲ್ಲಿದೆ. ಕರ್ನಾಟಕದ ಸಾಕ್ಷರತೆಯ ಪ್ರಮಾಣ ಶೇಕಡಾ ೬೭.೦೪ ಇದರಲ್ಲಿ ಪುರುಷರು ಶೇಕಡಾ ೭೬.೨೯ ಹಾಗೂ ಮಹಿಳೆಯರದು ಶೇಕಡಾ ೫೭.೪೫ ರಷ್ಟಿದೆ. ರಾಷ್ಟ್ರೀಯ ಸಾಕ್ಷರತೆಯ ಮಟ್ಟಕ್ಕಿಂತ ಕರ್ನಾಟಕ ರಾಜ್ಯದ ಸಾಕ್ಷರತೆಯ ಮಟ್ಟ ಉತ್ತಮ ಸ್ಥಿತಿಯಲ್ಲಿದೆ. ಆದರೆ ಜಿಲ್ಲಾವಾರುಗಳಲ್ಲಿ ಬಹಳ ವ್ಯತ್ಯಾಸವಿರುವುದು ಕಂಡುಬರುತ್ತದೆ.

ನಮ್ಮ ಮುಂದಿರುವ ಇತಿಹಾಸ, ಬೇಟೆ, ಯುದ್ಧ, ದಿಗ್ವಿಜಯ, ರಾಜ್ಯ ವಿಸ್ತರಣೆಯಂತಹ ಗಂಡಿನ ಯಶೋಗಾಥೆ ಹಾಗೂ ಅವರ ಅನುಭವಗಳನ್ನು ವೈಭವೀಕರಿಸುವ ದಾಖಲೆಯೇ ಆಗಿದೆ. ಈ ನಿಲುವು ಗಂಡಿನ ಚಟುವಟಿಕೆಗಳನ್ನು ಮುಖ್ಯ ಎಂದು ಗ್ರಹಿಸುವುದರಿಂದ ಹೆಚ್ಚಿನ ಗರ್ಭಧಾರಣೆ, ತಾಯ್ತನ, ಪಾಲನೆ, ಪೋಷಣೆಯಂತಹ ಚಟುವಟಿಕೆಗಳನ್ನು ತೀರಾ ಸಾಮಾನ್ಯ ಎಂದು ನಿರಾಕರಿಸಲಾಗಿದೆ. ಹೀಗೆ ಮರೆಯಾದ ಮಹಿಳಾ ಮುಖವನ್ನು ಹೊರತೆಗೆದು ಹೆಣ್ಣಿನ ಚರಿತ್ರೆಯನ್ನು ಕಟ್ಟಬೇಕಾಗಿದೆ.

ಪ್ರಾಚೀನ ಕಾಲದಿಂದಲೂ ಮಹಿಳೆ ಸಮಾಜದ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಬಂದಿದ್ದಾಳೆ. ಎಲ್ಲಾ ಕಾಲದಿಂದಲೂ ನಂಬಲು ಅರ್ಹವಾದ ದಾಖಲೆಗಳು ದೊರೆಯದಿದ್ದ ಕಾರಣ, ಮಹಿಳೆಯರ ಈ ಸಹಭಾಗಿತ್ವದ ಶಕ್ತಿಯನ್ನು ಕೈ ಬಿಡಲಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯ ಸಹಭಾಗಿತ್ವವನ್ನು ಆರ್ಥಿಕ ದೃಷ್ಟಿಯಲ್ಲಿ ಅಳೆಯಲು ಇಂದಿನ ಸಂಶೋಧನೆಗಳು ಆಧುನಿಕ ಸಾಹಿತ್ಯ ಶಾಸನ ಹಾಗೂ ಪುರಾಣಗಳನ್ನು ಅವಲಂಬಿಸಬೇಕಾಗಿದೆ. ಹಾಗಾಗಿ ಈ ಅಂಶಗಳನ್ನು ಆಳವಾಗಿ ತಿಳಿಯಲು ಕಷ್ಟಸಾಧ್ಯ.

ಭಾರತೀಯ ಮಹಿಳೆ ಅನ್ಯ ಸಮಾಜಗಳಂತೆಯೇ ಮೊದಲಿನಿಂದಲೂ ಆರ್ಥಿಕ ವ್ಯವಸ್ಥೆಯಲ್ಲಿ ಭಾಗವಹಿಸುತ್ತಾ ಬಂದಿದ್ದಾಳೆ. ಸಾವಿರಾರು ವರ್ಷಗಳ ಹಿಂದಿನಿಂದಲೂ ಮಹಿಳೆ ಕೃಷಿ ಕ್ಷೇತ್ರದ ಜೊತೆಗೆ ಮನೆಗೆಲಸವನ್ನು ನಿಭಾಯಿಸಿಕೊಂಡು ಬರುತ್ತಿದ್ದಾಳೆ. ಇದರಿಂದಾಗಿ ಸಮಾಜದಲ್ಲಿ ಮಹಿಳೆಯ ಮಾನವೀಯ ಸಂಬಂಧಗಳು ಹತ್ತಿರವಾದವು. ಇಂತಹ ಚಾರಿತ್ರಿಕ ಯುಗಾಂತರದಲ್ಲಿ ಮಹಿಳೆಯ ಉತ್ಪಾದನಾ ಚಟುವಟಿಕೆ ಕುಟುಂಬದ ಸಾಹಸ ಕ್ರಿಯೆಯಾಯಿತು. ಭಾರತದಲ್ಲಿ ಸಾಂಪ್ರದಾಯಿಕ ಗ್ರಾಮೀಣ ಸಮುದಾಯಗಳು ಕೃಷಿ ಜೀವನದ ಜೊತೆಗೆ ಕರಕುಶಲ ಕೆಲಸಕ್ಕೂ ತಮ್ಮ ಸೇವೆಯನ್ನು ಮೀಸಲಾಗಿಟ್ಟಿವೆ. ಮಹಿಳೆ ಇಂತಹ ಪ್ರತಿ ಹಂತದಲ್ಲೂ ಕುಟುಂಬದ

ಜೀವನಾವಶ್ಯಕ ದುಡಿಮೆಯ ಜೊತೆಗೆ ಹೆಚ್ಚು ಕಡಿಮೆ ಉತ್ಪಾದನಾ ಹಾಗೂ ಕರಕುಶಲ ಕ್ಷೇತ್ರದಲ್ಲೂ ಸಮಾನಾಂತರವಾಗಿ ದುಡಿದಿದ್ದಾಳೆ. ಸ್ಥಳೀಯ ಪ್ರದೇಶಗಳು ಹಾಗೂ ಹತ್ತಿರದ ಮಾರುಕಟ್ಟೆಗಳು ಇದಕ್ಕೆ ಸಹಾಯಕವಾದವು. ಪ್ರಚಲಿತ ಸಾಂಪ್ರದಾಯಿಕ ವಿಧಾನದಿಂದ ಮಹಿಳೆಯರ ಆರ್ಥಿಕ ಪರಿಸ್ಥಿತಿಯೂ ಉತ್ತಮಗೊಂಡಿತು. ಹೀಗೆ ಗೃಹಕೃತ್ಯಗಳಲ್ಲಿ ಕೇಂದ್ರೀಕೃತವಾಗಿದ್ದ ಮಹಿಳೆಯರು ಗ್ರಾಹಕರನ್ನು ಒಳಗೊಂಡ ಆರ್ಥಿಕ ಕ್ಷೇತ್ರಗಳಲ್ಲಿ ಹೆಚ್ಚು ಸ್ಥಾನಮಾನಗಳಿಸಿಕೊಂಡರು. ಆದರೆ ಮಾನವನ ಪರಿಶ್ರಮಕ್ಕೆ ಬದಲಾಗಿ ಯಂತ್ರಗಳು ಬಳಸಲ್ಪಟ್ಟಾಗ ಈ ತಾಂತ್ರಿಕತೆಯಿಂದಾಗಿ ಮಹಿಳೆಯರ ಪ್ರಭುತ್ವಕ್ಕೆ, ದುಡಿಮೆಗೆ, ಆರ್ಥಿಕ ಚಟುವಟಿಕೆಗಳ ಸಹಭಾಗಿತ್ವಕ್ಕೆ ಕೊಡಲಿ ಪೆಟ್ಟು ಬಿದ್ದಂತಾಯಿತು.

ಇಂತಹ ಪರಿಸ್ಥಿತಿಯಲ್ಲಿ ಮಹಿಳೆ ಮತ್ತೆ ತನ್ನ ಜೀವನ ನಿರ್ವಹಣೆಗಾಗಿ ಸಾಂಪ್ರದಾಯಿಕ ಕ್ಷೇತ್ರಗಳ ದುಡಿಮೆಯಲ್ಲಿ ತೊಡಗಿಸಿಕೊಂಡಳು. ಅದರಲ್ಲಿ ಮುಖ್ಯವಾಗಿ ಕೃಷಿ, ಮನೆಗೆಲಸ, ತೋಟಗಳಲ್ಲಿ ಕೂಲಿ ಹೀಗೆ ಕೆಲವು ಸಾಂಪ್ರದಾಯಿಕ ಕಾರ್ಖಾನೆಗಳಾದ ಖಾದಿ ಉದ್ಯಮ, ನೂಲು ತೆಗೆಯುವುದು, ಹತ್ತಿ ಹಿಂಜುವ (ಜಿನ್ನಿಂಗ್) ಕ್ಷೇತ್ರಗಳನ್ನು ದುಡಿಮೆಗೆ ಆಯ್ಕೆ ಮಾಡಿಕೊಂಡರು. (೧೫) ಗ್ರಾಮೀಣ ಮಹಿಳೆಯರ ಅಭಿವೃದ್ಧಿಯನ್ನು ಸರಿಯಾಗಿ ವಿಶ್ಲೇಷಿಸಲು ಮತ್ತಷ್ಟು ಅಧ್ಯಯನದ ಅವಶ್ಯಕತೆ ಇದೆ. ಅಭಿವೃದ್ದಿ ಹೊಂದದ ಮಹಿಳೆಯರ ಪಾತ್ರಗಳನ್ನು ಸಮಾಜದಲ್ಲಿ ಗುರುತಿಸಿ, ಅವರ ಸಂಬಂಧಗಳನ್ನು ಅರಿಯುವುದು ಅವಶ್ಯಕವಾಗಿದೆ. ಆದರೂ ಇಂತಹ ಸಂಧಿಗ್ದ ಸಂದರ್ಭದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಪುರುಷರಷ್ಟೇ ಸಮನಾಗಿ ಮಹಿಳೆಯರು ಎತ್ತಿ ಹಿಡಿದಿದ್ದಾರೆ. ಅಲ್ಲದೆ ಮಹಿಳೆಯರು ಉತ್ಪಾದನಾ ಘಟಕದಲ್ಲಿ ತಮ್ಮ ಸ್ವಾಯತ್ತತೆಯನ್ನು ಸ್ಥಾಪಿಸಿ, ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಪುರುಷರಷ್ಟೇ ಪ್ರಧಾನ ಪಾತ್ರ ನಿರ್ವಹಿಸತೊಡಗಿದ್ದಾರೆ.

ಕಳೆದ ೩-೪ ಶತಮಾನಗಳಲ್ಲಿ ಪ್ರಪಂಚದಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಈ ೨೧ ನೇ ಶತಮಾನದಲ್ಲಿ ಭಾರತೀಯ ಸಮಾಜವು ತೀವ್ರತರದ ಪರಿವರ್ತನೆಗೆ ಒಳಗಾಗಿದೆ. ಕೈಗಾರಿಕಾ ಕ್ರಾಂತಿ ಬಂತು. ಬಂಡವಾಳಶಾಹಿಯ ವಿಜೃಂಬಣೆ ನಡೆಯಿತು. ಹೆಣ್ಣು ಮನೆಯ ಹೊರಗೆ ಬಂದಳು. ಕಾರ್ಖಾನೆ, ಗಣಿ, ಹೊಲ, ವ್ಯಾಪಾರ, ಐಟಿ ಎಲ್ಲಾ ಕ್ಷೇತ್ರಗಳಲ್ಲೂ ಹೆಣ್ಣು ಗಂಡಿಗೆ ಸರಿಸಾಟಿಯಾಗಿ ದುಡಿಯತೊಡಗಿದಳು. ಆದರೆ ಮನೆ ವಾರ್ತೆ ಮಾತ್ರ ಅವಳ ಪಾಲಿಗೆ ಅವಿಭಾಜ್ಯ ಅಂಗವಾಗಿ ಉಳಿದಿದೆ. ಬಂಡವಾಳಶಾಹಿಯ ಅತ್ಯಂತಿಕ ಸ್ಥಿತಿಯನ್ನು ತಲುಪಿದೆ. ಬಂಡವಾಳ, ಶ್ರಮಗಳೆರಡು ಒಂದೊಂದು ದ್ರುವಗಳಂತಾಗಿವೆ. ಮಹಿಳೆಯರ ದುಡಿಮೆಯ ಶ್ರಮಶಕ್ತಿಯ ಒಂದು ಭಾಗವಾಗಿ ಬೆಳೆದಿದೆ.

೨೦೧೧ ರ ಜನಗಣತಿಯಲ್ಲಿ ಉದ್ಯೋಗಿ ಮತ್ತು ಉದ್ಯೋಗಸ್ಥರು ಎಂಬ ವಿವರಣೆಯಲ್ಲಿ ಮತ್ತಷ್ಟು ಬದಲಾವಣೆ ಕಂಡುಬಂದಿತು. ಈ ಹಂತದಲ್ಲಿ ಉದ್ಯೋಗಿ ಎಂದರೆ, ತನ್ನ ದೈಹಿಕ ಅಥವಾ ಮಾನಸಿಕ ಪ್ರಯತ್ನದಿಂದ ಹಣವನ್ನು ಸಂಪಾದಿಸುವವನು ಎಂದಾಯಿತು. ಇದರ ಪರಿಣಾಮದಿಂದ ಅನೇಕ ಬದಲಾವಣೆಗಳು ಆದವು. ಆದರೂ ಗೃಹಕೃತ್ಯದಲ್ಲಿ ಮಹಿಳೆಯರ ಪರಿಶ್ರಮ, ದುಡಿಮೆ, ಪರಿಗಣನೆಗೆ ಬರಲಿಲ್ಲ. ಏಕೆಂದರೆ ಅವರು ಪೂರ್ಣಾವಧಿ ಕೆಲಸಗಾರರೆಂದು ಪರಿಗಣಿಸಲಿಲ್ಲ.

೪.೧೧ ಮಹಿಳಾ ಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳು

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಸ್ಥಾನಮಾನದ ವಿಷಯವಾಗಿ ಖಚಿತವಾದ ಉತ್ತರ ನೀಡುವುದು ಕಷ್ಟಕರ. ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯವರನ್ನಾಗಿ ಪರಿಗಣಿಸಿ ಕೆಳಸ್ತರದಲ್ಲಿಟ್ಟಿರುವುದು ಕಂಡುಬರುತ್ತದೆ. ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸಕ್ರೀಯವಾಗಿ ಭಾಗವಹಿಸುವಿಕೆಗೆ ಅಡ್ಡಿಯನ್ನುಂಟು ಮಾಡುವುದರ ಜೊತೆಗೆ, ಯಾವುದೇ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಇಲ್ಲದ ಸ್ಥಿತಿಗೆ ದೂಡಿದೆ. ಮಹಿಳೆಯ ಶ್ರಮ ಗೌರವದ ಶ್ರಮಮೌಲ್ಯವನ್ನು ಗುರುತಿಸಲಾರದ ಪರಿಸ್ಥಿತಿಗೆ ಕಾರಣ ನಮ್ಮ ಮೌಲ್ಯ ವ್ಯವಸ್ಥೆ ಮತ್ತು ಸಾಮಾಜೀಕರಣ ಪ್ರಕ್ರಿಯೆ ಎಂದು ಹೇಳಬಹುದು. ಜೊತೆಗೆ ಮಹಿಳೆ ಇಂದಿಗೂ ಅವಲಂಬಿತೆ. ಅವರ ಅವಲಂಬನೆಯ ಮೂಲ ಜೈವಿಕ ಹಾಗೂ ದೈಹಿಕ ಕಾರಣಗಳಿಗಿಂತ ಅವರ ಆರ್ಥಿಕ ಬಲಹೀನತೆಯಲ್ಲಿದೆ. ಮಹಿಳೆಯೆಂದರೆ ಪಾಲಿಸಿ, ಪೋಷಿಸಿ, ರಕ್ಷಿಸಬೇಕಾದಂತಹ ಹೊಣೆ ಎಂಬ ಸಮಾಜದ ಮನೋಭಾವಕ್ಕೆ ಮುಖ್ಯ ಕಾರಣ. ಹೀಗೆ ಮಹಿಳೆಯರನ್ನು ಲಿಂಗಬೇಧ ನೀತಿಯು ಅನೇಕ ರೀತಿಯಲ್ಲಿ ಶೋಷಣೆಗೆ ಗುರಿ ಮಾಡಿದೆ. ಅದರಲ್ಲೂ ಮುಖ್ಯವಾಗಿ ಕಾರ್ಮಿಕ ಮಹಿಳೆಯರನ್ನು ಪುರುಷ ಪ್ರಧಾನ ಸಮಾಜ ಮತ್ತು ಬಂಡವಾಳಶಾಹಿಗಳು ತಮ್ಮ ಕಪಿಮುಷ್ಠಿಯಲ್ಲಿ ಬಂಧಿಸಿಟ್ಟಿದ್ದಾರೆ. ಹಾಗಾಗಿ, ಮಹಿಳಾ ಕಾರ್ಮಿಕರ ಸ್ಥಿತಿಗತಿಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವುದು ಸೂಕ್ತ. ಯಾವುದೇ ಒಂದು ಕ್ಷೇತ್ರಾಧಾರಿತ ಅಧ್ಯಯನವನ್ನು ಕೈಗೊಂಡಾಗ ಆ ಕ್ಷೇತ್ರದ ಜನರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯನ್ನು ತಿಳಿಯುವುದು ಅವಶ್ಯಕ. ಏಕೆಂದರೆ, ಪ್ರತಿಯೊಂದು ಸಮಾಜದಲ್ಲಿ ವಿಭಿನ್ನವಾಗದ ಗುಂಪು, ಜಾತಿ ವಿಭಿನ್ನವಾದ ಜೀವನ ಮಟ್ಟವನ್ನು ಹೊಂದಿರುತ್ತಾರೆ.

ಪುರುಷ ಮತ್ತು ಮಹಿಳಾ ಕೆಲಸಗಾರರ ನಡುವೆ ವೇತನ ತಾರತಮ್ಯ ಕಂಡುಬರುತ್ತವೆ. ಮಹಿಳೆಯರು ಪುರುಷರಿಗೆ ಸಮಾನರಾಗಿ ಕೆಲಸಗಳನ್ನು ಮಾಡಿದರೂ ಸಹ ಅವರಿಗೆ ಕಡಿಮೆ ವೇತನ ಸಿಗುತ್ತದೆ. ಪುರುಷ ಕೆಲಸಗಾರರಿಗೆ ಸಿಗುವ ವೇತನದ ಶೇಕಡ ೫೦% ರಷ್ಟನ್ನು ಮಾತ್ರ

ಮಹಿಳಾ ಕಾರ್ಮಿಕರಿಗೆ ಸಿಗುತ್ತದೆ.[೧೬] ಈ ರೀತಿಯ ವೇತನ ತಾರತಮ್ಯವು ಪುರುಷ ಪ್ರಧಾನ ಸಮಾಜದ ಇನ್ನೊಂದು ಪ್ರಮುಖ ಅಂಶವಾಗಿದೆ ಎಂದರೆ ತಪ್ಪಾಗಲಾರದು. ಈ ತಾರತಮ್ಯವು ಗ್ರಾಮೀಣ ಕೆಲಸಗಾರರ ಹಾಗೂ ಪಟ್ಟಣ ಕೆಲಸಗಾರರು ಇಬ್ಬರಲ್ಲಿಯೂ ಕಂಡುಬರುತ್ತದೆ. ಇವರು ಸಮಾಜದಲ್ಲಿರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲಾಗದ ಸ್ಥಿತಿಯಿಂದಾಗಿ ಬಡತನವನ್ನು ಅನುಭವಿಸುತ್ತಾರೆ. ಮಹಿಳಾ ಕಾರ್ಮಿಕರ ಕೆಲಸದ ಸ್ವರೂಪಕ್ಕೂ ಹಾಗೂ ಅವರ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳಿಗೂ ನೇರವಾದ ಸಂಬಂಧವಿದೆ. ಆಧುನೀಕರಣ ಹಾಗೂ ವಾಣಿಜ್ಯೀಕರಣಗಳಿಗೆ ಅನುಗುಣವಾಗಿ ಸರ್ಕಾರದಿಂದ ರೂಪಿತವಾದ ಆರ್ಥಿಕತೆಯ ಸಾಂಪ್ರದಾಯಿಕ ಭಾರತೀಯ ಸಮಾಜಕ್ಕೆ ಅಂತಹ ಹೇಳಿಕೊಳ್ಳುವಂತಹ ರೀತಿಯಲ್ಲಿ ಪರಿಣಾಮ ಬೀರಿಲ್ಲ. ಬಂಡವಾಳಗಾರರು ಆಧುನಿಕ ಸಂಸ್ಥೆಗಳ ಮೇಲೆ, ಮಾರುಕಟ್ಟೆಯ ಮೇಲೆ ಲಾಭಾಂಶದ ಮೇಲೆ ಸ್ಥಿರತೆಯನ್ನು ಸಾಧಿಸಿ, ಕನಿಷ್ಠ ವೇತನವನ್ನು ನೀಡದೆ, ಸಂಘಟಿತ ಉತ್ಪಾದನಾ ಸಂಬಂಧಗಳನ್ನು ನಿಯಂತ್ರಿಸುತ್ತಾ ಬಂದಿದ್ದಾರೆ. ಜೊತೆಗೆ ಕೃಷಿ ಅಥವಾ ಕೃಷಿಯೇತರ ವೃತ್ತಿಯಲ್ಲಿ ತೊಡಗಿರುವ ದುರ್ಬಲ ವರ್ಗದವರನ್ನು ಶೋಷಣೆಗೆ ಗುರಿಪಡಿಸುತ್ತಾ ಬಂದಿರುವ ಸಂಗತಿಯು ತಿಳಿದುಬರುತ್ತದೆ.

ಅಂದು ಮಹಿಳೆಗೆ ಮನೆ, ಸಂಸಾರ, ಗಂಡ, ಮಕ್ಕಳು ಇದಿಷ್ಟೇ ಬದುಕಿನ ಸೀಮಾ ರೇಖೆಯಾಗಿದ್ದವು. ಇಂದು ಇವುಗಳ ಜೊತೆಗೆ ಮಹಿಳೆ ಹಲವಾರು ಉದ್ಯೋಗಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಮಹಿಳಾ ಕಾರ್ಮಿಕರ ಸ್ಥಾನಮಾನಕ್ಕೂ ಹಾಗೂ ಅವರ ಉದ್ಯೋಗಕ್ಕೂ ನೇರವಾದ ಸಂಬಂಧಗಳು ಇರುವುದು ಇಲ್ಲಿ ತಿಳಿಯುತ್ತದೆ. ಮಹಿಳೆ ಆರ್ಥಿಕತೆಯ ಸ್ವಾವಲಂಭನೆಗಾಗಿ, ಉದ್ಯೋಗದ ಕ್ಷೇತ್ರದಲ್ಲಿ ಸಹಭಾಗಿತ್ವವನ್ನು ಸಾಧಿಸಲು ಸೆಣಸಬೇಕಾಗಿದೆ. ಸಾರ್ವಜನಿಕ ಜೀವನದಲ್ಲಿ ಭಾಗಿಗಳಾಗಲು, ಸಾಂಪ್ರದಾಯಿಕತೆಯ ಬಿಗಿ ಮುಷ್ಠಿಯಿಂದ ವಿಮೋಚನೆ ಪಡೆಯಲು ಮನಸ್ಸು ಮಿಡಿಯುತ್ತಿದೆ. ಆದರೆ ಭಾರತೀಯ ಸಾಮಾಜಿಕ ವ್ಯವಸ್ಥೆಯ ಹಲವಾರು ಕಟ್ಟು ಪಾಡುಗಳಿಂದ, ಮಾಲೀಕತ್ವದ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದಂತಹ ವಾತಾವರಣದಲ್ಲೇ ಇವರ ಜೀವನ ಸಾಗುತ್ತಿದೆ. ಈ ಹಿಂದೆ ಹೇಳಿದಂತೆ ಮಹಿಳೆಯರ ಪ್ರಾಮಾಣಿಕ ದುಡಿಮೆಯನ್ನು ಸಾಮಾಜಿಕ ವ್ಯವಸ್ಥೆ ದುರುಪಯೋಗಪಡಿಸಿಕೊಳ್ಳುತ್ತಿದೆ.

ಮಹಿಳೆ ಆರ್ಥಿಕ ತೊಂದರೆಗಳಿಂದ ಹಲವಾರು ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ಹಿಂದೆ ಬೀಳುತ್ತಿದ್ದಾಳೆ. ಅವಳಿಗೆ ಇಂದು ಆರ್ಥಿಕವಾಗಿ ಸಬಲಳಾಗಲು ಅನೇಕ ರೀತಿಯ ವೃತ್ತಿಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಅಲ್ಪಪ್ರಮಾಣದ ಅವಶ್ಯಕತೆಗಳನ್ನು ನೀಗಿಸಿಕೊಳ್ಳುತ್ತಿದ್ದಾಳೆ.

ಅದಕ್ಕಾಗಿ ಅವರ ಶ್ರಮಜೀವನವು ವಿವಿಧ ವಲಯಗಳಲ್ಲಿ ಶ್ರಮವಿಭಜನೆಯು ಹಂಚಿಕೆಯಾಗಿ, ಅಧಿಕ ಶ್ರಮದ ಜೊತೆಗೆ ಅಲ್ಪ ಪ್ರಮಾಣದ ಕೂಲಿಯನ್ನು ಪಡೆಯುವಂತಹ ಸ್ಥಿತಿ ತಲುಪಿದ್ದಾಳೆ. ಈ ರೀತಿಯ ಶ್ರಮಜೀವನದ ಮೇಲೆ ಸಾಮಾಜಿಕ ವ್ಯವಸ್ಥೆ ಪ್ರಭುತ್ವ ಸಾಧಿಸಿದೆ. ಹಾಗಾಗಿ ಇಂದು ಮಹಿಳಾ ಕಾರ್ಮಿಕರು ಇಂತಹ ಬಲೆಯೊಳಗೆ ಸಿಲುಕಿ ಕೌಟುಂಬಿಕ ಜವಾಬ್ದಾರಿಗಳನ್ನು ಅರಿತು ಸರಿಯಾಗಿ ನಿಭಾಯಿಸಿಕೊಳ್ಳಲೇಬೇಕಾಗಿದೆ. ಇವುಗಳ ಜೊತೆಗೆ ಕಾರ್ಖಾನೆಗಳಲ್ಲಿ ಶ್ರಮ ಜೀವನಕ್ಕೆ ಸಂಬಂಧಿಸಿದಂತೆ ವಿರಾಮ, ವಿಶ್ರಾಂತಿ, ವೇತನ, ದುಡಿಯುವ ವೇಳೆ, ಜೀವನ ಸಾಗಿಸಲು ಇರುವ ಅಡೆತಡೆಗಳು ದಿನನಿತ್ಯದಲ್ಲಿ ಒಟ್ಟು ದುಡಿಯುವ ಸಮಯ, ಉದ್ಯೋಗದ ಅವಧಿ, ಕೂಲಿಯ ತಾರತಮ್ಯ ..... ಹೀಗೆ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅಲ್ಲದೆ ಮೇಲಿನ ಅಂಶಗಳ ಜೊತೆಗೆ, ಕುಟುಂಬವು ಅವಳ ದುಡಿಮೆಯ ಮೇಲೆ ಹೆಚ್ಚು ಅವಲಂಬನೆ, ಕೊನೆಯಿಲ್ಲದ ದುಡಿಮೆಯಾಗಿರುವ ಸ್ಥಿತಿ, ಮಕ್ಕಳ ಜೀವನವನ್ನು ಸುಧಾರಿಸುವ .... ಹೀಗೆ ಕೌಟುಂಬಿಕ ಜವಾಬ್ದಾರಿಗಳನ್ನು ಹೊತ್ತು ಶ್ರಮ ಜೀವನವನ್ನು ಸಾಗಿಸಬೇಕಾಗಿದೆ.[೧೭]

ಹಾವೇರಿ ಜಿಲ್ಲೆಯ ಬ್ಯಾಡಗಿ ಮೆಣಸಿನಕಾಯಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿ ಮಾಹಿತಿಯನ್ನು ಕಲೆಹಾಕಲಾಗಿದೆ. ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ದುಡಿಮೆ, ಅವರ ಸಾಮಾಜಿಕ, ಆರ್ಥಿಕ ಸಮಸ್ಯೆಗಳು, ಅದರಲ್ಲೂ ಮುಖ್ಯವಾಗಿ ಆರೋಗ್ಯ ಸಮಸ್ಯೆಗಳ ಅಂಶಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಇಲ್ಲಿ ಮಹಿಳಾ ಕಾರ್ಮಿಕರನ್ನು ಮಾತ್ರ ಸಂಶೋದನೆಗೆ ತೆಗೆದುಕೊಂಡು ಅವರ ಆರೋಗ್ಯದ ಸಮಸ್ಯೆಗಳನ್ನು ವಿವರಿಸುವ ವಿಚಾರದ ಮೇಲೆ ಪ್ರಮುಖ ಮತ್ತು ಸೂಕ್ಷ್ಮ ಗಮನವನ್ನು ನೀಡಲಾಗಿರುತ್ತದೆ.

ಬ್ಯಾಡಗಿ ತಾಲೂಕಿನ ಮೆಣಸಿನಕಾಯಿ ಕೃಷಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಸುಮಾರು ೫೦೦ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿದ್ದು, ಸರಳ ಯಾದೃಚ್ಛಿಕ ಮಾದರಿಯನ್ನು ಉಪಯೋಗಿಸಿ ಕೊಂಡು ಸಂರಚಿತ ಪ್ರಶ್ನಾವಳಿ, ಗುಂಪು ಚರ್ಚೆ, ಅವಲೋಕನ ಮತ್ತು ಸಂದರ್ಶನದ ಮೂಲಕ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಮಾಹಿತಿಯನ್ನು ಕಲೆಹಾಕಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿದ್ದು, ದೊರೆತ ಅಂಕಿ ಅಂಶಗಳನ್ನು ಕೋಷ್ಟಕ ಮತ್ತು ರೇಖಾಚಿತ್ರಗಳ ಜೊತೆಗೆ ವಿವರಿಸಲಾಗಿದೆ. ಸಂದರ್ಶನದ ಸಮಯದಲ್ಲಿ ಗರಿಷ್ಠ ಮಟ್ಟದಲ್ಲಿ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಿದ್ದು ಮಾಹಿತಿದಾರರನ್ನು ಆದಷ್ಟು ನೇರವಾಗಿ ಸಂಪರ್ಕಿಸಿ ನಿಖರವಾದ ಹಾಗೂ ಸ್ಪಷ್ಟವಾದ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಲಾಗಿದೆ. ೪.೧೨

ಆರ್ಥಿಕ ಅಭಿವೃದ್ಧಿ ಮತ್ತು ಮಾನವ

ಮಾನವ ಅಭಿವೃದ್ಧಿ ಎಂಬ ಪದವನ್ನು ನಾವು ಬಹಳ ವಿಸ್ತಾರವಾಗಿ ಬಳಸಬಹುದು. ಇದು ಮಾನವ ಸಾಮರ್ಥ್ಯಗಳ ವಿಸ್ತರಣೆ, ಆಯ್ಕೆಗಳ ವಿಸ್ತರಣೆ, ಸ್ವಾತಂತ್ರ್ಯದ ವರ್ಧನೆ ಮತ್ತು ಮಾನವ ಹಕ್ಕುಗಳ ನೆರವೇರಿಕೆಯ ಅಂಶಗಳನ್ನು ಒಳಗೊಂಡಿದೆ. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು ಮಾನವ ಅಭಿವೃದ್ಧಿಯನ್ನು ಜನರ ಆಯ್ಕೆಗಳನ್ನು ವಿಸ್ತರಿಸುವ ಒಂದು ಪ್ರಕ್ರಿಯೆ. ಈ ಆಯ್ಕೆಗಳು ಹಲವಾರು ಅಂಶಗಳನ್ನು ಒಳಗೊಂಡಿದೆ. ಮೊದಲನೆಯದಾಗಿ ದೀರ್ಘವಾದ ಮತ್ತು ಆರೋಗ್ಯಕರವಾದ ಜೀವನವನ್ನು ನಡೆಸುವುದು. ಎರಡನೆಯದಾಗಿ ಉತ್ತಮ ಶಿಕ್ಷಣವನ್ನು ಪಡೆಯುವುದು. ಮೂರನೆಯದಾಗಿ ಯೋಗ್ಯವಾದ ಜೀವನಮಟ್ಟವನ್ನು ಹೊಂದುವುದು ಇದಲ್ಲದೆ ಮಾನವ ಅಭಿವೃದ್ಧಿಯು ರಾಜಕೀಯ ಸ್ವಾತಂತ್ರ ಹಾಗೂ ಮಾನವ ಹಕ್ಕುಗಳು ಮತ್ತು ಮಾನವನ ಸ್ವಾಭಿಮಾನಕ್ಕೆ ಸಂಬಂಧಿಸಿದ ವಿವಿಧ ಅಂಶಗಳನ್ನು ಒಳಗೊಂಡಿದೆ.

ಎಲ್ಲಾ ವಯಸ್ಸಿನ ಜನರು ಸನ್ನಿವೇಶಗಳಿಗೆ ತಕ್ಕಂತೆ ಹೇಗೆ ಮತ್ತು ಯಾಕೆ ಬದಲಾಗುತ್ತಾರೆ? ಹೇಗೆ ಒಂದೇ ರೀತಿಯಾಗಿರುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ವಿಜ್ಞಾನವೇ **"ಮಾನವ ಅಭಿವೃದ್ಧಿ."** ಇದು ಮಾನವನ ಸ್ಥಿತಿಯ ಅಧ್ಯಯನಗಳನ್ನು ಒಳಗೊಂಡಿರುತ್ತದೆ. ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ಆರ್ಥಿಕ ಅಭಿವೃದ್ಧಿಗೆ ಪರ್ಯಾಯವಾಗಿ ಬಳಸಿಕೊಳ್ಳುವ ಮುಖಾಂತರ ವಿಶ್ವಸಂಸ್ಥೆಯು ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ಪ್ರಗತಿಯ ಮಾಪಕವಾಗಿ ಬಳಸಿಕೊಂಡಿದೆ.

ಮಾನವ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರ ತಮ್ಮ ಆಯ್ಕೆಗಳನ್ನು ವಿಸ್ತರಿಸುವುದರ ಮೂಲಕ ಮೌಲ್ಯಯುತವಾದ ಮತ್ತು ಪೂರ್ಣ ಜೀವನವನ್ನು ನಡೆಸಲು ಮುಕ್ತ ಅವಕಾಶವಿದೆ. ಆದುದರಿಂದ ಮಾನವ ಅಭಿವೃದ್ಧಿಯು ಆರ್ಥಿಕ ಬೆಳವಣಿಗೆಗಿಂತ ಹೆಚ್ಚಿನದಾಗಿದೆ. ಇದು ಮಾನವನ ಮೂಲಭೂತವಾದ ಮಾನವ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿ ಅವನ ಆಯ್ಕೆಗಳನ್ನು ವಿಸ್ತರಿಸಲು ಸಹಕಾರಿಯಾಗಿದೆ. ಮಾನವ ಅಭಿವೃದ್ಧಿಯ ಮೂಲಭೂತ ಸೌಲಭ್ಯಗಳಾದ ದೀರ್ಘ ಮತ್ತು ಆರೋಗ್ಯಕರ ಜೀವನ, ಶಿಕ್ಷಣ ಮತ್ತು ಯೋಗ್ಯವಾದ ಜೀವನಮಟ್ಟ ಹೊಂದುವುದು ಮಾನವನ ಜೀವನದ ಪ್ರಮುಖ ಅಂಗವಾಗಿದೆ.

ಅಭಿವೃದ್ಧಿಯ ಈ ಹಿಂದೆ ಕೇವಲ ಆರ್ಥಿಕತೆ, ಭೌತಿಕ ಪರಿಸರ, ಸಾಮಾಜಿಕ ಪರಿಸರ ಹಾಗೂ ರಾಜಕೀಯ ಅಂಶಗಳನ್ನು ಒಳಗೊಂಡಿತ್ತು. ಆದರೆ ಹಸಿವು ಮುಕ್ತ ಹಾಗೂ ಚಿಂತನಾರಹಿತವಾದಂತಹ ಬದುಕನ್ನು ಮಾನವನಿಗೆ ಒದಗಿಸುವುದು ಅತೀ ಅಗತ್ಯ. ಯಾವುದೇ ಒಂದು ಆರ್ಥಿಕತೆಯ ಪ್ರಗತಿಯ ದೃಷ್ಟಿಕೋನವು ಜನರನ್ನು ಒಳಗೊಳ್ಳುವ ಅಭಿವೃದ್ಧಿಯನ್ನು

ಹೊಂದಿರಬೇಕು. ಏಕೆಂದರೆ ದೇಶದ ಅಭಿವೃದ್ಧಿಯು ಮಾನವ ಅಭಿವೃದ್ಧಿಯ ಮೇಲೆ ಕೇಂದ್ರೀಕೃತವಾಗಿದೆ.

ಸಾಮಾಜಿಕ ಸಮಸ್ಯೆಗಳಾದ ಜನಸಂಖ್ಯೆ, ಅನಕ್ಷರತೆ, ಮೂಢನಂಬಿಕೆ, ಅನಾರೋಗ್ಯ ಇವೆಲ್ಲವುಗಳು ಒಂದಲ್ಲ ಒಂದು ರೀತಿಯಲ್ಲಿ ಮಾನವ ಅಭಿವೃದ್ಧಿಗೆ ಮಾರಕವಾಗುವ ಅಂಶಗಳಾಗಿವೆ. ಮಾನವ ಅಭಿವೃದ್ಧಿ ಅಂಕಿಅಂಶಗಳು ಹಾಗೂ ಅದು ಪ್ರಕಟಿಸಿದ ಹಲವಾರು ವರದಿಗಳ ಆಧಾರದ ಮೇಲೆ ಯಾವುದೇ ಒಂದು ದೇಶದ ಒಟ್ಟಾರೆ ಅಭಿವೃದ್ಧಿಯು ಆ ದೇಶದ ಮಾನವ ಸಂಕುಲದ ಬೆಳವಣಿಗೆಯ ಮೇಲೆ ಅವಲಂಬಿಸಿರುತ್ತದೆ. ಅಭಿವೃದ್ಧಿ ಹಾಗೂ ಬೆಳವಣಿಗೆಯ ವ್ಯಾಪ್ತಿಯು ಬೇರೆ ಬೇರೆಯಾದರೂ ಇವೆರಡರ ಉದ್ದೇಶವು ಒಂದೇ ಆಗಿದೆ. ಅದರಲ್ಲೂ ಅಭಿವೃದ್ಧಿಯ ವ್ಯಾಪ್ತಿಯು ಬೆಳವಣಿಗೆಯ ವ್ಯಾಪ್ತಿಗಿಂತಲೂ ವಿಸ್ತಾರತೆಯನ್ನು ಹೊಂದಿದೆ. ಹಲವಾರು ಅರ್ಥಶಾಸ್ತ್ರಜ್ಞರು ಸರಕು ಮತ್ತು ಸಂಪತ್ತನ್ನು ಒಟ್ಟುಗೂಡಿಸುವುದೇ ನಿಜವಾದ ಆರ್ಥಿಕತೆ ಎನ್ನುವ ವಾದವನ್ನು ಮಂಡಿಸಿದರು.

ಆದರೆ ಸಂಪತ್ತಿನ ಕ್ರೋಢೀಕರಣದಲ್ಲಿ ನಿರತನಾಗಿರುವ ಮಾನವನು ತನ್ನ ಅಭಿವೃದ್ಧಿಯನ್ನು ಮರೆತೇ ಬಿಡುತ್ತಾನೆ. ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್‌ರವರ ಪ್ರಕಾರ ನಾವು ಬಯಸುತ್ತಿರುವ ಸಂಪತ್ತು ಒಳ್ಳೆಯದಲ್ಲ. ಅದು ಬಳಕೆಯಾಗುವ ಉದ್ದೇಶಗಳು ಬೇರೆ ಬೇರೆಯದಾಗಿರುತ್ತದೆ.

ಅಭಿವೃದ್ಧಿಯ ಉದ್ದೇಶ ಮತ್ತು ಅಂತ್ಯ ಎರಡೂ ಮಾನವನ ಯೋಗಕ್ಷೇಮದ ಮೇಲೆ ಅವಲಂಬಿತವಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ದೀರ್ಘ ಮತ್ತು ಆರೋಗ್ಯಕರ ಜೀವನವು ಒಂದು ಪ್ರಮುಖವಾದ ಅಂಶವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಂಬಂಧಪಟ್ಟಂತೆ ವಿಶ್ಲೇಷಿಸಲಾಗಿದೆ. ಒಂದು ಸಮಾಜದ ಆರೋಗ್ಯಕರ ಜನಸಂಖ್ಯೆಯು ದೀರ್ಘಕಾಲ ಬದುಕುವುದರಿಂದ ಮತ್ತು ಹೆಚ್ಚು ಉತ್ಪಾದಕವಾಗುವುದರಿಂದ ಹಾಗೂ ಹೆಚ್ಚಿನದನ್ನು ಉಳಿಸುವುದರಿಂದ ಇದು ಆರ್ಥಿಕ ಪ್ರಗತಿಗೆ ಪ್ರಮುಖ ಕೊಡುಗೆಯನ್ನು ನೀಡುತ್ತದೆ. ಭಾರತದಲ್ಲಿ ಆರೋಗ್ಯ ರಕ್ಷಣೆಯು ಸಾರ್ವತ್ರಿಕ ವ್ಯವಸ್ಥೆಯಾಗಿದೆ. ಸರ್ಕಾರವು ಜನರಿಗೆ ಉತ್ತಮ ಆರೋಗ್ಯವನ್ನು ನೀಡುವುದು ಅಲ್ಲದೆ ಜನರ ಜೀವನಮಟ್ಟ ಸುಧಾರಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆದರೆ ನಾವು ಗಮನಿಸದಂತೆ ಹೆಚ್ಚು ಸರ್ಕಾರಿ ಆಸ್ಪತ್ರೆಗಳು ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವಲ್ಲಿ ವಿಫಲವಾಗಿವೆ. ಸರ್ಕಾರಿ ಆಸ್ಪತ್ರೆಗಳ ನಿರ್ಲಕ್ಷತನದಿಂದ ಜನರು ಅತಿ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಪಡೆಯುವಂತಹ ಅವಕಾಶದಿಂದ ವಂಚಿತರಾಗಿದ್ದಾರೆ.

ಕೊನೆಯ ಟಿಪ್ಪಣಿಗಳು

೧. ಮೇಟಿ, ಜಿ.ವಿ. ಮತ್ತು ಪಟೇಲ್ ಜಿ.ಎಮ್ : "ಭಾರತದಲ್ಲಿ ಜನಸಂಖ್ಯೆ ನಿಯಂತ್ರಣ ಕಾರ್ಯಕ್ರಮಗಳು" ಪ್ರಕಟಣಾ, ಸಂಶೋಧನಾ ಮತ್ತು ತರಬೇತಿ ಪ್ರಸಾರಾಂಗ, ಬೆಂಗಳೂರು-೧೯೮೭

೨. ಮಹದೇವಯ್ಯ ಶೂಶ್ರುಷ, " ಗ್ರಾಮೀಣ ಜನರ ಆರೋಗ್ಯ ರಕ್ಷಣೆಗೆ ವರದಾನ", ಅಭಿಮಾನಿ ಪಬ್ಲಿಕೇಷನ್, ಬೆಂಗಳೂರು ೧೯೯೮ ಪು-೩೨.

೩. ಮಹದೇವಯ್ಯ : ಶುಶ್ರೂಷಾ ಆರೋಗ್ಯ ಕಾರ್ಯಕ್ರಮದ ಅನುಷ್ಠಾನ", ಜನಪದ ಸಂಚಿಕೆ ೩೭, ಫೆಬ್ರುವರಿ ೧೯೯೭, ಪು-೩೮.

೪. ಮಂಜುನಾಥ ಬಿ.ಎನ್., "ಅಮೂಲ್ಯ ಔಷಧಿಗಳ ಆಗರ ಸಿದ್ಧರ ಬೆಟ್ಟ", ಜನಪದ ಮಾರ್ಚ ೧೯೯೫, ಪು೧-೨೦, ೨೩,೩೪.

೫. ಪದ್ಮನಾಭನ ಬಿ.ಎಸ್. "ಆರೋಗ್ಯ ರಕ್ಷಣೆ", ನಮ್ಮ ಮುಂದಿರುವ ಸವಾಲುಗಳು ಯೋಜನ, ಮಾರ್ಚ, ೨೦೦೦, ಪು, ೭-೧೨.

೬. ಪ್ರೇಮರಾಜ್ : ಸೌಲಭ್ಯ ಕೊರತೆಯಿಂದ ಕೊರಗುತ್ತಿರುವ ಸಾರ್ವಜನಿಕ ಆರೋಗ್ಯ", ಯೋಜನಾ, ಫೆಬ್ರುವರಿ-ಮಾರ್ಚ ೧೯೯೨, ಪು-೩೨.

೭. ಪ್ರೇಮಚರರನ್, : "ಆರೋಗ್ಯ ಮತ್ತು ಸಂಪನ್ಮೂಲಗಳು", ಯೋಜನಾ ಫೆಬ್ರುವರಿ ೧೯೯೬, ಪು-೨೮.

೮. ಪ್ರಕಾಶ್ ಎಂ.ಪಿ : "ಗ್ರಾಮೀಣ ಆರೋಗ್ಯ ಮತ್ತು ನಿರ್ಮಲ ಯೋಜನೆ ಒಂದು ಅವಲೋಕನ", ಕರ್ನಾಟಕ ವಿಕಾಸ – ೧೯೯೬.

೯. ಪದ್ಮನಾಭನ್ ಟಿ.ಎಸ್: "ಸಸ್ಯ ಸಂರಕ್ಷಣೆಗಾಗಿ ಪದ್ಧತಿ" ಯೋಜನಾ ಸಂಚಿಕೆ-೭,ಫೆಬ್ರುವರಿ ೧೯೯೯ ಪು-೨.

೧೦. ರವಿ. ಎನ್ : "ಗ್ರಾಮೀಣ ಆರೋಗ್ಯ ಒಂದು ಸಮಾಜಶಾಸ್ತ್ರೀಯ ವಿಶ್ಲೇಷಣೆ". ಪ್ರಬಂಧ, ಬೆಂಗಳೂರು, ವಿ.ವಿ.,೧೯೯೬ ಬೆಂಗಳೂರು-೫೬.

೧೧. ರಾಜಣ್ಣ ಎಂ.ಎಸ್. "ಸರಾಸರಿ ಆಯಸ್ಸು ೨೮ ರಿಂದ ೬೫ ಕ್ಕೆ", ಕರ್ನಾಟಕ ವಿಕಾಸ್, ನವ್ಹಂಬರ್೧೯೯೭ ಪು- ೩೫,೩೬.

೧೨. ರಾಜಣ್ಣ, : "ಸ್ವಾತಂತ್ರ್ಯ ಜನಾರೋಗ್ಯದಲ್ಲಿ ಪ್ರಗತಿ", ಕರ್ನಾಟಕ ವಿಕಾಸ, ಸಮಪುಟ-೩೭, ಸಂಚಿಕೆ-೧೨, ಬೆಂಗಳೂರು, ಪು ೩೪-೩೬.

೧೩. ವೆಂಕಣ್ಣಾಚಾರ್.. ಪಾಂಡುರಂಗ ಜೋಯಿಸ್., "ಚಿತ್ರದುರ್ಗ ದರ್ಶಿನಿ", ಚಂದ್ರವಳ್ಳಿ ಚಿತ್ರದುರ್ಗ, ೧೯೯೧. ಪು ೩೬. ೪೨. ೪೩.

೧೪. ವಿಕ್ರಮ ಕೆ. ಪಟ್ನಾಯಕ್ : "ಗ್ರಾಮೀಣ ಆರೋಗ್ಯ ಪಾಲನೆ ಮತ್ತು ಎಲ್ಲರಿಗೂ ಆರೋಗ್ಯ" ಯೋಜನಾ, ಜೂನ್ ೧೯೯೯ ಪುಟ-೩೬.

೧೫. "ಆರೋಗ್ಯ ಮತ್ತು ಕುಟುಂಬ ಕಲ್ಯಾಣ", ಯೋಜನಾ ಡಿಸೆಂಬರ್ ೧೯೯೮, ಪು-೩೨,

೧೬. "ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಆರೋಗ್ಯ ಸೇವೆಗಳು", ಆರೋಗ್ಯ ಕಾರ್ಯಕ್ರಮಗಳು. ಮಾಲಿಕೆ-೧, ಆರೋಗ್ಯ ಇಲಾಖಾ, ಸಚಿವಾಲಯ, ಭಾರತ ಸರ್ಕಾರ, ದೆಹಲಿ, ೧೯೯೦. ಪು-೩೫.

೧೭. "ಜನಸಂಖ್ಯಾ ನಿಯಂತ್ರಣಾ", ಕ್ರಮಗಳು – ಮಾಲಿಕೆ ೭೬, ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಇಲಾಖೆ, ಬೆಂಗಳೂರು-೧೨.

ಅಧ್ಯಾಯ - ಐದು

ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ

೫.೧ ಆರೋಗ್ಯದ ಅರ್ಥ/ನಿರ್ವಚನ
೫.೨ ಆರೋಗ್ಯದ ಮೂಲ ಸೌಕರ್ಯ
೫.೩ ಪ್ರಾಥಮಿಕ ಆರೋಗ್ಯ ಕೇಂದ್ರ ಬ್ಯಾಡಗಿಯಲ್ಲಿ ದೊರೆಯುವ ಸೌಲಭ್ಯಗಳು
೫ ೪ 'ಡಯಾಪ್ರಮ್' ಮತ್ತು 'ಜೆಲ್ಲಿ'ಗಳ ಸೌಲಭ್ಯ
೫.೫ ಗರ್ಭಕೋಶದೊಳಗಿರುವ ಗರ್ಭನಿರೋಧಕ ಸಾಧನಗಳು (ವಂಕಿ)
೫.೬ ಸಂತಾನಹರಣದ ಶಾಶ್ವತ ವಿಧಾನಗಳ ಸೌಲಭ್ಯ
೫.೭ ಹೆಚ್.ಐ.ವಿ/ಏಡ್ಸ್ ಕುರಿತ ಸೇವೆಗಳು
೫.೮ ಆರೋಗ್ಯ ರಕ್ಷಾ ಸಮಿತಿ:
೫.೯ ಕೋವಿಡ್-೧೯ ಕೊರೋನಾ ಸಂಧರ್ಭದಲ್ಲಿ ಆರೋಗ್ಯ ಸ್ಥಿತಿಗತಿ

ಅಧ್ಯಾಯ - ಐದು

ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ

'ಆರೋಗ್ಯವೇ ಭಾಗ್ಯ' ಎಂಬ ಗಾದೆಮಾತಿನಂತೆ ಆರೋಗ್ಯವು ಸರಿಯಾಗಿದ್ದರೆ ಎಲ್ಲವೂ ಸರಿ ಇದ್ದಂತೆ ಅಂದರೆ ಕೇವಲ ಒಬ್ಬ ಪುರುಷ ಚೆನ್ನಾಗಿದ್ದರೆ ಕೇವಲ ಕುಟುಂಬ ಚೆನ್ನಾಗಿ ಇದ್ದಂತೆ. ಆದರೆ ಮಹಿಳೆ ಚೆನ್ನಾಗಿದ್ದರೆ ಇಡೀ ರಾಷ್ಟ್ರವೇ ಚೆನ್ನಾಗಿದ್ದಂತೆ. ಆದ್ದರಿಂದ ಮಹಿಳೆಯ ಆರೋಗ್ಯದ ಅಧ್ಯಯನವು ಪ್ರಸ್ತುತ ದಿನಗಳಲ್ಲಿ ಅತೀ ಮುಖ್ಯವಾಗಿದೆ. ಸಮಾಜ ಎಂಬ ಮೂರು ಅಕ್ಷರದಲ್ಲಿ ಸಂಸ್ಕೃತಿ, ಪದ್ಧತಿ, ಜಾತಿ, ಅಜ್ಞಾನವೆಂಬ ಹಲವಾರು ಮುಖ್ಯಾಂಶಗಳು ಅಡಕವಾಗಿವೆ. ಪ್ರತಿಯೊಂದು ಅಂಶದಲ್ಲಿಯೂ ತಾರತಮ್ಯವಿದೆ ಎಂದರೆ ತಪ್ಪಾಗಲಾರದು. ಭಾರತ ದೇಶ ಮೂಢನಂಬಿಕೆಯ ತವರೂರು. ಹೀಗಾಗಿ ಪ್ರತಿಯೊಂದು ಹೆಜ್ಜೆಯಲ್ಲಿ ಅಂದರೆ ಅದರಲ್ಲೂ ವಿಶೇಷವಾಗಿ ಪುರುಷ ಮತ್ತು ಮಹಿಳೆಯರ ಆರೋಗ್ಯದ ಸ್ಥಿತಿಗತಿಯ ಬಗ್ಗೆ ತಾರತಮ್ಯವಿರುವುದನ್ನು ನೋಡಬಹುದಾಗಿದೆ.

ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಪುರುಷನ ಆರೋಗ್ಯಕ್ಕೆ ಕೊಡುವಷ್ಟು ಕಾಳಜಿ ಮಹಿಳೆಯರ ಆರೋಗ್ಯಕ್ಕೆ ದೊರಕದಿರುವುದು ವಿಷಾದಕರ ಸಂಗತಿಯಾಗಿದೆ. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಮುಂದುವರೆಯುತ್ತಿದ್ದಾಳೆ. ಪುರುಷರಿಗಿಂತ ತಾವು ಕೀಳಲ್ಲ ಎಂಬ ಭಾವನೆ ಅವರಿಗೂ ಬಂದಿದೆ. ಇಂದು ಹೆಚ್ಚಾಗಿ ನೆರೆ ಹೊರೆ ಸಮಾಜಗಳಲ್ಲಿ ಮಹಿಳೆಯು ಎಲ್ಲಾ ರಂಗಗಳಲ್ಲಿ ದುಡಿಯುತ್ತಿದ್ದಾಳೆ.

ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ಕಾರ್ಮಿಕರು, ಅನೇಕ ಅನಾರೋಗ್ಯದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದರಲ್ಲಿ ರಕ್ತಹೀನತೆ, ಮಧುಮೇಹ,

ಅಸ್ತಮಾ, ಚರ್ಮದ ಸಮಸ್ಯೆ ಮುಂತಾದ ಅನಾರೋಗ್ಯ ಸಮಸ್ಯೆಗಳಿಗೆ ಒಳಗಾಗಿದ್ದಾರೆ. ಆರ್ಥಿಕ ಸ್ಥಿತಿಯು ಸರಿಯಾಗಿ ಇರದ ಕಾರಣದಿಂದಾಗಿ ಅವರು ಉತ್ತಮ ರೀತಿಯ ಆರೋಗ್ಯದ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಇವರು ಅನಾರೋಗ್ಯದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಪ್ರಸ್ತುತ ಕ್ಷೇತ್ರ ಅಧ್ಯಯನದ ಆಧಾರದ ಮೇಲೆ ಈ ಅಧ್ಯಾಯದಲ್ಲಿ ಮಹಿಳಾ ಕಾರ್ಮಿಕರ ಆರೋಗ್ಯ, ಆರೋಗ್ಯದ ಸ್ಥಿತಿಗತಿಯ ಹಿನ್ನೆಲೆಯನ್ನು ತಿಳಿದುಕೊಳ್ಳಲು ಮಾಹಿತಿದಾರರನ್ನು ಸಂಪರ್ಕಿಸಿ ಸಮಾಜಶಾಸ್ತ್ರೀಯ ಅಂಶಗಳ ಬಗೆಗಿನ ಮಾಹಿತಿಯನ್ನು ಇಲ್ಲಿ ಕ್ರೂಢೀಕರಿಸಿ ವಿಶ್ಲೇಷಿಸಲಾಗಿದೆ. ಅಂತಹ ಮಾಹಿತಿಯನ್ನು ಈ ಕೆಳಗಿನಂತೆ ಕೊಡಲಾಗಿದೆ.

ಈ ಮೇಲಿನ ಅಧ್ಯಯನಗಳೆಲ್ಲವೂ ಆಯಾ ಕಾಲ, ಸಂದರ್ಭಕ್ಕನುಗುಣವಾಗಿ ಬೇರೆ ಬೇರೆ ದೃಷ್ಟಿಕೋನಗಳನ್ನಿಟ್ಟುಕೊಂಡು ರಚಿತಗೊಂಡಿವೆ. ಆದರೆ ಬಳ್ಳಾರಿ ಜಿಲ್ಲೆಯು ಕೃಷಿಯಾಧಾರಿತ ಮತ್ತು ಬೆಟ್ಟಗುಡ್ಡಗಳಲ್ಲಿನ ಅರಣ್ಯದ ಉತ್ಪನ್ನಗಳಿಂದ ತಮ್ಮ ಬದುಕನ್ನು ಕಂಡುಕೊಂಡಿದ್ದ ಜನರಿಗೆ ಗಣಿಗಾರಿಕೆಯ ತಾಂತ್ರೀಕರಣವು ಜನರ ಆರೋಗ್ಯದ ಮೇಲೆ ತುಂಬಾ ನಿರಾಸೆಯನ್ನುಂಟುಮಾಡಿದೆ. ಈ ಕಾರಣದಿಂದಾಗಿ ಜಿಲ್ಲೆಯಲ್ಲಿ ನೆಲೆಗೊಂಡಿರುವ ಜನ ಸಮುದಾಯಗಳು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳನ್ನು ಪತ್ತೆಹಚ್ಚಿ ಅವುಗಳಿಗೆ ಪರಿಹಾರಗಳನ್ನು ಹುಡುಕುವ, ಚರ್ಚಿಸುವ ಕೆಲಸ ಮಹಾಪ್ರಬಂಧದ ಧ್ಯೇಯವಾಗಿರುತ್ತದೆ.

೫.೧ ಆರೋಗ್ಯದ ಅರ್ಥ/ನಿರ್ವಚನ

ಪ್ರತಿವರ್ಷ ಎಪ್ರೀಲ್ ತಿಂಗಳ ಏಳನೇ ದಿನಾಂಕದಂದು ಜಗತ್ತಿನಾದ್ಯಂತ ವಿಶ್ವ ಆರೋಗ್ಯ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಇದರ ಪ್ರಮುಖ ಉದ್ದೇಶವೆಂದರೆ ಗ್ರಾಮೀಣ ಜನರನ್ನೂ ಒಳಗೊಂಡಂತೆ ಎಲ್ಲರಿಗೂ ಸಾರ್ವಜನಿಕ ಆರೋಗ್ಯದ ಬಗ್ಗೆ ತಿಳುವಳಿಕೆ ನೀಡುವುದೇ ಆಗಿದೆ. ಆರೋಗ್ಯ ಎನ್ನುವುದು ಒಂದು ಸಂಬಂಧಸೂಚಕ ವ್ಯಾಖ್ಯಾನ ಎಂದು ಡಬ್ಲ್ಯು.ಎಚ್.ಓ–೧೯೫೭ರಲ್ಲಿ ಅರ್ಥೈಸಿದೆ. ಅಂದರೆ ಭಾರತದ ಸಂದರ್ಭದಲ್ಲಿ ಹುಟ್ಟಿದ ಮಗು ೨.೮ ಕೆ.ಜಿ ತೂಕವಿದ್ದರೆ ನಾರ್ಮಲ್ ಎಂತಲೂ ಪರಿಗಣಿಸಲಾಗುತ್ತದೆ. ಆರೋಗ್ಯದಲ್ಲಿ ನಾರ್ಮಲ್ ಎಂತಲೂ ಅದೇ ಅಭಿವೃದ್ಧಿ ರಾಷ್ಟ್ರಗಳಲ್ಲಿ ಹುಟ್ಟಿದ ಮಗು ೩.೫ ಕೆ.ಜಿ. ಇದ್ದರೆ ನಾರ್ಮಲ್ ಎಂತಲೂ ಪರಿಗಣಿಸಲಾಗುತ್ತದೆ. ಆರೋಗ್ಯದಲ್ಲಿ ನಾರ್ಮಲ್ ಎನ್ನುವುದು ಅಥವಾ ಆರೋಗ್ಯ ಎನ್ನುವುದು ದೇಶದಿಂದ ದೇಶಕ್ಕೆ ಜನಾಂಗದಿಂದ ಜನಾಂಗಕ್ಕೆ ವ್ಯತ್ಯಾಸದಿಂದ ಕೂಡಿರುತ್ತದೆ ಎಂದು ಅಹಮದ್ ಅಂಡ್ ಕೋಲ್ಬೊ (೧೯೭೯) ಅವರು ತಿಳಿಸಿದ್ದಾರೆ.

"ಹೀಗೆಯೇ ಆರೋಗ್ಯ ಎಂದರೇನು?" ಎನ್ನುವ ಪ್ರಶ್ನೆಯನ್ನು ಕೇಳಿದರೆ ಪ್ರತಿಯೊಬ್ಬರೂ ಕೂಡ ಬೇರೆ ಬೇರೆ ಉತ್ತರ ನೀಡುತ್ತಾರೆ. ಸ್ವಲ್ಪ ಹೆಚ್ಚಾಗಿ ಅಥವಾ ಕಡಿಮೆಯಾಗಿ ಎಲ್ಲರೂ

ಆರೋಗ್ಯದ ಬಗ್ಗೆ ತಿಳಿದಿರುತ್ತಾರೆ. ಜೀವನದಲ್ಲಿ ಆರೋಗ್ಯ ಎಷ್ಟು ಮುಖ್ಯವೆಂದರೆ ಗುರುತಿನವರು, ಅಪರಿಚಿತರು ಎದುರಾದರೆ ಸಂಭಾಷಣೆ ಆರೋಗ್ಯದಿಂದ ಶುರುವಾಗುತ್ತದೆ. ಚೆನ್ನಾಗಿದ್ದೀರಾ? ಆರೋಗ್ಯವೇ? ಕುಶಲವೇ? ಇತ್ಯಾದಿ. ಖಾಯಿಲೆ, ವ್ಯಾಧಿ, ನೋವು, ನರಳಿಕೆ, ಬೇನೆ, ಜಡ್ಡು, ತೊಂದರೆ, ರೋಗವಿಲ್ಲ, ಮೈಯಲ್ಲಿ ಚೆನ್ನಾಗಿಲ್ಲ ಎಂದಾಕ್ಷಣ ನಿರೋಗಿ ಎಂದು ಹೇಗೆ ನಿರ್ಧರಿಸುವುದು? ನಮ್ಮ ವಯಸ್ಸಿನವನೇ ಒಬ್ಬ ನಮಗಿಂತ ಸದೃಢವಾಗಿ ಲವಲವಿಕೆಯಿಂದ ಇದ್ದಾನೆ. ಇನ್ನೊಬ್ಬ ಸರಿಯಾಗಿ ಉಣ್ಣದೆ ಕೃಷನಾಗಿ ಬಡಕಲಾಗಿದ್ದಾನೆ. ಮೂರನೆಯವನಲ್ಲಿ ಬುದ್ಧಿ ಮಂಕಾಗಿ ಪೆದ್ದ ಕಳೆತುಂಬಿಕೊಂಡಿದೆ. ಇನ್ನೊಬ್ಬನಿಗೆ ಕುರುಡು, ಐದನೆಯವ ವಿಕಲಾಂಗ, ಇಂಥ ಸಂದರ್ಭಗಳಲ್ಲಿ ಆರೋಗ್ಯದ ವಿಷಯವನ್ನು ಹೇಗೆ ನಿರ್ಧರಿಸುವುದು? ನೋವು ನರಳಿಕೆ ಇಲ್ಲ ಎಂದಾಕ್ಷಣ ಒಬ್ಬ ನಿರೋಗಿಯೇ? ಬಡಕಲು, ಮನೋವ್ಯಾಧಿ, ಅಂಗವಿಕಲತೆ ಅನಾರೋಗ್ಯವಂತನ ಲಕ್ಷಣವಲ್ಲವೇ? ಇಂಥ ಪ್ರಶ್ನೆಗಳನ್ನು ಕೇಳುತ್ತಾ ಹೋದಂತೆ ಅನುಮಾನ ಉಂಟಾಗುತ್ತದೆ.

ಹೀಗೆ ಬದಲಾಗುವ ಪರಿಸ್ಥಿತಿಗಳಲ್ಲಿ ಆರೋಗ್ಯ ಎಂದರೇನು? ಅನ್ನುವುದಕ್ಕೆ ಕೆಳಗಿನ ಕೆಲವು ಲಕ್ಷಣಗಳನ್ನು ನೀಡಬಹುದು. ಆರೋಗ್ಯವೆಂದರೆ ರೋಗವಿಲ್ಲದಿರುವುದು, ಕಾಯಿಲೆ ಜಡ್ಡು ಬೇನೆ ನೋವು ತೊಂದರೆ ವ್ಯಾದಿಯಿಲ್ಲದೆ ಸ್ವಸ್ಥವಾಗಿರುವುದು. ಆರೋಗ್ಯವೆಂದರೆ ದೇಹ ಮತ್ತು ಮನಸ್ಸುಗಳು ರೋಗವಿಲ್ಲದೆ ಸ್ವಸ್ಥವಾಗಿರುವುದು. ಆರೋಗ್ಯವೆಂದರೆ ದೇಹ ಮನಸ್ಸು ಮತ್ತು ಚೈತನ್ಯಗಳು, ರೋಗವಿಲ್ಲದಿರುವುದಷ್ಟೇ ಅಲ್ಲ. ಹರ್ಷ ಮತ್ತು ಲವಲವಿಕೆಯಿಂದ ಕೂಡಿರುವುದು" (ಶ್ರೀಧರ ವಿಶ್ವಾಮಿತ್ರ-೨೦೦೦). ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ನೆಮ್ಮದಿಯನ್ನು ಹೊಂದಿರುವ ಸ್ಥಿತಿಯೇ ಆರೋಗ್ಯ. ಕೇವಲ ರೋಗ ಅಥವಾ ಕುಂದು ಇಲ್ಲದಿರುವುದೇ ಆರೋಗ್ಯವಲ್ಲ. ಎಂದು ವಿಶ್ವ ಆರೋಗ್ಯ ಸಂಸ್ಥೆಯು ಅರ್ಥೈಸಿದೆ. (ಕೆ.ವಿ.ನಾರಾಯಣ, ೧೯೯೭, ಮೋನಿಕ ದಾಸ್ ಗುಪ್ತ, ಲಿಂಕಲನ್, ಸಿ.ಚೆನ್, ಮತ್ತು ಟಿ.ಎನ್.ಕೃಷ್ಣ-೧೯೯೮, ವಿ.ಎನ್.ಭಟ್-೧೯೯೦). ವೆಬ್‌ಸ್ಟರ್ ಡಿಕ್‌ಶ್ನರಿಯಲ್ಲಿ ಆರೋಗ್ಯ ಎನ್ನುವ ಪದದ ಅರ್ಥ "ದಿ ಕಂಡೀಶನ್ ಆಫ್ ಬೀಯಿಂಗ್ ಸೌಂಡ್ ಇನ್ ಬಾಡಿ, ಮೈಂಡ್ ಆರ್ ಸ್ಪಿರಿಟ್, ಎಸ್ಪೆಷಲಿ ಫ್ರೀಡಮ್ ಫ್ರಂ ಫಿಸಿಕಲ್ ಡಿಸೀಸ್ ಆರ್ ಫ್ಹೇನ್" ಎಂದು ಇದೆ. ಅದೇ ರೀತಿ ಆಕ್ಷಫರ್ಡ್ ಇಂಗ್ಲೀಷ್ ಡಿಕ್‌ಶ್ನರಿಯಲ್ಲಿ "ಸೌಂಡ್‌ನೆಸ್ ಆಫ್ ಬಾಡಿ ಆರ್ ಮೈಂಡ್, ದಟ್ ಕಂಡೀಶನ್ ಇನ್ ವಿಚ್ ಫಂಕ್ಷನ್ಸ್ ಆರ್ ಡ್ಯುಲಿ ಅಂಡ್ ಎಫಿಷಿಯೆಂಟ್ಲಿ ಡಿಸ್ಚಾರ್ಜ್ಡ್" ಎಂದು ಅರ್ಥೈಸಿದೆ.

ಆರೋಗ್ಯ ಸಮೀಕ್ಷೆ ಮತ್ತು ಅಭಿವೃದ್ದಿ ಸಮಿತಿ (೧೯೪೬) ಯು ಆರೋಗ್ಯ ಎಂದರೆ "ವ್ಯಕ್ತಿಯ ರೋಗರಹಿತ ಸ್ಥಿತಿಯಲ್ಲದೆ ಆತನ ಸಾಮಾಜಿಕ ಮತ್ತು ಭೌತಿಕ ಪರಿಸರದ

ಸಮತೋಲನೆಯನ್ನು ಕಾಪಾಡುವಂತಹ ದೈಹಿಕ ಮತ್ತು ಮಾನಸಿಕ ಸಮತೋಲನೆಯಾಗಿದೆ. ಇದು ವ್ಯಕ್ತಿಯ ಪರಿಪೂರ್ಣ ಸುಖಮಯ ಜೀವನವನ್ನು ನಡೆಸುವ ಹಾಗೂ ಗರಿಷ್ಠ ಉತ್ಪಾದನಾ ಸಾಮರ್ಥ್ಯವನ್ನು ಹೊಂದುವ ಸಾಧನ" ಎಂದು ವಿವರಿಸಿದೆ. ವಿಶ್ವ ಆರೋಗ್ಯ ಸಂಸ್ಥೆ ೧೯೪೮ರಲ್ಲಿ ಆರೋಗ್ಯಕ್ಕೆ ಈ ಲಕ್ಷಣಗಳನ್ನು ಕೊಟ್ಟಿತು. ಆರೋಗ್ಯವೆಂದರೆ 'ದೈಹಿಕ ಮಾನಸಿಕ ಮತ್ತು ಸಾಮಾಜಿಕವಾದ ಸ್ವಾಸ್ಥ್ಯ ಕಾಯಿಲೆ ಅಥವಾ ವಿಕಲತೆಯಿಲ್ಲದಿರುವುದು ಎಂದು ವ್ಯಾಖ್ಯಾನಿಸಿತು. ನಂತರ ೧೯೭೮ ರಲ್ಲಿ ಮೇಲಿನ ಲಕ್ಷಣಗಳ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕವಾಗಿ ಸಮರ್ಥವಾಗಿ ಉದ್ಯೋಗ ಮಾಡಿಕೊಂಡಿರುವ ಸಾಮರ್ಥ್ಯದಿಂದಲೂ ಕೂಡಿರಬೇಕೆಂದು' ವಿಸ್ತರಿಸಿತು.

ಹೀಗೆ ಅನಾರೋಗ್ಯವೆಂಬುದೊಂದು ಕಲ್ಪನೆ, ಮನುಷ್ಯ ವಿಕಾಸಗೊಂಡಂತೆ ಈ ಕಲ್ಪನೆಯ ಲಕ್ಷಣಗಳು ಬದಲಾಗುತ್ತ ಹೋಗುತ್ತಿವೆ. ನಮ್ಮ ಹಿಂದಿನವರು ಆರೋಗ್ಯಕ್ಕೆ ಸ್ವಾಸ್ಥ್ಯವೆಂಬ ಪದವನ್ನು ಬಳಸುತ್ತಿದ್ದರು. ಹಾಗೆಂದರೆ ಯಾವುದೇ ಬಗೆಯ ಕಾಟ ವ್ಯಸನ ತೊಂದರೆಯಿಲ್ಲದೆ ಶಾಂತನಾಗಿರುವುದು. ಸ್ವಸ್ಥನೂ, ಶಾಂತನೂ ಆದವ ಆನಂದದಿಂದ ಕೂಡಿರುತ್ತಾನೆ ಎಂದು ಅಭಿಪ್ರಾಯಪಡುತ್ತಿದ್ದರು. ಹಸನ್ಮುಖಿ, ದೀರ್ಘಾಯು, ದೃಢಾಯು, ಉಪಕಾರಿ, ಸ್ನೇಹಪರ, ಸಂತೋಷಚಿತ್ತ ಎಂಬ ಪದಗಳನ್ನು ಬಳಸಬಹುದು.

ಮನುಷ್ಯ ಸಂಪೂರ್ಣವಾದ ಆನಂದವನ್ನು ಅನುಭವಿಸುತ್ತಾನೆ ಎಂದರೆ ಅವನು ನಿರೋಗಿಯಾಗಿರಬೇಕು. ದೇಹ ಪುಷ್ಟಿ ಹೊಂದಿರಬೇಕು ನೂರು ವರ್ಷ ಬಾಳುವಂತಹ ಉತ್ಸಾಹಿತನಾಗಿರಬೇಕು. ಈ ಪ್ರಪಂಚ ನೀಡಬಲ್ಲ ಸಿರಿ ಸೌಕರ್ಯಗಳನ್ನು ಹೊಂದಿದವನಾಗಿರಬೇಕು. ಉತ್ತಮ ಆಸೆಗಳಿಂದ ಕೂಡಿ ಸುಖ ಸಂತೋಷಗಳನ್ನು ಸಂಭ್ರಮಿಸಬೇಕು. ಒಟ್ಟಾರೆ ಈ ನನ್ನ ಅಧ್ಯಯನದಲ್ಲಿ ಆರೋಗ್ಯ ಎಂದರೆ ಡಿಕ್ಶ್ನರಿಯಲ್ಲಿಯ ಅರ್ಥದ ಜೊತೆಗೆ ಒಬ್ಬ ವ್ಯಕ್ತಿ ದಿನನಿತ್ಯದ ಬದುಕಿನಲ್ಲಿ ಯಾವುದೇ ಬಗೆಯ ದೈಹಿಕ ಅಥವಾ ಮಾನಸಿಕ ತೊಂದರೆ ಅಥವಾ ಜಾಡ್ಯವಿಲ್ಲದೆ ಇರುವುದು ಎಂದು ಪರಿಭಾವಿಸಿಕೊಳ್ಳಲಾಗಿದೆ. ಜನತೆಯ ಆರೋಗ್ಯದ ಮಟ್ಟ ಕೇವಲ ವೈದ್ಯಕೀಯ ರಕ್ಷಣೆಯ ಮಟ್ಟದಿಂದ ನಿರ್ಧರಿತವಾಗದೆ ಆರೋಗ್ಯ ವಲಯದ ವ್ಯಾಪ್ತಿಯ ಹೊರಗಡೆ ಇರುವ ಇತರೆ ಅನೇಕ ಕಾರಣಗಳಿಂದ ನಿರ್ಧರಿತವಾಗುವುದು ಎಲ್ಲರಿಗೂ ತಿಳಿದ ವಿಷಯ. ಅದು ಜನರಿಗೆ ಸಿಗುವ ಉತ್ತಮ ದರ್ಜೆಯ ಜೀವನ ಮತ್ತು ಉತ್ತಮ ಆರೋಗ್ಯ ಶಿಕ್ಷಣದ ಮೇಲೂ ಅವಲಂಬಿಸಿರುತ್ತದೆ. ಶುದ್ಧವಾದ ಕುಡಿಯುವ ನೀರು, ಉತ್ತಮ ಆಹಾರ ಹಾಗೂ ಕಲ್ಮಷರಹಿತ ಪರಿಸರವು ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಭಾರತದ ಆರ್ಥಿಕತೆಯ ಮಟ್ಟಿಗೆ ಕುಟುಂಬದಿಂದ ಸಮಾಜ ಹಾಗೂ ರಾಷ್ಟ್ರೀಯ ಮಟ್ಟದವರೆಗೆ ಮಹಿಳಾ ಸಾಮರ್ಥ್ಯದ ಅವಶ್ಯಕತೆಯಿದೆಯೆಂದು ಈಗಾಗಲೇ ಜಾಗತಿಕವಾಗಿ ರುಜುವಾತಾಗಿದೆ. ಈ ಮಹಿಳಾ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಹಲವಾರು ಅಂಶಗಳನ್ನು ನಾವು ಗುರುತಿಸಬಹುದಾಗಿದೆ. ಜಾಗತೀಕರಣದ ಹೊಸ್ತಿಲಲ್ಲಿರುವ ಈ ಶಕೆಯಲ್ಲಿ ಮಹಿಳೆಯು ಮನೆಯಿಂದ ಹೊರಗೆ ದುಡಿಯುವ ಕಾಯಕಕ್ಕೆ ಇಳಿದಿರುವುದು ಅವಳ ಉದಾತ್ತ ಧ್ಯೇಯವನ್ನು ತೋರಿಸುತ್ತದೆ. ತನಗೂ ಒಂದು ವ್ಯಕ್ತಿತ್ವವಿದೆ ಎನ್ನುವುದನ್ನು ನಿರೂಪಿಸಲು ಆಕೆ ತನ್ನ ದಿಟ್ಟ ಹೆಜ್ಜೆಯನ್ನು ಹಲವಾರು ವರ್ಷಗಳ ಹಿಂದೆಯೇ ತೆಗೆದು ಕೊಂಡಿದ್ದಾಳೆ. ಹೀಗಾಗಿ ಮೂಲತಃ ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಆಕೆ ತನ್ನ ದುಡಿಮೆಗೆ ಆಯ್ದುಕೊಂಡ ಕ್ಷೇತ್ರವು ಕೃಷಿಯಾಗಿದ್ದು ತನ್ನ ಸಬಲತೆಗೆ ಹೆಚ್ಚು ಹೊಳಪು ಕೊಡುವಲ್ಲಿ ಅಂದೇ ಶ್ರಮಿಸಿದ್ದಳು. ಉದ್ಯೋಗವು ಸ್ವಾವಲಂಬನೆಯನ್ನು ನೀಡಬಲ್ಲದು ಎಂಬ ಕಲ್ಪನೆಯು ಬಹು ಹಿಂದೆಯೂ ಆಕೆಗಿತ್ತು. ಹೀಗಾಗಿ ಬಹು ಹಿಂದೆಯೇ ತನ್ನನ್ನು ತಾನು ಕೃಷಿ ದುಡಿಮೆಯಲ್ಲಿ ತೊಡಗಿಸಿಕೊಂಡು ಉತ್ತಮ ಜೀವನದ ಕನಸನ್ನು ನನಸಾಗಿಸಿಕೊಳ್ಳಲು ಹೊರಟಿದ್ದಳು.

ಮಹಿಳೆಯು ಉತ್ಪಾದಕ ಮಾಪನವಾಗಿ ಮಾರ್ಪಟ್ಟಾಗ ಹಲವಾರು ಅಂಶಗಳನ್ನು ಪರಿಗಣಿಸಬೇಕಾದುದು ಬಹು ಅಗತ್ಯ. ಅದರಲ್ಲೂ ಶಿಕ್ಷಣ, ಆರೋಗ್ಯದಂತಹ ವಿಷಯ ಮಹಿಳಾ ಸಬಲೀಕರಣದ ಮುಖ್ಯ ಮೈಲುಗಳಲ್ಲೊಂದು. ಪ್ರಸ್ತುತ ಅಧ್ಯಯನವು ಮಹಿಳಾ ಆರೋಗ್ಯಕ್ಕೆ ಸಂಬಂಧಿಸಿದಂತೆ ಕೃಷಿ ಕ್ಷೇತ್ರದ ಉತ್ಪನ್ನಗಳ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳೆಯರ ಆರೋಗ್ಯ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

೫.೨ ಆರೋಗ್ಯದ ಮೂಲ ಸೌಕರ್ಯ

ಸ್ವಾತಂತ್ರ್ಯ ಪೂರ್ವದಲ್ಲಿ ಜಿಲ್ಲೆಯಲ್ಲಿ ವೈದ್ಯಕೀಯ ಸೌಲಭ್ಯಗಳು ಅಷ್ಟೇನು ಗುಣಮಟ್ಟವಿಲ್ಲವೆಂದು ಕಂಡುಬರುತ್ತದೆ. ವೈದ್ಯಕೀಯ ಪದವಿ ಪಡೆದವರ ಸಂಖ್ಯೆ ತುಂಬಾ ಕಡಿಮೆಯಾಗಿರುತ್ತದೆ. ಇದರಿಂದ ಇದ್ದ ಆಸ್ಪತ್ರೆಗಳ ಸೇವೆ ಪಡೆಯಲು ಸಾರಿಗೆ ಸಂಪರ್ಕ ಅಷ್ಟೇನು ಸುಲಭವಿಲ್ಲ. ಗ್ರಾಮೀಣ ಜನರಿಗೆ ಆರೋಗ್ಯ ಸೇವೆಯು ತಮ್ಮಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮುಖಾಂತರವೇ ಆರೋಗ್ಯವನ್ನು ಸುಧಾರಿಸಿಕೊಳ್ಳಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಸಾರಿಗೆ ವ್ಯವಸ್ಥೆಯು ಉತ್ತಮಗೊಂಡಿರುವುದರಿಂದ ಗ್ರಾಮೀಣ ಜನರಿಗೆ ಕೆಲವೊಂದು ಸೌಕರ್ಯಗಳನ್ನು ಹಾಗೂ ಮೂಲಭೂತವಾದ ಆರೋಗ್ಯ ಸೌಕರ್ಯಗಳನ್ನು ಕಂಡುಕೊಳ್ಳಲು ಪ್ರಗತಿದಾಯಕವಾಗಿದೆ. ಖಾಸಗಿ ಮತ್ತು ಸಾರ್ವಜನಿಕ ವಲಯಗಳೆರಡೂ ಹಾವೇರಿ ಜಿಲ್ಲೆಯ ಆರೋಗ್ಯದ ಮಟ್ಟ ಸರ್ವತೋಮುಖ ಅಭಿವೃದ್ಧಿಗೆ ಪ್ರಮುಖ ಪಾತ್ರವಾಗಿದೆ. ಜಿಲ್ಲೆಯಲ್ಲಿ

ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಮಾಡಬೇಕೆಂದು ಜಿಲ್ಲೆಯ ಶಾಸಕರ ಅನುಮೋದನೆ ದೊರೆತಿದ್ದು, ಸರ್ಕಾರದ ಹಂತದಲ್ಲಿ ಪ್ರಗತಿಯಲ್ಲಿದೆ. ಜಿಲ್ಲೆಯಲ್ಲಿ ಅತ್ಯುನ್ನತ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿರುವ ವಿವಿಧ ಆಸ್ಪತ್ರೆಗಳಲ್ಲಿ ಮೂಲಭೂತ ಸೌಲಭ್ಯಗಳಾದ ಮೆಡಿಸಿನ್, ಜರ್ನಲ್ ಮೆಡಿಸಿನ್, ಕಣ್ಣು, ಕಿವಿ, ಮೂಗು, ದಂತ, ಚರ್ಮರೋಗ, ಮನೋವಿಜ್ಞಾನ, ರೇಡಿಯಾಲಜಿ, ಮೂಳೆ, ಸ್ತ್ರೀರೋಗ ಮತ್ತು ಪ್ರಸೂತಿ ಮತ್ತು ಮಕ್ಕಳು ಹಾಗೂ ಅನಸ್ತೇಸಿಯಾ ವಿಭಾಗಗಳನ್ನು ಹೊಂದಿರುತ್ತವೆ ಹಾಗೂ ಕ್ಷಯರೋಗ ಮತ್ತು ಕುಷ್ಟರೋಗಗಳ ಘಟಕಗಳನ್ನು ಹೊಂದಿರುತ್ತವೆ ಹಾಗೂ ಕಣ್ಣಿನ ಘಟಕ ಮತ್ತು ರಕ್ತಭಂಡಾರಗಳ ಘಟಕಗಳೂ ಕೂಡ ಕಾರ್ಯನಿರ್ವಹಿಸುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ ಹೇಳಬೇಕೆಂದರೆ ಕೋವಿಡ್-೧೯ ಕೊರೋನಾ ನಮ್ಮ ಹಾವೇರಿ ಜಿಲ್ಲೆಯಲ್ಲಿ ಯಾವುದೇ ಪೊಸಿಟಿವ್ ಪ್ರಕರಣಗಳು ಇಲ್ಲವೆಂದು ಹೇಳಲು ಸಂತೋಷವೆನಿಸುತ್ತದೆ.

ಹಾವೇರಿ ಜಿಲ್ಲೆಯ ೭ ತಾಲ್ಲೂಕುಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಇರುವಂತಹ ಆರೋಗ್ಯ ವ್ಯವಸ್ಥೆಯಲ್ಲಿ ಒಂದಾದ ಆಸ್ಪತ್ರೆಗಳಲ್ಲಿರುವ ಸಾಮರ್ಥ್ಯವನ್ನು ತಿಳಿಸುತ್ತದೆ. ಹಾವೇರಿಯನ್ನು ವೀಕ್ಷಿಸಿದಾಗ ಸರ್ಕಾರಿ ಆಸ್ಪತ್ರೆ ೧೪ ಇದ್ದು, ಖಾಸಗಿ ನರ್ಸಿಂಗ್ ಹೋಂ ೧೯ ಇರುತ್ತವೆ. ಅದೇ ರೀತಿಯಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ೧೨ ಕಾರ್ಯಾರಂಭ ಮಾಡುತ್ತಿವೆ ಎಂದು ತಿಳಿದುಬರುತ್ತದೆ. ಅದೇ ರೀತಿಯಾಗಿ ಸಂಶೋಧಕರ ಅಧ್ಯಯನ ಕ್ಷೇತ್ರವಾದ ಬ್ಯಾಡಗಿಯಲ್ಲಿ ೫ ಸರ್ಕಾರಿ ಆಸ್ಪತ್ರೆಗಳು ಇದ್ದು, ಪ್ರಾಥಮಿಕ ಆರೋಗ್ಯ ಕೇಂದ್ರವು ೪ ಇರುತ್ತವೆ. ಒಟ್ಟಾರೆಯಾಗಿ ಅಧ್ಯಯನ ಕ್ಷೇತ್ರದಲ್ಲಿ ಆಸ್ಪತ್ರೆಗಳು ಅಷ್ಟೊಂದು ಸುಸಜ್ಜಿತವಾಗಿರುವುದಿಲ್ಲ. ಹಾಗಾಗಿ ಅಲ್ಲಿನ ಜನರು ಸಮೀಪದ ದಾವಣಗೆರೆ ಇಲ್ಲವೆ ಹುಬ್ಬಳ್ಳಿ ನಗರಗಳಿಗೆ ಹೋಗಬೇಕಾಗುತ್ತದೆ.

ಕೋಷ್ಟಕ ೫.೧ ಮಾಹಿತಿದಾರರ ಆರೋಗ್ಯದ ಸ್ಥಿತಿಗತಿ

ಅ.ನಂ	ಮಾಹಿತಿದಾರರ ಆರೋಗ್ಯ	ಮಾಹಿತಿದಾರರು	ಪ್ರತಿಶತ
೧	ಉತ್ತಮವಾಗಿದೆ	೨೭೫	೫೫%
೨	ಸಾಧಾರಣವಾಗಿದೆ	೨೧೫	೪೩%
೩	ಮಧ್ಯಮವಾಗಿದೆ	೧೦	೦೨%
೪	ಸರಿಯಾಗಿಲ್ಲ	-	೦೦%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕವು ೫.೧ ಮಾಹಿತಿದಾರರ ಆರೋಗ್ಯದ ಸ್ಥಿತಿಗತಿಯ ಬಗ್ಗೆ ತಿಳಿಸುತ್ತದೆ. ಪ್ರತಿಶತ ೫೫ ರಷ್ಟು ಮಾಹಿತಿದಾರರು ಅಂದರೆ ಪ್ರತಿಶತ ೫೫.೦೦ ರಷ್ಟು ಮಹಿಳೆಯರ ಆರೋಗ್ಯವು ಉತ್ತಮವಾಗಿದೆ ಎಂದು ವ್ಯಕ್ತಪಡಿಸಿದರೆ, ಪ್ರತಿಶತ ೪೩.೦೦ರಷ್ಟು ಮಹಿಳೆಯರು ಸಾಧಾರಣವಾಗಿದೆ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ಪ್ರತಿಶತ ೨.೦೦ರಷ್ಟು ಮಹಿಳೆಯರ ಆರೋಗ್ಯವು ಮಧ್ಯಮವಾಗಿದೆ ಎಂದು ಕಂಡುಬಂದಿದೆ. ಆದರೆ ಪ್ರಸ್ತುತ ಅಧ್ಯಯನ ನಡೆಸುವಾಗ ಯಾವ ಮಹಿಳೆಯರು ನನ್ನ ಆರೋಗ್ಯದ ಸ್ಥಿತಿಗತಿಯು ಸರಿಯಾಗಿಲ್ಲ ಎಂದು ಹೇಳದಿರುವುದು ವಿಶೇಷವಾಗಿದೆ.

ಕೋಷ್ಟಕ .೫.೨ ಮಾಹಿತಿದಾರರು ಒಂದು ವರ್ಷದಿಂದ ಅನುಭವಿಸುತ್ತಿರುವ ಅನಾರೋಗ್ಯದ ಮಾಹಿತಿ.

ಅ.ನಂ	ಅನಾರೋಗ್ಯದ ಮಾಹಿತಿ	ಮಾಹಿತಿದಾರರು	ಪ್ರತಿಶತ
೧	ರಕ್ತಹೀನತೆ	೩೦	೦೬%
೨	ಅಪೌಷ್ಟಿಕತೆ	೬೫	೧೩%
೩	ಇತರೆ	೪೦೫	೮೧%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕವು ೫.೨ ಮಾಹಿತಿದಾರರು ಒಂದು ವರ್ಷದ ಹಿಂದೆ ಅನುಭವಿಸುತ್ತಿರುವ ಅನಾರೋಗ್ಯದ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ. ಪ್ರತಿಶತ ೬.೦೦ರಷ್ಟು ಮಹಿಳೆಯರು ಒಂದು ವರ್ಷದ ಹಿಂದೆ ರಕ್ತಹೀನತೆಯಿಂದ ಬಳಲುತ್ತಿದ್ದೆವು ಎಂದು ತಿಳಿಸಿದ್ದಾರೆ. ಪ್ರತಿಶತ ೧೩.೦೦ರಷ್ಟು ಮಹಿಳೆಯರು ಒಂದು ವರ್ಷದ ಹಿಂದೆ ಅಪೌಷ್ಟಿಕತೆಯಿಂದ ನರಳುತ್ತಿದ್ದೆವು ಎಂದು ಹೇಳಿದ್ದಾರೆ. ಪ್ರತಿಶತ ೮೧.೦೦ರಷ್ಟು ಮಹಿಳೆಯರು ಒಂದು ವರ್ಷದ ಹಿಂದೆ ಕೇವಲ ಹಲವಾರು ಇತರೆ ಖಾಯಿಲೆಗಳಿಂದ ನೋವನ್ನು ಅನುಭವಿಸಿರುವುದನ್ನು ಗಮನಿಸಿದ್ದೇವೆ. ಮಾಹಿತಿದಾರ ಆರೋಗ್ಯದ ಮೇಲೆ ಯಾವುದಾದರೂ ಖಾಯಿಲೆ ಪರಿಣಾಮ ಬೀರಿದ ಪ್ರಮಾಣವನ್ನು ಸೂಚಿಸುತ್ತದೆ. ಪ್ರತಿಶತ ೪೬.೦೦ ರಷ್ಟು ಮಹಿಳೆಯರು ಆರೋಗ್ಯದ ಮೇಲೆ ಯಾವುದಾದರೂ ಖಾಯಿಲೆ ಪರಿಣಾಮ ಬೀರಿದೆ ಎಂದು ತಿಳಿಸಿದರೆ, ಪ್ರತಿಶತ ೫೪.೦೦ರಷ್ಟು ಮಹಿಳೆಯರು ತಮ್ಮ ಆರೋಗ್ಯದ ಮೇಲೆ ಯಾವುದೇ ರೀತಿ ಪರಿಣಾಮ ಬೀರಿಲ್ಲ ಎಂದು ತಿಳಿಸಿದ್ದಾರೆ.

ಕೋಷ್ಟಕ ೫.೩ ಮಾಹಿತಿದಾರರಿಗೆ ಯಾವ ಕಾಯಿಲೆ ಬಂದಿದೆ ಎಂಬುವವರ ಮಾಹಿತಿ

ಅ.ನಂ	ಕಾಯಿಲೆಗಳು	ಮಾಹಿತಿದಾರರು	ಪ್ರತಿಶತ
೧	ಅಸ್ತಮಾ	೫೦	೧೦%
೨	ದಮ್ಮು	೧೦೦	೨೦%
೩	ಚರ್ಮರೋಗ	೫೦	೧೦%
೪	ಕಣ್ಣು ಉರಿ	೧೫೦	೩೦%
೫	ಇತರೆ	೧೫೦	೩೦%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರ ಕಾಯಿಲೆಯ ಪ್ರಮಾಣವನ್ನು ತಿಳಿಸುತ್ತದೆ. ಈ ಕೋಷ್ಟಕವನ್ನು ಅವಲೋಕಿಸಿದಾಗ ಅಸ್ತಮಾ ಕಾಯಿಲೆಯಿಂದ ಪ್ರತಿಶತ ೧೦.೦೦ ರಷ್ಟು ಮಾಹಿತಿದಾರರು ಖಾಯಿಲೆಯನ್ನು ಅನುಭವಿಸುತ್ತಿದ್ದಾರೆ. ದಮ್ಮು ಕಾಯಿಲೆಯಿಂದ ಪ್ರತಿಶತ ೨೦.೦೦ ರಷ್ಟು ಮಾಹಿತಿದಾರರು ಖಾಯಿಲೆಯನ್ನು ಅನುಭೋಗಿಸುತ್ತಿದ್ದಾರೆ. ಚರ್ಮರೋಗ ಖಾಯಿಲೆಯಿಂದ ಪ್ರತಿಶತ ೧೦.೦೦ರಷ್ಟು ಮಾಹಿತಿದಾರರು ಖಾಯಿಲೆಯನ್ನು ಅನುಭೋಗಿಸುತ್ತಿದ್ದಾರೆ. ಕಣ್ಣು ಉರಿ ಖಾಯಿಲೆಯಿಂದ ಪ್ರತಿಶತ ೩೦.೦೦ರಷ್ಟು ಮಾಹಿತಿದಾರರು ಖಾಯಿಲೆಯಿಂದ ಅನುಭೋಗಿಸುತ್ತಿದ್ದಾರೆ. ಇತರೆ ಖಾಯಿಲೆಯಿಂದ ಪ್ರತಿಶಥ ೩೦.೦೦ರಷ್ಟು ಮಾಹಿತಿದಾರರು ಖಾಯಿಲೆಯನ್ನು ಅನುಭೋಗಿಸುತ್ತಿದ್ದಾರೆ.

ಕೋಷ್ಟಕ ೫.೪ ಮಾಹಿತಿದಾರರು ಚಿಕಿತ್ಸೆ ಪಡೆಯಲು ಹೋಗುವ ವಿವರ.

ಅ.ನಂ	ಚಿಕಿತ್ಸೆ ಪಡೆಯಲು ಹೋಗುವ ವಿವರ	ಮಾಹಿತಿದಾರರು	ಪ್ರತಿಶತ
೧	ಸರಕಾರಿ ಆಸ್ಪತ್ರೆ	೨೨೫	೪೫%
೨	ಖಾಸಗಿ ಆಸ್ಪತ್ರೆ	೯೦	೧೮%
೩	ಆಯುರ್ವೇದಿಕ್	೦೫	೦೧%
೪	ಇತರೆ (ಮನೆಯಲ್ಲಿ)	೧೮೦	೩೬%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕವು ೫.೪ ರಲ್ಲಿ ಮಾಹಿತಿದಾರರು ಖಾಯಿಲೆಗೆ ತುತ್ತಾಗಿದ್ದಾಗ ಚಿಕಿತ್ಸೆ ಪಡೆಯಲು ಎಲ್ಲಿಗೆ ಹೋಗುತ್ತಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಸೂಚಿಸುತ್ತದೆ. ಪ್ರತಿಶತ ೪೫.೦೦ರಷ್ಟು ಮಹಿಳೆಯರು ಖಾಯಿಲೆಗೆ ತುತ್ತಾಗಿದ್ದಾಗ ಸರಕಾರಿ ಆಸ್ಪತ್ರೆಗೆ ಹೋಗಿ

ಚಿಕಿತ್ಸೆ ಪಡೆಯುತ್ತೇವೆ ಎಂದು ತಿಳಿಸಿದರೆ, ಪ್ರತಿಶತ ೧೮.೦೦ ರಷ್ಟು ಮಹಿಳೆಯರು ಖಾಯಿಲೆಗೆ ತುತ್ತಾಗಿದ್ದಾಗ ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತೇವೆ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ಪ್ರತಿಶತ ೧.೦೦ ರಷ್ಟು ಮಹಿಳೆಯರು ಖಾಯಿಲೆಗೆ ತುತ್ತಾಗಿದ್ದಾಗ ಆಯುರ್ವೇದಿಕ್ ಔಷಧಿಯನ್ನು ಪಡೆಯುತ್ತೇವೆ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ಪ್ರತಿಶತ ೩೬.೦೦ ರಷ್ಟು ಮಹಿಳೆಯರು ಖಾಯಿಲೆಗೆ ತುತ್ತಾಗಿದ್ದಾಗ ಕೇವಲ ಮನೆಯ ಔಷಧಿಯನ್ನು ತೆಗೆದುಕೊಳ್ಳುತ್ತೇವೆ ಎಂದು ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಮಹಿಳಾ ಕಾರ್ಮಿಕರು ಖಾಯಿಲೆಗೆ ತುತ್ತಾಗಿದ್ದಾಗ ಚಿಕಿತ್ಸೆ ಪಡೆಯುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಹಾಗೂ ಸುಮಾರು ಮಹಿಳೆಯರು ಖಾಯಿಲೆಗೆ ತುತ್ತಾಗಿದ್ದಾಗ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತಿರುವುದು ಗಮನಿಸಬಹುದಾಗಿದೆ.

ಕೋಷ್ಟಕ ೫.೫ ಮಾಹಿತಿದಾರರ ಕಾಯಿಲೆಗಳು ಎಷ್ಟು ದಿನದಿಂದ ಕಾಣಿಸಿಕೊಂಡಿರುವ ಬಗ್ಗೆ ವಿವರ.

ಅ.ನಂ	ಕಾಯಿಲೆಯ ದಿನಗಳು	ಮಾಹಿತಿದಾರರು	ಪ್ರತಿಶತ
೧	೪ ತಿಂಗಳ ಹಿಂದೆ	೧೮೦	೩೬%
೨	೬ ತಿಂಗಳ ಹಿಂದೆ	೧೨೦	೨೪%
೩	೧ ವರ್ಷದ ಹಿಂದೆ	೧೩೦	೨೬%
೪	೧ ವರ್ಷಕ್ಕಿಂತ ಹೆಚ್ಚು	೭೦	೧೪%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕವು ೫.೫ ಮಾಹಿತಿದಾರರ ಖಾಯಿಲೆಗೆ ಎಷ್ಟು ದಿನದಿಂದ ಕಾಣಿಸಿಕೊಂಡಿರುವ ಬಗ್ಗೆ ತಿಳಿಸುತ್ತದೆ. ಪ್ರತಿಶತ ೩೬.೦೦ ರಷ್ಟು ಮಹಿಳೆಯರು ೪ ತಿಂಗಳ ಹಿಂದೆ ಕಾಣಿಸಿಕೊಂಡಿದೆ ಎಂಬುದನ್ನು ತಿಳಿಸುತ್ತದೆ. ಪ್ರತಿಶತ ೨೪.೦೦ರಷ್ಟು ಮಹಿಳೆಯರು ೬ ತಿಂಗಳ ಹಿಂದೆ ಖಾಯಿಲೆಗಳು ಒಳಗಾದವರನ್ನು ಹೊಂದಿರುತ್ತದೆ. ಪ್ರತಿಶತ ೨೬.೦೦ರಷ್ಟು ಮಹಿಳೆಯರು ೧ ವರ್ಷದ ಹಿಂದೆ ಖಾಯಿಲೆಗಳು ಕಾಣಿಸಿಕೊಂಡಿದೆ ಎಂಬುದನ್ನು ತಿಳಿಸುತ್ತದೆ. ಪ್ರತಿಶತ ೧೪.೦೦ರಷ್ಟು ಮಹಿಳೆಯರು ೧ ವರ್ಷಕ್ಕಿಂತ ಹೆಚ್ಚು ದಿನಗಳಿಂದ ಖಾಯಿಲೆಗಳು ಕಾಣಿಸಿಕೊಂಡಿವೆ ಎಂಬುದನ್ನು ವಿವರಿಸುತ್ತದೆ. ಆದ್ದರಿಂದ ಇಲ್ಲಿ ಅಂಕಿ ಅಂಶಗಳ ಪ್ರಕಾರ ಪ್ರತಿಶತ ೩೬.೦೦ರಷ್ಟು ಮಹಿಳೆಯರು ೪ ತಿಂಗಳ ಹಿಂದೆ ಖಾಯಿಲೆಗಳು ಕಾಣಿಸಿಕೊಂಡಿದೆ ಎಂಬುದನ್ನು ಅಧಿಕವಾಗಿ ಗಮನಿಸಬಹುದಾಗಿದೆ.

ಕೋಷ್ಟಕ ೫.೬ ಮಾಹಿತಿದಾರರು ಪದೇ ಪದೇ ಕಾಡುವ ಕಾಯಿಲೆಗಳ ವಿವರ.

ಅ.ನಂ	ಕಾಯಿಲೆಗಳು	ಮಾಹಿತಿದಾರರು	ಪ್ರತಿಶತ
೧	ಕೆಮ್ಮು	೧೩೫	೨೭%
೨	ಕಣ್ಣು ಉರಿ	೧೩೦	೨೬%
೩	ಚರ್ಮರೋಗ	೦೫	೦೧%
೪	ಎದೆನೋವು	೪೫	೦೯%
೫	ಇತರೆ	೧೮೫	೩೭%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕವು ೫.೬ ರಲ್ಲಿ ಮಾಹಿತಿದಾರರಿಗೆ ಪದೇ ಪದೇ ಕಾಡುವ ಖಾಯಿಲೆಗಳ ವಿವರವನ್ನು ತಿಳಿಸುತ್ತದೆ. ಪ್ರತಿಶತ ೨೭.೦೦ರಷ್ಟು ಮಹಿಳೆಯರಿಗೆ ಪದೇ ಪದೇಯಾಗಿ ಕೆಮ್ಮು ಬರುತ್ತದೆ. ಎಂದು ತಿಳಿಸಿದರೆ, ಪ್ರತಿಶತ ೨೬.೦೦ರಷ್ಟು ಮಹಿಳೆಯರಿಗೆ ಪದೇ ಪದೇಯಾಗಿ ಕಣ್ಣು ಉರಿ ತೊಂದರೆ ಕಾಡುತ್ತದೆ ಎಂದಿದ್ದಾರೆ. ಹಾಗೂ ಪ್ರತಿಶತ ೦೧.೦೦ ರಷ್ಟು ಮಹಿಳೆಯರಿಗೆ ಪದೇ ಪದೇಯಾಗಿ ಚರ್ಮರೋಗ ಕಾಣಿಸಿಕೊಂಡಿದೆ ಎಂದಿದ್ದಾರೆ. ಪ್ರತಿಶತ ೯.೦೦ರಷ್ಟು ಮಹಿಳೆಯರಿಗೆ ಪದೇ ಪದೇಯಾಗಿ ಎದೆನೋವು ಕಾಡುತ್ತದೆ ಎಂದು ತಮ್ಮ ನೋವನ್ನು ಹೇಳಿಕೊಂಡರು. ಅಲ್ಲದೆ ಪ್ರತಿಶತ ೩೭.೦೦ರಷ್ಟು ಮಹಿಳೆಯರಿಗೆ ಕೇವಲ ಇತರೆ ಖಾಯಿಲೆಗಳು ಪದೇ ಪದೇಯಾಗಿ ಬರುತ್ತದೆ ಎಂದು ತಿಳಿಸಿದ್ದಾರೆ. ಒಟ್ಟಾರೆಯಾಗಿ ಮೈ ಕೈ ನೋವು ಮತ್ತು ಇತರೆ ಖಾಯಿಲೆಗಳು ನಮ್ಮನ್ನು ಪದೇ ಪದೇಯಾಗಿ ಕಾಡಿ ಆರೋಗ್ಯ ಸಮಸ್ಯೆಗೆ ಒಳಗಾಗುವಂತೆ ಮಾಡುತ್ತದೆ ಎಂದು ಹೇಳುತ್ತಾರೆ. ಹೀಗೆ ಎಷ್ಟೋ ಮಹಿಳೆಯರು ಮಾರುಕಟ್ಟೆಯಲ್ಲಿ ಈ ತರಹದ ಅನಾರೋಗ್ಯಕ್ಕೆ ಒಳಗಾಗಿ ನೋವನ್ನು ಅನುಭವಿಸುತ್ತಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ನಾವು ಕಂಡುಕೊಂಡೆವು ಮತ್ತು ಗಮನಿಸಿದೆವು.

ಕೋಷ್ಟಕ ೫.೭ ಮಾಹಿತಿದಾರರ ಕೆಲಸ ಮಾಡುವ ಸ್ಥಳ ರೀತಿಯ ಮಾಹಿತಿ.

ಅ.ನಂ	ಸ್ಥಳ	ಮಾಹಿತಿದಾರರು	ಪ್ರತಿಶತ
೧	ಸಾಧಾರಣ	೨೦೦	೪೦%
೨	ಉತ್ತಮ	೩೦೦	೬೦%
೩	ಅತ್ಯುತ್ತಮ	೦೦	೦೦%
೪	ಇತರೆ	೦೦	೦೦%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕವು ೫.೭ ರಲ್ಲಿ ಮಾಹಿತಿದಾರರು ಅಂದರೆ ಮಹಿಳೆಯರ ಕೆಲಸ ಮಾಡುವ ಸ್ಥಳದ ಬಗ್ಗೆ ತಿಳಿಸುತ್ತದೆ. ಪ್ರತಿಶತ ೪೦.೦೦ರಷ್ಟು ಮಹಿಳೆಯರು ಕೆಲಸದ ಸ್ಥಳ ಸಾಧಾರಣವಾಗಿದೆ ಎಂದು ವ್ಯಕ್ತಪಡಿಸಿದರೆ, ಪ್ರತಿಶತ ೬೦.೦೦ ರಷ್ಟು ಮಹಿಳೆಯರು ಕೆಲಸದ ಸ್ಥಳ ಉತ್ತಮವಾಗಿದೆ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ೦೦.೦೦ರಷ್ಟು ಮಹಿಳೆಯರು ಕೆಲಸದ ಸ್ಥಳ ಯಾವುದೇ ರೀತಿ ಅತ್ಯುತ್ತಮವಾಗಿದೆ ಎಂದು ಯಾರೂ ವ್ಯಕ್ತಪಡಿಸಿಲ್ಲ. ಪ್ರತಿಶತ ೦೦.೦೦ರಷ್ಟು ಮಹಿಳೆಯರು ಯಾವುದೇ ರೀತಿ ಇತರೆ ಕೆಲಸದ ಸ್ಥಳವು ಹೊಂದಿದೆ ಎಂದಿದ್ದಾರೆ.

ಮಾಹಿತಿದಾರರು ಕೆಲಸ ಮಾಡುವಂತಹ ಸಮಯದಲ್ಲಿ ಕೈ ಕವಚದ ಬಗ್ಗೆ ತಿಳಿಸುತ್ತದೆ. ಪ್ರತಿಶತ ೧೦.೦೦ರಷ್ಟು ಮಹಿಳೆಯರು ಕೈ ಕವನ ನೀಡುತ್ತಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಅದೇ ರೀತಿಯಾಗಿ ಇಲ್ಲಿ ಪ್ರತಿಶಥ ೯೦.೦೦ರಷ್ಟು ಮಹಿಳೆಯರು ಕೆಲಸ ನಿರ್ವಹಿಸುವಾಗ ಕೈ ಕವಚವನ್ನು ನೀಡುವುದಿಲ್ಲ ಎಂದು ಹೇಳುತ್ತಾರೆ. ಏಕೆಂದರೆ ನಾನು ಪ್ರಸ್ತುತ ಅಧ್ಯಯನವನ್ನು ಕೈಗೊಂಡಾಗ ಮಾರುಕಟ್ಟೆಯಲ್ಲಿ ಹಾಗೂ ಜಿನ್‌ಗಳಲ್ಲಿ ಮಹಿಳೆಯರಿಗೆ ಯಾವುದೇ ರೀತಿ ತೊಂದರೆಗಳು ಬರಬಾರದೆಂದು ಕೈಕವಚವನ್ನು ನೀಡುವರು. ಆದರೆ ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆಯ ಹೊರಗಡೆ ಮಹಿಳೆಯರಿಗಾಗಿ ಹೊಲಿಗೆ ಯಂತ್ರ ಫ್ಯಾಕ್ಟರಿಯನ್ನು ಸ್ಥಾಪಿಸಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಈ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುವುದರಿಂದ ಕೆಲಸ ನಿರ್ವಹಿಸುವ ಸಮಯದಲ್ಲಿ ಕೈಕವಚ ನೀಡುವುದಿಲ್ಲ ಎಂಬ ಮಾಹಿತಿಯನ್ನು ಗಮನಿಸಬಹುದಾಗಿದೆ. ಮಾಹಿತಿದಾರರ ಮನೆಯಲ್ಲಿ ಶೌಚಾಲಯದ ವ್ಯವಸ್ಥೆಯನ್ನು ಹೊಂದಿದವರ ಪ್ರಮಾಣದ ಬಗ್ಗೆ ತಿಳಿಸುತ್ತದೆ. ಪ್ರತಿಶತ ೧೨.೦೦ ರಷ್ಟು ಮಹಿಳೆಯರು ತಮ್ಮ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇದೆ ಎಂದು ತಿಳಿಸಿದರೆ ಪ್ರತಿಶತ ೮೮.೦೦ ರಷ್ಟು ಮಹಿಳೆಯರು ತಮ್ಮ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲ ಎಂದು ತಿಳಿಸಿದ್ದಾರೆ. ಏಕೆ ನೀವು ಮನೆಗಳಲ್ಲಿ ಶೌಚಾಲಯವನ್ನು ನಿರ್ಮಿಸಿಲ್ಲ ಎಂದು ಕೇಳಿದರೆ ಬಹಳಷ್ಟು ಮಹಿಳೆಯರು ಜಾಗದ ಸಮಸ್ಯೆ ಮತ್ತು ಹಣಕಾಸಿನ ಸಮಸ್ಯೆಯನ್ನು ಹೇಳಿರುವುದನ್ನು ನಾವು ಗಮನಿಸಿದ್ದೆವು. ಅನಾರೋಗ್ಯಕ್ಕೆ ಒಳಗಾಗುವಾಗ ಮನೆಯವರು ಆರೋಗ್ಯದ ಬಗ್ಗೆ ಕಾಳಜಿಯನ್ನು ತಿಳಿಸುತ್ತದೆ. ಪ್ರತಿಶತ ೯೨.೦೦ ರಷ್ಟು ಮಹಿಳೆಯರು ತಮ್ಮ ಅನಾರೋಗ್ಯಕ್ಕೆ ಒಳಗಾದಾಗ ತಮ್ಮ ಮನೆಯವರು ಆರೋಗ್ಯದ ಬಗ್ಗೆ ಕಾಳಜಿಯನ್ನು ವಹಿಸುತ್ತಾರೆ ಎಂದು ತಿಳಿಸಿದ್ದಾರೆ. ಪ್ರತಿಶತ ೮.೦೦ ರಷ್ಟು ಮಹಿಳೆಯರು ತಾವು ಅನಾರೋಗ್ಯಕ್ಕೆ ಒಳಗಾದಾಗ ತಮ್ಮ ಮನೆಯವರು ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದಿಲ್ಲ ಎಂದು ಹೇಳಿರುವುದು

ಗಮನಾರ್ಹವಾಗಿದೆ. ಆರೋಗ್ಯ ವಿಮಾ ಸೌಲಭ್ಯದ ಬಗ್ಗೆ ತಿಳಿಸುತ್ತದೆ. ಪ್ರತಿಶತ ೩.೦೦ರಷ್ಟು ಮಹಿಳೆಯರು ಆರೋಗ್ಯ ವಿಮಾ ಸೌಲಭ್ಯವನ್ನು ಮಾಡಿಸಿದ್ದೇವೆ ಎಂದು ವ್ಯಕ್ತಪಡಿಸಿದ್ದಾರೆ. ಪ್ರತಿಶತ ೯೭.೦೦ ರಷ್ಟು ಮಹಿಳೆಯರು ಆರೋಗ್ಯ ವಿಮಾ ಸೌಲಭ್ಯ ಮಾಡಿಸಿಲ್ಲ ಎಂಬುದನ್ನು ವ್ಯಕ್ತಪಡಿಸಿದ್ದಾರೆ. ಆರೋಗ್ಯ ಕವಚನ ೧೦೮ ರ ಬಗ್ಗೆ ಇರುವ ಅರಿವಿನ ಬಗ್ಗೆ ತಿಳಿಸುತ್ತದೆ. ಪ್ರತಿಶತ ೩೯.೦೦ ರಷ್ಟು ಮಾಹಿತಿದಾರರಿಗೆ ಆರೋಗ್ಯ ಕವಚ ೧೦೮ ರ ಬಗ್ಗೆ ನಮಗೆ ಗೊತ್ತಿದೆ ಎಂದು ಒಪ್ಪಿಕೊಂಡರೆ, ಪ್ರತಿಶತ ೬೧.೦೦ರಷ್ಟು ಮಾಹಿತಿದಾರರು ಆರೋಗ್ಯ ಕವಚ ೧೦೮ರ ಬಗ್ಗೆ ನಮಗೆ ಏನು ತಿಳಿದಿಲ್ಲ ಎಂದಿದ್ದಾರೆ. ಆದರೆ ಸುಮಾರು ಮಹಿಳೆಯರಿಗೆ ಆರೋಗ್ಯ ಕವಚ ೧೦೮ರ ಬಗ್ಗೆ ನಮಗೆ ಮಾಹಿತಿ ಗೊತ್ತಿಲ್ಲ ಎಂಬುದು ಕಂಡುಬರುತ್ತದೆ. ಆರೋಗ್ಯ ಕವಚ ೧೦೮ ವಾಹನ ಯಾರಾದರೂ ಪ್ರಯೋಜನ ಪಡೆದುಕೊಂಡಿರುವ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಪ್ರತಿಶತ ೨೬.೦೦ ರಷ್ಟು ಮಾಹಿತಿದಾರರು ಆರೋಗ್ಯ ಕವಚನ ೧೦೮ ತಮ್ಮ ಕುಟುಂಬದಲ್ಲಿ ಆರೋಗ್ಯಕ್ಕೋಸ್ಕರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ ಎಂದು ತಿಳಿಸಿದರೆ, ಪ್ರತಿಶತ ೭೪.೦೦ ರಷ್ಟು ಮಾಹಿತಿದಾರರು ಆರೋಗ್ಯ ಕವಚ ೧೦೮ ವಾಹನವನ್ನು ಯಾರೂ ಪ್ರಯೋಜನವನ್ನು ಪಡೆದುಕೊಂಡಿಲ್ಲ ಎಂದು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೫.೮ ಮಾಹಿತಿದಾರರ ಪಡೆದ ಸರ್ಕಾರಿ ಸೌಲಭ್ಯಗಳು ಅವರ ಆರೋಗ್ಯ ಹೇಗೆ ಸಹಾಯಕವಾಗಿದೆ ಎಂಬುದರ ಮಾಹಿತಿದಾರರ ಅಭಿಪ್ರಾಯ.

ಅ.ನಂ	ಸರಕಾರಿ ಸೌಲಭ್ಯಗಳು	ಮಾಹಿತಿದಾರರು	ಪ್ರತಿಶತ
೧	ಉತ್ತಮವಾಗಿದೆ	೨೫	೦೫%
೨	ಅತ್ಯುತ್ತಮವಾಗಿದೆ	೦೦	೦೦%
೩	ಸಾಧಾರಣವಾಗಿವೆ	೪೭೫	೯೫%
೪	ತೃಪ್ತಿಕರವಾಗಿವೆ	೦೦	೦೦%
	ಒಟ್ಟು	೫೦೦	೧೦೦.೦೦

ಮಾಹಿತಿ : ಕ್ಷೇತ್ರ ಕಾರ್ಯ

ಈ ಮೇಲಿನ ಕೋಷ್ಟಕವು ೫.೮ ರಲ್ಲಿ ಮಾಹಿತಿದಾರರು ಪಡೆದ ಸರಕಾರಿ ಸೌಲಭ್ಯಗಳು ಅವರ ಆರೋಗ್ಯಕ್ಕೆ ಹೇಗೆ ಸಹಾಯಕವಾಗಿವೆ ಎಂಬುದರ ಬಗ್ಗೆ ತಿಳಿಸುತ್ತದೆ. ಪ್ರತಿಶತ ೫.೦೦ ರಷ್ಟು ಮಹಿಳೆಯರು ತಾವು ಪಡೆದ ಸರ್ಕಾರಿ ಸೌಲಭ್ಯಗಳು ತಮ್ಮ ಆರೋಗ್ಯಕ್ಕೆ ಉತ್ತಮವಾಗಿ ಸಹಾಯಕವಾಗಿದೆ ಎಂದು ಹೇಳಿದರೆ, ಪ್ರತಿಶಥ ೦೦.೦೦ರಷ್ಟು ಮಹಿಳೆಯರು ತಾವು ಪಡೆದ ಸರ್ಕಾರಿ ಸೌಲಭ್ಯಗಳು ತಮ್ಮ ಆರೋಗ್ಯಕ್ಕೆ ಅತ್ಯುತ್ತಮವಾಗಿದೆ ಎಂದು ಹೇಳಿದ್ದಾರೆ. ಪ್ರತಿಶತ ೯೫.೦೦ ರಷ್ಟು ಮಹಿಳೆಯರು ತಾವು ಪಡೆದ ಸರ್ಕಾರಿ ಸೌಲಭ್ಯಗಳು ತಮ್ಮ ಆರೋಗ್ಯಕ್ಕೆ

ಸಾಧಾರಣವಾಗಿ ಸಹಾಯಕವಾಗಿದೆ ಎಂದು ತಿಳಿಸಿದ್ದಾರೆ. ಪ್ರತಿಶತ ೦೦.೦೦ ರಷ್ಟು ಮಹಿಳೆಯರಿಗೆ ತಾವು ಪಡೆದ ಸರ್ಕಾರಿ ಸೌಲಭ್ಯಗಳು ತಮ್ಮ ಆರೋಗ್ಯಕ್ಕೆ ತೃಪ್ತಿಕರವಾಗಿ ಸಹಾಯಕವಾಗಿದೆ ಎಂದು ತಿಳಿಸಿರುವುದು ಕಂಡುಬರುತ್ತದೆ.

ಈ ಮೇಲಿನ ಕಾರಣಗಳನ್ನು ಅಧ್ಯಯನ ಮಾಡಿದಾಗ ಮಹಿಳಾ ಕಾರ್ಮಿಕರು ಹಲವಾರು ರೀತಿಯಾದ ಆರೋಗ್ಯ ಸಮಸ್ಯೆಗಳನ್ನು ಅನುಭವಿಸುತ್ತಿರುವುದು ಕಂಡುಬಂದಿತು. ಹಲವಾರು ಮಹಿಳೆಯರು ತಮ್ಮ ದಿನನಿತ್ಯದ ಆರೋಗ್ಯವನ್ನು ನಿರ್ಲಕ್ಷ ವಹಿಸುತ್ತಿರುವುದು ಕಂಡು ಬಂದಿತು. ಅದೇ ರೀತಿಯಾಗಿ ಮಹಿಳಾ ಕಾರ್ಮಿಕರು ಮಹಿಳೆಯರು ರಕ್ತಹೀನತೆ, ಅಪೌಷ್ಠಿಕತೆ, ಎದೆನೋವು, ಕೆಮ್ಮು, ಅಸ್ತಮಾ, ಕಣ್ಣು ಉರಿ, ಕೈ ಉರಿ, ಇತರೆ ಖಾಯಿಲೆಗಳಿಂದ ನೋವನ್ನು ಅನುಭವಿಸುತ್ತಿರುವುದು ಕಂಡುಬಂದಿತು. ಮಹಿಳಾ ಕಾರ್ಮಿಕರು ಮಹಿಳೆಯರು ಹೆಚ್ಚಾಗಿ ಚಿಕಿತ್ಸೆ ಪಡೆಯಲು ಸರ್ಕಾರಿ ಆಸ್ಪತ್ರೆಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಆಸ್ಪತ್ರೆಗೆ ಹೋಗುತ್ತಿರುವುದು ಗೊತ್ತಾಯಿತು. ಕೆಲವು ಮಹಿಳೆಯರು ಖಾರಪುಡಿ ಜಿನ್‌ಗಳಲ್ಲಿ ಕೆಲಸ ಮಾಡುವಾಗ ಹಲವಾರು ರೀತಿಯಾದ ಆರೋಗ್ಯ ಸಮಸ್ಯೆಗಳನ್ನು ಅನುಭವಿಸಿದ್ದನ್ನು ನಮ್ಮ ಮುಂದೆ ತಮ್ಮ ನೋವನ್ನು ಹಂಚಿಕೊಂಡಿದ್ದು ಕಂಡುಬಂದಿತು. ಮತ್ತೆ ಹಲವಾರು ಕಾರ್ಮಿಕ ಮಹಿಳೆಯರಿಗೆ ಪದೇ ಪದೇಯಾಗಿ ಕೈ ಉರಿ, ಕೆಮ್ಮು, ಎದೆ ನೋವು, ಕೈಕಾಲು ಉರಿತ, ಸೊಂಟನೋವು ಮತ್ತು ಇತರೆ ಸಣ್ಣ ಪುಟ್ಟ ಖಾಯಿಲೆಗಳು ನಮ್ಮನ್ನು ಕಾಡುತ್ತವೆ ಎಂದು ನಮ್ಮ ಮುಂದೆ ಕಣ್ಣೀರಿಟ್ಟರು. ಆದರೆ ಸುಮಾರು ಮಹಿಳೆಯರಿಗೆ ಆರೋಗ್ಯ ಕವಚ ೧೦೮ ರ ವಾಹನದ ಹೆಸರೇ ಗೊತ್ತಿಲ್ಲವೆಂದು ಹೇಳಿದಾಗ ನನಗೆ ಆಶ್ಚರ್ಯವಾಯಿತು ಮತ್ತು ದುರಾದೃಷ್ಟದ ಸಂಗತಿ ಎನಿಸಿತು. ಸರಕಾರಿ ಆರೋಗ್ಯ ಸೇವಾ ವಲಯದಿಂದ ಪಡೆಯುತ್ತಿರುವ ಆರೋಗ್ಯ ಸೇವೆಗಳ ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ಇಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಕೂಲಿ ಕಾರ್ಮಿಕರು ಬಡ ವರ್ಗಕ್ಕೆ ಸೇರಿದವರಾಗಿದ್ದರಿಂದ ತಮ್ಮ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಯನ್ನೇ ನೆಚ್ಚಿಕೊಳ್ಳಬೇಕಾಗುವುದು ಅನಿವಾರ್ಯವಾಗಿದೆ. ಆದರೆ ಸಂದರ್ಶನಕ್ಕೊಳಪಟ್ಟವರು ಎಲ್ಲರೂ ಸಾರ್ವಜನಿಕ ಆರೋಗ್ಯ ವಲಯದ ಸೇವೆಗಳನ್ನು ಸಮರ್ಪಕವಾಗಿ ಬಳಸಿಕೊಂಡಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದ ವಿಷಯವಾಗಿದೆ.

ಆರೋಗ್ಯ ತಪಾಸಣಾ ಸಂಬಂಧಿತ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಶೇ.೫ ಮಂದಿಯಷ್ಟು ಮಾತ್ರ ಆರೋಗ್ಯ ಸಂಬಂಧಿತ ಕಾರ್ಯಕ್ರಮಗಳು ನಡೆದಿವೆ ಎಂಬುದರ ಕುರಿತಂತೆ ಧನಾತ್ಮಕವಾಗಿ ವಿವರಿಸಿದ್ದು, ಶೇ.೯೫ರಷ್ಟು ಮಂದಿ ಯಾವುದೇ ತಪಾಸಣಾ

ಕಾರ್ಯಕ್ರಮ ನಡೆದಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಮಾಹಿತಿಯನ್ನು ಅವಲೋಕಿಸಿದಾಗ ಬ್ಯಾಡಗಿ ತಾಲೂಕಿನ ಮೆಣಸಿನಕಾಯಿ ಮಾರುಕಟ್ಟೆಯ ಸುತ್ತಮುತ್ತಲಿನ ಹಳ್ಳಿ ಪ್ರದೇಶದಲ್ಲಿ ಸರಕಾರಿ ಪ್ರಾಯೋಜಿತ ಆರೋಗ್ಯ ಸೇವೆಗಳು ಬಹಳ ಕಡಿಮೆ ಮಟ್ಟದಲ್ಲಿವೆ ಎಂದು ಗಮನಿಸಬಹುದಾಗಿದೆ. ಆದಾಗ್ಯೂ ತಪಾಸಣೆಗೆ ಒಳಪಟ್ಟ ಜನರಲ್ಲಿ ಕೆಲವರು ಕಣ್ಣಿನ ಚಿಕಿತ್ಸೆ, ಕೊರೊನಾ ತಪಾಸಣೆ, ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತಾರೆ.

ಸರಕಾರದ ಕುಟುಂಬ ಕಲ್ಯಾಣ ಯೋಜನೆಯ ಬಗ್ಗೆ ಇಲ್ಲಿಯ ಮಹಿಳಾ ಕಾರ್ಮಿಕರಿಗೆ ಇರುವ ಅರಿವನ್ನು ತಿಳಿಸುತ್ತದೆ. ಸಂದರ್ಶನಕ್ಕೊಳಪಟ್ಟ ಶೇ.೪೬ರಷ್ಟು ಮಂದಿ ಯೋಜನೆಗಳ ಅರಿವಿದೆ ಎಂದು, ಶೇ.೫೪ರಷ್ಟು ಮಂದಿ ತಮಗೆ ಇದರ ಅರಿವಿಲ್ಲ ಎಂದು ಹೇಳಿರುತ್ತಾರೆ. ಈ ಮಾಹಿತಿಯನ್ನು ಅವಲೋಕಿಸಿದಾಗ ಮಹಿಳೆಯರು ಪ್ರಾಥಮಿಕವಾಗಿ ಅರಿತಿರಬೇಕಾದ ಕುಟುಂಬ ಯೋಜನೆಯ ಬಗ್ಗೆ ಅಸ್ಪಷ್ಟ ಮಾಹಿತಿ ಇರುವುದು ಆತಂಕದ ವಿಷಯವಾಗಿದೆ.

ಕೋಷ್ಟಕ ೫.೯ ಕೊರೊನಾ ಕಾಯಿಲೆಯ ವಿವರ

ಕ್ರ.ಸಂ.	ವಿವರ	ಸಂಖ್ಯೆ	ಶೇಕಡಾ
೧.	ಹೌದು	೦	೦
೨.	ಇಲ್ಲ	೫೦೦	೧೦೦
ಒಟ್ಟು		೫೦೦	೧೦೦

ಇತ್ತೀಚೆಗೆ ಕೊರೊನಾ ಎಂಬ ಖಾಯಿಲೆಯು ಜಗತ್ವ್ಯಾಪಿಯಾಗಿ ಹಬ್ಬಿದ್ದು, ಕರ್ನಾಟಕಕ್ಕೂ ಇದರ ಪ್ರಭಾವ ಬಹಳಷ್ಟಾಗಿತ್ತು. ಅತೀ ಹೆಚ್ಚು ಕಾರ್ಮಿಕರು ಕೆಲಸ ಮಾಡುವ ಈ ಮಾರುಕಟ್ಟೆಯಲ್ಲಿ ಯಾರಾದರೂ ಕೊರೊನಾ ಖಾಯಿಲೆಗೆ ತುತ್ತಾಗಿದ್ದಾರಾ ಎಂಬ ಪ್ರಶ್ನೆಗೆ ಸಂದರ್ಶನಕ್ಕೊಳಪಟ್ಟವರೆಲ್ಲರೂ ಇಲ್ಲ ಎಂದು ಉತ್ತರಿಸಿದ್ದು, ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬ್ಯಾಡಗಿ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಯಾವುದೇ ಕೊರೊನಾ ಪ್ರಕರಣಗಳು ದಾಖಲಾಗದೇ ಇರುವುದು ಕಂಡುಬರುತ್ತದೆ.

ಮಹಿಳಾ ಕಾರ್ಮಿಕರ ಆರೋಗ್ಯ ಸಮಸ್ಯೆಯ ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ಮೆಣಸಿನಕಾಯಿಯು ಸ್ವಭಾವತಃಹ ಘಾಟು ಉತ್ಪನ್ನವಾಗಿದ್ದು, ದಿನವಿಡೀ ಗಂಟೆಗಟ್ಟಲೇ ಇದರ ಜೊತೆಗೆ ದುಡಿಯುವುದರಿಂದ ಸ್ವಾಭಾವಿಕವಾಗಿ ಕೆಲವೊಂದು ಆರೋಗ್ಯ ಸಮಸ್ಯೆಗಳು ಉಂಟಾಗುತ್ತದೆ. ಆದರೆ ಸಂದರ್ಶನಕ್ಕೊಳಪಟ್ಟವರಲ್ಲಿ ಶೇ.೮೭.೬ರಷ್ಟು ಮಂದಿ ತಮಗೆ ಈ ಕೆಲಸ ಮಾಡುವುದರಿಂದ ಯಾವುದೇ ರೀತಿಯ ಆರೋಗ್ಯ ಸಮಸ್ಯೆಗಳು ಉಂಟಾಗಿರುವುದಿಲ್ಲ

ಎಂದು ಉತ್ತರಿಸಿದ್ದು, ಶೇ.೧೨.೪ರಷ್ಟು ಮಂದಿ ಮಾತ್ರ ತಮಗೆ ಈ ಕೆಲಸ ಮಾಡುವುದರಿಂದ ಅಸ್ತಮಾ, ಕೈಉರಿ, ಕಣ್ಣು ಉರಿ, ಕೈಕಾಲು ನೋವು, ಸೊಂಟನೋವು, ಬೆನ್ನುನೋವು, ಮಂಡಿನೋವು ಕಾಣಿಸಿಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಮಹಿಳಾ ಕಾರ್ಮಿಕರ ಆರೋಗ್ಯ ಸಮಸ್ಯೆಯ ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ಮೆಣಸಿನಕಾಯಿಯು ಸ್ವಭಾವತಃ ಘಾಟು ಉತ್ಪನ್ನವಾಗಿದ್ದು, ದಿನವಿಡೀ ಗಂಟೆಗಟ್ಟಲೇ ಇದರ ಜೊತೆಗೆ ದುಡಿಯುವುದರಿಂದ ಸ್ವಾಭಾವಿಕವಾಗಿ ಕೆಲವೊಂದು ಆರೋಗ್ಯ ಸಮಸ್ಯೆಗಳು ಉಂಟಾಗುತ್ತದೆ. ಆದರೆ ಸಂದರ್ಶನಕ್ಕೊಳಪಟ್ಟವರಲ್ಲಿ ಶೇ.೮೭.೬ರಷ್ಟು ಮಂದಿ ತಮಗೆ ಈ ಕೆಲಸ ಮಾಡುವುದರಿಂದ ಯಾವುದೇ ರೀತಿಯ ಆರೋಗ್ಯ ಸಮಸ್ಯೆಗಳು ಉಂಟಾಗಿರುವುದಿಲ್ಲ ಎಂದು ಉತ್ತರಿಸಿದ್ದು, ಶೇ.೧೨.೪ರಷ್ಟು ಮಂದಿ ಮಾತ್ರ ತಮಗೆ ಈ ಕೆಲಸ ಮಾಡುವುದರಿಂದ ಅಸ್ತಮಾ, ಕೈಉರಿ, ಕಣ್ಣು ಉರಿ, ಕೈಕಾಲು ನೋವು, ಸೊಂಟನೋವು, ಬೆನ್ನುನೋವು, ಮಂಡಿನೋವು ಕಾಣಿಸಿಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಕೋಷ್ಟಕ ೫.೧೦ ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ನಿಮ್ಮ ಜೀವನ ನಿರ್ವಹಣೆ

ಕ್ರ.ಸಂ.	ಜೀವನ ನಿರ್ವಹಣಾ ರೀತಿ	ಸಂಖ್ಯೆ	ಶೇಕಡಾ
೧.	ಪಡಿತರ ವ್ಯವಸ್ಥೆ	೪೫೭	೯೧.೪
೨.	ನಿರುದ್ಯೋಗಿ	೧೨	೨.೪
೩.	ಹೊಲದ ಕೆಲಸ	೦೩	೦.೬
೪.	ಮನೆಗೆಲಸ	೦೬	೧.೨
೫.	ಕೂಲಿ	೧೧	೨.೨
೬.	ಕಷ್ಟದ ಪರಿಸ್ಥಿತಿ	೧೧	೨.೨
ಒಟ್ಟು		**೫೦೦**	**೧೦೦**

ಮೇಲಿನ ಕೋಷ್ಟಕವು ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ಇಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರ ಜೀವನ ನಿರ್ವಹಣೆಯ ಸ್ಥಿತಿಯನ್ನು ವಿವರಿಸುತ್ತದೆ. ಸಂದರ್ಶನಕ್ಕೊಳಪಟ್ಟವರು ಎಲ್ಲರೂ ಹೇಳಿದ ಒಂದೇ ಮಾತು ಏನೆಂದರೆ ಲಾಕ್‌ಡೌನ್ ಸಂದರ್ಭದಲ್ಲಿ ನಮ್ಮ ಜೀವನವು ಅತೀ ಕಷ್ಟಕರವಾಗಿತ್ತು. ಸಂದರ್ಶನಕ್ಕೊಳಪಟ್ಟವರಲ್ಲಿ ಶೇ.೯೧.೪ರಷ್ಟು ಮಂದಿ ಪಡಿತರ ವ್ಯವಸ್ಥೆಯನ್ನೇ ಅವಲಂಬಿಸಿದ್ದು, ಉಳಿದಂತೆ ಹೊಲದ ಕೆಲಸ, ಮನೆಕೆಲಸ, ಕೂಲಿಕೆಲಸವನ್ನು ಮಾಡುವುದರ ಮೂಲಕ ಜೀವನವನ್ನು ನಡೆಸಿದ್ದೇವೆ ಎಂದು ಹೇಳಿರುವುದು ಲಾಕ್‌ಡೌನ್ ಸಂದರ್ಭದಲ್ಲಿ ಎಲ್ಲಾ ಕಾರ್ಮಿಕರು ಕಷ್ಟದ ಪರಿಸ್ಥಿತಿಯನ್ನು ಎದುರಿಸಿರುವುದು ತೋರಿಸುತ್ತದೆ.

ಕೋಷ್ಟಕ ೫.೧೧ ಲಾಕ್‌ಡೌನ್ ಸಂದರ್ಭದಲ್ಲಿ ನಿಮ್ಮನ್ನು ದುಡಿಸಿಕೊಳ್ಳುತ್ತಿದ್ದ ವಿಧಾನ

ಕ್ರಸಂ.		ಸಂಖ್ಯೆ	ಶೇಕಡಾ
೧.	ಮನೆಯಿಂದಲೇ	೨೭೦	೫೪
೨.	ಕೆಲಸವಿರಲಿಲ್ಲ	೨೩೦	೪೬
ಒಟ್ಟು		೫೦೦	೧೦೦

ಮೂಲ : ಕ್ಷೇತ್ರ ಕಾರ್ಯ.

ಮೇಲ್ಕಂಡ ಕೋಷ್ಟಕವು ಕೊರೊನಾ ಲಾಕ್‌ಡೌನ್‌ನ ದೀರ್ಘ ಸಮಯದಲ್ಲಿ ಇಲ್ಲಿ ದುಡಿಯುವ ಕಾರ್ಮಿಕರನ್ನು ಯಾವ ರೀತಿಯಾಗಿ ದುಡಿಸಿಕೊಳ್ಳಲಾಗುತ್ತಿತ್ತು ಎಂಬ ಪ್ರಶ್ನೆಗೆ ಶೇ.೫೪ರಷ್ಟು ಮಂದಿ ಲಾಕ್‌ಡೌನ್ ಸಡಿಲಿಕೆಯ ಪ್ರಾರಂಭದಲ್ಲಿ ನಮಗೆ ಮನೆಗೆ ಮೆಣಸಿನಕಾಯಿಯನ್ನು ಕೊಟ್ಟು ಕಳುಹಿಸುತ್ತಿದ್ದರು ಎಂದು ಹೇಳಿದ್ದು, ಇನ್ನುಳಿದ ಶೇ.೪೬ರಷ್ಟು ಮಂದಿ ತಮಗೆ ಕೆಲಸವೇ ಇಲ್ಲದೇ ಮನೆಯಲ್ಲೇ ಕುಳಿತುಕೊಳ್ಳುವಂತಾಗಿತ್ತು ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈ ರೀತಿಯಾಗಿ ಪ್ರಸ್ತುತ ಅಧ್ಯಯನದಲ್ಲಿ ದತ್ತಾಂಶಗಳ ವಿಶ್ಲೇಷಣೆಯ ಆಧಾರದ ಮೇಲೆ ಮಹಿಳಾ ಕಾರ್ಮಿಕರು ಆರೋಗ್ಯ ಸ್ಥಿತಿಗತಿಯ ಬಗ್ಗೆ ತಿಳಿದುಕೊಂಡು ಅವುಗಳನ್ನು ಈ ಅಧ್ಯಾಯದಲ್ಲಿ ಮೇಲಿನಂತೆ ವಿವರಿಸಿದ್ದನ್ನು ನೋಡಬಹುದಾಗಿದೆ.

೫.೩ ಪ್ರಾಥಮಿಕ ಆರೋಗ್ಯ ಕೇಂದ್ರ ಬ್ಯಾಡಗಿಯಲ್ಲಿ ದೊರೆಯುವ ಸೌಲಭ್ಯಗಳು

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಗ್ರಾಮೀಣ ಭಾಗದ ಜನರ ಸಾಮಾನ್ಯ ರೋಗಗಳ ತಪಾಸಣೆ ಮತ್ತು ಶುಶ್ರೂಷೆ ಹಾಗೂ ಗರ್ಭಿಣಿ, ಭಾಣಂತಿ ಮತ್ತು ಮಗುವಿನ ಆರೈಕೆಗೆ ಹೆಚ್ಚು ಮಹತ್ವವನ್ನು ನೀಡುವ ಕೇಂದ್ರಗಳಾಗಿವೆ. ಹೆಚ್ಚು ಪ್ರಸೂತಿಗಳು ಇಲ್ಲಿ ನೆರವೇರುತ್ತವೆ. ಅಂದರೆ ಗ್ರಾಮೀಣ ಜನರ ಸರ್ವರೋಗೋಪಚಾರಕ ಮತ್ತು ರೋಗ ನಿವಾರಕ ಕೇಂದ್ರಗಳಾಗಿವೆ. ಉಪಕೇಂದ್ರಗಳಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳ ಜೊತೆಗೆ ಈ ಕೆಳಕಂಡ ಸೇವೆಗಳು ಇಲ್ಲಿ ಲಭ್ಯವಿರುತ್ತವೆ.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದೊರೆಯುವ ಸೇವಾ ಸೌಲಭ್ಯಗಳು:

೧. ಹೊರರೋಗಿಗಳ ಸೇವೆ ಮತ್ತು ಒಳರೋಗಿಗಳ ಸೇವೆ, ದಿನದ ೨೪ ಘಂಟೆಗಳ ತುರ್ತುಸೇವೆ.

೨. ಉಪಕೇಂದ್ರಗಳಲ್ಲಿ ಒದಗಿಸಲಾಗುವ ಎಲ್ಲಾ ಸೇವೆಗಳು.

೩. ಜನನಿ ಸುರಕ್ಷಾ ಯೋಜನೆಯಡಿ ಸೇವೆಗಳು.

೪. ಕುಟುಂಬ ಯೋಜನಾ ಸೇವೆಗಳು.

೫. ಜನನಾಂಗ ಸೋಂಕುಗಳ ಚಿಕಿತ್ಸೆ.

೧. **ಹೊರರೋಗಿಗಳ ಸೇವೆ ಮತ್ತು ಒಳರೋಗಿಗಳ ಸೇವೆ, ದಿನದ ೨೪ ಘಂಟೆಗಳ ತುರ್ತುಸೇವೆ:** ಸಾಮಾನ್ಯ ರೋಗಗಳ ಚಿಕಿತ್ಸೆಗಾಗಿ ಬಂದ ರೋಗಿಗಳನ್ನು ಮೊದಲು ದಾಖಲಾತಿ ಪುಸ್ತಿಕೆಯಲ್ಲಿ ದಾಖಲಿಸಿಕೊಂಡು ಅಗತ್ಯ ಶುಶ್ರೂಷೆ ನೀಡಿ ಮನೆಗೆ ಕಳುಹಿಸಿಕೊಡುವುದನ್ನು ಹೊರರೋಗಿಗಳ ಸೇವೆಯೆಂದು ಕರೆಯುತ್ತಾರೆ. ಈ ರೋಗಿಗಳಿಗೆ ಹೆಚ್ಚು ವೈದ್ಯೋಪಚಾರ ಇಲ್ಲವೇ ವೈದ್ಯಕೀಯ ಅಬ್ಸರ್ವೇಷನ್ ಅಗತ್ಯವಿರುವುದಿಲ್ಲ.

ಕೆಲವು ಸಂದರ್ಭದಲ್ಲಿ ರೋಗಿ ಹೆಚ್ಚು ನಿತ್ರಾಣಗೊಂಡು ಡಿಹೈಡ್ರೇಶನ್ ಅಥವಾ ವಿಷಪ್ರಾಶನ ಮಾಡಿದಾಗ, ಇಲ್ಲವೇ ಹೆರಿಗೆ ಸಂದರ್ಭದಲ್ಲಿ ಸಿಸೇರಿಯನ್‌ನಂತಹ ಹಲವು ಸಂದರ್ಭಗಳಲ್ಲಿ ರೋಗಿಯನ್ನು ಆಸ್ಪತ್ರೆಯಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ. ಔಷಧಿ ನೀಡಿ ಆಬ್ಸರ್ವೇಷನ್ ಮಾಡಬೇಕಾಗುತ್ತದೆ. ಅದೇ ರೀತಿ ಶಸ್ತ್ರಚಿಕಿತ್ಸೆ ಮಾಡಿದಾಗ ರೋಗಿಯನ್ನು ಆಸ್ಪತ್ರೆಗಳಲ್ಲಿ ಇರಿಸಿಕೊಂಡು ಉಪಚರಿಸುವ ಕ್ರಿಯೆಗೆ ಒಳರೋಗಿ ಸೇವೆಯೆಂದು ಕರೆಯುತ್ತಾರೆ.

೨೦೦೯ ರ ಡಿಸೆಂಬರ್ ತಿಂಗಳಲ್ಲಿ ರಾಜ್ಯದ ಆಯ್ದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ದಿನದ ೨೪ ಗಂಟೆಗಳೂ ಸೇವೆ ನೀಡಬೇಕೆಂದು ಸರಕಾರ ಆದೇಶ ನೀಡಿ ಅದಕ್ಕೆ ಬೇಕಾದ ಮಾನವ ಸವಲತ್ತು ಮತ್ತು ಅಗತ್ಯ ಸವಲತ್ತು ನೀಡುತ್ತಿರುವುದಾಗಿ ತಿಳಿಸಿದೆ. ಇದರಿಂದ ಗ್ರಾಮೀಣ ಪ್ರದೇಶದ ರೋಗಿಗಳಿಗೆ ವೈದ್ಯರಿಲ್ಲದಿದ್ದರೂ ಆರೋಗ್ಯ ಸಹಾಯಕರು ಸಿಗುವ ಖಾತರಿಯಾದಂತಾಗಿದೆ.

೨. **ಉಪಕೇಂದ್ರಗಳಲ್ಲಿ ಒದಗಿಸಲಾಗುವ ಎಲ್ಲಾ ಸೇವೆಗಳು:** ಉಪಕೇಂದ್ರಗಳಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳು ಎಲ್ಲಾ ಸಮಯದಲ್ಲಿಯೂ ಲಭ್ಯವಿರುತ್ತವೆ. ಇವುಗಳ ಪೂರ್ಣ ಮಾಹಿತಿಯನ್ನು ಈ ಹಿಂದಿನ ಪುಟಗಳಲ್ಲಿ ನೀಡಲಾಗಿದೆ.

೩. **ಜನನಿ ಸುರಕ್ಷಾ ಯೋಜನೆಯಡಿ ಸೇವೆಗಳು:** ಜನನಿ ಸುರಕ್ಷಾ ಯೋಜನೆಯಡಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿ, ೨೦೦೫ ನೇ ಸಾಲಿನಲ್ಲಿ ಆರಂಭವಾಗಿದೆ. ರಾಜ್ಯದಲ್ಲಿ ತಾಯಂದಿರ ಮರಣ ಮತ್ತು ಶಿಶು ಮರಣ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸುವುದು ಮತ್ತು ಕಡು ಬಡವರ್ಗಕ್ಕೆ ಸೇರಿದ ಗರ್ಭಿಣಿಯರು ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಕೊಳ್ಳುವಂತೆ ಪ್ರೋತ್ಸಾಯಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಇಂದು ಆರೋಗ್ಯ ಸೇವೆಗಳ ವೆಚ್ಚಗಳು ಅಧಿಕವಾಗಿರುವುದರಿಂದ ಅದನ್ನು ಭರಿಸುವಲ್ಲಿ ಯೋಜನೆಯನ್ನು ಜಾರಿಗೆ ತಂದಿದೆ. ೨೦೦೫ ಎಪ್ರೀಲ್ ೧ ರ ನಂತರ ಹೆರಿಗೆಯಾದ ಮಹಿಳೆಯರಿಗೆ ಈ ಯೋಜನೆ ಅಡಿಯಲ್ಲಿ (ಬಿ.ಪಿ.ಎಲ್. ವರ್ಗಕ್ಕೆ ಸೇರಿದ) ಹೆರಿಗೆ ಮನೆಯಲ್ಲಿ ಮಾಡಿಸಿಕೊಂಡರೆ ರೂ.೫೦೦/-

ಸಹಾಯಧನ ನೀಡಲಗುವುದು. ಇಲ್ಲವೇ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸಿಕೊಂಡ ಮಹಿಳೆಯರಿಗೆ ರೂ.೭೦೦/- ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ ಆರೋಗ್ಯ ವಿಷಯದಲ್ಲಿ ರಾಜ್ಯದ ಹಿಂದುಳಿದ ಜಿಲ್ಲೆಗಳಾದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚಿನ ಮಟ್ಟದ ಆಸ್ಪತ್ರೆ ಮತ್ತು ವೈದ್ಯಕೀಯ ಸೇವೆ, ಗರ್ಭಿಣಿಯರಿಗೆ ಅಗತ್ಯವಿದ್ದಲ್ಲಿ ಸಾರಿಗೆ ಭತ್ಯೆಗೆಂದು ರೂ.೨೦೦/- ನೀಡಲಾಗುತ್ತದೆ. ಹಾಗೆಯೇ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಗಂಡಾಂತರ ಹೆರಿಗೆ (ಸಿಜೇರಿಯನ್ ಹೆರಿಗೆ) ಮಾಡಿಸಲು ಸರ್ಕಾರಿ ವೈದ್ಯರ ಸೇವೆ ಲಭ್ಯವಿಲ್ಲದಿದ್ದಲ್ಲಿ, ಖಾಸಗಿ ವೈದ್ಯರ ಸೇವೆಯನ್ನು ಪಡೆದುಕೊಂಡ ಗರ್ಭಿಣಿ ಮಹಿಳೆಯರಿಗೆ ರೂ.೧೫೦೦/- ನೀಡುವ ವ್ಯವಸ್ಥೆಯಿದೆ. ಉದರದರ್ಶಕ ಅಥವಾ ಟ್ಯುಬೆಕ್ಟಮಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಅವರಿಗೆ ರೂ.೧೭೫/- ಸಹಾಯ ಧನ ನೀಡಲಾಗುವುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಾರದ ಏಳು ದಿನಗಳಲ್ಲಿ ೨೪ ಗಂಟೆಗಳ ಕಾಲ ಸೇವಾ ಸೌಲಭ್ಯ ಒದಗಿಸಲು ಸಿಬ್ಬಂದಿ ವರ್ಗದ ಸೇವೆ ಲಭ್ಯವಿರುತ್ತದೆ. ಗರ್ಭಿಣಿಯರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ಮಟ್ಟದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಅಗತ್ಯ ಅಥವಾ ಅನಿವಾರ್ಯತೆಯಿದ್ದರೆ, ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯ ಮೂಲಕ ವಾಹನ ವೆಚ್ಚಕ್ಕಾಗಿ ರೂ.೨೦೦/- ಧನಸಹಾಯ ನೀಡಲಾಗುತ್ತದೆ.

೪. ಕುಟುಂಬ ಯೋಜನಾ ಸೇವೆಗಳು : ಕುಟುಂಬ ಯೋಜನೆಯನ್ನು ಪ್ರಪಂಚದಲ್ಲಿ ಅಧಿಕೃತ ಸರಕಾರದ ಕಾರ್ಯಕ್ರಮವಾಗಿ ಜಾರಿಗೊಳಿಸಿದ ಪ್ರಥಮ ರಾಷ್ಟ್ರವೆಂಬ ಕೀರ್ತಿ ಭಾರತಕ್ಕೆ ಸಂದಿದೆ. ಈ ಕಾರ್ಯಕ್ರಮದ ಪ್ರಮುಖ ಗುರಿ ಜನನ ಪ್ರಮಾಣವನ್ನು ತಗ್ಗಿಸುವುದು. ಕುಟುಂಬ ಯೋಜನೆಯನ್ನು ೧೯೭೭ ರಲ್ಲಿ 'ಕುಟುಂಬ ಕಲ್ಯಾಣ' ವೆಂದು ಪರಿವರ್ತಿಸಲಾಯಿತು. ರಾಷ್ಟ್ರೀಯ ನೀತಿ ಹಾಗೂ ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಪ್ರಭುತ್ವದ ಎಲ್ಲ ಅಭಿವೃದ್ಧಿಪರ ಇಲಾಖೆಗಳೊಂದಿಗೆ, ಅದರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ ಭಾರತೀಯ ಕುಟುಂಬ ಯೋಜನಾ ಸಂಘವು ಸಹಕರಿಸುತ್ತಿದೆ. ರಾಷ್ಟ್ರೀಯ ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುವ ಇತರ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟವನ್ನು ರಚಿಸಿ ತಮ್ಮ ಕಾರ್ಯ ಚಟುವಟಿಕೆಗಳಲ್ಲಿ ಕುಟುಂಬ ಯೋಜನಾ ಅಂಶಗಳನ್ನು ಅಳವಡಿಸಿಕೊಂಡು ಅದಕ್ಕಾಗಿ ಶ್ರಮಿಸಲು ಸದರಿ ಸಂಸ್ಥೆ ಎಲ್ಲ ರೀತಿಯಿಂದಲೂ ಉತ್ತೇಜಿಸುತ್ತಿದೆ. ರಾಷ್ಟ್ರಮಟ್ಟದಲ್ಲಿ ಸ್ವಯಂ-ಸೇವಾ ಸಂಸ್ಥೆಗಳ ಸಭೆ - ಸಮ್ಮೇಳನಗಳನ್ನು ನಡೆಸಿ ಯೋಗ್ಯ ಮಾರ್ಗದರ್ಶನ ನೀಡುವ ಮಾತೃ ಸಂಸ್ಥೆಯಾಗಿ ಭಾರತೀಯ ಕುಟುಂಬ ಯೋಜನಾ ಸಂಘ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದೆ.

ಕುಟುಂಬ ಕಲ್ಯಾಣ ಯೋಜನೆಯಡಿಯಲ್ಲಿ ಸಂತಾನೋತ್ಪತ್ತಿ ಬಗ್ಗೆ ಸೂಕ್ತ ಮಾಹಿತಿ ಒದಗಿಸಲಾಗುತ್ತಿದೆ. ಮಕ್ಕಳ ಸಂಖ್ಯೆಯನ್ನು ನಿಯಂತ್ರಿಸಿಕೊಳ್ಳಬೇಕಾದರೆ ಮಕ್ಕಳ ನಡುವಣ ಅಂತರವನ್ನು ಹೆಚ್ಚಿಸಿಕೊಳ್ಳಬೇಕಾದರೆ ಅಗತ್ಯವಾದ ಯಾವ ಉಪಾಯಗಳನ್ನು ಪಾಲಿಸಬೇಕೆಂಬ ಅರಿವನ್ನು ಕುಟುಂಬ ಕಲ್ಯಾಣ ಕಾರ್ಯಕ್ರಮ ಮೂಡಿಸುತ್ತದೆ. ದೈಹಿಕ ಸಂಗತಿಗಳು, ಗರ್ಭನಿರೋಧಕಗಳು, ಗರ್ಭವನ್ನು ತಡೆಯುವ ಇನ್ನಿತರ ಸಾಧನಗಳ ಬಳಕೆಯ ಅರಿವು ಮೊದಲಾದವುಗಳ ಬಗ್ಗೆ ಜಾಗೃತಿ ಮೂಡಿಸುವ ಸೇವೆ ಲಭ್ಯವಿದೆ. ಗರ್ಭತಡೆಯಲು ಎರಡು ವಿಧಾನಗಳಿವೆ. ಅವು ೦೧. ತಾತ್ಕಾಲಿಕ ವಿಧಾನಗಳು, ೦೨, ಶಾಶ್ವತ ವಿಧಾನಗಳು.

೧. **ತಾತ್ಕಾಲಿಕ ವಿಧಾನಗಳು** : ಗರ್ಭನಿರೋಧಕರ ಮಾತ್ರೆಗಳು, ಡಯಾಫ್ರಮ್ ಮತ್ತು ಜೆಲ್ಲಿ, ನೊರೆಗುಳಿಗೆಗಳು, ವಂಕಿ (ಕಾಪರ್ –ಟಿ), ಗರ್ಭನಿರೋಧಕ ಚುಚ್ಚುಮದ್ದುಗಳು, ನಿರೋದ್ ಮುಂತಾದ ಸೇವೆಗಳ ಮಾಹಿತಿ ಲಭ್ಯವಿದೆ.

೨. **ಗರ್ಭನಿರೋಧಕ ಮಾತ್ರೆಗಳ ಸೌಲಭ್ಯಗಳು:** ಗರ್ಭಧಾರಣೆಯನ್ನು ತಡೆಯಲು ಹಾಗೂ ಹೆರಿಗೆಗಳ ನಡುವೆ ಅಂತರ ಪಾಲಿಸಲು ಬಳಸುವ ಗರ್ಭನಿರೋಧಕ ವಿಧಾನಗಳಲ್ಲಿ ನುಂಗವ ಗುಳಿಗೆಗಳನ್ನು ಸಹ ಬಳಸಲಾಗುತ್ತದೆ. ಈ ಗುಳಿಗೆಯನ್ನು ತೆಗೆದುಕೊಳ್ಳುವುದಕ್ಕೆ ಯಾವಾಗ ಪ್ರಾರಂಭಿಸಬೇಕು? ಗುಳಿಗೆ ನುಂಗುವುದನ್ನು ಮರೆತರೆ ಏನು ಮಾಡಬೇಕು ಗುಳಿಗೆ ನುಂಗುವುದರಿಂದ ಏನಾದರೂ ಅಡ್ಡಪರಿಣಾಮಗಳಿವೆಯೇ? ಮತ್ತು ಈ ಗುಳಿಗೆಗಳು ಎಲ್ಲಿ ಸಿಗುತ್ತವೆ ಹೇಗೆ ಸೇವಿಸಬೇಕು ಎನ್ನುವ ಮಾಹಿತಿ ದೊರೆಯುತ್ತದೆ.

೫.೪. 'ಡಯಾಪ್ರಮ್' ಮತ್ತು 'ಜೆಲ್ಲಿ'ಗಳ ಸೌಲಭ್ಯ

ಡಯಾಫ್ರಮ್ ಎಂದರೆ ರಬ್ಬರ್ ಚೀಲ, ಅದು ಸ್ತ್ರೀಯರು ಬಳಸುವಂತಹ ಒಂದು ಸಾಧನ. ಸಂಭೋಗಕ್ಕೆ ಮುನ್ನ ಮಹಿಳೆ ಡಯಾಫ್ರಮ್‌ನ್ನು ಯೋನಿಯಲ್ಲಿ ಅಳವಡಿಸಿಕೊಳ್ಳುವ ಒಂದು ವಿಧಾನ. ಜೆಲ್ಲಿ ಕೂಡ ಮಹಿಳೆಯರಿಗಾಗಿ ಮೀಸಲಾದ ಗರ್ಭನಿರೋಧಕರ. ಪೇಸ್ಟಿನಂತಿರುವ ಜೆಲ್ಲಿಯನ್ನು ಸಂಭೋಗಕ್ಕೆ ಮುನ್ನ ಯೋನಿಯಲ್ಲಿ ಲೇಪಿಸಿಕೊಳ್ಳುವ ವಿಧಾನವಾಗಿರುತ್ತದೆ. ಕುಟುಂಬ ಕಲ್ಯಾಣ ಯೋಜನೆಯಲ್ಲಿ ಈ ವಿಧಾನ ಅನುಷ್ಠಾನದಲ್ಲಿದ್ದರೂ ಇದನ್ನು ಬಳಸಿಕೊಳ್ಳದಿರುವುದು ವರದಿಯಾಗಿದೆ.

೫.೫ ಗರ್ಭಕೋಶದೊಳಗಿರುವ ಗರ್ಭನಿರೋಧಕ ಸಾಧನಗಳು (ವಂಕಿ)

ಮಹಿಳೆಯರು ಅನುಸರಿಸಬಹುದಾದ ಸುರಕ್ಷಿತ ಹಾಗೂ ತಾತ್ಕಾಲಿಕ ಸಂತಾನ ನಿರೋಧಕ ವಿಧಾನಗಳಲ್ಲಿ ವಂಕಿ ಅಥವಾ ಕಾಪರ್–ಟಿಯೂ ಒಂದು. ಕುಟುಂಬ ಯೋಜನೆಗೆ ವರದಾನದಂತಾಗಿರುವ ತಾತ್ಕಾಲಿಕ ಗರ್ಭನಿರೋಧಕ **'ವಂಕಿ'**ಯು ೧೯೨೯ರಲ್ಲಿ **'ಗ್ರಾಫೆನ್‌ಬರ್ಗ್'**

ಗರ್ಭಕೋಶದೊಳಗಿರುವ ತೆಳು ಬಳ್ಳಿ ತಂತಿಯ ಉಂಗುರ ಗರ್ಭನಿರೋಧಕವಾಗಿ ಕಾರ್ಯಮಾಡಬಲ್ಲದೆಂಬುದನ್ನು ತೋರಿಸಿದ." ಅನಂತರ ಅಮೇರಿಕಾ, ಇಂಗ್ಲೆಂಡ್, ಇಂಡೋನೇಶಿಯಾ ಮತ್ತು ಜಪಾನ್‌ಗಳಲ್ಲಿನ ವೈದ್ಯರು ವಂಕಿಯಂತಹ ಈ ಸಾಧನವನ್ನು ಗರ್ಭಕೋಶದೊಳಗಿರಿಸಿದಾಗ ಅದು ಪರಿಣಾಮಕಾರಿಯಾಗಿ ಗರ್ಭನಿರೋಧವನ್ನು ಸಾಧಿಸಬಲ್ಲದು ಎಂಬುದನ್ನು ತಮ್ಮ ಅಧ್ಯಯನಗಳಿಂದ ಗುರುತಿಸಿದರು. ೧೯೬೦ ನಂತರ ವೈದ್ಯರು ವಂಕಿ ಬಳಕೆಯ ಬಗ್ಗೆ ತುಂಬಾ ಆಸಕ್ತರಾಗಿ ಅದರ ವ್ಯಾಪಕ ಬಳಕೆಗೆ ಬರುವಂತೆ ಮಾಡಿದರು. ೧೯೬೫ ರ ಹೊತ್ತಿಗೆ ಇದು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿ, ಸಂತಾನ ನಿಯಂತ್ರಣದ ಸಾಧನವಾಗಿ ನಿಧಾನವಾಗಿ ಹೆಚ್ಚುತ್ತಿದೆ. ೧೯೭೦ ರ ಕೊನೆಯ ಹೊತ್ತಿಗೆ ವಂಕಿ ಅಳವಡಿಸುವ ಕಾರ್ಯಕ್ರಮವನ್ನು **'ಕಾಪರ್-ಟಿ'** ಎನ್ನುವ ಹೊಸ ವಿಧಾನವನ್ನು ಪರಿಚಯಿಸಿದರು. ತಾಮ್ರ ಲೋಹದಲ್ಲಿ ಫಲವತ್ತತೆ ವಿಫಲಗೊಳಿಸುವ ಗುಣ ಹೆಚ್ಚಿರುವುದು ತಿಳಿದು ಅಧಿಕೃತವಾಗಿ ಜಾರಿಗೆ ತರಲಾಯಿತು.

ಪುರುಷರ ನಿರೋಧ

ಮಗುವನ್ನು ನಿಧಾನವಾಗಿ ಪಡೆಯಲು ಅಪೇಕ್ಷಿಸಿದರೆ ಅಥವಾ ಎರಡು ಮಕ್ಕಳ ನಡುವೆ ಸೂಕ್ತ ಅಂತರ ಕಾಪಾಡಲು ಪುರುಷರು ತಾತ್ಕಾಲಿಕ ವಿಧಾನವಾಗಿ ನಿರೋಧ್ ಬಳಸಬಹುದಾಗಿದೆ. ಇದರಿಂದ ಪದೇ ಪದೇ ಗರ್ಭಧಾರಣೆಯಿಂದ ತಾಯಿ ಮತ್ತು ಮಗುವಿನ ಆರೋಗ್ಯ ಕೆಡುವುದನ್ನು ತಪ್ಪಿಸುವುದಕ್ಕೆ ಇದೊಂದು ಉತ್ತಮ ವಿಧಾನವಾಗಿದೆ. ನಿರೋಧ್ ಬಳಸುವುದರಿಂದ ಏಡ್ಸ್‌ನಂತಹ ಮಾರಕ ಲೈಂಗಿಕ ರೋಗಗಳನ್ನು ತಡೆಗಟ್ಟಬಹುದೆನ್ನುವ ಬಗ್ಗೆ ಅರಿವು ಮೂಡಿಸುವ ಸೇವೆಯಿದೆ. ಅಲ್ಲದೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಆರೋಗ್ಯ ಸಹಾಯಕಿಯರಲ್ಲಿ, ಅಂಗನವಾಡಿಗಳಲ್ಲಿ ನಿರೋಧ್‌ಗಳು ಉಚಿತವಾಗಿ ಸಿಗುತ್ತವೆ.

ಮಹಿಳೆಯರ ನಿರೋಧ (ಕಾಂಡೂಮ್)

ಮಹಿಳೆಯರ ನಿರೋಧ್ ಕಾಂಡೋಮ್‌ನ್ನು ಇತ್ತೀಚೆಗೆ ಕಂಡುಹಿಡಿಯಲಾಗಿದೆ. ಇದನ್ನು ಪುರುಷರ ಶಿಶ್ನ ಚೀಲದಂತೆಯೇ ಸುಲಭವಾಗಿ ಸ್ತ್ರೀಯ ಯೋನಿಯ ಹಜಾರದಲ್ಲಿ ಅಳವಡಿಸಿ ಬಳಸಬಹುದಾಗಿದೆ. ಇದನ್ನು ಮಹಿಳೆಯೇ ಸ್ವಂತವಾಗಿ ತನಗೆ ಬೇಕೆನಿಸಿದಾಗ ಈ ನಿರೋಧ್ ಉಪಯೋಗಿಸಬಹುದು. ಗರ್ಭಧಾರಣೆ ಹಾಗೂ ಲೈಂಗಿಕ ಕಾಯಿಲೆಗಳನ್ನು ತಡೆಯುವ ಶಕ್ತಿಯಿರುವುದರಿಂದ ಗರ್ಭಧಾರಣೆ ಹಾಗೂ ಲೈಂಗಿಕ ಕಾಯಿಲೆಗಳಿಂದ ಮುಕ್ತರಾಗಿರಲು ಇದನ್ನು ಬಳಸಬಹುದು. ಯಾವ ಮಹಿಳೆಯಾದರೂ, ಯಾವ ಕಾಯಿಲೆ ಇದ್ದರೂ ಇದನ್ನು ಉಪಯೋಗಿಸಬಹುದು.

೫.೬ ಸಂತಾನಹರಣದ ಶಾಶ್ವತ ವಿಧಾನಗಳ ಸೌಲಭ್ಯ

ಒಂದು ಅಥವಾ ಎರಡು ಮಕ್ಕಳನ್ನು ಪಡೆದ ನಂತರ ಇನ್ನು ಮಕ್ಕಳು ಬೇಡವೆಂದು ದಂಪತಿಗಳು ನಿರ್ಧರಿಸಿದಾಗ ಸಂತಾನಹರಣದ ಶಾಶ್ವತ ವಿಧಾನಗಳನ್ನು ಅನುಸರಿಸಬಹುದು ಹಾಗೆ ಅನುಸರಿಸುವ ವಿಧಾನಗಳಲ್ಲಿ ಮಹಿಳೆಯರಾದರೆ ಟ್ಯುಬೆಕ್ಟಮಿ ಶಸ್ತ್ರಚಿಕಿತ್ಸೆ ವಿಧಾನವನ್ನು, ಪುರುಷರಾದರೆ ವ್ಯಾಸೆಕ್ಟಮಿ ಶಸ್ತ್ರಚಿಕಿತ್ಸೆ ವಿಧಾನ ಸೇವೆಯು ಲಭ್ಯ.

೫.ಜನನಾಂಗ ಸೋಂಕುಗಳ ಚಿಕಿತ್ಸೆ ಜನನಾಂಗದಲ್ಲಿ ನಾನಾ ಕಾರಣಗಳಿಂದಾಗಿ ರೋಗಗಳು ಕಾಣಿಸಿಕೊಳ್ಳುತ್ತವೆ. ಅವುಗಳಲ್ಲಿ ಸೋಂಕುರೋಗವಾಗಿ ಹೆಚ್ಚು ಕಂಡುಬರುವುದು ಎಚ್.ಐ.ವಿ/ ಏಡ್ಸ್ ರೋಗ. ಈ ರೋಗ ಮಾರಣಾಂತಿಕ ರೋಗವಾಗಿದೆ. ದೇಹದಲ್ಲಿ ರೋಗದ ವೈರಸ್ ಅನೇಕ ತಿಂಗಳುಗಳ ಕಾಲ ಸುಮ್ಮನೆ ಇದ್ದು ಆ ನಂತರ ನಿಧಾನವಾಗಿ ರೋಗಲಕ್ಷಣಗಳನ್ನು ಪ್ರಕಟಪಡಿಸುತ್ತದೆ. ಈ ಸೋಂಕು ಹೊಂದಿದ ಅನೇಕರು ಯಾವ ಲಕ್ಷಣಗಳನ್ನು ತೋರ್ಪಡಿಸದೆ ರೋಗವಾಹಕರಾಗಿ ಅದರ ಹರಡುವಿಕೆಗೆ ಕಾರಣವಾಗುತ್ತಾರೆ. ೧೯೮೬ರಲ್ಲಿ ಭಾರತದಲ್ಲಿ ಮೊಟ್ಟಮೊದಲು ಮದ್ರಾಸ್‌ನ ವಿ.ಎಮ್.ಸಿ. ಕಾಲೇಜಿನಲ್ಲಿ ಕಂಡುಬಂದಿರುತ್ತದೆ. ನಂತರ ೧೯೮೭ ರಲ್ಲಿ ಕರ್ನಾಟಕದಲ್ಲಿ ಮೊದಲ **'ಎಚ್.ಐ.ವಿ'** ಪ್ರಕರಣ ಬೆಳಗಾವಿ ಜಿಲ್ಲೆಯಲ್ಲಿ ವರದಿಯಾಗಿರುತ್ತದೆ. ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರು ಹಾಗೂ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಗೂ ಬಹಳ ಸುಲಭವಾಗಿ ಹೆಚ್.ಐ.ವಿ/ಏಡ್ಸ್‌ಗೆ ತುತ್ತಾಗುತ್ತಿದ್ದಾರೆ ಎಂಬುದು ಅಂಕಿ-ಅಂಶಗಳಿಂದ ತಿಳಿದುಬರುತ್ತದೆ.

೫.೭ ಹೆಚ್.ಐ.ವಿ/ಏಡ್ಸ್ ಕುರಿತ ಸೇವೆಗಳು

ಕರ್ನಾಟಕದಲ್ಲಿ ಹೆಚ್.ಐ.ವಿ. ಸೋಂಕು ತಗಲಿರುವವರ ಸಂಖ್ಯೆ ಸುಮಾರು ೫ ಲಕ್ಷ ಎಂದು ಅಂದಾಜು ಮಾಡಲಾಗಿದೆ. (ಕ.ಮಾ.ಅ.ವರದಿ-೨೦೦೫) ಅವರಲ್ಲಿ ರೋಗ ನಿರೋಧಕ ಶಕ್ತಿ ನೀಡುವ ಕಣ ಕೋಶಗಳಾದ ಸಿಡಿ ೪ ಕೋಶಗಳು ೨೦೦ಕ್ಕಿಂತ ಕಡಿಮೆ ಆಗದಂತೆ ಹಾಗೂ ೨೦೦ಕ್ಕಿಂತ ಕಡಿಮೆ ಆದವರಲ್ಲಿ ಆ ಸಂಖ್ಯೆ ಹೆಚ್ಚುವುದಕ್ಕೆ ಹಾಗೂ ಸೋಂಕಿತರು ಇತರ ಸಮಯ ಸಾಧಕ ಸೋಂಕುಗಳಿಗೆ ತುತ್ತಾಗದಂತೆ ಅವರ ದೈಹಿಕ ಸ್ಥಿತಿ ಕಾಪಾಡಿಕೊಳ್ಳುವುದಕ್ಕೆ ಸಾದ್ಯವಾಗುವಂತೆ ಔಷದ ನೀಡಿಕೆ, ಮಾನಸಿಕ ಸಿದ್ಧತೆಗೆ ಅವರನ್ನು ಸಜ್ಜುಗೊಳಿಸುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಇವು, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ (ನ್ಯಾಕೊ) ಮತ್ತು ಅದರ ರಾಜ್ಯಶಾಖೆಗಳಾದ ಏಡ್ಸ್ ಪ್ರಿವೆನ್‌ಷನ್ ಸೊಸೈಟಿಗಳು ಹತ್ತು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಿ ಯಶಸ್ಸಿಗೆ ಶ್ರಮಿಸುತ್ತಿವೆ.

ಹೆಚ್.ಐ.ವಿ. ಸೋಂಕು ಇರುವವರ ಸಂಖ್ಯೆಯು ನಿಧಾನಗತಿಯಲ್ಲಿ ಏರುತ್ತಿದ್ದಂತೆ ಅರಿವು ಮೂಡಿಸುವ ಕಾರ್ಯಕ್ರಮಗಳ ಜೊತೆಗೆ ರಕ್ತಪರೀಕ್ಷೆ ಸೌಲಭ್ಯ, ಆಪ್ತ ಸಮಾಲೋಚನೆ, ತಾಯಿಯಿಂದ ಮಗುವಿಗೆ ಸೋಂಕು ಹರಡದಂತೆ ತಡೆಯಲು ಕ್ರಮ ವೈದ್ಯರಿಗೆ ತರಬೇತಿ, ಸಮಾಲೋಚಕರಿಗೆ ತರಬೇತಿ, ಶುಶ್ರೂಷಕಿಯರಿಗೆ ತರಬೇತಿ ಹಾಗೂ ಹೆಚ್.ಐ.ವಿ. ಸೋಂಕಿನ ನಿವಾರಣೆ, ಆರೈಕೆ ಹೀಗೆ ಸೋಂಕು ಪೀಡಿತರ ವಿವಿಧ ಹಂತಗಳ ಸಮಸ್ಯೆಗಳಿಗೆ ಸ್ಪಂದಿಸಲು ಸರ್ಕಾರ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿದೆ. ಇದೆಲ್ಲದರ ಜೊತೆಗೆ ಹೆಚ್.ಐ.ವಿ/ ಏಡ್ಸ್ ಇದರ ಬಗ್ಗೆ ಪ್ರಾರಂಭಿಕ ಹಂತದಲ್ಲಿ ಹುಟ್ಟು ಹಾಕಿರುವಂತ ತಪ್ಪು ಕಲ್ಪನೆಗಳನ್ನು ತೊಡೆದು ಹಾಕಲು ಕ್ರಮ ಕೈಗೊಂಡಿದೆ. ಜೊತೆಗೆ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆಂದು ಸಮೂಹ ಮಾಧ್ಯಮಗಳನ್ನು ಬಳಸಿಕೊಂಡು ಅದರ ಮೂಲಕ ಹೆಚ್.ಐ.ವಿ. ಸೋಂಕು ಹೇಗೆ ತಗಲುತ್ತದೆ, ರೋಗ ಹರಡುವ ಮಾರ್ಗಗಳಾವುವು? ಸೋಂಕು ಹರಡದಂತೆ ತಡೆಯುವುದು ಹೇಗೆ? ಮೊದಲಾದ ವಿಷಯಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಇಂತಹ ಸಮಸ್ಯೆಗಳನ್ನು ತಡೆಯುವ ನಿಟ್ಟಿನಲ್ಲಿ ಪ್ರತಿಯೊಂದು ಹಳ್ಳಿಯ ಮೂಲೆ ಮುಲೆಗೂ ಹೋಗಿ ಅವರದೇ ಆಡುಮಾತಿನ ಮೂಲಕ ಹೆಚ್.ಐ.ವಿ/ಏಡ್ಸ್ ಬಗ್ಗೆ ಅರಿವು ಮೂಡಿಸಲು ಸರ್ಕಾರವು ಜಾನಪದ ತಂಡಗಳನ್ನು ಬಳಸಿಕೊಳ್ಳುತ್ತಿದೆ. ಹಾಗೆಯೇ ದೂರದರ್ಶನ, ರೇಡಿಯೋಗಳಲ್ಲಿಯೂ ಕೂಡ ಹೆಚ್.ಐ.ವಿ ಕುರಿತು ಚರ್ಚೆ, ಸಂವಾದ, ನಾಟಕಗಳನ್ನು ಪ್ರಸಾರ ಮಾಡುತ್ತಿದೆ. ಅಲ್ಲದೆ ಬಿತ್ತಿ ಚಿತ್ರಗಳು, ಕರಪತ್ರಗಳು, ದೊಡ್ಡ ದೊಡ್ಡ ಜಾಹೀರಾತು ಫಲಕಗಳು, ರ್‍ಯಾಲಿಗಳು, ವಿದ್ಯಾಸಂಸ್ಥೆಗಳಲ್ಲಿ ರಸಪ್ರಶ್ನೆ ಹೀಗೆ ಮುಂತಾದವುಗಳು ಮೂಲಕ ಅರಿವು ಮೂಡಿಸುವ ಕಾರ್ಯಕ್ರಮ ನಿರಂತರವಾಗಿ ನಡೆಯುತ್ತಿವೆ.

೫.೮ ಆರೋಗ್ಯ ರಕ್ಷಾ ಸಮಿತಿ:

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಆಯಾ ಕ್ಷೇತ್ರದ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಉತ್ತರದಾಯಿಗಳಾಗಿರುತ್ತಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ರಕ್ಷಾ ಸಮಿತಿಯನ್ನು ರಚಿಸಲಾಗಿದ್ದು ಈ ರಕ್ಷಾ ಸಮಿತಿ ಆರೋಗ್ಯ ಕೇಂದ್ರದ ದೈನಂದಿನ ನಿರ್ವಹಣೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದಡಿ ಆರೋಗ್ಯ ವಿಭಾಗ ಸುಧಾರಣೆಯನ್ವಯ ಕ್ರಿಯಾತ್ಮಕ, ಆಡಳಿತಾತ್ಮಕ ಮತ್ತು ಆರ್ಥಿಕ ಸಂಪನ್ಮೂಲ ಹಾಗೂ ಸ್ವಾಯತ್ತತೆಯನ್ನು ಹೆಚ್ಚಿಸುವ ಉದ್ದೇಶದಿಂದ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ಥಳೀಯ ಆರೋಗ್ಯ ಕ್ರಿಯೆಗಾಗಿ ರೂ.೨೫,೦೦೦/- ಮುಕ್ತನಿಧಿಯಾಗಿ ಕೊಡಲಾಗುತ್ತಿದೆ. ಅದೇ ರೀತಿ ಪ್ರತಿ ಪ್ರಾಥಮಿಕ

ಆರೋಗ್ಯ ಕೇಂದ್ರದ ಸುಧಾರಣೆ ಮತ್ತು ಮೂಲಭೂತ ಸೌಕರ್ಯಗಳ ನಿರ್ವಹಣೆಗಾಗಿ ತಲಾ ರೂ.೫೦,೦೦೦/- ಕೊಡಲಾಗುತ್ತಿದೆ. ನೀರಿನ ವ್ಯವಸ್ಥೆ, ಶೌಚಾಲಯ, ಅವುಗಳ ಬಳಕೆ ಮತ್ತು ನಿರ್ವಹಣೆ ಆಧ್ಯತೆಯಾಗಿರಬೇಕು. ಇದಲ್ಲದೆ ಪ್ರತಿ ಆರೋಗ್ಯ ಕೇಂದ್ರಕ್ಕೆ ಈಗ ಇರುವ ಒಬ್ಬ ಶುಶ್ರೂಷಕಿಯ ಸ್ಥಾನದಲ್ಲಿ ೩ ಶುಶ್ರೂಷಕಿಯರ ನೇಮಕಾತಿ, ಇಬ್ಬರು ವೈದ್ಯರು, (ಒಬ್ಬ ಪುರುಷ ಮತ್ತು ಒಬ್ಬ ಮಹಿಳೆ) ಹಾಗೂ ಒಬ್ಬ ಆಯುಷ್ ವೈದ್ಯರ ನೇಮಕಾತಿ ಮಾಡಿ ಕೇಂದ್ರವನ್ನು ಬಲಪಡಿಸಲಾಗುವುದಾಗಿ ಹೇಳಲಾಗಿದೆ.

೫.೯ ಕೋವಿಡ್-೧೯ ಕೊರೋನಾ ಸಂಧರ್ಭದಲ್ಲಿ ಆರೋಗ್ಯ ಸ್ಥಿತಿಗತಿ :

ಆರೋಗ್ಯ ಉಪಕೇಂದ್ರಗಳಲ್ಲಿ ದೊರೆಯುವ ಸೇವೆಗಳು ಬಹಳ ಸೀಮಿತವಾಗಿರುತ್ತವೆ. ಆದರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆಚ್ಚಿನ ವೈದ್ಯಕೀಯ ಸೌಲಭ್ಯಗಳು ದೊರೆಯುತ್ತವೆ. ಇದು ಒಂದು ವೈದ್ಯಕೀಯ ವಯವಸ್ಥೆಯನ್ನೊಳಗೊಂಡಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರತಿ ೩೦ ಸಾವಿರ ಜನಸಂಖ್ಯೆಗೆ ಒಂದರಂತೆ ವ್ಯವಸ್ಥೆಗೊಳಿಸಲಾಗಿದೆ. ಸರಕಾರದ ನಿಯಮಗಳ ಪ್ರಕಾರ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಬ್ಬರು ವೈದ್ಯಾಧಿಕಾರಿಗಳು (ವೈದ್ಯಾಧಿಕಾರಿ ೧ ಮತ್ತು ವೈದ್ಯಾಧಿಕಾರಿ ೨) ಐವರು ಸಮಾಜ ಆರೋಗ್ಯದಲ್ಲಿ ತರಬೇತಿ ಹೊಂದಿದ ಶುಶ್ರೂಷಕರು, ನಾಲ್ಕು ಮಂದಿ ಸೂಲಗಿತ್ತಿಯರು, ನಾಲ್ಕು ಮಂದಿ ತರಬೇತಿ ಹೊಂದಿದ ದಾದಿಯರು ಇಬ್ಬರು ನೈರ್ಮಲ್ಯ ನೋಡಿಕೊಳ್ಳುವ ಪರೀಕ್ಷಾರ್ಥಿಗಳು, ಇಬ್ಬರು ಆರೋಗ್ಯ ಸಹಾಯಕರು, ಇಬ್ಬರು ಗುಮಾಸ್ತರು, ಒಬ್ಬ ಮೇಸ್ತ್ರಿ (ಮ್ಯಾನೇಜರ್), ಒಬ್ಬ ಔಷಧ ವ್ಯಾಪಾರಿ ಮತ್ತು ಹದಿನೈದು ಜನ ಕೆಳದರ್ಜೆ ನೌಕರರು ಇರಬೇಕು. (ಕುಟುಂಬ ಕಲ್ಯಾಣ ಕಾರ್ಯಕ್ರಮ, ಸಮುದಾಯದ ಅಗತ್ಯಗಳ ನಿಗದಿ ವಿಧಾನ ಕೈಪಿಡಿ-೧೯೯೮, ಇಂಡಿಯನ್ ಪಬ್ಲಿಕ್ ಹೆಲ್ತ್ ಸ್ಟ್ಯಾಂಡರ್ಡ್ಸ್-೨೦೦೬).

ಪ್ರಸ್ತುತ ಅಧ್ಯಯನವು ಬ್ಯಾಡಗಿ ಕೃಷಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಕುರಿತಂತೆ ಈ ರೀತಿಯಾಗಿ ವಿವರಿಸುತ್ತದೆ. ಇಲ್ಲಿ ದುಡಿಯುವ ಶೇ.೭೮ರಷ್ಟು ಮಹಿಳಾ ಕಾರ್ಮಿಕರು ಕೇವಲ ಆದಾಯದ ದೃಷ್ಟಿಯಿಂದ ಇಲ್ಲಿ ಕೆಲಸ ಮಾಡುತ್ತಿದ್ದು, ಇಲ್ಲಿ ಸಿಗುವ ಕೂಲಿಯಿಂದಲೇ ಅವರ ಜೀವನ ನಡೆಯಬೇಕಾಗಿದೆ. ಆದರೆ ಇವರಿಗೆ ಅನಾರೋಗ್ಯದಂತಹ ಸಮಸ್ಯೆಗಳು ಕಾಡಿದರೆ ಯಾವುದೇ ರೀತಿಯ ಪರಿಹಾರ ಸೌಲಭ್ಯಗಳನ್ನು ನೀಡದಿರುವುದು ಅಧ್ಯಯನದಲ್ಲಿ ಕಂಡುಕೊಂಡ ವಿಷಯವಾಗಿದೆ. ಇವರಿಗೆ ಯಾವುದೇ ರೀತಿಯ ಸಾಮಾಜಿಕ ಅಥವಾ ಆರ್ಥಿಕ ಭದ್ರತೆಯಂತಹ ಸವಲತ್ತುಗಳನ್ನು

ನೀಡಿರುವುದಿಲ್ಲ. ಇವರು ಬೆಳಗ್ಗಿನಿಂದ ಸಂಜೆಯವರೆಗೂ ಎಷ್ಟು ಪ್ರಮಾಣದಲ್ಲಿ ದುಡಿಯುತ್ತಾರೋ ಅಷ್ಟು ಕೂಲಿಯನ್ನು ನೀಡುವುದಷ್ಟೇ ಇವರಿಗೆ ಸಿಗುವ ಆರ್ಥಿಕ ಭದ್ರತೆಯಾಗಿದೆ. ಈ ಕುರಿತಂತೆ ಶೇ.೯೯.೨ರಷ್ಟು ಮಂದಿ ತಮಗೆ ಯಾವುದೇ ಆರ್ಥಿಕ ಸಾಮಾಜಿಕ ಭದ್ರತೆಯನ್ನು ನೀಡಲಾಗುವುದಿಲ್ಲ ಎಂದು ತಿಳಿಸಿರುತ್ತಾರೆ. ಇಲ್ಲಿ ದುಡಿಯುವ ಮಹಿಳಾ ಕಾರ್ಮಿಕರಲ್ಲಿ ಶೇ.೬೪ ಮಂದಿ ದಿನದ ೬ರಿಂದ ೭ ಗಂಟೆವರೆಗೂ ದುಡಿಯುತ್ತಾರೆ. ಉಳಿದಂತೆ ಕೆಲವರು ಆರು ಗಂಟೆಗಳು, ಇನ್ನೂ ಕೆಲವರು ಒಂಬತ್ತು ಗಂಟೆಗಳವರೆಗೂ ದುಡಿಯುತ್ತಾರೆ. ಮುಖ್ಯವಾಗಿ ಇಲ್ಲಿ ದುಡಿಯುವ ಮಹಿಳಾ ವರ್ಗವು ತೀವ್ರ ಬಡತನದಲ್ಲಿದ್ದು, ಕೆಲವೊಮ್ಮೆ ಅತೀವ ಆರ್ಥಿಕ ಮುಗ್ಗಟ್ಟಿನಂಥ ಸಂದರ್ಭಗಳಲ್ಲಿ ಹೆಚ್ಚು ದುಡಿತಕ್ಕೆ ಮೊರೆ ಹೋಗುವುದು ಅನಿವಾರ್ಯವಾಗಿದೆ.

ಮಾನವ ಶ್ರಮವನ್ನೇ ಅತಿಯಾಗಿ ಅವಲಂಬಿಸಿರುವುದರಿಂದ ತಂತ್ರಜ್ಞಾನದ ಬಳಕೆಯು ಅತಿ ಕಡಿಮೆಯಾಗಿದೆ. ಆದರೆ, ಕೆಲವೊಂದು ವಿಧಾನಗಳಲ್ಲಿ ಮೆಣಸಿನಕಾಯಿಯ ಸ್ಟೋರೇಜ್, ಕಸ ವಿಂಗಡಣೆ, ಪಾಲಿಶ್‌ನಂತಹ ಕೆಲಸವನ್ನು ತಂತ್ರಜ್ಞಾನದ ಕೆಲಸದಲ್ಲಿ ಅಥವಾ ಈ ವಿಧಾನದಲ್ಲಿ ಮಾಡುವುದರಿಂದ ತಂತ್ರಜ್ಞಾನದ ಬಳಕೆಯ ಜ್ಞಾನದ ಕೊರತೆಯನ್ನು ನೀಗಿಸಬಹುದು. ಈ ಕೊರತೆಯಿ ಇಲ್ಲಿಯ ಮಹಿಳಾ ಕಾರ್ಮಿಕರನ್ನು ಬಹುವಾಗಿ ಕಾಡುತ್ತಿದೆ. ಆದರೂ ಇಲ್ಲಿನ ಕಾರ್ಮಿಕರು ತಂತ್ರಜ್ಞಾನದ ವಿಧಾನದ ಮೂಲಕ ಮೆಣಸಿನಕಾಯಿ ಉತ್ಪನ್ನಗಳ ತೊಟ್ಟು ಬಿಡಿಸುವುದು, ತೂಬು ತೆಗೆಯುವುದು, ಸ್ಥಿರೀಕರಣಗಳಂತಹ ವಿಧಾನಗಳಲ್ಲಿ ತಂತ್ರಜ್ಞಾನದ ಬಳಕೆಯನ್ನು ಹೆಚು ಬೆಂಬಲಿಸುತ್ತಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ವಿಷಯವಾಗಿದೆ. ಗ್ರಾಮೀಣ ಭಾಗದಲ್ಲಿನ ಹೆಚ್ಚು ಕಾರ್ಮಿಕರು ಇಲ್ಲಿ ದುಡಿಯುತ್ತಿರುವುದರಿಂದ ಸಹಜವಾಗಿಯೇ ಅವರು ನೈರ್ಮಲ್ಯದಂತಹ ವಿಷಯಗಳಿಗೆ ಕಡಿಮೆ ಒತ್ತು ಕೊಟ್ಟಿರುವುದು ಕಂಡುಬಂದಿರುತ್ತದೆ. ಉದಾಹರಣೆಗೆ ಸಂಶೋಧನೆಗೆ ಒಳಪಟ್ಟ ಶೇ.೭೨ರಷ್ಟು ಮಹಿಳೆಯರು ತಮ್ಮ ಮನೆಗಳಲ್ಲಿ ಶೌಚಾಲಯವನ್ನೇ ಹೊಂದಿರದೇ ಇರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದ ಅಂಶವಾಗಿದೆ.

ಇಲ್ಲಿನ ಮಹಿಳಾ ಕಾರ್ಮಿಕರ ಆದಾಯ ಮೂಲದ ಕುರಿತಂತೆ ಚರ್ಚಿಸಿದಾಗ ಶೇ.೮೯.೪ರಷ್ಟು ಮಂದಿಯು ತಮ್ಮ ಜೀವನಾದಾಯವಾಗಿ ಕೂಲಿಯನ್ನೇ ನಂಬಿದ್ದು, ಕೊರೊನಾದಂತಹ ಸಂದರ್ಭದಲ್ಲಿ ಲಾಕ್‌ಡೌನ್‌ನ ನಡುವೆ ಬಹಳ ಕಷ್ಟಕರವಾದ ಜೀವನವನ್ನೇ ನಡೆಸಿರುವುದು ಕಂಡುಬಂದಿರುತ್ತದೆ. ಅಷ್ಟೇ ಅಲ್ಲದೇ ಇಲ್ಲಿ ದುಡಿಯುವ ಕಾರ್ಮಿಕರಲ್ಲಿ ಶೇ.೪.೮ರಷ್ಟು ಮಂದಿ ಸಣ್ಣ ಸಣ್ಣ ಭೂಹಿಡುವಳಿಯನ್ನು ಹೊಂದಿದ್ದು ಅದರಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಲು ಹಣದ ಸಮಸ್ಯೆ ತೊಡಕಾಗಿ ಪರಿಣಮಿಸಿದೆ. ಹಾಗಾಗಿ ಇಲ್ಲಿ ದುಡಿಯುವ ಎಲ್ಲಾ ಕಾರ್ಮಿಕರು

ಒಕ್ಕೊರಲಿನಿಂದ ಕೂಲಿ ಹೆಚ್ಚಳ ಹಾಗೂ ಆರ್ಥಿಕ ಭದ್ರತೆಯಂತಹ ಸವಲತ್ತುಗಳು ನೀಡಬೇಕೆಂಬ ಬೇಡಿಕೆಯನ್ನು ಇಟ್ಟಿರುವುದು ಸಂಶೋಧನೆಯಿಂದ ಕಂಡುಬಂದಿರುತ್ತದೆ. ತಮ್ಮ ಕೂಲಿಗೆ ಸಂಬಂಧಿಸಿದಂತೆ ಇಲ್ಲಿ ನೀಡಲಾಗುವ ವೇತನವು ನಮಗೆ ತೃಪ್ತಿ ತಂದಿಲ್ಲ ಎಂದು ಶೇ. ೮೨ರಷ್ಟು ಕಾರ್ಮಿಕರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಕೆ.ಜಿ.ಗೆ ಎಂಟರಿಂದ ಹತ್ತು ರೂಪಾಯಿವರೆಗೆ ನೀಡುವ ಕೂಲಿಯು ಏನೂ ಸಾಕಾಗುವುದಿಲ್ಲ. ಇನ್ನಷ್ಟು ಕೂಲಿಯನ್ನು ಹೆಚ್ಚಿಸಬೇಕು ಎಂದು ತಮ್ಮ ಅಭಿಪ್ರಾಯವನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವ್ಯಕ್ತಪಡಿಸಿರುತ್ತಾರೆ. ಆದರೆ ಇಲ್ಲಿ ನೀಡಲಾಗುವ ಈ ಕನಿಷ್ಠ ಕೂಲಿಯು ಸಮರ್ಪಕವಾಗಿ ದೊರೆಯುವುದರಿಂದಲೇ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಕಾರ್ಮಿಕರು ಇಲ್ಲಿ ದುಡಿಯಲು ಮುಖ್ಯ ಕಾರಣವಾಗಿದೆ. ಇಲ್ಲಿ ದುಡಿಯುವ ಒಟ್ಟೂ ಮಹಿಳಾ ಕಾರ್ಮಿಕರಲ್ಲಿ ಶೇ.೬೪.೨ರಷ್ಟು ಮಂದಿ ಸ್ವಂತ ಮನೆಯನ್ನು ಹೊಂದಿದ್ದು, ಇನ್ನುಳಿದಂತೆ ಶೇ.೩೫.೮ರಷ್ಟು ಮಂದಿ ಸ್ವಂತ ಸೂರನ್ನು ಹೊಂದಿಲ್ಲದೇ ಇರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಇವರಿಗೆ ಪಾವತಿಸಲ್ಪಡುವ ವೇತನವು ದಲ್ಲಾಳಿಗಳ ಮೂಲಕ ಕೊಡಲ್ಪಡುತ್ತಿದ್ದು, ಪ್ರತಿದಿನ ಕೂಲಿಯನ್ನು ಪಾವತಿಸಲಾಗುತ್ತದೆ. ಗ್ರಾಮೀಣ ಭಾರತದಲ್ಲಿ ಮಹಿಳೆಯ ಅಪೌಷ್ಠಿಕತೆಗೆ ಮುಖ್ಯವಾಗಿ ಬಡತನ ಹಾಗೂ ಕೃಷಿ ಕಾರ್ಮಿಕ ಪದ್ಧತಿ ಕಾರಣವೆಂದು ಹಲವಾರು ಸಂಶೋಧನೆಗಳು ಧೃಡಪಡಿಸಿವೆ. ಗ್ರಾಮೀಣ ಭಾರತದಲ್ಲಿ ಮಹಿಳೆಯರ ಜೀವನ ಮತ್ತು ಮನೆಯ ಪೋಷಣೆಯ ಜೊತೆಗೆ ಆರೋಗ್ಯದ ಫಲಿತಾಂಶಗಳನ್ನು ಸುಧಾರಿಸಲು ಜಾತಿ ಹಾಗೂ ಸ್ಥಳದಂತಹ ಕೆಲವೊಂದು ಅಂಶಗಳನ್ನು ಗಣನೆಗೆ ತೆಗೆದುಕೊಂಡು ನಡೆಸಿದಂತಹ ಸಂಶೋಧನೆಯಲ್ಲಿ ಕಂಡುಕೊಂಡ ಅಂಶಗಳೆಂದರೆ ಕೃಷಿ ಮತ್ತು ದೇಶೀಯ ಕೆಲಸಗಳಲ್ಲಿ ಭಾರತೀಯ ಮಹಿಳೆಯರ ಪಾತ್ರಗಳ ಗುರುತಿಸುವಿಕೆಯು ಮನೆಯ ಪೌಷ್ಠಿಕಾಂಶದ ಫಲಿತಾಂಶಗಳನ್ನು ಸುಧಾರಿಸುವಲ್ಲಿ ಪ್ರಮುಖವಾಗಿದೆ ಎಂದು ಯು.ಇ.ಎ. ಅಂತಾರಾಷ್ಟ್ರೀಯ ಅಭಿವೃದ್ಧಿ ಶಾಲೆಯ ಪ್ರಾಧ್ಯಾಪಕ ನಿತ್ಯ ರಾವ್‌ರವರು ಅಭಿಪ್ರಾಯಪಟ್ಟಿರುತ್ತಾರೆ. ಬಹುತೇಕ ಗ್ರಾಮೀಣ ಭಾರತದ ಮಹಿಳೆಯರು ಕೃಷಿ ಕುಟುಂಬದವರಾಗಿದ್ದು ಕೃಷಿ ಕಾರ್ಮಿಕರಾಗಿ ದುಡಿಯುತ್ತಾರೆ. ಜೊತೆಗೆ ತಮ್ಮ ಮಕ್ಕಳ ಪಾಲನೆ ಹಾಗೂ ಮನೆಯ ಕರ್ತವ್ಯಗಳನ್ನು ನಿಭಾಯಿಸುತ್ತಾರೆ. ಮಕ್ಕಳ ಪೌಷ್ಠಿಕಾಂಶದ ಫಲಿತಾಂಶಗಳಲ್ಲಿ ಕಂಡುಬಂದ ಬಹುಮುಖ್ಯವಾದ ಅಂಶವೆಂದರೆ ಮಹಿಳೆಯರು ತಮ್ಮ ಮಕ್ಕಳ ಬಗ್ಗೆ ಹೆಚ್ಚಿನ ಗಮನವನ್ನು ಕೊಡದಿರುವುದು ಹಾಗೂ ಇವರ ಕೆಲಸದ ಒತ್ತಡವು ಮಕ್ಕಳ ಕಳಪೆ ಪೌಷ್ಠಿಕಾಂಶದ ಫಲಿತಾಂಶಗಳ ನಿರಂತರತೆಗೆ ಮುಖ್ಯ ಕಾರಣವಾಗಿದೆ ಎಂದು ಪ್ರೊಫೆಸರ್ ರಾವ್‌ರವರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಮಹಿಳೆಯರಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಗಳನ್ನು ನೀಡುವುದು ಬಹಳ ಮುಖ್ಯವಾದ ಕೆಲಸವಾಗಿದೆ. ಏಕೆಂದರೆ, ಕೃಷಿಯಲ್ಲಿ ತೊಡಗಿಕೊಂಡಿರುವ ಮಹಿಳೆಯರು ಕಳಪೆ ಜೀವನಮಟ್ಟದಿಂದ ಬಳಲುತ್ತಿದ್ದಾರೆ ಮತ್ತು ಆಧುನಿಕ ಜೀವನದ ವೇಗವನ್ನು ಕನಿಷ್ಠ ಜೀವನೋಪಾಯ ಸೌಲಭ್ಯಗಳೊಂದಿಗೆ ನಿಭಾಯಿಸುವುದು ಅವರಿಗೆ ಕಷ್ಟ ಆದುದರಿಂದ ಗ್ರಾಮೀಣ ಪ್ರದೇಶದಲ್ಲಿ ಅಸಂಘಟಿತ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗಳ ಅಗತ್ಯವು ಬಹುವಾಗಿ ಕಂಡುಬಂದಿದ್ದು ಹಲವಾರು ಪ್ರಯತ್ನಗಳು ನಡೆಯಬೇಕಿದೆ. ಕೃಷಿ ಮಹಿಳಾ ಕಾರ್ಮಿಕರು ಭೂಮಿಯ ಮಾಲಿಕತ್ವದ ಕೊರತೆಯಿಂದಾಗಿ ಸಾಲ ಹಾಗೂ ಇನ್ನಿತರ ಕೆಲವು ಕೊರತೆಗಳಿಂದ ನಿರ್ಬಂಧಿತರಾಗಿದ್ದಾರೆ. ಅಲ್ಲದೇ ಸಂಶೋಧನೆ ಮತ್ತು ವಿಸ್ತರಣೆಯಲ್ಲಿಯೂ ಅವರು ನಿರ್ಲಕ್ಷ್ಯಕ್ಕೆ ಒಳಗಾಗುತ್ತಾರೆ. ಮಹಿಳೆಯರ ಆರೋಗ್ಯ ಮಾರ್ಗದರ್ಶಿ ಸೂತ್ರಗಳು ಹಲವಾರು ವಿಷಯಗಳಿಂದ ಪ್ರಭಾವಿತವಾಗಿದೆ. ಇದು ಮುಖ್ಯವಾಗಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಪ್ರಶ್ನಿಸಲು, ಗರ್ಭನಿರೋಧಕ ಪ್ರವೇಶವನ್ನು ಹೆಚ್ಚಿಸಲು, ಸುರಕ್ಷಿತ ಮಾತೃತ್ವವನ್ನು ಬೆಳೆಸಲು, ನಿರ್ಬಂಧಿತ ಲಿಂಗಪಾತ್ರಗಳ ಹಾನಿಕಾರಕ ಪರಿಣಾಮಗಳನ್ನು ಎದುರಿಸಲು, ಲೈಂಗಿಕ ಆರೋಗ್ಯ ವನ್ನು ಉತ್ತೇಜಿಸಲು ಮತ್ತು ಆರೋಗ್ಯ ಸೇವೆಗಳ ಅಗತ್ಯತೆಗಳನ್ನು ಪೂರೈಸಲು ಪ್ರೋತ್ಸಾಹಿಸುತ್ತದೆ. ಆದರೆ, ಅದೆಷ್ಟೋ ಆರೋಗ್ಯ ಸಂಬಂಧಿ ಅಭಿವೃದ್ಧಿ ಕಾರ್ಯಕ್ರಮಗಳು ಅಂಚಿನಲ್ಲಿರುವ ಮಹಿಳೆಯರನ್ನು ತಲುಪುವುದಿಲ್ಲ. ಏಕೆಂದರೆ, ನಿಷ್ಪರಿಣಾಮಕಾರಿ ಅನುಷ್ಠಾನ, ಭ್ರಷ್ಟಾಚಾರದ ಹರಡುವಿಕೆ ಮತ್ತು ವ್ಯವಸ್ಥೆಯಲ್ಲಿನ ಅಸಮರ್ಥತೆ ಇದು ಮಹಿಳೆಯರ ಉತ್ಪಾದಕ ಮತ್ತು ಸಂತಾನೋತ್ಪತ್ತಿ ಕ್ಷೇತ್ರಗಳಲ್ಲಿನ ಜೀವನ ಮತ್ತು ಕೆಲಸದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಈ ಮೇಲಿನ ಸಮಸ್ಯೆಗಳನ್ನು ಪರಿಹರಿಸಲು ಕೃಷಿ ಕಾರ್ಮಿಕ ಮಹಿಳೆಯರಿಗೆ ಉತ್ತಮ ಸಾಮಾಜಿಕ, ಆರ್ಥಿಕ ಮತ್ತು ಆರೋಗ್ಯ ಭದ್ರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಗತ್ಯವಿದೆ.

ಬ್ಯಾಡಗಿ ತಾಲೂಕಿನ ಕೃಷಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಕೃಷಿ ಮಹಿಳಾ ಕಾರ್ಮಿಕರ ಆರೋಗ್ಯದ ಸ್ಥಿತಿಗತಿಯ ಕುರಿತಂತೆ ನಡೆಸಲಾದ ಸಂಶೋಧನೆಯಲ್ಲಿ ಆರೋಗ್ಯ ಸಂಬಂಧಿತ ವಿಚಾರಗಳನ್ನು ಈ ರೀತಿಯಾಗಿ ಚರ್ಚಿಸಬಹುದಾಗಿದೆ. ಸಾಮಾನ್ಯವಾಗಿ ಮೆಣಸಿನಕಾಯಿ ಮಾರುಕಟ್ಟೆ ಯಲ್ಲಿ ದುಡಿಯುತ್ತಿರುವ ಮಹಿಳೆಯರು ಯಾವುದೇ ರೀತಿಯ ದೀರ್ಘ ಸ್ವರೂಪದ ಖಾಯಿಲೆಗೆ ತುತ್ತಾಗದೇ ಇರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಈ ವಿಷಯದ ಕುರಿತಂತೆ ಶೇ.೮೯.೬ರಷ್ಟು ಮಹಿಳೆಯರು ತಮಗೆ ಈ ಕೆಲಸ ಮಾಡುವುದರಿಂದ ಯಾವುದೇ ಗಂಭೀರ ಸ್ವರೂಪದ ಖಾಯಿಲೆಗಳು ಬಾಧಿಸಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ.

ಉಳಿದಂತೆ ಮಂಡಿನೋವು, ಸೊಂಟನೋವು, ಕಣ್ಣು ಉರಿ, ಕೆಮ್ಮು, ಜ್ವರ, ನೆಗಡಿ, ಕೈಕಾಲು ನೋವು ಹಾಗೂ ಬೆರಳುಗಳಲ್ಲಿ ಬೊಬ್ಬೆ ಬಂದಿರುವಂತಹ ಸಮಸ್ಯೆಗಳನ್ನು ಹೊರತುಪಡಿಸಿದರೆ ಇನ್ನೂ ಯಾವುದೇ ರೀತಿಯ ಹೆಚ್ಚಿನ ಆರೋಗ್ಯ ಸಮಸ್ಯೆಯ ಬಂದಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಮೆಣಸಿನಕಾಯಿಯು ಸ್ವಭಾವತಃ ಘಾಟು ಉತ್ಪನ್ನ ವಾಗಿದ್ದು ಮತ್ತು ಇದರ ತೊಟ್ಟು ಬಿಡಿಸುವುದರಿಂದ ಕೈಗಳಲ್ಲಿ ಬೊಬ್ಬೆಗಳು ಏಳುವುದು ಸಹಜವಾಗಿದ್ದು ೪ ಅಥವಾ ೫ ದಿವಸ ಒಂದೇ ಸಮನೆ ಈ ಕೆಲಸವನ್ನು ಮಾಡಿದರೆ ೬ನೇ ದಿನ ನಮ್ಮ ದೇಹಕ್ಕೆ ವಿಶ್ರಾಂತಿಯ ಅಗತ್ಯವಿದೆ.ಅಲ್ಲದೇ ಅತಿಯಾಗಿ ಸೊಂಟನೋವು ಹಾಗೂ ಮಂಡಿನೋವು ನಮ್ಮನ್ನು ಕಾಡುತ್ತದೆ ಎಂದು ೩೮ ವರ್ಷ ವಯಸ್ಸಿನ ರತ್ನಮ್ಮರವರು ತಮ್ಮ ಅಭಿಪ್ರಾಯವನ್ನು ತಮ್ಮಲ್ಲಿ ಈ ರೀತಿಯಾಗಿ ಹಂಚಿಕೊಂಡರು. ಖಾಯಿಲೆ ಬಿದ್ದಂತಹ ಸಂದರ್ಭದಲ್ಲಿ ಅಧಿಕಾರಿ ವರ್ಗ ಆಗಲೀ ಅಥವಾ ದುಡಿಸಿಕೊಳ್ಳುವ ಮಾಲೀಕರಾಗಲೀ ಯಾವುದೇ ರೀತಿಯ ಆರೋಗ್ಯ ಭತ್ಯೆಯನ್ನು ನೀಡದೇ ಇರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದ ವಿಷಯವಾಗಿದೆ. ಅನಾರೋಗ್ಯ ಪೀಡಿತರಾದ ಸಂದರ್ಭದಲ್ಲಿ ಚಿಕಿತ್ಸೆಗೆ ಸರಕಾರಿ ಆರೋಗ್ಯ ವ್ಯವಸ್ಥೆಯನ್ನೇ ಇಲ್ಲಿಯ ಜನರು ನೆಚ್ಚಿಕೊಂಡಿದ್ದು ಅದರ ಪೂರ್ಣ ಸವಲತ್ತನ್ನು ಪಡೆಯುವುದಾಗಿ ತಿಳಿಸಿರುತ್ತಾರೆ. ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ನೀಡುವ ಉಚಿತ ಆರೋಗ್ಯ ತಪಾಸಣೆಗಳು, ಔಷಧಿ ವಿತರಣಾ ಸವಲತ್ತನ್ನು ಇಲ್ಲಿಯ ಕಾರ್ಮಿಕ ವರ್ಗವು ಸಂಪೂರ್ಣವಾಗಿ ಪಡೆಯುತ್ತಿದೆ ಎಂದು ತಿಳಿದುಬಂದಿದೆ. ಆದರೆ ಸರಕಾರಿ ಆರೋಗ್ಯ ವಲಯದ ಕಾರ್ಯಕ್ರಮಗಳು ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಡೆಯದೇ ಇರುವುದು ಈ ಕುರಿತಂತೆ ಶೇ.೯೫ರಷ್ಟು ಮಂದಿಯ ಉಲ್ಲೇಖದಲ್ಲಿ ಕಂಡುಬಂದಿರುತ್ತದೆ. ಇವರ ಹೇಳಿಕೆಯ ಪ್ರಕಾರ ಮಾರುಕಟ್ಟೆಯಲ್ಲಿ ಇಷ್ಟರವರೆಗೂ ಕಾರ್ಮಿಕರ ಆರೋಗ್ಯದ ವಿಷಯವಾಗಿ ಯಾವುದೇ ರೀತಿಯ ಆರೋಗ್ಯ ತಪಾಸಣಾ ಕಾರ್ಯಕ್ರಮಗಳು ನಡೆದಿಲ್ಲವೆಂಬುದು ಕಂಡುಬಂದಿರುತ್ತದೆ. ಇದಕ್ಕೆ ಪೂರಕವಾಗಿ ಮಹಿಳಾ ಕಾರ್ಮಿಕರನ್ನು ನಾವು ಕುಟುಂಬ ಯೋಜನೆಯ ಕುರಿತಂತೆ ಸಂದರ್ಶನಕ್ಕೊಳಪಡಿಸಿದಾಗ ಶೇ.೪೬ರಷ್ಟು ಮಂದಿ ಮಾತ್ರ ಕುಟುಂಬ ಯೋಜನೆಯ ಬಗ್ಗೆ ಹಾಗೂ ಅದರ ಅಗತ್ಯದ ಬಗ್ಗೆ ವಿವರಿಸಿದ್ದು, ಶೇ.೫೪ರಷ್ಟು ಮಂದಿ ಮಹಿಳಾ ಕಾರ್ಮಿಕರು ತಮಗೆ ಕುಟುಂಬ ಯೋಜನೆಯ ಕುರಿತು ಅಷ್ಟೇನೂ ತಿಳಿಯದು ಎಂದಿರುತ್ತಾರೆ. ಇಲ್ಲಿ ದುಡಿಯುವುದರಿಂದಾಗಿ ಹೆಚ್ಚು ಆರೋಗ್ಯ ಸಮಸ್ಯೆ ಏನಾದರೂ ಉಂಟಾಗುತ್ತಿದೆಯೇ ಎಂಬ ಪ್ರಶ್ನೆಗೆ ಶೇ.೮೭.೬ರಷ್ಟು ಮಂದಿ ಮೆಣಸಿನಕಾಯಿ ಉತ್ಪನ್ನದ ಈ ಕೆಲಸದಿಂದಾಗಿ ಹೆಚ್ಚೇನು ಆರೋಗ್ಯ ಸಮಸ್ಯೆ ಉಂಟಾಗಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಕೋವಿಡ್-೧೯ನ ಪರಿಣಾಮವಾಗಿ ಸಂಶೋಧನೆಯನ್ನು ಇನ್ನಷ್ಟು ವಸ್ತುನಿಷ್ಠವಾಗಿಸುವ ಉದ್ದೇಶದಿಂದ ಲಾಕ್‌ಡೌನ್ ತೆರವಾದ ಬಳಿಕ ಈ ಮಾರುಕಟ್ಟೆಯಲ್ಲಿ ಮತ್ತೊಮ್ಮೆ ಕ್ಷೇತ್ರಕಾರ್ಯವನ್ನು ನಡೆಸಿದ್ದು, ಕೊರೊನಾ ಹಾಗೂ ಅದರ ಮುಂಜಾಗ್ರತೆಗೆ ಸಂಬಂಧಿಸಿದಂತೆ ಇನ್ನಷ್ಟು ಮಾಹಿತಿಯನ್ನು ಕಲೆಹಾಕಲಾಗಿದ್ದು, ಸಂದರ್ಶನಕ್ಕೊಳಗಾದ ಮಹಿಳೆಯರು ನೀಡಿದ ಮಾಹಿತಿಗೆ ಆಧಾರವಾಗಿ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ಕೊರೊನಾದ ಬಾಧೆಯು ಕಡಿಮೆಯಾಗಿದ್ದು ಮುಖ್ಯವಾಗಿ ಇದು ಮೆಣಸಿನಕಾಯಿ ಘಾಟಿನ ಪರಿಣಾಮವಾಗಿ ನಮ್ಮಲ್ಲಿ ರೋಗನಿರೋಧಕ ಶಕ್ತಿಯು ಅತೀ ಹೆಚ್ಚಿರುತ್ತದೆ ಎಂದು ಕಾರ್ಮಿಕರು ಅಭಿಪ್ರಾಯಪಟ್ಟಿದ್ದು ಈ ಕಾರಣದಿಂದಾಗಿ ಇಲ್ಲಿ ದುಡಿಯುವ ಶೇ. ೯೫ರಷ್ಟು ಮಂದಿಗೆ ಕೊರೊನಾ ಬಾಧಿಸಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ.

ಕೊರೊನಾ ಮುಂಜಾಗ್ರತೆ ಕ್ರಮವಾಗಿ ಇಲ್ಲಿ ಅತೀ ಹೆಚ್ಚಿನ ಸಾಮಾಜಿಕ ಅಂತರ ಪಾಲನೆಯಾಗದಿದ್ದರೂ ಸಹ ಜನರು ಮಾಸ್ಕ್ ಬಳಕೆ ಮಾಡುತ್ತಿದ್ದುದು ಸಾಮಾನ್ಯವಾಗಿ ಕಂಡುಬಂದಿತ್ತು. ಅಲ್ಲದೇ ತಿಂಗಳಿಗೊಮ್ಮೆ ಆರೋಗ್ಯ ಕಾರ್ಯಕರ್ತೆಯರು, ಆರೋಗ್ಯ ಅಧಿಕಾರಿಗಳು ಈ ಮಾರುಕಟ್ಟೆಗೆ ಭೇಟಿಕೊಟ್ಟು ಜನರಿಗೆ ಕೊರೊನಾ ಕುರಿತು ಮಾಹಿತಿ ಹಾಗೂ ಮುನ್ನೆಚ್ಚರಿಕೆಯನ್ನು ನೀಡುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದ ಅಂಶವಾಗಿದೆ.

ಅದೆಷ್ಟೋ ಸಾವಿರ ಮಂದಿ ದುಡಿಯುತ್ತಿರುವ ಈ ಮಾರುಕಟ್ಟೆಯಲ್ಲಿ ಉತ್ತಮ ಶೌಚಾಲಯದ ವ್ಯವಸ್ಥೆಯು ಕಂಡುಬಂದಿದ್ದು, ಶೇ.೯೬.೭ರಷ್ಟು ಕಾರ್ಮಿಕರು ನಮಗೆ ಇನ್ನೂ ಉತ್ತಮ ಶೌಚಾಲಯದ ಅಗತ್ಯವಿದೆ ಎಂದು ಹೇಳಿರುತ್ತಾರೆ ಅಲ್ಲದೇ ಹೆಚ್ಚಿನ ಸಂದರ್ಭದಲ್ಲಿ ಕೆಲಸಕ್ಕೆ ನಡೆದುಕೊಂಡೇ ಹೋಗಬೇಕಾಗುತ್ತಿದ್ದು ವಾಹನ ವ್ಯವಸ್ಥೆಯು ಇದ್ದರೆ ಚೆನ್ನಾಗಿರುತ್ತಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೇ ಹೆಚ್ಚಿನ ಪ್ರಮಾಣದಲ್ಲಿ ಮಧ್ಯ ವಯಸ್ಸು ಮೀರಿದ ಮಹಿಳೆಯರು ಇಲ್ಲಿ ದುಡಿಯುತ್ತಿರುವುದರಿಂದ ನೆರಳಿನ ವ್ಯವಸ್ಥೆಯು ಆಗಬೇಕಾಗಿದೆ. ಇದಕ್ಕಾಗಿ ಹೆಚ್ಚೆಚ್ಚು ಮರಗಳನ್ನು ನೆಡುವುದು ಒಳ್ಳೆಯದು ಎಂದು ಅಭಿಪ್ರಾಯವು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವ್ಯಕ್ತವಾಗಿರುತ್ತದೆ.

ಸಾರ್ವಜನಿಕ ಆರೋಗ್ಯ ಸೇವೆಯ ಕುರಿತಂತೆ ಅದರಲ್ಲೂ ಕೊರೊನಾ ಸಂದರ್ಭದಲ್ಲಿ ಸಾರ್ವಜನಿಕ ವಲಯವು ನಮಗೆ ಉತ್ತಮ ಸೌಲಭ್ಯವನ್ನು ನೀಡಲಾಗಿದೆ ಎಂದು ಶೇ.೯೪.೭ರಷ್ಟು ಮಂದಿ ಉತ್ತಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಕೊರೊನಾವನ್ನು ಹೊರತುಪಡಿಸಿ ಉಳಿದ ಸಂದರ್ಭ ಗಳಲ್ಲಿಯೂ ಈ ಸೇವೆಯನ್ನು ಹೀಗೆ ಮುಂದುವರಿಸಬೇಕು ಎಂದು ಹೇಳಿರುತ್ತಾರೆ.

ಈ ರೀತಿಯಾಗಿ ಪ್ರಸ್ತುತ ಅಧ್ಯಯನದಲ್ಲಿ ದತ್ತಾಂಶಗಳ ವಿಶ್ಲೇಷಣೆಯ ಆಧಾರದ ಮೇಲೆ ಮಹಿಳಾ ಕಾರ್ಮಿಕರ ಆರೋಗ್ಯ ಸ್ಥಿತಿಗತಿಯ ಬಗ್ಗೆ ತಿಳಿದುಕೊಂಡು ಅವುಗಳನ್ನು ಈ ಅಧ್ಯಾಯದಲ್ಲಿ ಸಂಶೋಧಕರು ಗಮನಹರಿಸಿದ್ದಾರೆ.

ಪ್ರಸ್ತುತ ಮಹಿಳಾ ಕಾರ್ಮಿಕರ ಆರೋಗ್ಯದ ಸ್ಥಿತಿಗತಿಯ ಅಧ್ಯಯನದಿಂದ ಪ್ರಮುಖವಾಗಿ ತಿಳಿದು ಬಂದಿದ್ದೆಂದರೆ ನಾನು ಕ್ಷೇತ್ರಕಾರ್ಯ ಅಧ್ಯಯನವನ್ನು ಕೈಗೊಂಡಾಗ ಮಹಿಳೆಯರ ವಯೋಮಾನ ೨೧ ರಿಂದ ೩೦ ವರ್ಷದವರಾಗಿದ್ದಾರೆ. ಇವರು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ಸಾಹಕತೆಯಿಂದ ಮಾಹಿತಿಯನ್ನು ನೀಡಿದರು. ಇನ್ನುಳಿದ ವಯೋಮಾನದವರಾದ ೩೧ ಕ್ಕಿಂತಲೂ ಹೆಚ್ಚು ಮಹಿಳಾ ಕಾರ್ಮಿಕರು ಉತ್ತಮವಾದ ಪ್ರತಿಕ್ರಿಯೆ ನೀಡಿರುವುದು ಸ್ವಾಗತಾರ್ಹ. ಮಹಿಳಾ ಕಾರ್ಮಿಕರು ಪ್ರತಿಶತ ೫೯.೦೦ ರಷ್ಟು ಜನ ಅನಕ್ಷರಸ್ಥರಾಗಿದ್ದಾರೆ. ಇದರಲ್ಲಿ ೩೮.೦೦ ರಷ್ಟು ಮಹಿಳೆಯರು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆ. ಈ ಮಹಿಳೆಯರಲ್ಲಿ ಹಿಂದೂಗಳ ಸಂಖ್ಯೆ ಅಧಿಕವಾಗಿರುವುದು ಅಧ್ಯಯನದ ಅವಧಿಯಲ್ಲಿ ತಿಳಿದು ಬಂದಿತು ಹಾಗೂ ಪ್ರತಿಶತ ೪೧.೦೦ ರಷ್ಟು ಮಹಿಳೆಯರು ವಾಲ್ಮೀಕಿ ಜಾತಿಗೆ ಸೇರಿದವರಾಗಿದ್ದಾರೆ. ಪ್ರತಿಶತ ೭೧.೦೦ ರಷ್ಟು ಮಹಿಳೆಯರು ವಿವಾಹಿತೆಯರಾಗಿದ್ದಾರೆ. ಮಹಿಳಾ ಕಾರ್ಮಿಕರು ಪ್ರತಿಶತ ೮೮.೦೦ ರಷ್ಟು ಕೂಲಿ ಕೆಲಸ ಮಾಡುತ್ತಾ ಇದ್ದು, ಇವರುಗಳಲ್ಲಿ ಪ್ರತಿಶತ ೩೫.೦೦ ರಷ್ಟು ಮಹಿಳಾ ಕಾರ್ಮಿಕರು ಬಿ.ಪಿ.ಎಲ್. ಪಡಿತರ ಚೀಟಿಯನ್ನು ಹೊಂದಿದವರಾಗಿದ್ದಾರೆ ಮತ್ತು ಇವರ ಕುಟುಂಬಗಳ ವಾರ್ಷಿಕ ಆದಾಯ ನೋಡಿದಾಗ ಪ್ರತಿಶತ ೬೭.೦೦ ರಷ್ಟು ಕುಟುಂಬಗಳಲ್ಲಿ ೫೦೦೦ ರಿಂದ ೧೦,೦೦೦ ಆದಾಯವಿರುವುದು ಇದ್ದು. ಪ್ರತಿಶತ ೫೬.೦೦ ರಷ್ಟು ಕುಟುಂಬಗಳಲ್ಲಿ ೫೦೦೦ ರಿಂದ ೧೦,೦೦೦ ಆದಾಯವಿರುವುದು ತಿಳಿದು ಬರುತ್ತದೆ. ಪ್ರತಿಶತ ೫೬.೦೦ ರಷ್ಟು ಮಹಿಳಾ ಕಾರ್ಮಿಕರು ಸ್ವಂತ ಮನೆಯನ್ನು ಹೊಂದಿದ್ದು, ಇವರ ಮನೆಗಳು ಪ್ರತಿಶತ ೭೯.೦೦ ರಷ್ಟು ಹಂಚಿನ ಮನೆಗಳಾಗಿವೆ. ಈ ಮೇಲಿನ ಎಲ್ಲಾ ವಿಷಯಗಳನ್ನು ಪ್ರಾಥಮಿಕ ಮಾಹಿತಿ ಪಡೆದು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ – ಆರು

ಸಮಾರೋಪ

೬.೧ ಅಧ್ಯಯನದ ಫಲಿತಗಳು

ಅಧ್ಯಾಯ – ಆರು

ಸಮಾರೋಪ

ಪ್ರಸ್ತುತ ಈ ಅಧ್ಯಾಯವನ್ನು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಅರೋಗ್ಯದ ಸ್ಥಿತಿಗತಿ ಎಂಬ ವಿಷಯದ ಮೇಲೆ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ, ಆರ್ಥಿಕ, ಹಾಗೂ ಆರೋಗ್ಯದ ಸ್ಥಿತಿಗತಿ ಬಗ್ಗೆ ತಿಳಿಯುವ ಉದ್ದೇಶದಿಂದ ಅಧ್ಯಯನ ಮಾಡಲಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರು ತಳ ಸಮುದಾಯದವರು ಇವರಿಗೆ ವಾಸಮಾಡುವುದಕ್ಕೆ ವಸತಿ ಅತಿಮುಖ್ಯ ಆದರೆ ಕೆಲವರಿಗೆ ಮನೆಯೇ ಇಲ್ಲ ಇವರಿಗೆ ಮನೆಗಳನ್ನು ಕಲ್ಪಿಸಿಕೊಡಬೇಕಿದೆ. ಕೆಲಸ ಮಾಡುವ ಸ್ಥಳದಲ್ಲಿ ಶುದ್ಧವಾದ ನೀರನ ವ್ಯವಸ್ಥೆಯನ್ನು ಅಲ್ಪ ಪ್ರಮಾಣದಲ್ಲಿ ಕೆಲವು ಮಾಲಿಕರು ಮಾಡಿದ್ದಾರೆ. ಉಳಿದ ಕೆಲಸಗಾರರಿಗೆ ನಳ ನೀರನ್ನು ಅವಲಂಬಿಸಿದ್ದಾರೆ. ಶೌಚಾಲಯದ ವಿಷಯಕ್ಕೆ ಬಂದರೆ ಕೆಲವರಿಗೆ ಮನೆಗಳೇ ಇಲ್ಲ ಇರುವವರು ಸ್ವಲ್ಪ ಪ್ರಮಾಣದಲ್ಲಿ ಕಟ್ಟಿಕೊಂಡಿದ್ದಾರೆ. ಉಳಿದವರು ಸಾರ್ವಜನಿಕ ಶೌಚಾಲಯವನ್ನು ಬಳಸುತ್ತಾರೆ. ಪ್ರಾಥಮಿಕ ಶಿಕ್ಷಣವನ್ನು ಪಡದವರು ಸ್ವಲ್ಪ ಪ್ರಮಾಣದಲ್ಲಿ ಇದ್ದಾರೆ. ಉಳಿದವರು ಅನಕ್ಷರಸ್ಥರು ಮನೆಯಲ್ಲಿ ಬಡತನ, ಸಂಸಾರ ನಿರ್ವಹಣೆ ಜವಾಬ್ದಾರಿ ನಮ್ಮ ಮೇಲೆ ಇರುವುದರಿಂದ ಈ ಮಾರುಕಟ್ಟೆಯಲ್ಲಿ ಬ್ಯಾಡಗಿ ಮೆಣಸಿನಕಾಯಿ ತುಂಬು ಬಿಡಿಸುವುದು ಹಾಗೂ ಶುದ್ಧಿಕರಿಸುವ ಕೆಲಸವನ್ನು ಮಾಡುತ್ತೇವೆ ಎನ್ನುತ್ತಾರೆ. ಆದ್ದರಿಂದ ಇಲ್ಲಿ ಕೆಲಸ ಮಾಡುವ ಕಾರ್ಮಿಕರ ಸಾಮಾಜಿಕ, ಆರ್ಥಿಕ, ಮತ್ತು ಆರೋಗ್ಯದ ಸ್ಥಿತಿಗತಿಯನ್ನು ಈ ಕೆಳಕಂಡಂತೆ ಕ್ರೋಢಿಕರಿಸಿ ಚರ್ಚಿಸಲಾಗಿದೆ.

ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಮಾಜಿಕ ಅಂಶಗಳನ್ನು ಕ್ರೂಢೀಕರಿಸಿದಾಗ ಈ ಕೆಳಕಂಡಂತೆ ಅಲ್ಲಿನ ಕಾರ್ಮಿಕ ಸ್ಥಿತಿ ತಿಳಿಯುತ್ತದೆ. ಇಲ್ಲಿ ದುಡಿಯುತ್ತಿರುವ

ಶೇಕಡ ೯೦ರಷ್ಟು ಹಿಂದೂ, ಶೇ ೪ರಷ್ಟು ಮುಸ್ಲಿಂ, ಶೇ ೪ರಷ್ಟು ಕ್ರಿಶ್ಚಿಯನ್ ಇತರ ಧರ್ಮದವರು ೪ರಷ್ಟು ಇದ್ದು ಇದರಲ್ಲಿ ಹೆಚ್ಚು ಪ್ರಮಾಣದಲ್ಲಿ ಹಿಂದೂ ಧರ್ಮದವರು ಮೆಣಸಿನ ಕಾಯಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವುದು ಕಂಡುಬರುತ್ತದೆ. ಶೇ ೪ರಷ್ಟು ವಾಲ್ಮೀಕಿ ಸಮುದಾಯದವರು ಇದ್ದಾರೆ. ಶೇ ೮ರಷ್ಟು ಲಿಂಗಾಯಿತ, ಶೇ ೧೩ರಷ್ಟು ಹರಿಜನ, ಶೇ ೧೯ ರಷ್ಟು ಕುರುಬ, ಶೇ ೬ರಷ್ಟು ಮಡಿವಾಳ ಸಮುದಾಯದವರು ಇದ್ದಾರೆ. ಆದರೆ ಹೆಚ್ಚು ಪ್ರಮಾಣದಲ್ಲಿ ವಾಲ್ಮೀಕಿ ಸಮುದಾಯದ ಮಹಿಳೆಯರನ್ನು ಈ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವುದು ಕಂಡುಬರುತ್ತದೆ. ಅಧ್ಯಯನಕ್ಕೆ ಒಳಪಟ್ಟವರು ವಯಕ್ತಿಕ ವಿವರಗಳನ್ನು ನೋಡಿದಾಗ ೧೦ರಿಂದ ೨೦ರ ವಯಸ್ಸಿನ ಒಳಗೆ ಇರುವವರು ಶೇ ೧೦, ೨೧ರಿಂದ ೩೦ರ ಒಳಗಿನ ಶೇ ೪೨ರಷ್ಟು ಇದ್ದಾರೆ ಹಾಗೂ ಶೇ ೨೪ರಷ್ಟು ೩೧ರಿಂದ ೪೦ವರ್ಷದ ಒಳಗಿನವರಿದ್ದಾರೆ. ೪೧ರಿಂದ ೫೦ವರ್ಷದವರು ಶೇ೧೬ರಷ್ಟು ಉಳಿದ ಶೇ ೮ರಷ್ಟು ಕುಟುಂಬಗಳು ೫೦ವರ್ಷಕ್ಕಿಂತ ಹೆಚ್ಚಿನವರು ಇದ್ದಾರೆ. ಒಟ್ಟು ೨೧ರಿಂದ ೩೦ವರ್ಷದವರು ಹೆಚ್ಚಿನ ಸಂಖ್ಯೆಯಲ್ಲಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವುದು ತಿಳಿದು ಬರುತ್ತದೆ.

ಇಲ್ಲಿ ದುಡಿಯುವ ವರ್ಗದವರ ಶಿಕ್ಷಣವನ್ನು ನೋಡಿದಾಗ ಶೇ೫೯ರಷ್ಟು ಜನ ಯಾವುದೇ ರೀತಿಯ ಶಿಕ್ಷಣವನ್ನು ಕಲಿತಿಲ್ಲ. ಕಾರಣ ಕೇಳಿದಾಗ ಮನೆಯಲ್ಲಿ ಬಡತನ ಹಾಗೂ ಮಾಹಿತಿ ಕೊರತೆಯೆಂದು ಉತ್ತರಿಸಿದ್ದಾರೆ. ಶೇ ೩೮ರಷ್ಟು ಕುಟುಂಬಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಲಿತು ಅರ್ಧಕ್ಕೆ ಬಿಟ್ಟು ಹೊಲಗದ್ದೆಗಳಿಗೆ ಕೂಲಿಕೆಲಸಕ್ಕೆ ಹೋಗುತ್ತಿದ್ದಾರೆ. ಇತ್ತಿಚೀನ ದಿನಗಳಿಂದ ಇಲ್ಲಿಗೆ ಕೆಲಸಕ್ಕೆ ಬರುತ್ತೇವೆ. ಎಂದರೆ ಉಳಿದ ಶೇ೩ರಷ್ಟು ಪ್ರೌಢ ಶಿಕ್ಷಣವನ್ನು ಕಲಿತು ಮದುವೆಯ ನಂತರ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುವ ಸಲುವಾಗಿ ಈ ಕೆಲಸಕ್ಕೆ ಬರಬೇಕಾಯಿತು. ಇಲ್ಲಿ ಕೆಲಸ ಮಾಡುವವರ ವಸತಿ ಬಗ್ಗೆ ನೋಡಿದಾಗ ಇಂದಿಗೂ ಸಹ ಶೇ೫ರಷ್ಟು ಸಮುದಾಯಗಳು ಗುಡಿಸಲು ಮನೆಗಳಲ್ಲಿ ವಾಸ ಮಾಡುತ್ತ ಇದ್ದಾರೆ. ಇವರ ದುಡಿಮೆ ಹೊಟ್ಟೆ ಬಟ್ಟೆಗೆ ಸರಿಹೋಗುತ್ತದೆ. ಇನ್ನು ಮನೆ ಕಟ್ಟಿಕೊಳ್ಳುವುದು ಕನಸಿನ ಮಾತು ಸರ್ಕಾರದಿಂದ ಯಾವುದೇ ರೀತಿಯ ನೆರವು ಪಡೆಯಲು ಸಾಧ್ಯವಾಗುತ್ತಿಲ್ಲ. ಶೇ ೭೯ರಷ್ಟು ಕುಟುಂಬಗಳಿಗೆ ಹಂಚಿನ ಮನೆ ಆರ್‌ಸಿಸಿ ಮನೆ ಶೇ೩ರಷ್ಟು ಮಣ್ಣಿನ ಮನೆ ಶೇ೪ರಷ್ಟು ಇತರೆ ಮನೆಗಳು ಶೇ೯ರಷ್ಟು ಕುಟುಂಬಗಳು ವಾಸ ಮಾಡುತ್ತಿದ್ದಾರೆ. ಹಂಚಿನ ಮನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಾಸ ಮಾಡುತ್ತಿರುವುದು ಗಮನಿಸಬಹುದು. ಇನ್ನು ಕುಡಿಯುವ ನೀರಿನ ವಿಷಯಕ್ಕೆ ಬಂದರೆ ಅಲ್ಪ ಪ್ರಮಾಣದಲ್ಲಿ ಶುದ್ಧಿಕರಿಸಿದ ನೀರು ದೊರೆಯುತ್ತದೆ. ಕೆಲಸ ಮಾಡುವ ಸ್ಥಳದಲ್ಲಿ ಉಳಿದಂತೆ ನಲ್ಲಿ ನೀರನ್ನು ಅವಲಂಬಿಸಿದ್ದಾರೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರ್ಥಿಕ ಅಂಶಗಳಿವೆ. ಸಂಬಂಧಿಸಿದಂತೆ ಆರ್ಥಿಕವಾಗಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳೆಯರನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿದ್ದು ಅದನ್ನು ವಿಶ್ಲೇಷಿಸಲಾಗಿದೆ.

ಮೊದಲನೆಯದಾಗಿ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಹಿಳಾ ಕಾರ್ಮಿಕರ ಉದ್ಯೋಗಕ್ಕೆ ಸಂಬಂಧ ಪಟ್ಟಂತೆ ಶೇಕಡಾ ೦೭% ಮಹಿಳೆಯರು ಕೃಷಿಯನ್ನು ಅವಲಂಬಿಸಿ ಬದುಕುವುದನ್ನು ಕಾಣಬಹುದಾಗಿದೆ. ನಂತರ ವ್ಯಾಪಾರಕ್ಕೆ ಸೇ.೦೩% ಮಹಿಳೆಯನ್ನು ವ್ಯಾಪಾರ ಮಾಡಿ ಜೀವನ ನಡೆಸುತ್ತಿದ್ದಾರೆ ಎಂಬುದನು ಇಲ್ಲಿ ಗಮನಿಸಬಹುದು. ಕೂಲಿ ಕೆಲಸ ಮಾಡುವ ಮಹಿಳೆಯರು ಸೇ.೮೮% ಇದ್ದಾರೆ. ಇತರೆ ಮಹಿಳಾ ಕಾರ್ಮಿಕರು ಶೇ.೩% ಇದ್ದಾರೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಬಹುದಾಗಿದೆ.

ಮಹಿಳಾ ಕಾರ್ಮಿಕರು ಇಷ್ಟಪಟ್ಟು ದುಡಿದು ಜೀವನ ಸಾಗಿಸುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಮಹಿಳಾ ಕಾರ್ಮಿಕರು ಇಲ್ಲಿ ದಿನಕ್ಕೆ ಇಂತಿಷ್ಟು ಕೂಲಿಯನ್ನು ಪಡೆಯುವುದನ್ನು ಕಾಣಬಹುದಾಗಿದೆ. ಆರ್ಥಿಕವಾಗಿ ಮಹಿಳಾ ಕಾರ್ಮಿಕರು ಸದೃಢರಾಗಲು ಅನೇಕ ಕಾರ್ಯಕ್ರಮಗಳನ್ನು ಸರಕಾರಗಳು ರೂಪಿಸಿದರು ಸಹ ಇನ್ನೂ ಮಹಿಳೆಯರು ಸರ್ಕಾರಿ ಯೋಜನೆಗಳನ್ನು ಪರಿಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಕಾರಣವೆಂದರೆ ಅವರು ಪ್ರತಿದಿನ ಕೂಲಿ ಎಲ್ಲಿ ಸಿಗುತ್ತದೆಯೋ ಅಲ್ಲಿಯೋ ಸಹ ಕೆಲಸ ಮಾಡುವುದನ್ನು ನೋಡಬಹುದಾಗಿದೆ.

ಮಹಿಳಾ ಕಾರ್ಮಿಕರು ದಿನಕ್ಕೆ ಸುಮಾರು ೫ ರಿಂದ ೬ ಗಂಟೆಗಳ ಕಾಲ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುವವರು ಶೇ.೧೦.೪% ಇದ್ದಾರೆ. ಹಾಗೆಯೇ ೬ ರಿಂದ ೭ ಗಂಟೆಗಳ ಕಾಲ ದುಡಿಯುವವರು ಶೇ ೬೪% ಇದ್ದಾರೆ. ನಂತರ ೭ರಿಂದ ಗಂಟೆಗಳ ಕಾಲ ದುಡಿಯುವ ಕಾರ್ಮಿಕರು ಶೆ.೮% ಇದ್ದಾರೆ. ಮತ್ತು ೮ರಿಂದ ೯ ಗಂಟೆಗಳ ದುಡಿಯುವ ಮಹಿಳಾ ಕಾರ್ಮಿಕರು ಸೇ.೧೭.೬% ಇರುವುದನ್ನು ಕಾಣಬಹುದಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುವ ಕಾರ್ಮಿಕರ ಮಹಿಳಾಯರು ಪ್ರತಿದಿನವೂ ಕೂಡ ಮಾರುಟ್ಟೆಯಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ಕೆಲಸ ಮಾಡಿದರೂ ಸಹ ಅವರಿಗೆ ಜೀವನ ನಡೆಸುವುದು ಕಷ್ಟವಾಗಿದೆ. ಏಕೆಂದರೆ ಪ್ರತಿದಿನವೂ ಕುಟುಂಬದ ಜೊತೆಗೆ ಮಾರುಟ್ಟೆಯಲ್ಲಿ ಕೆಲಸ ಮಾಡಿ ಜೀವನ ನಡೆಸುವುದು ಒಂದು ಸವಾಲಿನ ಕೆಲಸವಾಗಿದ್ದು, ಅನಿವಾರ್ಯವಾಗಿ ದುಡಿಯಲೇ ಬೇಕಾದ ಪರಿಸ್ಥಿತಿಯು ಬಡತನದಿಂದಾಗಿದೆ ಎಂಬುದಾಗಿ ಕಂಡು ಬಂದಿದೆ.

ಮಹಿಳಾ ಕಾರ್ಮಿಕರ ಸಮಯಕ್ಕೆ ಹೆಚ್ಚು ಮಹತ್ವ ಕೊಡುವುದರಿಂದ ಪ್ರತಿದಿನವೂ ತಿನ್ನುವ ಕೆಲಸವನ್ನು ಮಾರುಕಟ್ಟೆಯಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ ಎಂದು ಹೇಳಬಹುದಾಗಿದೆ. ಮಹಿಳಾ ಕಾರ್ಮಿಕರ ಆದಾಯಕ್ಕೆ ಸಂಬಂಧ ಪಟ್ಟಂತೆ ಈ ರೀತಿಯ ಮಾಹಿತಿಯು ಲಭ್ಯವಿದ್ದು ಅದನ್ನು ವಿವರಿಸಲು ಪ್ರಯತ್ನಿಸಿದ್ದೇನೆ.

ಕೃಷಿಯು ಒಂದು ಪ್ರಮುಖವಾದ ಆದಾಯದ ಮೂಲವಾಗಿರುವುದು ಕಂಡುಬಂದಿದ್ದು, ಶೇ.೪.೮% ರಷ್ಟಿದೆ. ವ್ಯಾಪಾರ ಮೂಲದಿಂದ ಶೆ.೧.೬% ಆದಾಯವನ್ನು ಮಹಿಳೆಯರು ಗಳಿಸುತ್ತಿದ್ದಾರೆ. ಖಾಸಗಿ ಉದ್ಯೋಗ ಮಾಡುವುದು ಕೂಡ ಕಂಡುಬರುತ್ತದೆ. ಅದರಲ್ಲಿ ಶೇ.೦.೬% ರಷ್ಟು ಇರುವುದನ್ನು ಕಾಣಬಹುದಾಗಿದೆ. ಕೂಲಿ ಕಾರ್ಮಿಕರು ಶೇ.೮೯.೪% ರಷ್ಟು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೆಲಸ ಮಾಡುವುದು ಒಂದು ವಿಶೇಷವಾಗಿದ್ದು, ಇದೆ ಮಹಿಳಾ ಕಾರ್ಮಿಕರಿಗೆ ಪ್ರತಿದಿನ ಕೂಲಿ ಕೊಡುವ ಒಂದು ಸ್ಥಳವಾಗಿರುವುದನ್ನು ಕೆಲವರು ಮನೆಗೆಲಸವನ್ನು ಮಾಡುವುದರ ಮೂಲಕ ಕುಟುಂಬ ನಿರ್ವಹಣೆಯನ್ನು ಮಾಡುವುದು ಒಂದು ಕಲೆಯಾಗಿ ಮಾಡಿಕೊಂಡಿರುವುದನ್ನು ಕಾಣಬಹುದಾಗಿದೆ.

ಮಹಿಳಾ ಕಾರ್ಮಿಕರು ಉದ್ಯೋಗಕ್ಕೆ ಸೇರಲು ಹಲವಾರು ಕಾರಣಗಳಿದ್ದು ಅದರಲ್ಲಿ ಪ್ರಮುಖವಾಗಿರುವುದನ್ನು ಹೇಳಲು ಬಯಸುತ್ತೇನೆ. ಉದ್ಯೋಗ ಅಥವಾ ಕೂಲಿ ಮಾಡಿ ಸ್ವಂಥಃಹ ಬದುಕನ್ನು ಕಟ್ಟಿಕೊಳ್ಳುವವರು ಇರುವುದನ್ನು ಕಾಣಬಹುದಾಗಿದೆ. ಇವರು ಶೇ.೫.೨% ರಷ್ಟಿದ್ದಾರೆ. ಆದಾಯಕ್ಕೆ ಸಂಬಂಧ ಪಟ್ಟಂತೆ ಆಧುನೀಕರಣ ಪ್ರಭಾವದ ಪರಿಣಾಮದಿಂದ ಎಲ್ಲರ ಗಮನವು ಆದಾಯದ ಮಧ್ಯವನ್ನು ಜಾಸ್ತಿ ಮಾಡಿಕೊಳ್ಳಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಯೊಬ್ಬ ಮಹಿಳೆಯರು ಸಹ ಅವರು ದುಡಿಯುವುದರ ಮೂಲಕ ನಾವು ಯಾರಿಗೇನು ಕಮ್ಮಿಯಿಲ್ಲ ಎಂಬ ವಾದ ಮಂಡಿಸುವುದನ್ನು ನೋಡಬಹುದಾಗಿದೆ.

ಮಹಿಳಾ ಕಾರ್ಮಿಕರು ವೃತ್ತಿಯೊಂದನ್ನು ಮಾಡಬೇಕೆಂಬ ಹಂಬಲದಿಂದ ಯಾವುದೇ ಕೂಲಿ ಕೆಲಸವನ್ನು ಕೂಡ ಮಾಡಲು ಬಯಸುತ್ತಿರುವುದನ್ನು ಗಮನಿಸಬಹುದಾಗಿದೆ. ಮೆಣಸಿನಕಾಯಿ ತೊಟ್ಟು ಬಿಡಿಸುವುದು ತೂಬು ತೆಗೆಯುವುದನ್ನು ಸ್ವಚ್ಚ ಮಾಡುವುದು ಇನ್ನೂ ಹಲವಾರು ಪ್ರಕ್ರಿಯೆಯಲ್ಲಿ ತೊಡಗಿರುವುದನ್ನು ನಾವು ನೋಡಲಾಗಿದೆ.

ಮಹಿಳಾ ದುಡಿಮೆಗಾರರು ಸಹ ವೈವಾಹಿಕವಾಗಿ ಕುಟುಂಬಕ್ಕೆ ಸೇರಿರುವುದನ್ನು ಗಮನಿಸಬಹುದಾಗಿದೆ. ವಿವಾಹಿತೆಯರು ಶೇ.೭೧% ರಷ್ಟು ಮಹಿಳೆಯರು ಮಾರುಕಟ್ಟೆಯಲ್ಲಿ ಕೂಲಿ ಮಾಡಿ ಬದುಕುವುದನ್ನು ಕಾಣಲಾಗಿದೆ. ವಿಧವೆಯರು ಶೇ.೨೧.೧೮% ರಷ್ಟು ಮಹಿಳೆಯರು ದುಡಿಯುವುದು ಕಂಡುಬಂದಿದೆ. ವಿಚ್ಛೇಧಿತ ಮಹಿಳೆಯರು ಯಾರು ಇಲ್ಲದೆಂಬುದನ್ನು

ಕೂಡ ನೋಡಬಹುದಾಗಿದೆ. ಮದುವೆಯಾಗದಿರುವ ಅವಿವಾಹಿತೆಯರು ಶೆ. ೮% ಇರುವುದು ಕಂಡುಬರುತ್ತದೆ. ಇಲ್ಲಿ ವೈವಾಹಿಕ ಕೌಟುಂಬಿಕ ಹಲವು ಸಮಸ್ಯೆಗಳು ಎಲ್ಲರ ಮನೆಯಲ್ಲಿರುವುದು ಕಂಡುಬಂದಿದೆ. ಆ ಎಲ್ಲ ಕಾರಣಗಳು ಜೀವನ ನಡೆಸುವುದಕ್ಕೆ ಯಾವುದೇ ಸಮಸ್ಯೆಯಾಗಿಲ್ಲ ಎಂದು ಮಹಿಳಾ ಕಾರ್ಮಿಕರು ಹೇಳುವುದು ಕಂಡುಬರುತ್ತದೆ.

ವಾರ್ಷಿಕ ಆದಾಯಕ್ಕೆ ಸಂಬಂಧ ಪಟ್ಟಂತೆ ಮಹಿಳಾ ಕಾರ್ಮಿಕರು ಒಂದು ವರ್ಷಕ್ಕೆ ಶೇ ೬೭% ಮಹಿಳಾ ಕಾರ್ಮಿಕರು ಆದಾಯವು ೫೦೦೦ ದಿಂದ ೧೦,೦೦೦ ರೂ ಗಳವರೆಗೆ ಇರುವುದು ಕಂಡುಬರುತ್ತದೆ. ೧೦೦೦೦ ರಿಂದ ೧೫೦೦೦ ದವರೆಗೆ ವಾರ್ಷಿಕ ಆದಾಯವನ್ನು ಗಳಿಸುವುದು ಶೇ.೩೦% ಮಹಿಳೆಯರು ಇದ್ದಾರೆ. ಸುಮಾರು ೧೬೦೦೦ ದಿಂದ ೨೦.೦೦೦ ರೂ.ಗಳವರೆಗೆ ಆದಾಯವನ್ನು ಹೊಂದಿರುವ ಗಳಿಸುವ ಮಹಿಳೆಯರು ಶೇ ೩% ಇದ್ದಾರೆ. ೨೦.೦೦೦ಕ್ಕಿಂತ ಜಾಸ್ತಿ ಆದಾಯವನ್ನು ಹೊಂದಿರುವ ಮಹಿಳೆಯರು ಒಬ್ಬರೂ ಇಲ್ಲದಿರುವುದನ್ನು ಕಾಣಬಹುದಾಗಿದೆ.

ಪ್ರತಿದಿನ ಆದಾಯವು ಕುಟುಂಬಕ್ಕೆ ಬಳಸುವುದರಿಂದ ಯಾರು ಕೂಡ ವರ್ಷಪೂರ್ತಿ ದುಡಿದಿರುವುದು ಉಳಿತಾಯವನ್ನು ಮಾಡಿರುವುದು ಕಂಡುಬಂದಿದೆ. ಅಂದರೆ ಅವರ ಕೌಟುಂಬಿಕ ಹಣಕಾಸಿನ ಸಮಸ್ಯೆಗಳಿಗೆ ಅವರು ದುಡಿದಿರುವ ಕೂಲಿ/ಹಣವನ್ನು ನಿತ್ಯದ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳುವುದನ್ನು ಕಾಣಬಹುದಾಗಿದೆ.

ಮಹಿಳಾ ಕಾರ್ಮಿಕರ ಉದ್ಯೋಗದ ಸ್ವರೂಪಗಳಿಗೆ ಸಂಬಂಧಿಸಿದಂತೆ ತುಂಬು ತೆಗೆಯುವುದನ್ನು ಮಾಡುವ ಮಹಿಳಾ ಕಾರ್ಮಿಕರ ಸಂಖ್ಯೆ ಶೇ.೬೯%ರಷ್ಟು ಇರುವುದು ಕಂಡುಬಂದಿದೆ. ಪ್ಯಾಕಿಂಗ್ ಮಾಡುವ ಮಹಿಳಾ ಕಾರ್ಮಿಕರ ಸಂಖ್ಯೆ ಶೇ.೬೧.% ಇರುವುದು ಕಂಡುಬಂದಿದೆ. ಚೀಲ ತುಂಬುವ ಮಹಿಳಾ ಕಾರ್ಮಿಕರು ಶೇ ೧೩% ಇದ್ದಾರೆ. ಇತರೆ ಮಹಿಳಾ ಕಾರ್ಮಿಕರು ಶೇ.೧೧% ಇರುವುದನ್ನು ಗಮನಿಸಬಹುದಾಗಿದೆ.

ಮಹಿಳಾ ಕಾರ್ಮಿಕರ ಉದ್ಯೋಗದ ಸ್ವರೂಪದ ಮಾಹಿತಿಗೆ ಸಂಬಂಧ ಪಟ್ಟಂತೆ ತುಂಬು ತೆಗೆಯುವ ಮಹಿಳಾ ಕಾರ್ಮಿಕರು ಶೇ.೯೫% ಇದ್ದರೆ, ಪ್ಯಾಕಿಂಗ್ ಮಾಡುವ ಮಹಿಳಾ ಕಾರ್ಮಿಕರ ಸಂಖ್ಯೆ ಶೇ.೬% ಇದೆ. ಹಾಗೆಯೇ ಚೀಲ ತುಂಬುವ ಮಹಿಳಾ ಕಾರ್ಮಿಕರ ಸಂಖ್ಯೆ ಶೇ ೧% ಇದೆ. ನಂತರದಲ್ಲಿ ಕಸ ಗೂಡಿಸುವ ಮಹಿಳಾ ಕಾರ್ಮಿಕರ ಸಂಖ್ಯೆ ಶೆ.೧೩% ಇದ್ದಾರೆ. ಇತರೆ ಮಹಿಳಾ ಕಾರ್ಮಿಕರ ಸಂಖ್ಯೆ ಶೇ.೧೧% ರಷ್ಟು ಇರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಮಹಿಳಾ ಕಾರ್ಮಿಕರ ಉದ್ಯೋಗದ ಸ್ವರೂಪಕ್ಕೆ ಪ್ರತಿಯೊಂದು ಕೆಲಸವನ್ನು ಕಾರ್ಮಿಕರು ನಿರ್ವಹಿಸುವುದು ಇಲ್ಲಿ ಪ್ರಮುಖವಾಗಿದೆ ಎಂದು ಹೇಳಬಹುದಾಗಿದೆ.

ಮಹಿಳೆಯರು ವಿಶೇಷವಾಗಿ ಕಾರ್ಮಿಕರಲ್ಲಿ ಪಡಿತರ ಚೀಟಿಗೆ ಸಂಬಂಧಿಸಿದಂತೆ ಶೇ.೩೪% ರಷ್ಟು ಎ.ಪಿ.ಎಲ್ ಕಾರ್ಡ್ ಹೊಂದಿರುವ ಮಹಿಳಾ ಕಾರ್ಮಿಕರು ಮಾರುಕಟ್ಟೆಯಲ್ಲಿ ದುಡಿಯುವವರಿದ್ದಾರೆ. ಬಿ.ಪಿ.ಎಲ್ ಕಾರ್ಡ್ ಹೊಂದಿರುವ ಮಹಿಳಾ ಕಾರ್ಮಿಕರು ಶೇ.೩೫% ರಷ್ಟಿದ್ದಾರೆ. ಅಂತ್ಯೋದಯ ಕಾರ್ಡ್ ಹೊಂದಿರುವ ಮಹಿಳಾ ಕಾರ್ಮಿಕರು ಶೇ ೧೨% ರಷ್ಟಿದ್ದಾರೆ. ಇತರೆ ಕಾರ್ಡ್‌ಗಳನ್ನು ಹೊಂದಿರುವ ಮಹಿಳಾ ಕಾರ್ಮಿಕರು ಶೇ.೦೨% ರಷ್ಟಿದ್ದಾರೆ. ಯಾವುದೇ ಕಾರ್ಡ್ ಸೌಲಭ್ಯವನ್ನು ಹೊಂದಿಲ್ಲದವರು ಶೇ ೧೭% ರಷ್ಟು ಮಹಿಳಾ ಕಾರ್ಮಿಕರು ಇರುವುದು ಪ್ರಮುಖವಾಗಿ ಕಂಡುಬರುತ್ತದೆ.

ಮಹಿಳೆಯರು ಪ್ರಮುಖವಾಗಿ ದುಡಿಮೆಯಿಂದ ಬರುವ ಆದಾಯ ಅಂದರೆ ಕೆಲಸದಿಂದ ಬರುವ ಆದಾಯವೆಂದರೆ ಬಹಳ ಮುಖ್ಯವಾಗಿ ಸುಮಾರು ೧೦೦೦ರಿಂದ ೨೦೦೦ ರೂ.ಗಳವರೆಗೆ ಬರುವ ಮಹಿಳಾ ಕಾರ್ಮಿಕರೊಡರೆ ಶೇ ೬೩% ಜನರಿದ್ದಾರೆ. ೨೦೦೦ ದಿಂದ ೩೦೦೦ರೂ. ಗಳವರೆಗೆ ಆದಾಯವನ್ನು ಹೊಂದಿರುವ ಮಹಿಳಾ ಕಾರ್ಮಿಕರು ಶೇ ೨೫% ಇದ್ದಾರೆ. ಹಾಗೆಯೇ ೩೦೦೦ರಿಂದ ೪೦೦೦ ರೂ.ಗಳವರೆಗೆ ಆದಾಯವನ್ನು ಹೊಂದಿರುವ ಮಹಿಳಾ ಕಾರ್ಮಿಕರು ಶೇ ೧೨% ಇರುವುದು ಕಂಡುಬರುತ್ತದೆ. ಹಾಗೆಯೇ ೧೦೦೦ಕ್ಕಿಂತ ಹೆಚ್ಚು ಆದಾಯವನ್ನು ಗಳಿಸುವ ಮಹಿಳಾ ಕಾರ್ಮಿಕರು ಯಾರು ಇಲ್ಲದಿರುವುದು ಕಂಡುಬಂದಿದೆ ಎಂದು ಹೇಳಲಾಗಿದೆ.

ಮಹಿಳಾ ಕಾರ್ಮಿಕರ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಸುಮಾರು ೫೦೦ ಜನರನ್ನು ಆಯ್ಕೆಮಾಡಿಕೊಂಡು ಈ ಅಧ್ಯಯನವನ್ನು ಮಾಡಿದ್ದೇನೆ. ಮಹಿಳೆಯರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುವುದನ್ನು ಕಾಣಬಹುದಾಗಿದೆ. ಈಗಾಗಲೇ ಮಹಿಳಾ ಕಾರ್ಮಿಕರಿಗೆ ಸಂಬಂಧಿಸಿದ ಅಧ್ಯಯನಗಳನ್ನು ಪರಾಮರ್ಶಿಸಿದಾಗ ಕಂಡುಬರುವುದೇನೆಂದರೆ ಮಹಿಳಾ ಕಾರ್ಮಿಕರು ಉದ್ಯೋಗವನ್ನು ಬೆಳಿಗ್ಗೆ ೯ ಗಂಟೆಯಿಂದ ಸಾಯಂಕಾಲ ೪ ಗಂಟೆಗಳವರೆಗೆ ಮಾರುಕಟ್ಟೆಯಲ್ಲಿ ಕೆಲಸ ಮಾಡುವುದನ್ನು ಕಾಣಬಹುದಾಗಿದೆ.

ಮಹಿಳೆಯರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಪ್ರತಿದಿನವೂ ಸಹ ಕಸವನ್ನು ಆರಿಸುವುದು, ಬೀಜಗಳನ್ನು ಬೇರ್ಪಡಿಸುವುದು ಇತ್ಯಾದಿ ಕೆಲಸಕಾರ್ಯಗಳನ್ನು ಬಹಳ ಸ್ವಯಂ ಪ್ರೀತಿಯಿಂದ ಕೆಲಸ ಮಾಡುವುದನ್ನು ಗಮನಿಸಬಹುದಾಗಿದೆ. ಕೃಷಿ ಕೆಲಸವನ್ನು ಮಾಡುವ ಮಹಿಳಾ ಕಾರ್ಮಿಕರು ಸಹ ಕೆಲಸವನ್ನು ಬಹಳ ಸೂಕ್ತವಾದ ರೀತಿಯಲ್ಲಿ ಮಾಡುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ. ಮಹಿಳೆಯರು ಸಹ ವ್ಯಾಪಾರವನ್ನು ಮಾಡುವುದನ್ನು ಗಮನಿಸಬಹುದಾಗಿದೆ. ಕುಟುಂಬ ನಿರ್ವಹಣೆಗಾಗಿ ನಿತ್ಯವೂ ಸಹ ವ್ಯಾಪಾರ ಮಾಡಿಕೊಂಡು ಜೀವನವನ್ನು ನಡೆಸುವ

ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದ್ದಾರೆ. ಇತರೆ ಮಹಿಳಾ ಕಾರ್ಮಿಕರು ಬೇರೆ ಬೇರೆ ಕೆಲಸಗಳನ್ನು ಮಾಡುವ ಮಹಿಳೆಯರು ಇರುವುದು ಕಂಡುಬಂದಿದೆ.

ದುಡಿಯುವ ಸಮಯಕ್ಕೆ ಸಂಬಂಧಪಟ್ಟಂತೆ ಸುಮಾರು ೫೦೦ ಮಹಿಳಾ ಕಾರ್ಮಿಕರಲ್ಲಿ ಸುಮಾರು ೫೨ ಮಹಿಳೆಯರು ಒಂದು ದಿನಕ್ಕೆ ೫ ಗಂಟೆಯಿಂದ ೬ ಗಂಟೆಗಳವರೆಗೆ ಕೆಲಸವನ್ನು ಮಾರುಕಟ್ಟೆಯಲ್ಲಿ ಕೆಲಸ ಮಾಡುವುದನ್ನು ಕಾಣಬಹುದಾಗಿದೆ. ನಂತರದಲ್ಲಿ ೩೨೦ ಜನ ಮಹಿಳಾ ಕಾರ್ಮಿಕರು ೬ ಗಂಟೆಯಿಂದ ೭ ಗಂಟೆಗಳವರೆಗೆ ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ. ಸುಮಾರು ೪೦ ಜನ ಮಹಿಳಾ ಕಾರ್ಮಿಕರು ೭ ಗಂಟೆಯಿಂದ ೮ ಗಂಟೆಗಳವರೆಗೆ ಮಾರುಕಟ್ಟೆಯಲ್ಲಿ ಕೆಲಸ ಮಾಡುವುದನ್ನು ಕಾಣಬಹುದಾಗಿದೆ. ಕೊನೆಯಲ್ಲಿ ಸುಮಾರು ೮೮ ಜನ ಮಹಿಳಾ ಕಾರ್ಮಿಕರು ಮಾರುಕಟ್ಟೆಯಲ್ಲಿ ಕೆಲಸ ಮಾಡುವುದನ್ನು ಕಾಣಬಹುದಾಗಿದೆ.

ಮಹಿಳಾ ಕಾರ್ಮಿಕರು ಸಮಯವನ್ನು ಪರಿಪೂರ್ಣವಾಗಿ ಬಳಸಿಕೊಂಡು ಕೆಲಸ ಮಾಡುವುದು ಇಲ್ಲಿ ಪ್ರಮುಖವಾದ ಅಂಶವಾಗಿದೆ. ಕುಟುಂಬದ ಜೊತೆ ಕಾಲ ಕಳೆಯುವುದಕ್ಕಿಂತ ಹೆಚ್ಚಾಗಿ ಮಾರುಕಟ್ಟೆಯಲ್ಲಿ ಕಾಲ ದುಡಿಮೆಗಾಗಿ ಮೀಸಲಿಟ್ಟಿರುವುದನ್ನು ಕಾಣಬಹುದಾಗಿದೆ. ಮಕ್ಕಳನ್ನು ಶಾಲೆಗೆ ಕಳುಹಿಸಿದ ನಂತರ ಮಾರುಕಟ್ಟೆಗೆ ದುಡಿಯಲು ಬರುವುದು ಕಂಡುಬರುತ್ತದೆ. ಸಾಯಂಕಾಲ ೪ ಗಂಟೆಯ ನಂತರ ಮಕ್ಕಳನ್ನು ನಂತರ ವಿಶ್ರಾಂತಿ ಪಡೆಯುತ್ತೇವೆಂದು ಮಾರುಕಟ್ಟೆಯಲ್ಲಿ ದುಡಿಯುವ ಕಾರ್ಮಿಕರು ಮಾಹಿತಿಯನ್ನು ಹೇಳಿಕೊಂಡಿರುವುದು ವಿಶೇಷವಾಗಿದೆ.

ಬಡತನದ ಜೀವನ ಮಾಡುವುದು ತುಂಬಾ ಕಷ್ಟವಾಗಿದೆ. ಆದ್ದರಿಂದ ಒಂದು ಮನೆಯಲ್ಲಿ ಕಾಲ ಕಳೆದರೆ ತಿನ್ನಲು ಊಟಕ್ಕೆ ಪರದಾಡುವಂತಹ ಸಮಸ್ಯೆ ಇರುವುದನ್ನು ಕಾಣಬಹುದಾಗಿದೆ. ಮನೆಯಲ್ಲಿ ಗಂಡ ಮತ್ತು ಹೆಂಡತಿ ಇಬ್ಬರು ಸಹ ದಿನಗೂಲಿಗಳಾಗಿ ಮಾರುಕಟ್ಟಯಲ್ಲಿ ದುಡಿಯುತ್ತೇವೆ. ಮಾರುಕಟ್ಟೆ ಇರುವುದರಿಂದ ಕೆಲಸ ಸಿಕ್ಕಿದೆ. ಅದನ್ನು ಸಂಪೂರ್ಣ ಉಪಯೋಗಿಸಿಕೊಂಡು ಜೀವನ ನಿರ್ವಹಿಸಿಕೊಂಡು ಬರುತ್ತಿದ್ದೇವೆಂದು ಹೇಳಿದ್ದಾರೆ. ಮನೆಯಲ್ಲಿ ಬಟ್ಟೆಗಳಿಗೆ, ಹಬ್ಬ-ಹರಿದಿನಗಳಲ್ಲಿ ಸರಳವಾಗಿ ಆಚರಣೆ ಮಾಡುವುದು ಸಹ ನಾವು ಕಲಿಸಿದ್ದೇವೆ ಎಂದು ಹೇಳಿದ್ದಾರೆ. ಕುಟುಂಬದ ಆದಾಯಕ್ಕೆ ಸಂಬಂಧಿಸಿದಂತೆ ಸುಮಾರು ೫೦೦ ಜನ ಮಹಿಳಾ ಕಾರ್ಮಿಕರನ್ನು ಮಾಹಿತಿಯನ್ನು ಕೇಳಿದಾಗ ಮಹಿಳಾ ಕಾರ್ಮಿಕರು ಈ ರೀತಿಯಲ್ಲಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ನಮಗೆ ಆದಾಯದ ಮೂಲಗಳೆಂದರೆ ಕೃಷಿ ಮಾಡುವುದರಿಂದ ಅಂದರೆ ಕೃಷಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುವುದರಿಂದ ನಮಗೆ

ಆದಾಯವು ಬರುತ್ತದೆ. ವ್ಯಾಪಾರ ಮಾಡುವುದರಿಂದ ನಮಗೆ ಆದಾಯವನ್ನು ಗಳಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಖಾಸಗಿ ಉದ್ಯೋಗ ಬೇರೆ ಅಂಗಡಿಗಳಲ್ಲಿ ಕೆಲಸ ಮಾಡುತ್ತೇವೆ ಎಂದು ಹೇಳಿದ್ದಾರೆ.

ಕೂಲಿ ಕೆಲಸ ಮಾಡಿಕೊಂಡು ಜೀವನಕ್ಕೆ ಜೊತೆಗೆ ಮನೆಯ ಸಣ್ಣ-ಪುಟ್ಟ ಖರ್ಚುಗಳಿಗೆ ಕೂಲಿಯಿಂದ ಬಂದ ಹಣದಿಂದ ಜೀವನ ಸಾಗಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಮನೆಗೆಲಸವನ್ನು ಮಾಡುವ ಮಹಿಳಾ ಕಾರ್ಮಿಕರು ಇರುವುದು ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಮಹಿಳಾ ಕಾರ್ಮಿಕರಾಗಿ ನಾವು ಮಾರುಕಟ್ಟೆಯಲ್ಲಿ ಕೆಲಸ ಮಾಡುತ್ತೇವೆ. ಆದ್ದರಿಂದ ನಮಗೆ ದಿನಕ್ಕೆ ೩೦೦ರಿಂದ ೪೦೦ರೂ.ಗಳವರೆಗೆ ಕೂಲಿ ದಿನಕ್ಕೆ ಸಿಗುತ್ತದೆ ಎಂದು ಹೇಳುತ್ತಾರೆ. ಇದರಲ್ಲಿ ಮಕ್ಕಳ ಶಿಕ್ಷಣಕ್ಕೆ ಬಟ್ಟೆ-ಬರೆಗಳಿಗೆ ದಿನಸಿ ಸಮಾನುಗಳಿಗೆ ಆದಾಯದಲ್ಲಿ ಇಂತಿಷ್ಟು ಖರ್ಚು ಮಾಡಿಕೊಂಡು ಉಳಿದಿದ್ದನ್ನು ಉಳಿತಾಯವನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಅಂದರೆ ಮಹಿಳೆಯರು ಪ್ರತಿದಿನವೂ ಮಾರುಕಟ್ಟೆಯಲ್ಲಿ ಕೆಲಸ ಮಾಡುವುದರ ಮೂಲಕ ಆದಾಯವನ್ನು ಗಳಿಸುವುದನ್ನು ನೋಡಲಾಗಿದೆ. ಇದರಿಂದ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ. ನಮಗೆ ಇದರಿಂದ ತಿಳಿದು ಬರುವ ಸಂಗತಿಯೆಂದರೆ ಶ್ರಮಪಟ್ಟ ದುಡಿಯುವ ಕೆಲಸ ನಮ್ಮಿಂದ ಆಗುತ್ತದೆ ಎಂದು ಹೇಳಿದ್ದಾರೆ.

ಉದ್ಯೋಗ ಸೇರಲು ಕಾರಣ ಏನು ಎಂಬುದಕ್ಕೆ ಮಹಿಳಾ ಕಾರ್ಮಿಕರು ಈ ರೀತಿಯಾಗಿ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಕುಟುಂಬ ನಿರ್ವಹಣೆ ಹಣಕಾಸಿನ ಅವಶ್ಯಕತೆ ಇರುವುದು ಗೊತ್ತಿರುವ ಸಂಗತಿಯಾಗಿದೆ. ಪ್ರತಿದಿನವೂ ನಾವು ಹಣವನ್ನು ಖರ್ಚು ಮಾಡುವ ಪ್ರಸಂಗಗಳು ಜೀವನದಲ್ಲಿ ನಡೆಯುತ್ತಿರುತ್ತದೆ. ಅದರಿಂದ ನಾವು ದುಡಿಮೆಯನ್ನು ಮಾಡಿದರೆ ಮಾತ್ರ ತಿನ್ನಲು ನಮಗೆ ಊಟ, ವಸತಿ, ಕುಡಿಯುವ ನೀರು, ವಿದ್ಯುತ್ ಬಿಲ್ಲು, ಬಟ್ಟೆ-ಬರೆಗಳನ್ನು ಖರೀದಿಸುವುದು ಇವೆಲ್ಲವೂ ಸಹ ನಮಗೆ ಅನಿವಾರ್ಯವಾಗಿ ಬೇಕಾಗಿರುವ ದಿನಸಿ ವಸ್ತುಗಳನ್ನು ಖರೀದಿಸಿಕೊಂಡು ಜೀವನವನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ನಮಗಿರುವುದರಿಂದ ಆಸಕ್ತಿಯಿಂದ ಕೆಲಸ ಎಲ್ಲಿ ಸಿಗುತ್ತದೆಯೋ ಅಲ್ಲಿಗೆ ಹೋಗಿ ಕೆಲಸ ಮಾಡಿಕೊಂಡು ಆದಾಯವನ್ನು ಗಳಿಸುತ್ತೇವೆ. ಇದರಿಂದಾಗಿ ನಾವು ಮತ್ತು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಿಸಬೇಕೆಂದು ನಾವು ದಿನನಿತ್ಯ ಮಾರುಕಟ್ಟೆಯಲ್ಲಿ ದುಡಿಯಲು ಬರುತ್ತಿದ್ದೇವೆ ಎಂದು ಹೇಳಿದ್ದಾರೆ.

ಆದಾಯ ಪ್ರತಿಯೊಬ್ಬರಿಗೂ ಬೇಕಾಗಿದೆ. ಶ್ರಮಕ್ಕೆ ತಕ್ಕ ಪ್ರತಿಫಲವನ್ನು ನಾವು ಬಯಸುತ್ತೇವೆ. ನಾವು ದುಡಿಮೆ ತಿನ್ನುವ ಜನರಾಗಿದ್ದೇವೆ. ಇನ್ನೊಬ್ಬರು ಕೊಡುವುದರಿಂದ ನಮ್ಮ ಜೀವನ

ನಡೆಸುತ್ತಿದ್ದೇವೆ. ಆದ್ದರಿಂದ ದಲ್ಲಾಳಿ ಮಾಲೀಕರು ಹೇಳಿದ ಕೆಲಸಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ.

ಕೂಲಿ ಕೆಲಸ ಮಾಡುವುದೇ ಸದ್ಯಕ್ಕೆ ನಮ್ಮ ವೃತ್ತಿಯಾಗಿ ಬಿಟ್ಟಿದೆ. ಇದರಿಂದಾಗಿ ನಾವು ಮೂರು ಹೊತ್ತು ಊಟ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರ ಮುಖ್ಯ ಆಶಯ ನಾವು ದುಡಿಯಬೇಕು, ತಿನ್ನಬೇಕು ಎಂಬುದನ್ನು ಮಹಿಳಾ ಕಾರ್ಮಿಕರು ಸ್ಪಷ್ಟಪಡಿಸಿದ್ದಾರೆ.

ಮಹಿಳಾ ಕಾರ್ಮಿಕರ ವೈವಾಹಿಕ ಸ್ಥಿತಿಯನ್ನು ತಿಳಿಯುವ ಅವಶ್ಯಕತೆ ಇರುವುದು ಈ ಅಧ್ಯಯನಕ್ಕೆ ಮುಖ್ಯವಾಗಿದ್ದು, ಕುಟುಂಬದಲ್ಲಿ ಗಂಡ-ಹೆಂಡತಿ ಇಬ್ಬರು ಅನೋನ್ಯವಾಗಿದ್ದು, ಇಬ್ಬರು ಸಹ ಉದ್ಯೋಗ ಅಥವಾ ದುಡಿಮೆ ಮಾಡುವುದರ ಮೂಲಕ ಕುಟುಂಬವನ್ನು ನಿರ್ವಹಿಸಬೇಕಾಗುತ್ತದೆ. ವೈವಾಹಿಕ ಸ್ಥಿತಿಗತಿಯು ಬಹಳ ಮುಖ್ಯವಾದ ಸಂಬಂಧವಾಗಿದೆ. ಇದರಿಂದಾಗಿ ಸಮಾಜದಲ್ಲಿ ಅನೇಕ ಸಮಸ್ಯೆ ಮತ್ತು ಸವಾಲುಗಳನ್ನು ನಾವು ಕಾಣಬಹುದಾಗಿದೆ. ಕಾರಣವೇನೆಂದರೆ ವೈವಾಹಿಕ ಸಮಸ್ಯೆಗಳಿದ್ದರೆ ಮಹಿಳೆಯನ್ನು ಗಂಡ ಕುಡಿದು ಬಂದು ಮನೆಯಲ್ಲಿ ಹೆಂಡತಿ ಮತ್ತು ಮಕ್ಕಳನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆಯನ್ನು ಕೊಡುವುದನ್ನು ಪ್ರತಿದಿನ, ದಿನಪತ್ರಿಕೆ, ಟಿವಿ ಮಾಧ್ಯಮಗಳಿಂದ ನಾವು ನೋಡುತ್ತಿರುವ ಸಂಗತಿಯಾಗಿದೆ.

ಒಂದು ಕುಟುಂಬ ನೆಮ್ಮದಿಯಿಂದ ಇದೇ ಎಂದರೆ ಅದಕ್ಕೆ ವೈವಾಹಿಕ ಸಂಬಂಧಗಳು ಚೆನ್ನಾಗಿದ್ದರೆ ಮಾತ್ರ ಕುಟುಂಬದಲ್ಲಿ ಯಾವುದೇ ಸಮಸ್ಯೆಗಳಿಲ್ಲದೇ ದುಡಿಮೆಗೆ ಹೆಚ್ಚು ಒತ್ತು ಕೊಡುವುದನ್ನು ಕಾಣಬಹುದಾಗಿದೆ. ಮಹಿಳಾ ಕಾರ್ಮಿಕರು ಮಾರುಕಟ್ಟೆಯಲ್ಲಿ ದುಡಿದು ಬಂದು ಮನೆಯಲ್ಲಿರುವ ಎಲ್ಲರಿಗೂ ಅಡುಗೆ ಮಾಡಿಕೊಡಬೇಕು. ಬಟ್ಟೆ-ಬರೆಗಳನ್ನು ತೊಳೆದುಕೊಡಬೇಕು ಮತ್ತು ಮಕ್ಕಳನ್ನು ಪೋಷಿಸಬೇಕು. ಇವೆಲ್ಲವೂ ವೈವಾಹಿಕ ಜೀವನದಲ್ಲಿ ತೊಡಗಿರುವ ಪ್ರತಿಯೊಬ್ಬ ಮಹಿಳೆಯರ ಸಮಸ್ಯೆಗಳಾಗಿವೆ ಎಂದು ಹೇಳಬಹುದಾಗಿದೆ.

ಮಹಿಳಾ ಕಾರ್ಮಿಕರ ವಾರ್ಷಿಕ ಆದಾಯಕ್ಕೆ ಸಂಬಂಧಿಸಿದಂತೆ ಮಹಿಳಾ ಕಾರ್ಮಿಕರು ದುಡಿಯುವುದರಿಂದ ಕುಟುಂಬದ ಆರ್ಥಿಕ ಸ್ಥಿತಿಯು ಸುಧಾರಿಸುತ್ತದೆ. ಏಕೆಂದರೆ ಮಹಿಳೆಯರು ದುಡಿದಿರುವ ಹಣವನ್ನು ಜೋಪಾನಮಾಡಿ ಉಳಿತಾಯವನ್ನು ಮಾಡುವುದು ಇಲ್ಲಿ ಪ್ರಮುಖವಾದ ಅಂಶವಾಗಿದೆ. ಪುರುಷರಿಗಿಂತ ಮಹಿಳೆಯರು ಹೆಚ್ಚು ಉಳಿತಾಯವನ್ನು ಮಾಡುತ್ತಾರೆಂದು ಈಗಾಗಲೇ ನಾವು ಕೇಳಿದ್ದೇವೆ. ಅದೇ ರೀತಿಯಾಗಿ ಇಂದು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಪುರುಷರು ಸಮಾನವಾದ ವೇತನವನ್ನು ಪಡೆಯುವ ಮತ್ತು ಪುರುಷರಿಗಿಂತ ಹೆಚ್ಚು ಸಂಬಳ ಅಥವಾ ತೆಗೆದುಕೊಳ್ಳುವ ಪ್ರಸಂಗಗಳನ್ನು

ನೋಡಿದ್ದೇವೆ. ಇವೆಲ್ಲ ಅಂಶಗಳಿಂದ ಕಂಡುಬರುವ ವಾದವೆಂದರೆ ಮಹಿಳಾ ಕಾರ್ಮಿಕರು ಪುರುಷ ಕಾರ್ಮಿಕರಿಗಿಂತ ಕಡಿಮೆಯಿಲ್ಲ. ಅವರು ಕೂಡ ಸಮಾನ ದುಡಿಮೆಯನ್ನು ಮಾಡುವವರಾಗಿದ್ದಾರೆ.

ಮಹಿಳಾ ಕಾರ್ಮಿಕರು ವಾರ್ಷಿಕ ಆದಾಯವನ್ನು ಗಳಿಸುವಲ್ಲಿ ಮತ್ತು ಉಳಿತಾಯದಲ್ಲಿ ಅಗ್ರಸ್ಥಾನದಲ್ಲಿರುವುದು ಕಂಡುಬಂದಿದೆ. ಅದೇ ರೀತಿಯಾಗಿ ಸ್ವಾವಲಂಬಿಗಳಾಗಿ ದುಡಿದು ಮನೆಯನ್ನು ನಿರ್ವಹಿಸುವುದನ್ನು ಕಾಣಬಹುದಾಗಿದೆ. ಮಹಿಳಾ ಕಾರ್ಮಿಕರು ಕುಟುಂಬದ ಜವಾಬ್ದಾರಿಯ ಜೊತೆಗೆ ಮಕ್ಕಳನ್ನು ಪೋಷಿಸುವುದು ಸಾಮಾನ್ಯವಾದ ಸಂಗತಿಯೇನು ಅಲ್ಲ. ಆದರೆ ಸಮಾಜದಲ್ಲಿ ಬೆಲೆಯಿಲ್ಲದ ಕಾರಣ ಆರ್ಥಿಕ ಅಧಿಕಾರವನ್ನು ಪುರುಷರು ಹೊಂದಿರುವುದರಿಂದ ಅಸಮಾನತೆಯನ್ನು ಸೃಷ್ಟಿಸಿರುವ ಸಮಾಜದ ತಪ್ಪಾಗಿದೆ ಎಂದು ಹೇಳಲಾಗಿದೆ.

ಮಹಿಳಾ ಕಾರ್ಮಿಕರ ಉದ್ಯೋಗದ ಸ್ವರೂಪಕ್ಕೆ ಸಂಬಂಧಿಸಿದ ಮಾಹಿತಿಯನ್ನು ವಿವರಿಸಲಾಗಿದೆ. ಪ್ರಮುಖವಾಗಿ ಮಹಿಳಾ ಕಾರ್ಮಿಕರು ಮಾರುಕಟ್ಟೆಯಲ್ಲಿ ವಿವಿಧ ಕೆಲಸ-ಕಾರ್ಯಗಳನ್ನು ನಿರ್ವಹಿಸುವುದನ್ನು ಕಾಣಬಹುದು. ಆದರೆ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಬ್ಯಾಡಗಿ ಮೆಣಸಿನಕಾಯಿಗೆ ಸಂಬಂಧಿಸಿದಂತೆ ಅನೇಕ ಪರಿಷ್ಕರಿಸುವ ಕೆಲಸಗಳು ಇರುವುದು ಕಂಡುಬರುತ್ತದೆ. ಮಹಿಳಾ ಕಾರ್ಮಿಕರು ಮೆಣಸಿನಕಾಯಿಯನ್ನು ತುಂಬು ತೆಗೆಯುವುದರಿಂದ ಪ್ರಾರಂಭವಾಗಿ ಪ್ಯಾಕಿಂಗ್ ಮಾಡುವುದು ಚೀಲ ತುಂಬುವುದು, ಕಸಗೂಡಿಸುವುದು ಮತ್ತು ಇತರೆ ಸಣ್ಣಪುಟ್ಟ ಕೆಲಸಗಳನ್ನು ಮಹಿಳಾ ಕಾರ್ಮಿಕರು ಮಾರುಕಟ್ಟೆಯಲ್ಲಿ ಮಾಡುವ ಕೆಲಸ-ಕಾರ್ಯಗಳಾಗಿವೆ ಎಂದು ಹೇಳಬಹುದಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಅದರಲ್ಲಿ ವಿಶೇಷವಾಗಿ ಮಹಿಳಾ ಕಾರ್ಮಿಕರು ಮೆಣಸಿನಕಾಯಿಯು ಅತಿ ಹೆಚ್ಚು ಖಾರವನ್ನು ಹೊಂದಿದೆ. ಅದರಿಂದಾಗಿ ಮಹಿಳಾ ಕಾರ್ಮಿಕರ ಆರೋಗ್ಯದ ಮೇಲೆ ಪರಿಣಾಮ ಸಾಧ್ಯತೆಗಳು ಹೆಚ್ಚಾಗಿ ಕಂಡುಬರುವುದನ್ನು ಕಾಣಬಹುದು. ಆರೋಗ್ಯವನ್ನು ಕಾಪಾಡಿಕೊಂಡು ದುಡಿಮೆ ಮಾಡುವುದು ಒಂದು ಸವಾಲಿನ ಕೆಲಸವನ್ನು ಮಹಿಳಾ ಕಾರ್ಮಿಕರು ಅಳಲನ್ನು ತೋಡಿಕೊಂಡಿರುವುದನ್ನು ಕಾಣಬಹುದಾಗಿದೆ. ಮಾರುಕಟ್ಟೆಯಲ್ಲಿರುವ ಪ್ರತಿಯೊಂದು ಕೆಲಸವನ್ನು ಮಹಿಳಾ ಕಾರ್ಮಿಕರು ಮುಗಿಸಿ ಮನೆಗೆ ಹೋಗುವುದನ್ನು ನೋಡಬಹುದಾಗಿದೆ. ಇದರಿಂದಾಗಿ ಕೆಲಸದ ಸ್ವರೂಪದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆಗಳಿರುವುದು ಕಂಡುಬರುತ್ತದೆ.

ಮಹಿಳಾ ಕಾರ್ಮಿಕರ ಕಣ್ಣಿನಲ್ಲಿ ನೀರು ಬರುವುದು ಮತ್ತು ಕಣ್ಣುಗಳು ಉರಿಯುವುದು ಸಾಮಾನ್ಯವಾದ ಸಂಗತಿಯಾಗಿ ಬಿಟ್ಟಿದೆ ಎಂದು ಮಹಿಳಾ ಕಾರ್ಮಿಕರು ಅವರ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಮಹಿಳಾ ಕಾರ್ಮಿಕರು ಹೊಂದಿರುವ ಪಡಿತರ ಚೀಟಿ ಸಂಬಂಧಿಸಿದ ಮಾಹಿತಿಯನ್ನು ಪರಿಷ್ಕರಿಸಿ ಸಂಗ್ರಹಿಸಿದ್ದು ಇಲ್ಲಿ ಪಡಿತರ ಕಾರ್ಡುಗಳು ಒಂದು ಪ್ರಮುಖವಾದ ಅಂಗವಾಗಿದೆ. ಇಲ್ಲಿ ಪಡಿತರ ಚೀಟಿಯು ಅವರ ಕುಟುಂಬದ ಆರ್ಥಿಕ ಸ್ಥಿತಿಗತಿಯನ್ನು ಅಲೆಯುವಂತೆ ಮಾಡುವುದು ಒಂದು ಸರಕಾರದ ಮಾಪನವಾಗಿದೆ ಎಂದು ಹೇಳಬಹುದಾಗಿದೆ. ಬಿ.ಪಿ.ಎಲ್. ಕಾರ್ಡು ಹೊಂದಿರುವವರು ಬಡತನ ರೇಖೆಯ ಕೆಳಗಿರುವ ಕುಟುಂಬಗಳು ಎಂದು ಅರ್ಥಮಾಡಿಸುತ್ತದೆ. ಬಡತನವು ಆರೋಗ್ಯದ ಮೇಲೆ ನೇರವಾಗಿ ಪರಿಣಾಮ ಬೀರುವ ಒಂದು ಅಂಗವಾಗಿದ್ದು, ದುಡಿಮೆ ಇದಕ್ಕೆ ಪರಿಹಾರವಾಗಿದೆ. ಎ.ಪಿ.ಎಲ್. ಕಾರ್ಡುದಾರರು ಸಹ ಆರ್ಥಿಕವಾಗಿ ಸಬಲರು ಎಂದು ಅರ್ಥವನ್ನು ತಿಳಿಸುತ್ತದೆ. ಅದರಲ್ಲಿ ಪ್ರಮುಖವಾಗಿ ಆದಾಯವನ್ನು ಗಳಿಸುವುದರಲ್ಲಿ ಸ್ವಲ್ಪ ಹೆಚ್ಚು ಮುಂದೆ ಬಂದಿರುವ ಕುಟುಂಬಗಳನ್ನು ಪ್ರತಿನಿಧಿಸುವ ಹಕ್ಕನ್ನು ಹೊಂದಿದೆ.

ಅಂತ್ಯೋದಯ ಕಾರ್ಡು ಬಳಕೆದಾರರು ಅತ್ಯಂತ ಕಡುಬಡವರು ಎಂದು ಹೇಳುವ ಪಡಿತರ ಚೀಟಿ ಇದಾಗಿದ್ದು, ಇದಕ್ಕೆ ಸರಿಯಾಗಿ ರೀತಿಯಲ್ಲಿ ನಾವು ಸರ್ಕಾರವನ್ನು ಪ್ರಶ್ನಿಸುವ ಹಕ್ಕು ಹೊಂದಿದ್ದೇವೆ ಎಂದು ಹೇಳುತ್ತಾರೆ. ಬಡತನವನ್ನು ನಿವಾರಿಸುವ ಸಲುವಾಗಿ ಕರ್ನಾಟಕ ಸರ್ಕಾರವು ಅನ್ನಭಾಗ್ಯ ಯೋಜನೆ ಮತ್ತು ಇಂದಿರಾ ಕ್ಯಾಂಟೀನ್‌ಗಳನ್ನು ಜಾರಿಗೆ ತಂದರೂ ಕೂಡ ಪ್ರಯೋಜನ ಸ್ವಲ್ಪಮಟ್ಟಿನ ಬಡತನವನ್ನು ಕಡಿಮೆ ಮಾಡಿದೆ. ಆದರೆ ಅದರ ಉಪಯೋಗವನ್ನು ಎಲ್ಲರಿಗೂ ತಲುಪದಿರುವುದು ಶೋಚನೀಯ ಸಂಗತಿಯಾಗಿದೆ ಎಂದು ಹೇಳಬಹುದು. ಕಾರಣ ಮಧ್ಯವರ್ತಿಗಳ ಹಾವಳಿಯಿಂದ ನಾವು ದಿನನಿತ್ಯ ಸಿಗುವ ಆಹಾರವು ಬಲಾಢ್ಯರ ಕೈಸೇರುವ ಪ್ರಸಂಗಗಳನ್ನು ನಾವು ದಿನನಿತ್ಯ ಮಾಧ್ಯಮಗಳಲ್ಲಿ ಕಾಣುತ್ತೇವೆ ಎಂದು ಹೇಳಿದ್ದಾರೆ.

ಸ್ತ್ರೀಶಕ್ತಿ ಸಂಘಗಳು ಇದರ ಆಶಯ ಪ್ರತಿಯೊಬ್ಬ ಮಹಿಳೆಯು ಆರ್ಥಿಕವಾಗಿ ಸಬಲಳಾಗಬೇಕು ಎನ್ನುವುದು ಸ್ತ್ರೀಶಕ್ತಿ ಸಂಘಗಳ ಆಸಕ್ತಿಯಾಗಿದೆ. ಮಹಿಳಾ ಕಾರ್ಮಿಕರು ಮಾರುಕಟ್ಟೆಯಲ್ಲಿ ಯಾವುದೇ ಸಂಘಗಳನ್ನು ಹೊಂದಿರುವ ಅಂಶವು ಕಾಣಿಸುವುದಿಲ್ಲ. ಕಾರಣ ಬೇರೆ ಬೇರೆ ಜಾತಿಯವರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಕೆಲಸ ಮಾಡುವುದರಿಂದಾಗಿ ಅವರು ನಮ್ಮ ಜಾತಿಯವರನ್ನು ಸಂಘಗಳಲ್ಲಿ ಸೇರಿಸಿಕೊಳ್ಳುವುದಿಲ್ಲ ಎಂದು ಹೇಳಿಕೊಂಡಿರುವುದನ್ನು ನೋಡಬಹುದಾಗಿದೆ. ಮಹಿಳೆಯರು ಆರ್ಥಿಕವಾಗಿ ಸಬಲತೆಯನ್ನು ಹೊಂದಿದರೆ ಇಡೀ

ಸಮಾಜವು ನೆಮ್ಮದಿಯಿಂದ ಜೀವನವನ್ನು ಸಾಗಿಸುವುದನ್ನು ಕಾಣಬಹುದಾಗಿದೆ. ಕೆಲವೊಂದು ಸಂದರ್ಭಗಳಲ್ಲಿ ಆರ್ಥಿಕ ಆಯಾಮಗಳಲ್ಲಿ ಭಿನ್ನತೆಯನ್ನು ಕಾಣಬಹುದಾಗಿದೆ.

ಮಹಿಳಾ ಕಾರ್ಮಿಕರು ಹಣಕಾಸಿನ ಲೆಕ್ಕಬುಕ್ಕಗಳನ್ನು ಚೆನ್ನಾಗಿ ತಿಳಿದುಕೊಂಡಿರುವುದನ್ನು ನಾವು ಕಾಣಬಹುದಾಗಿದೆ. ಉಳಿತಾಯವೇ ಮುಖ್ಯವಾದ ಅಂಶವಾಗಿದೆ. ಎಷ್ಟು ದುಡಿದರು ಸಹ ಮನೆಯಲ್ಲಿ ಹಲವಾರು ಹಣಕಾಸಿನ ಸಮಸ್ಯೆಗಳು ಇರುವುದು ಕಂಡುಬಂದಿದೆ. ಅದರಿಂದಾಗಿ ಮಹಿಳಾ ಕಾರ್ಮಿಕರು ಪುರುಷರಿಗಿಂತ ಆರ್ಥಿಕ ಅಸಮಾನತೆಯನ್ನು ಹೊಂದಿರುವ ಚಿತ್ರಣವನ್ನು ಕಾಣಬಹುದಾಗಿದೆ. ಕುಟುಂಬಕ್ಕೋಸ್ಕರ ಇಡೀ ಜೀವನವನ್ನು ತ್ಯಾಗಮಾಡಿ ಮಕ್ಕಳನ್ನು ಪೋಷಿಸುವವರು ಯಾರಾದರೂ ಈ ಸಮಾಜದಲ್ಲಿ ಇದ್ದರೆ, ಅವರು ಮಹಿಳೆಯರಾಗಿರುತ್ತಾರೆ ಎಂದು ಹೇಳುವುದರಲ್ಲಿ ಅತಿಶಯೋಕ್ತಿಯಲ್ಲ.

ಮಾಹಿತಿದಾರರ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ನಾನು ಹಾವೇರಿ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಲ್ಲಿ ಇರುವಂತಹ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿರುವಂತಹ ಹಾವೇರಿಯಲ್ಲಿರುವ ಸರಕಾರಿ ಆಸ್ಪತ್ರೆಯನ್ನು ಗಮನಿಸಿದಾಗ ಸರಕಾರಿ ಅಸ್ಪತ್ರೆಯ ೧೪ ಇದ್ದು ಖಾಸಗಿ ಆಸ್ಪತ್ರೆ–೧೯ ಇದ್ದ. ಹಾಗೆಯೇ ಪ್ರಾಥಮಿಕ ಆರೋಗ್ಯ ಕೇಂದ್ರಗಳು ೧೨ ಕಾರ್ಯರಂಭ ಮಾಡುತ್ತಿವೆ. ಅದೇ ತರಹ ಬ್ಯಾಡಗಿಯಲ್ಲಿ ೫ ಸರಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ೪ ಇರುತ್ತವೆ. ಒಟ್ಟಾರೆಯಾಗಿ ಹಾವೇರಿ ಮತ್ತು ಬ್ಯಾಡಗಿಯಲ್ಲಿರುವ ಆಸ್ಪತ್ರೆಗಳನ್ನು ಗಮನಿಸಿದಾಗ ನನ್ನ ಅಧ್ಯಯನ ಕ್ಷೇತ್ರದಲ್ಲಿ ಅಷ್ಟೊಂದು ಸುಸಜ್ಜಿತವಾಗಿರುವುದಿಲ್ಲ ಅಲ್ಲಿನ ಜನರು ಹತ್ತಿರದ ದಾವಣಗೆರೆ. ಮತ್ತು ಅರ್ಧ ಹುಬ್ಬಳ್ಳಿ ನಗರಗಳಿಗೆ ಹೋಗಬೇಕಾಗಿರುತ್ತದೆ. ಆರೋಗ್ಯ ಮಾಹಿತಿಯ ಪ್ರಕಾರ ಉತ್ತಮವಾಗಿದೆ. ಹಾಗೂ ಸಾಧರಣವಾಗಿದೆ. ಮತ್ತು ಮಧ್ಯಮವಾಗಿದೆ. ಉತ್ತಮವಾಗಿರುವ ಎಂಬ ಅಭಿಪ್ರಾಯಗಳು ಬರುತ್ತವೆ. ಜನರು/ ಮಾಹಿತಿದಾರರು ೨೭೫ ಪ್ರತಿಶತ ೫೫% ಇರುತ್ತಾರೆ. ಸಾಧಾರಣವಾಗಿರುವ ಮಾಹಿತಿದಾರರು ೨೧೫ ಪ್ರತಿಶತ ೪೨% ಮದ್ಯಮವಾಗಿದೆ.– ೧೦ ಮಾಹಿತಿದಾರರು ೦೨ ಸರಿಯಾಗಿಲ್ಲ – ೦೦೭ ಒಟ್ಟು ನನ್ನ ಅಧ್ಯಯನದಲ್ಲಿ ೧೦೦.೦೦ ರಷ್ಟು ಇರುವುದನ್ನು ಗಮನಿಸಬಹುದಾಗಿದೆ.

ಈ ಮೇಲೆ ಹೇಳಿರುವಂತೆ ಮಾಹಿತಿದಾರರ ಆರೋಗ್ಯದ ಸ್ಥಿತಿಗತಿಯ ಬಗ್ಗೆ ಪ್ರತಿಶತ ೫೫% ರಷ್ಟು ಮಾಹಿತಿದಾರರು ೫೫% ಮಹಿಳೆಯರ ಆರೋಗ್ಯವೂ ಉತ್ತಮವಾಗಿದೆ ಎಂಬುದನ್ನು ತಿಳಿಸಿ ಕೊಡುತ್ತದೆ. ಹಾಗೆಯೇ ೪೨% ಮಹಿಳೆ ಸಾಧಾರಣ ಹಾಗೂ ೨% ರಷ್ಟು ಮಹಿಳೆಯರ ಆರೋಗ್ಯವು ಮಧ್ಯಮವಾಗಿದೆ ಎಂದು ಕಂಡು ಬಂದಿದೆ. ಪ್ರಸಕ್ತವಾಗಿ ಈ ಅಧ್ಯಯನ ಮಾಹಿತಿ ಮಾಹಿತಿದಾರರ ಹೇಳಿಕೆಯನ್ನು ಗಮನಿಸಿದಾಗ ನನ್ನ ಆರೋಗ್ಯದ ಸ್ಥಿತಿಗತಿ ಸರಿಯಿಲ್ಲ

ಎಂದು ಹೇಳಿರುವುದು ವಿಶೇಷವಾಗಿದೆ ಎಂದು ನನ್ನ ಕ್ಷೇತ್ರ ಕಾರ್ಯ ಮಾಡುವಾಗ ತಿಳಿದು ಬಂದ ಮಾಹಿತಿಯಾಗಿರುತ್ತದೆ.

ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಆರೋಗ್ಯದ ಸ್ಥಿತಿಗತಿ ಎಂಬ ವಿಷಯದ ಬಗ್ಗೆ ಸಂಶೋಧನೆ ಕೈಗೂಡಿರುತ್ತೇನೆ. ನಾನು ಸಮೀಕ್ಷೆ ಮಾಡಿರುವುದರ ಆಧಾರದ ಮೇಲೆ ಇಲ್ಲಿಯ ಜನರು ತುಂಬ ಆರೋಗ್ಯದ ಸಮಸ್ಯೆಗಳಿಂದ ಬದುಕುತ್ತಿದ್ದಾರೆ. ಅವುಗಳನ್ನು ಒಟ್ಟಾರೆಯಾಗಿ ಹಾವೇರಿ ಜಿಲ್ಲೆಯಲ್ಲಿ ೪ ತಾಲ್ಲೂಕು ಇದ್ದು ಇದರಲ್ಲಿ ನಾನು ಬ್ಯಾಡಗಿ ಎಂಬ ತಾಲೂಕಿನಲ್ಲಿ ಅಧ್ಯಯನವನ್ನು ಕೈಗೊಂಡು ಇದರಲ್ಲಿ ಮಾರುಕಟ್ಟೆಯಲ್ಲಿ ದುಡಿಯುತ್ತಿರುವ ಮಹಿಳೆಯರ ಅರೋಗ್ಯದ ಬಗ್ಗೆ ಪರಿಶೀಲಿಸುವುದು ನನ್ನ ಕರ್ತವ್ಯವಾಗಿದೆ. ಹಾಗಾಗಿ ನಾನು ಅವರನ್ನು ಸಂದರ್ಶಿದಾಗ ಒಟ್ಟಾರೆ ೫೦೦ ದಿನಗಳಲ್ಲಿ ನಮಗೆ ಆರೋಗ್ಯದ ಉತ್ತಮವಾಗಿದೆ ಎಂದು ಹೇಳದವರು ೨೭೫% ಸಾಧಾರಣವಾಗಿದೆ ಎಂದು ಹೇಳಿದವರು ೨೧೫ ಪರವಾಗಿಲ್ಲ ಎಂದವರು. ೧೦ ಜನರು ಹೀಗಾಗಿ ಇಲ್ಲಿನ ಜನ ಸ್ಥಿತಿಗತಿಯಲ್ಲಿನ ಸಮಸ್ಯೆಗಳ ಬಗ್ಗೆ ಅಧ್ಯಾಯನ ಮಾಡಲಾಗಿದೆ.

ಮಾಹಿತಿದಾರರು ಒಂದು ವರ್ಷದಿಂದ ಅನುಭವಿಸುತ್ತಿರುವ ಅನಾರೋಗ್ಯ ಸಮಸ್ಯೆಯನ್ನು ನೋಡಿದಾಗ ಅದರಲ್ಲಿ ಹಲವಾರು ರಕ್ತಹೀನತೆ ೩೦ ಶೇಖಡವಾರು ೦೯ ಅಪೌಷ್ಠಿಕತೆ ೬೫% ಇರುತ್ತದೆ. ಇತರೆ ೪೦೫ ಕಾಯಿಲೆಗಳಿಂದ ನೋವನ್ನು ದುಷ್ಪರಿಣಾಮ ಬೀರಿದ ಪ್ರಮಾಣವನ್ನು ಸೂಚಿಸುತ್ತದೆ. ೫೪% ರಷ್ಟು ಮಹಿಳೆಯರು ತಮ್ಮ ಆರೋಗ್ಯದ ಮೇಲೆ ಯಾವುದೇ ರೀತಿ ಪರಿಣಾಮ ಬೀರಿಲ್ಲ ಎಂದು ತಿಳಿಸಿದ್ದಾರೆ.

ಮಾಹಿತಿದಾರರಿಗೆ ಯಾವ ಕಾಯಿಲೆ ಬಂದಿದೆ ಎಂಬುದನ್ನು ಪರಿಶೀಲಿಸಿದಾಗ ನಾವು ಅವರ ಮಾಹಿತಿಯನ್ನು ಕಲೆಹಾಕಲಾಗಿದ್ದು ಇದರಲ್ಲಿ ಅಸ್ತಮಾ ಕಾಯಿಲೆಯಿಂದ ಪ್ರತಿಶತ ೧೦%ರಷ್ಟು ಮಾಹಿತಿದಾರರು ಕಾಯಿಲೆಯನ್ನು ಅನುಭವಿಸುತ್ತಿದ್ದಾರೆ. ದಮ್ಮು ಕಾಯಿಲೆಯಿಂದ ಪ್ರತಿಶತ ೩೦% ರಷ್ಟು ಮಾಹಿತಿದಾರರು ಖಾಯಿಲೆಯನ್ನು ಅನುಭವಿಸುತ್ತಿದ್ದಾರೆ. ಚರ್ಮರೋಗ ಕಾಯಿಲೆಯಿಂದ ಪ್ರತಿಶತ ೧೦% ರಷ್ಟು ಮಾಹಿತಿದಾರರು ಕಾಯಿಲೆಯನ್ನು ಅನುಭವಿಸುತ್ತಿದ್ದಾರೆ. ಕಣ್ಣು ಉರಿಯಿಂದ ಪ್ರತಿಶತ ೩೦% ರಷ್ಟು ಮಾಹಿತಿದಾರರು ಕಾಯಿಲೆಯಿಂದ ಸಮಸ್ಯೆಗಳಿಗೆ ಈಡಾಗಿದ್ದಾರೆ. ಮತ್ತು ಇತರ ಕಾಯಿಲೆಯಿಂದ ಪ್ರತಿಶತ ೩೦% ರಷ್ಟು ಮಾಹಿತಿದಾರರು ಕಾಯಿಲೆಯನ್ನು ಅನುಭವಿಸುತ್ತಿದ್ದಾರೆ ಎಂದು ಹೇಳಬಹುದು.

ಮಾಹಿತಿದಾರರು ಚಿಕಿತ್ಸೆ ಪಡೆಯಲು ಹೊಗುವ ವಿಮರ್ಶೆಯನ್ನು ನೋಡಿದಾಗ ಮಹಿಳೆಯರು ಕಾಯಿಲೆಗೆ ತುತ್ತಾಗಿದ್ದಾಗ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತೇವೆ ಎಂದು

ತಿಳಿಸಿದರೆ ಖಾಸಗಿ ೧೮% ರಷ್ಟು ಮಹಿಳೆಯರು ಖಾಯಿಲೆಗೆ ತುತ್ತಾಗಿದಲ್ಲಿ ಆಯುರ್ವೇದಿಕ ಔಷಧಿಯನ್ನು ಪಡೆಯುತ್ತೇವೆ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ಪ್ರತಿಶತ ೩೬% ರಷ್ಟು ಮಹಿಳೆಯರು ಖಾಯಿಲೆಗೆ ತುತ್ತಾಗಿದ್ದಾಗ ಕೇವಲ ಮನೆಯ ಔಷದಿಯನ್ನು ತೆಗೆದುಕೊಳ್ಳುತ್ತೇವೆ ಎಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಮಹಿಳಾ ಕೃಷಿ ಕಾರ್ಮಿಕರು ಖಾಯಿಲೆಗೆ ತುತ್ತಾಗಿದ್ದರು ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತಿರುವುದು ಇಲ್ಲಿ ಗಮನಿಸಬಹುದಾಗಿದೆ.

ಮಾಹಿತಿದಾರರ ಕಾಯಿಲೆಗಳು ಎಷ್ಟು ದಿನದಿಂದ ಕಾಣಿಸಿಕೊಂಡಿರುವ ಬಗ್ಗೆ ವಿವರಣೆಯನ್ನು ಕೇಳಿದಾಗ ಅವರಿಂದ ಬಂದ ಮಾಹಿತಿಯು ಕೆಲವರಿಗೆ ೪ ತಿಂಗಳ ಹಿಂದೆ ೩೬% ಎಂದು ಹೇಳಿದಾಗ ಕೇಲವರು ೬ ತಿಂಗಳ ಹಿಂದೆ ೨೪% ಮತ್ತೆ ಕೆಲವರನ್ನು ವಿಚಾರಿಸಿದಾಗ ೧ ವರ್ಷದ ಹಿಂದೆ ೨೬% ಜನ ಹೇಳಿಕೆ ಕೊಟ್ಟಿದ್ದಾರೆ ಮತ್ತೆ ಕೆಲವರು ೧ ವರ್ಷಕ್ಕಿಂತ ಹೆಚ್ಚು ದಿನಗಳಿಂದ ಕಾಯಿಲೆಗಳು ಕಾಣಿಸಿಕೊಂಡಿವೆ ಎಂಬುದನ್ನು ವಿವರಿಸುತ್ತಾರೆ. ಇದರಲ್ಲಿ ಅಂಕಿ – ಅಂಶಗಳನ್ನು ಗಮನಿಸಿದಾಗ ಇವರಲ್ಲಿ ಬಹು ದೀರ್ಘವಾದ ಕಾಯಿಲೆಗಳೇನೂ ಇಲ್ಲ ಎಂಬುವುದು ತಿಳಿದುಬರುತ್ತದೆ.

ಮಾಹಿತಿದಾರರನ್ನು ಪದೇ– ಪದೇ ಕಾಡುವ ರೋಗಗಳು ಯಾವುದು ಎಂಬುದನ್ನು ಅವಲೋಕಿಸಿದಾಗ ಅವರಲ್ಲಿ ಕೆಮ್ಮು, ಕಣ್ಣುಉರಿ ಚರ್ಮರೋಗ, ಎದೆನೋವು, ಇತರೆ ಕಾರಣಗಳು ಇರುವಂತಹದ್ದು ತಿಳಿದು ಬರುತ್ತದೆ. ಹೀಗೆ ಎಷ್ಟೋ ಮಹಿಳೆಯರು ಮಾರುಕಟ್ಟೆಯಲ್ಲಿ ಈ ತರಹದ ಆನಾರೋಗ್ಯಕ್ಕೆ ಒಳಗಾಗಿ ನೋವನ್ನು ಅನುಭವಿಸುತ್ತಿರುವುದು ಕಂಡು ಬರುತ್ತದೆ.

ಇದರಲ್ಲಿ ೨೭% ರಷ್ಟು ಮಹಿಳೆಯರಿಗೆ ಪದೇ – ಪದೇಯಾಗಿ ಕಾಡುವ ಖಾಯಿಲೆಗಳ ವಿವರವನ್ನು ತಿಳಿಸುತ್ತದೆ. ಅವರಿಗೆ ಕೆಮ್ಮು ಬರುತ್ತದೆ ಎಂದರೆ ಪ್ರತಿಶತ ೨೬ ರಷ್ಟು ಮಹಿಳೆಯರು ಪದೇ – ಪದೇಯಾಗಿ ಕಣ್ಣುಉರಿ ತೊಂದರೆ ಕಾಡುತ್ತದೆ. ಎಂದರೆ ಇನ್ನೂ ೧% ರಷ್ಟು ಮಹಿಳೆಯರಿಗೆ ಪದೇ –ಪದೇಯಾಗಿ ಚರ್ಮರೋಗ ಕಾಣಿಸಿಕೊಂಡಿದೆ ಎಂದಿದ್ದಾರೆ. ಮತ್ತೆ ೯% ಮಹಿಳೆಯರು ಎದೆನೋವು ಕಾಡುತ್ತದೆ ಎಂದು ತಮ್ಮ ನೋವನ್ನು ಹೇಳಿಕೊಂಡಿದ್ದಾರೆ.

ಮಾಹಿತಿದಾರರ ಕೆಲಸ ಸ್ಥಳ ರೀತಿಯ ವಿವರಣೆ ಕೃಷಿ ಉತ್ಪನ್ನ ಮಾರುಕಟ್ಟೆಗೆ ಚೀಟಿ ನೀಡಿದಾಗ ಅವರಿಂದ ಸಿಕ್ಕ ಮಾಹಿತಿ ಈ ರೀತಿಯಾಗಿದೆ. ೪೦% ರಷ್ಟು ಮಹಿಳೆಯರು ಸಾಧಾರಣವಾಗಿದೆ ಎಂದು ವ್ಯಕ್ತಪಡಿಸಿದ್ದಾರೆ. ಇನ್ನೂ ಕೆವಲ ಮಹಿಳೆಯರು ೬೦% ಮಹಿಳೆಯರು ಉತ್ತಮವಾಗಿದೆ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ೫೦% ರಷ್ಟು ಮಹಿಳೆಯರು ಕೆಲಸದ ಸ್ಥಳದಲ್ಲಿ ಯಾವುದೇ ರೀತಿಯಿಂದಲೂ ಅತ್ಯತ್ತಮವಾಗಿದೆ ಎಂದು ಯಾರು ವ್ಯಕ್ತಪಡಿಸಿಲ್ಲ.

ಮಾಹಿತಿದಾರರು ಪಡೆದ ಸರ್ಕಾರಿ ಸೌಲಭ್ಯಗಳು ಅವರ ಆರೋಗ್ಯ ಹೇಗೆ ಸಹಾಯವಾಗಿದೆ ಎಂಬುದರ ಮಾಹಿತಿ ಅವರ ಆರೋಗ್ಯ ಹೇಗೆ ಸಹಾಯವಾಗಿದೆ ಎಂಬುದರ ಬಗ್ಗೆ ತಿಳಿಸುತ್ತದೆ. ಪ್ರತಿಶತ ೫% ರಷ್ಟು ಮಹಿಳೆಯರು ತಾವು ಪಡೆದ ಸರ್ಕಾರಿ ಸೌಲಭ್ಯಗಳು ತಮ್ಮ ಆರೋಗ್ಯ ಉತ್ತಮವಾಗಿದೆ ಎಂದು ಹೇಳಿದ್ದಾರೆ. ಪ್ರತಿಶತ ೦೦% ಮಹಿಳೆಯರು ತಾವು ಪಡೆದ ಸರ್ಕಾರಿ ಸೌಲಭ್ಯಗಳು ತಮ್ಮ ಆರೋಗ್ಯ ೦% ಅತ್ಯುತ್ತಮವಾಗಿದೆ ಎಂದು ಹೇಳಿದ್ದಾರೆ. ಪ್ರತಿಶತ ೯೫% ರಷ್ಟು ಮಹಿಳೆಯರು ತಾವು ಪಡೆದ ಸರ್ಕಾರಿ ಸೌಲಭ್ಯಗಳು ತಮ್ಮ ಆರೋಗ್ಯಕ್ಕೆ ಸಾಧಾರಣವಾಗಿ ಸಹಾಯವಾಗಿದೆ ಎಂದು ತಿಳಿಸಿದರೆ. ಒಟ್ಟಾರೆಯಾಗಿ ಇಲ್ಲಿ ಆರೋಗ್ಯ ಸಮಸ್ಯೆಗಳನ್ನು ನೋಡಿದಾಗ ಇಲ್ಲಿ ಇನ್ನೂ ಬರೆಯುವುದು ತುಂಬ ಇದೆ ಎಂದು ತಿಳಿಸಲು ವಿಷಾದಿಸುತ್ತೇನೆ.

ದೇಶ ಸ್ವತಂತ್ರವಾಗಿ ದಶಕಗಳು ಕಳೆದಿದ್ದರೂ ಸಹ ಇಂದಿಗೂ ಕಾರ್ಮಿಕ ಮಹಿಳೆಯರು ತಮ್ಮ ಮೂಲಭೂತ ಹಕ್ಕುಗಳನ್ನು ಮತ್ತು ಆರೋಗ್ಯ ಸೇವಾ ಸೌಲಭ್ಯಗಳನ್ನು ಪಡೆಯಲು ಹೋರಾಟ ನಡೆಸಬೇಕಾದ ಸವಾಲು ಅವರ ಮುಂದೆ ಇದೆ. ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟು ಅವಲೋಕಿಸಿದಲ್ಲಿ ಕುಟುಂಬದಲ್ಲಿ ಮಹಿಳೆಯರ ಆರೋಗ್ಯದ ನಿರ್ಲಕ್ಷ್ಯತೆ, ಅವರ ಮೇಲೆ ದೌರ್ಜನ್ಯ ಹಾಗೂ ದುರುಪಯೋಗ ಇಂತಹ ಹೀನ ಕಾರ್ಯಗಳು ಮುಂದುವರೆದ ಸುಶಿಕ್ಷಿತ ಸಮಾಜದಲ್ಲಿನ ಶಾಪವಾಗಿದೆ. ಸಮಾಜದಲ್ಲಿನ ಹೆಣ್ಣಿನ ಆರೋಗ್ಯ ಸ್ಥಿತಿಗತಿ ಅವರನ್ನು ಕುರಿತು ತೋರಬೇಕಾದ ಕಾಳಜಿ ಈ ಜಗತ್ತಿನಾದ್ಯಂತ ಚರ್ಚೆಯಲ್ಲಿರುವ ಪ್ರಮುಖ ವಿಚಾರ. ಅದರ ಜೊತೆಗೆ ಮಹಿಳೆಯರು ಜೈವಿಕವಾಗಿ, ನೈಸರ್ಗಿಕವಾಗಿ ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬ ಕಾರಣದಿಂದ ಅವರ ಆರೋಗ್ಯ ಸಮಸ್ಯೆಗಳನ್ನು ಜಾಗತಿಕವಾಗಿ ಬಹಳ ಗಂಭೀರವಾಗಿ ಪರಿಗಣಿಸಲಾಗುತ್ತದೆ.

ಭಾರತ ಹಳ್ಳಿಗಳ ದೇಶ ಜನಗಣತಿಯ ಆಧಾರದ ಮೇಲೆ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಮಹಿಳೆಯರ ಸಂಖ್ಯೆ ಹೆಚ್ಚಾಗಿರುತ್ತದೆ. ಮಹಿಳೆಯರ ಆರೋಗ್ಯ ಸೂಚಕಗಳಲ್ಲಿ ಅತಿ ಸ್ಥೂಲವಾಗಿ, ಅದರೆ ಬಲು ನಿಚ್ಚಳವಾಗಿ ನಮ್ಮ ಸಮಾಜದಲ್ಲಿ ಅವರ ಸ್ಥಾನಮಾನಗಳೇನು ಎನ್ನುವುದನ್ನು ಅನೇಕ ದಶಕಗಳಿಂದ ಪ್ರಕಟವಾಗುತ್ತಿರುವ ಜನಗಣತಿಯ ವರದಿಗಳಲ್ಲಿ ಕಂಡು ಬರುತ್ತಿರುವ ಕಡಿಮೆಯಾಗುತ್ತಲೇ ನಡೆದಿರುವ ಸ್ತ್ರೀಯರ ಸಂಖ್ಯೆಯೇ ಎತ್ತಿ ತೋರಿಸುತ್ತದೆ. ಇಂದು ಪುರುಷ ಮಹಿಳೆಯರ ಲಿಂಗಾನುಪಾತ ೧೦೦೦ ಕ್ಕೆ ೯೬೪ ಇದ್ದು, ಇದು ಮುಂದಿನ ಪೀಳಿಗೆಯ ಏರುಪೇರಿನ ಚಿತ್ರಣಕ್ಕೆ ಸ್ಪಷ್ಟ ಕನ್ನಡಿಯಾಗಿದೆ. ಹಾಗಾಗಿ ಮಹಿಳೆಯರ ಆರೋಗ್ಯದ ಸ್ಥಿತಿಗತಿ ಸುಧಾರಿಸುವಲ್ಲಿ, ಆಕೆಯ ಉಳಿವಿಗಾಗಿ ಆಕೆಯ ಶ್ರೇಯೋಭಿವೃದ್ಧಿಗಾಗಿ ಜಾರಿಗೊಳಿಸಿದ ಹಾಗೂ ಜಾರಿಗೊಳಿಸುತ್ತಿರುವ ಹಲವಾರು ಯೋಜನೆಗಳು

ಸರಕಾರದ ಕಳಕಳಿಯ ಪ್ರತೀಕವಾಗಿದೆ. ಆದರೆ ಈ ಯೋಜನೆಗಳು ಸರಿಯಾದ ವ್ಯವಸ್ಥೆಯಲ್ಲಿ ಮಹಿಳಾ ಕಾರ್ಮಿಕರಿಗೆ ತಲುಪದಿರುವುದು ವಿಷಾದಕರ ಸಂಗತಿಯಾಗಿದೆ.

ನಮ್ಮ ದೇಶದಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಕೌಟುಂಬಿಕ ಲಿಂಗ ಸಮಾನತೆಯು ಸ್ತ್ರೀಯರ ಸಂಪೂರ್ಣ ಆರೋಗ್ಯಕ್ಕೂ ಹಾಗೂ ಸಮುದಾಯದ ಆರೋಗ್ಯಕ್ಕೂ ಹೇಗೆ ಮಾರಕವಾಗಿದೆ ಎಂಬ ಸಾಮಾಜಿಕ ಸತ್ಯವನ್ನು ಸೃಷ್ಟೀಕರಿಸುವುದು ಹಾಗೂ ಸಾಮಾಜಿಕ ವಸ್ತುಸ್ಥಿತಿಗಳನ್ನು ಮಹಿಳೆಯರ ಅನುಭಾವಾತ್ಮಕ ನೆಲೆಯಿಂದ ಪರಿಶೀಲಿಸುವುದು ಮುಖ್ಯ ಗುರಿಯಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಹಲವಾರು ವರದಿಗಳು, ಯು.ಎನ್.ಡಿ.ಪಿ.ಯ ಮಾನವ ವಿಕಾಸ, ವರದಿಗಳು, ಸರ್ಕಾರ ಮತ್ತು ಸರಕಾರೇತರ ಸಂಸ್ಥೆಗಳು ಒದಗಿಸಿರುವ ಅಂಕಿ ಅಂಶಗಳು ಮತ್ತೆ ಜಗತ್ತಿನೆಲ್ಲೆಡೆ ನಡೆಸಲಾಗಿರುವ ಹಲವಾರು ಅಧ್ಯಯನಗಳ ಫಲಿತಾಂಶಗಳ ಆಧಾರಗಳ ಮೇಲೆ ವಿಶ್ವದ ಮಹಿಳೆಯರ, ಅದರಲ್ಲೂ ಭಾರತೀಯ ಸ್ತ್ರೀಯರ ಆರೋಗ್ಯಕ್ಕೆ ಸಂಬಂಧಿಸಿದ ಮುಖ್ಯ ವಿಷಯಗಳನ್ನು ಪ್ರಸಕ್ತ ಸಾಮಾಜಿಕ ಸತ್ಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ದೆಸೆಯಲ್ಲಿ ಪ್ರಸ್ತುತ ಸಂಶೋಧನೆಯಾದ ಬ್ಯಾಡಗಿ ಕೃಷಿ ಉತ್ಪನ್ನ ಮಾರುಕಟ್ಟೆಯ ಮಹಿಳಾ ಕಾರ್ಮಿಕರ ಆರೋಗ್ಯದ ಸ್ಥಿತಿಗತಿ ಒಂದು ಸಮಾಜಶಾಸ್ತ್ರೀಯ ಅಧ್ಯಯನ ಮಾಡಲಾಗಿದೆ.

ನಾವು ಯಾವುದೇ ಅಧ್ಯಯನ ಕೈಗೊಂಡಾಗ ಆ ವಿಷಯದ ಸತ್ಯಾಸತ್ಯತೆಗಳನ್ನು ಅರಿಯಲು ಮತ್ತೆ ಮಹಿಳೆಯರ ಆರೋಗ್ಯದ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಕಲೆ ಹಾಕಲು ಮತ್ತು ಅವರ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಕ್ಷೇತ್ರ ಅಧ್ಯಯನ ಮಾಡುವುದು ಅವಶ್ಯಕವಾಗಿರುತ್ತದೆ. ಆಗ ಮಾತ್ರ ಆ ವಿಷಯದ ಬಗೆಗೆ ಸಂಪೂರ್ಣ ಮಾಹಿತಿ ಲಭ್ಯವಾಗಲು ಸಾಧ್ಯವಾಗುತ್ತದೆ. ಈ ದೃಷ್ಟಿಕೋನದಲ್ಲಿ ಪ್ರಸ್ತುತ ಸಂಶೋಧನೆಯನ್ನು ಪ್ರಾಥಮಿಕ ಹಾಗೂ ಮಾಧ್ಯಮಿಕ ದತ್ತಾಂಶಗಳಿಂದ ಮತ್ತು ಕ್ಷೇತ್ರ ಅಧ್ಯಯನದಿಂದ ಮಾಹಿತಿ ಸಂಗ್ರಹಿಸಿ ಪ್ರಸ್ತುತ ಸಂಶೋಧನಾಧ್ಯಯನ ಮಾಡಿದಾಗ ಕಂಡುಬಂದ ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ ಅವು ಈ ರೀತಿಯಾಗಿವೆ.

ಅಭಿವೃದ್ಧಿಯು ಸಮಾಜದ ಎಲ್ಲಾ ಆಯಾಮಗಳನ್ನು ಸಮಾನವಾಗಿ ಒಳಗೊಳ್ಳುವುದಿಲ್ಲ. ಒಂದು ಪ್ರಶಸ್ತವಾದ ಹಾಗೂ ನಿರ್ದಿಷ್ಟವಾದ ಪ್ರದೇಶದಲ್ಲಿ ಕೇಂದ್ರೀಕರಣಗೊಳ್ಳುವುದು ಅದರ ಮೂಲ ತತ್ವವಾಗಿದೆ. ಸಬಲರಿಗೆ ಅಭಿವೃದ್ಧಿಯ ವರಮಾನ ಆದ್ಯತೆಯ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸುವುದು ಬಲು ಸುಲಭ. ಆದರೆ ನಿರ್ಗತಿಕರಿಗೆ, ಬಡವರಿಗೆ ಅದರಲ್ಲೂ ಮಹಿಳೆಯರಿಗೆ ಈ ಅಭಿವೃದ್ಧಿಯಂತಹ ಪ್ರಕ್ರಿಯೆಯಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸುವುದು

ಬಲು ಕಷ್ಟ. ಪ್ರಸ್ತುತ ಅಧ್ಯಯನವು ಮಹಿಳಾ ಅಭಿವೃದ್ಧಿಯ ಪರಿಧಿಯಲ್ಲಿ ಅಸಂಘಟಿತ ವಲಯದ ಕೃಷಿ ಕಾರ್ಮಿಕಳಾಗಿ ದುಡಿಯುತ್ತಿರುವ ಮಹಿಳೆಯ ದುಡಿಮೆಯ ಪ್ರಶ್ನೆ, ಆಕೆಯ ಸಾಮಾಜಿಕ ಹಾಗೂ ಆರ್ಥಿಕ ಜಗತ್ತು, ಕೃಷಿ ಕಾರ್ಮಿಕಳಾಗಿ ಆರ್ಥಿಕತೆಗೆ ಆಕೆಯ ಕೊಡುಗೆಗಳು ಮತ್ತು ಮಹಿಳಾ ಸಬಲೀಕರಣದಂತಹ ಚರ್ಚೆಯ ವಿಷಯಗಳು ಮಹಿಳಾ ಕಾರ್ಮಿಕಳ ಎದುರಿಗೆ ಯಾವ ರೀತಿಯ ಪಾತ್ರವನ್ನು ವಹಿಸುತ್ತದೆ ಎಂಬುದಾಗಿ ಅವಲೋಕಿಸುತ್ತದಲ್ಲದೇ ಮುಖ್ಯವಾಗಿ ಮಹಿಳೆಯ ಆರೋಗ್ಯವನ್ನು ಅಧ್ಯಯನದ ಮಹತ್ವದ ಭಾಗವನ್ನಾಗಿ ಆಯ್ದುಕೊಂಡು ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳು, ಸವಾಲುಗಳು ಹಾಗೂ ಸರಕಾರದ ಸವಲತ್ತುಗಳ ಕುರಿತಂತೆ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸಮಾಜದಲ್ಲಿ ಅಭಿವೃದ್ಧಿಯಿಂದ ಅದೆಷ್ಟು ವರ್ಗಗಳು ಪ್ರಯೋಜನವನ್ನು ಪಡೆದುಕೊಳ್ಳುತ್ತವೆಯೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಯಿಂದ ವಂಚಿತಗೊಳ್ಳುವಂತಹ ವರ್ಗಗಳು ಅನೇಕವಿದೆ. ಅವುಗಳಲ್ಲಿ ಮುಖ್ಯವಾಗಿ ಮಹಿಳಾ ವರ್ಗ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯನ್ನು ಅಭಿವೃದ್ಧಿಯ ಹರಿಕಾರಳಾಗಿ ಸರಿಯಾದ ರೀತಿಯಲ್ಲಿ ಇಂದಿಗೂ ಗುರುತಿಸಲಾಗಿಲ್ಲ. ಹೀಗಾಗಿ ನಾವು ಇಂದು ಜನರನ್ನು ಒಳಗೊಳ್ಳುವ ಅಭಿವೃದ್ಧಿ ಹಾಗೂ ಜನರನ್ನು ಒಳಗೊಳ್ಳದ ಅಭಿವೃದ್ಧಿಯ ಬಗ್ಗೆ ಹೆಚ್ಚು ಚಿಂತಿಸಬೇಕಾಗಿದೆ. ಹಲವಾರು ಅಧ್ಯಯನಗಳು ಕಂಡುಕೊಂಡಂತೆ, ಮಹಿಳೆಯರು ಆರ್ಥಿಕ ಅಭಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡುತ್ತಿದ್ದಾರೆ. ಆದರೆ ಅಭಿವೃದ್ಧಿ ಸಿದ್ಧಾಂತಗಳು ಮಹಿಳೆಯ ಕೊಡುಗೆ ಅಥವಾ ಅವಳ ಪಾತ್ರವನ್ನು ನಿರ್ಲಕ್ಷಿಸುತ್ತಲೇ ಬಂದಿದೆ ಅವರನ್ನು ಅಭಿವೃದ್ಧಿಯ ಫಲಾನುಭವಿಗಳಾಗಿ ಗುರುತಿಸಿರುವುದೇ ಅಲ್ಲದೆ ಏಕರೂಪಿಯಾಗಿ ಅವರನ್ನು ಪರಿಭಾವಿಸಿಕೊಂಡೇ ಬಂದಿದೆ. ಈ ಹಿಂದೆ ಆದಾಯ ತರುವ ಉತ್ಪಾದನಾ ಚಟುವಟಿಕೆಗಳು ಮಾತ್ರ ಅಭಿವೃದ್ಧಿಯ ಮಾನದಂಡಗಳಾಗಿದ್ದವು. ಅಮರ್ತ್ಯಸೇನ್ ಹಾಗೂ ಹಕ್‌ರವರ ವಿಚಾರಧಾರೆಗೆ ಸಂಬಂಧಿಸಿದಂತೆ ಮಾನವ ಅಭಿವೃದ್ಧಿಯ ಪರಿಕಲ್ಪನೆಯು ಎಂದಿಗೆ ಪ್ರಚಲಿತ್ವಕ್ಕೆ ಬಂದಿದೆಯೋ, ಹಲವಾರು ಸ್ತ್ರೀವಾದಿ ನೆಲೆಯಲ್ಲಿ ನಡೆದ ಚಿಂತನೆಗಳು, ವಿಮರ್ಶೆಗಳು ಮಹಿಳೆಯನ್ನು ಹಾಗೂ ಆಕೆಯ ದುಡಿಮೆಯನ್ನು ಅಭಿವೃದ್ಧಿಯ ಭಾಗವಾಗಿ ಪರಿಗಣಿಸಬೇಕೆಂದು ಹಲವಾರು ಹೋರಾಟಗಳು ನಡೆದವು. ಸ್ತ್ರೀವಾದಿ ಚಿಂತನೆಗಳ ಹೋರಾಟಗಳ ಫಲವು ಮಹಿಳಾ ಸಬಲೀಕರಣವೆಂಬ ಹೊಸ ಪ್ರಕ್ರಿಯೆಗೆ ಚಾಲನೆಯನ್ನು ನೀಡಿತು. ಆದರೂ ಇದು ಇನ್ನೂ ಹಲವು ರೀತಿಯ ಸಮಸ್ಯೆಗಳಿಗೆ ಕಾರಣವಾಗಿದೆ. ಮಹಿಳೆ ಎಂದಾಕ್ಷಣ ನಾವು ಆಕೆಯನ್ನು ಏಕರೂಪಿಯಾಗಿ ಚಿತ್ರಿಸಲಾಗದು. ನಗರ ಭಾಗದ ಮಹಿಳೆ ಹಾಗೂ ಗ್ರಾಮೀಣ ಭಾಗದ ಮಹಿಳೆಯ ಬದುಕಿನಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ೧೯೯೦ರ ದಶಕದಿಂದೀಚೆಗೆ

ಹೆಚ್ಚು ಪ್ರಚಲಿತದಲ್ಲಿರುವ ಮಾನವ ಅಭಿವೃದ್ಧಿ ಸಿದ್ಧಾಂತವು, ಆದಾಯವನ್ನು ಅಭಿವೃದ್ಧಿಯ ಮಾನದಂಡವಾಗಿ ಪರಿಗಣಿಸಿರುವುದನ್ನು ಹೊರತುಪಡಿಸಿ ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯಗಳು, ಸಮಾನ ಭಾಗವಹಿಸುವಿಕೆ, ಸಾಮಾಜಿಕ ನ್ಯಾಯ, ಸಮಾನತೆಯು ಅಭಿವೃದ್ಧಿಯ ಇತರ ಮಾನದಂಡಗಳಾಗಿರಬೇಕೆಂದು ಸಾಧಿಸಿತು. ಆದರೆ ಇದು ಕೇವಲ ಪುರುಷ ಸ್ನೇಹಿಯಾಗಿದ್ದರೆ ಸಾಲದು ಮಹಿಳೆಯೂ ಇದರಲ್ಲಿ ಸಮಾನ ಹಕ್ಕುದಾರಳು ಹಾಗೂ ಬಾಧ್ಯಳು ಆಗಿದ್ದಾರೆ ಮಾತ್ರ ಯಾವುದೇ ದೇಶದ ಅಭಿವೃದ್ಧಿಯು ಪೂರ್ಣ ಪ್ರಮಾಣದಲ್ಲಿದೆಯೆಂದು ನಾವು ಹೇಳಬಹುದು. ಯಾವುದೇ ಒಂದು ದೇಶದ ಅಭಿವೃದ್ಧಿಯ ಮಾನದಂಡವು ಆ ದೇಶದ ಮಹಿಳೆಯ ಸ್ಥಾನಮಾನದ ಬಗೆಗಿನ ಚಿತ್ರಣವನ್ನು ನಮಗೆ ಒದಗಿಸುತ್ತದೆ. ೧೯೯೫ರ ಮಾನವ ಅಭಿವೃದ್ಧಿ ವರದಿಯು ಮಹಿಳೆಯರ ಅಭಿವೃದ್ಧಿಯನ್ನೇ ಕೇಂದ್ರವಾಗಿಸಿದ್ದು ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಎದುರಿಸುವ ಸಮಸ್ಯೆಗಳ ಬಗ್ಗೆ ಹೆಚ್ಚು ವಿವರಿಸಿದೆ. ಅದರಲ್ಲೂ ಮುಖ್ಯವಾಗಿ ೧೯೯೦ರ ನೋಬೆಲ್ ಪುರಸ್ಕೃತ ಪ್ರಮುಖ ಅಭಿವೃದ್ಧಿ ಚಿಂತಕರಾದ ಅಮರ್ತ್ಯಸೇನ್‌ರವರು ಮಹಿಳೆಯರ ಕರ್ತೃತ್ವವಾದ ಪಾತ್ರವನ್ನು ಗುರುತಿಸಿ, ಅವರು ಅಭಿವೃದ್ಧಿಯ ಹರಿಕಾರರೂ ಹೌದು ಮಾತ್ರವಲ್ಲದೇ ಅದರ ಫಲಾನುಭವಿಗಳೂ ಅವರೇ ಆಗಿದ್ದಾರೆ ಎಂಬ ಮಹತ್ವದ ಅಂಶಗಳನ್ನು ಪರಿಗಣಿಸಿದರು. ಆದರೆ ನಾವು ಮಹಿಳೆಯರನ್ನು ಯಾವುದೇ ರೀತಿಯಲ್ಲಿಯೂ ಏಕರೂಪಿಯಾಗಿ ಗುರುತಿಸಲಾಗದು. ಏಕೆಂದರೆ ಅವರೊಳಗೆ ಅನೇಕ ಅಸಮಾನತೆಗಳಿವೆ. ವಿವಿಧ ಸಾಮಾಜಿಕ, ಆರ್ಥಿಕ ವರ್ಗಕ್ಕೆ ಸೇರಿದ ಮಹಿಳೆಯರ ಆರೋಗ್ಯ ಶಿಕ್ಷಣ, ಮೂಲಭೂತ ಸೌಕರ್ಯಗಳ ಲಭ್ಯತೆ, ಸಾಮಾಜಿಕವಾಗಿ ಭಾಗವಹಿಸುವಿಕೆಯಲ್ಲಿ ಅವರ ಪಾತ್ರಗಳಲ್ಲಿ ಸಮಾನತೆಯನ್ನು ಪಡೆದುಕೊಳ್ಳಲು ಅವರಿಗಿರುವ ಸವಾಲುಗಳ ಕುರಿತಂತೆ ಚರ್ಚಿಸಿದಾಗ ಮಹಿಳೆಯರು ಈ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ರೀತಿಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಪ್ರಸ್ತುತ ಅಧ್ಯಯನವು ಅಸಂಘಟಿತ ವಲಯದ ಗ್ರಾಮೀಣ ಭಾಗದಲ್ಲಿರುವ ಮಹಿಳಾ ಕೃಷಿ ಕಾರ್ಮಿಕರ ಆರೋಗ್ಯದ ಕುರಿತಂತೆ ಬೆಳಕನ್ನು ಚೆಲ್ಲುತ್ತದೆ. ಮಹಿಳೆಯ ಸಮಸ್ಯೆಯನ್ನು ನಾವು ಹಲವಾರು ದೃಷ್ಟಿಕೋನಗಳಲ್ಲಿ ವಿಶ್ಲೇಷಿಸಿದಾಗ ನಗರ ಹಾಗೂ ಗ್ರಾಮೀಣ ಭಾಗ ಎನ್ನುವುದು ಸಾಮಾನ್ಯ ವಿಂಗಡನೆಯಾಗಿದೆ. ಮುಖ್ಯವಾಗಿ ನಗರ ಭಾಗದಲ್ಲಿರುವ ಮಹಿಳೆಯರಿಗೂ ಗ್ರಾಮೀಣ ಭಾಗದಲ್ಲಿರುವ ಮಹಿಳೆಯರ ಜೀವನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಗ್ರಾಮೀಣ ಭಾಗದಲ್ಲಿರುವ ಮಹಿಳೆಯರಿಗೆ ಮುಖ್ಯವಾಗಿ ಶಿಕ್ಷಣದ ಕೊರತೆ, ಬಡತನದಂತಹ ಆರ್ಥಿಕ ಸಮಸ್ಯೆಗಳು ಅದರಲ್ಲೂ ಸಾಮಾಜಿಕ ನೆಲೆಯಲ್ಲಿ

ಗುರುತಿಸುವುದಾದರೆ ಗ್ರಾಮೀಣ ಬುಡಕಟ್ಟು ಮಹಿಳೆಯರು ಇನ್ನೂ ಹೆಚ್ಚಿನ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿದ್ದಾರೆ. ಶಿಕ್ಷಣದ ಕೊರತೆಯು ಉದ್ಯೋಗ ರಂಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ಹಾಗೂ ಅವರ ಪ್ರವೇಶಾತಿಯನ್ನು ತಡೆಹಿಡಿಯುತ್ತದೆ. ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಕೃಷಿ ಬದುಕೊಂದೇ ಜೀವನಾಧಾರವಾಗಿದೆ. ಕೃಷಿಯು ಗ್ರಾಮೀಣ ಬದುಕಿನ ಜೀವನಾಡಿಯಾಗಿದೆ. ಅದು ದೇಶದ ಆರ್ಥಿಕತೆಯ ಬೆನ್ನೆಲುಬು. ಆದರೆ ದೇಶದ ಒಟ್ಟು ಕಾರ್ಮಿಕರಲ್ಲಿ ನಾಲ್ಕನೇ ಮೂರು ಭಾಗದಷ್ಟು ಕೃಷಿ ಕಾರ್ಮಿಕರು ಈ ವಲಯದಲ್ಲಿ ತಮ್ಮ ಉದ್ಯೋಗವನ್ನು ಕಂಡುಕೊಂಡಿದ್ದಾರೆ. ಅದರಲ್ಲಿ ೭೦% ಮಹಿಳೆಯರು ಈ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಮಹಿಳೆಯು ಜೀವನೋಪಾಯಕ್ಕೆ ಅಲ್ಲದೇ ತನ್ನ ಸಂಸಾರ ಹಾಗೂ ಕುಟುಂಬದ ರಕ್ಷಣೆಗೆ ಉದ್ಯೋಗವಾಗಿ ಕೃಷಿಯನ್ನೇ ಅವಲಂಬಿಸಿರುತ್ತಾಳೆ. ಒಟ್ಟು ಕೃಷಿಯಲ್ಲಿ ಮುಕ್ಕಾಲು ಭಾಗ ದುಡಿತವು ಮಹಿಳೆಯದ್ದೇ ಆಗಿರುತ್ತದೆ. ಹೆಚ್ಚು ಓದಿರದ ಹಾಗೂ ಕಡಿಮೆ ಸಂಭಾವನೆಗೆ ಹೆಚ್ಚು ದುಡಿಯುವುದನ್ನು ಅವಳು ಸ್ವಭಾವತಹ ತನ್ನ ಗುಣವನ್ನಾಗಿ ಬೆಳೆಸಿಕೊಂಡಿರುತ್ತಾಳೆ. ಹೀಗಾಗಿ ಒಟ್ಟು ಕೃಷಿ ಉತ್ಪಾದನೆಯಲ್ಲಿ ಅತೀ ಹೆಚ್ಚಿನ ಶ್ರಮ ಹಾಗೂ ಕೊಡುಗೆಯು ಮಹಿಳೆಯರದೇ ಆಗಿರುತ್ತದೆ.

ಮಹಿಳೆಯರ ಅಭಿವೃದ್ಧಿ ಅತೀ ಅಗತ್ಯವಾಗಿದೆ. ಏಕೆಂದರೆ ಆಕೆ ಕೇವಲ ಸಂತಾನೋತ್ಪತ್ತಿಗೇ ಆಗಲಿ ಅಥವಾ ಗೃಹ ಕೃತ್ಯಗಳಗಾಲಿ ಸೀಮಿತವಾಗಿಲ್ಲ. ದೇಶದ ಆಹಾರದ ದಾಹವನ್ನು ತುಂಬುವ ಅತೀ ಶ್ರಮದ ಕೆಲಸವನ್ನು ಮಾಡುವುದರಲ್ಲಿ ಅತೀ ದೊಡ್ಡ ಪಾತ್ರವನ್ನು ವಹಿಸುತ್ತಾಳೆ. ಅವರ ದುಡಿಮೆಯು ದೇಶದ ಅಭಿವೃದ್ಧಿಗೆ ಪೂರಕವೂ, ಅಗತ್ಯವೂ ಆಗಿದೆ. ಇಂದು ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿರುವುದು ಆತಂಕದ ವಿಷಯವಾಗಿದೆ. ವರದಕ್ಷಿಣೆ, ಶಿಶುಹತ್ಯೆ, ಭ್ರೂಣ ಹತ್ಯೆ, ವೈವಾಹಿಕ ಅತ್ಯಾಚಾರದಂತಹ ಸಮಸ್ಯೆಗಳಿಂದ ಆಕೆ ನಲುಗಿಹೋಗಿದ್ದಾಳೆ. ಇದಲ್ಲದೆ ಪಿತೃಪ್ರಭುತ್ವದ ದಬ್ಬಾಳಿಕೆ, ಹಿಂಸೆ, ಲಿಂಗ ತಾರತಮ್ಯ, ಅವಕಾಶಗಳ ಕೊರತೆಯು ಹೆಚ್ಚುತ್ತಾ ಇದೆ. ಈ ಕಾರಣಕ್ಕಾಗಿಯೇ ಇಂದು ಮಹಿಳಾ ಸಬಲೀಕರಣದಂತಹ ವಿಷಯಗಳು ಹೆಚ್ಚು ಹೆಚ್ಚು ಚರ್ಚೆಗೆ ಒಳಪಡುತ್ತಲಿದೆ.

ಭಾರತದಲ್ಲಿ ಮಹಿಳೆಯರ ರಕ್ಷಣೆಗೆ ಹಲವಾರು ಕಾನೂನುಗಳು ರಚನೆಯಾದರೂ ಅವುಗಳ ಕ್ರಮಬದ್ಧತೆ ಅನುಷ್ಠಾನದ ಕೊರತೆಯಿದೆ. ಇದು ಮುಖ್ಯವಾಗಿ ಮಹಿಳೆಯ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಅದರಲ್ಲಿ ಮುಖ್ಯವಾಗಿ ಜಾಗತೀಕರಣವು ಮಹಿಳೆಯ ದುಡಿಮೆಯ ಪ್ರಮಾಣವನ್ನು ಹೆಚ್ಚಿಸಿದೆ. ಆಕೆಗೆ ಮನೆಯ ಒಳಗೂ ಹೊರಗೂ ಹೆಚ್ಚು ದುಡಿಮೆಗೆ ಅವಕಾಶ ನೀಡಿದುದರ ಪರಿಣಾಮ ಆಕೆಯ ಆರೋಗ್ಯ ಸ್ಥಿತಿಯು ಇನ್ನಷ್ಟು

ಹದಗೆಡುವಂತೆ ಮಾಡಿದೆ. ಇದನ್ನು ನಾವು ಮುಖ್ಯವಾಗಿ ದೇಶದ ಎಮ್.ಎಮ್.ಆರ್ ಅಂಕಿ ಅಂಶಗಳನ್ನು ಗಮನಿಸಿದರೆ ಲಕ್ಷಕ್ಕೆ ೧೩೦(೨೦೧೯)ರಂತೆ ಇದೆ. ಆದರೆ ಇದು ಕಳೆದ ಅಂಕಿ ಅಂಶಗಳಿಗೆ ಹೋಲಿಸಿದರೆ ಸ್ವಲ್ಪ ಮಟ್ಟಿನ ಇಳಿಕೆಯನ್ನು ಕಂಡಿದೆ. ಕರ್ನಾಟಕವು ಲಕ್ಷಕ್ಕೆ ೧೦೮ ಎಮ್.ಎಮ್.ಆರ್ ಅಂಕಿ ಅಂಶಗಳನ್ನು ಹೊಂದಿದ್ದು(೨೦೧೬) ಕಳೆದ ಅಂಕಿ ಅಂಶಗಳಿಗೆ ಹೋಲಿಸಿದರೆ ಇಳಿಕೆಯನ್ನು ಕಂಡಿದೆ. ಸುಧಾರಿತ ಸಾರ್ವಜನಿಕ ಆರೋಗ್ಯ ಸೇವೆಗಳು ತಾಯಿಯ ಮರಣ ಪ್ರಮಾಣ ಮತ್ತು ಶಿಶು ಮರಣ ಪ್ರಮಾಣವನ್ನು ಅಲ್ಪಮಟ್ಟಿಗೆ ಕುಗ್ಗಿಸುವುದೇ ಆದರೂ ಇನ್ನಷ್ಟು ಸುಧಾರಿತ ಕ್ರಮಗಳು ಅನುಷ್ಠಾನಗೊಳ್ಳುವ ಅವಶ್ಯಕತೆಯಿದೆ. ಭಾರತದಲ್ಲಿ ಸಾರ್ವಜನಿಕ ಆರೋಗ್ಯ ವಲಯವು ಬಹುದೊಡ್ಡ ಸೇವಾವಲಯವಾಗಿದ್ದು ಹಲವಾರು ಕೊರತೆಗಳಿಂದ ಬಾಧಿಸಲ್ಪಟ್ಟಿದೆ. ಮುಖ್ಯವಾಗಿ ಮಾನವ ಸಂಪನ್ಮೂಲದ ಕೊರತೆ ಬಹುದೊಡ್ಡ ಸಮಸ್ಯೆಯಾಗಿದ್ದು ಸುಧಾರಿತ ಹಾಗೂ ನುರಿತ ತರಬೇತಿ ಹೊಂದಿದ ವೈದ್ಯರು, ದಾದಿಯರ ಅವಶ್ಯಕತೆ ಇದ್ದು, ಸಮರ್ಪಕ ಸಂಪನ್ಮೂಲದ ಪೂರೈಕೆಯ ಅಗತ್ಯವಿದೆ. ಮುಖ್ಯವಾಗಿ ಕೃಷಿ ವಲಯದಲ್ಲಿ ದುಡಿಯುವ ಮಹಿಳಾ ವರ್ಗವು ಬಡತನದ ಸಮಸ್ಯೆಯಿಂದ ಬಳಲುತ್ತಿದ್ದು ತಮ್ಮ ಆರೋಗ್ಯ ರಕ್ಷಣೆಯ ಕುರಿತಂತೆ ಖಾಸಗಿ ಆರೋಗ್ಯ ಸೇವೆಯನ್ನು ಪಡೆಯಲು ಅಸಮರ್ಥರಾಗಿರುತ್ತಾರೆ ಈ ನಿಟ್ಟಿನಲ್ಲಿ ಅವರು ತಮ್ಮ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ಸಾಮಾಜಿಕ ಆರೋಗ್ಯ ಸೇವೆಯನ್ನೇ ಹೆಚ್ಚು ಅವಲಂಬಿಸಿರುತ್ತಾರೆ. ಈ ನಿಟ್ಟಿನಲ್ಲಿ ಸಾರ್ವಜನಿಕ ಆರೋಗ್ಯ ಸೇವೆಯನ್ನು ಹೆಚ್ಚು ಹೆಚ್ಚು ಸಮರ್ಪಕವಾಗಿ ಅನಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು.

ಪ್ರಸ್ತುತ ಸಂಶೋಧನೆಯು ಮಹಿಳಾ ಕಾರ್ಮಿಕರ ಕುರಿತಂತೆ ಹೆಚ್ಚು ಅಧ್ಯಯನಕ್ಕೊಳಪಟ್ಟಿದ್ದು ಅವರ ಆರೋಗ್ಯದ ಕುರಿತಂತೆ ಹೆಚ್ಚು ಮಹತ್ವವನ್ನು ನೀಡಲಾಗಿದೆ. ಬ್ಯಾಡಗಿ ತಾಲೂಕಿನ ಕೃಷಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರ ಆರೋಗ್ಯ ಸ್ಥಿತಿಗತಿಯ ಕುರಿತಂತೆ ಸಂಶೋಧನೆಯನ್ನು ಕೈಗೊಂಡಿದ್ದು ಕಾರ್ಮಿಕರ ಆರೋಗ್ಯ ಸಮಸ್ಯೆಗಳು ಮತ್ತು ಪರಿಹಾರದ ಕುರಿತಂತೆ ಅಧ್ಯಯನವು ಹೆಚ್ಚು ಮಹತ್ವಪೂರ್ಣವಾಗಿದೆ. ಬ್ಯಾಡಗಿ ತಾಲೂಕು ಕೃಷಿ ಮಾರುಕಟ್ಟೆಯು ಮೆಣಸಿನಕಾಯಿ ಉತ್ಪನ್ನಕ್ಕೆ ಹೆಚ್ಚು ಹೆಸರುವಾಸಿಯಾಗಿದ್ದು ಇಲ್ಲಿ ದಿನನಿತ್ಯ ಸಾವಿರಾರು ಮಹಿಳಾ ಕಾರ್ಮಿಕರು ದಿನಗೂಲಿಯಾಗಿ ದುಡಿಯುತ್ತಿದ್ದಾರೆ. ಇಲ್ಲಿ ದುಡಿಯುವ ಕಾರ್ಮಿಕರು ಹೆಚ್ಚಿನವರು ಸ್ಥಳೀಯರಾಗಿದ್ದು, ಅತೀ ಬೇಡಿಕೆಯ ಸಂದರ್ಭದಲ್ಲಿ ದೂರದೂರದ ಊರುಗಳಿಂದಲೂ ಕಾರ್ಮಿಕರು ಬರುತ್ತಾರೆ. ಇಲ್ಲಿ ದುಡಿಯುವ ಮಹಿಳೆಯರಲ್ಲಿ ಹೆಚ್ಚಿನವರು ಬಡಕಾರ್ಮಿಕರಾಗಿದ್ದು, ಆದಾಯಕ್ಕೆ ತಮ್ಮ ದೈನಂದಿನ ಜೀವನಕ್ಕೆ ಈ ಆದಾಯವನ್ನೇ ಅವಲಂಭಿಸಿರುತ್ತಾರೆ. ಕೋವಿಡ್-೧೯ ಲಾಕ್‌ಡೌನ್ ಸಂದರ್ಭದಲ್ಲಿ ಇವರ ಜೀವನವು ಬಹು

ಕಷ್ಟಕರವಾಗಿದ್ದು ಸರಕಾರದಿಂದ ಕೊಡಲ್ಪಡುವ ಪಡಿತರ ವ್ಯವಸ್ಥೆಯನ್ನು ಆಧರಿಸಿ ಜೀವನ ನಡೆಸುವಂತಾಗಿತ್ತು. ಇಲ್ಲಿ ಸಹಸ್ರಾರು ಮಂದಿ ಕಾರ್ಮಿಕರು ದುಡಿಯುತ್ತಿದ್ದು ಕೊರೊನಾ ಕಾಯಿಲೆಯಂತಹ ಭೀಕರ ಸನ್ನಿವೇಶದಲ್ಲಿ ಈ ಕಾರ್ಮಿಕರ ಜೀವನವು ಬಹುದುಸ್ತರವಾಗಿದ್ದು ಹಲವಾರು ಆರ್ಥಿಕ ಹಾಗೂ ಅರೋಗ್ಯ ಸಮಸ್ಯೆಗಳನ್ನು ಎದುರಿಸಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿರುತ್ತದೆ. ಕೋವಿಡ್-೧೯ನ ಮುಂಜಾಗ್ರತೆ ಕುರಿತಂತೆ ಇಲ್ಲಿ ಸಾಮಾಜಿಕ ಅಂತರ, ಸ್ಯಾನಿಟೈಸರ್ ಬಳಕೆ ಕಷ್ಟಕರವಾಗಿದ್ದು ಆರೋಗ್ಯ ರಕ್ಷಣೆಯಂತಹ ಪರಿಸ್ಥಿತಿಯಲ್ಲಿ ಇಲ್ಲಿಯ ಕಾರ್ಮಿಕರು ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಇಲ್ಲಿ ದುಡಿಯುವ ಕಾರ್ಮಿಕರಲ್ಲಿ ಆರೋಗ್ಯದ ಸಮಸ್ಯೆಯ ಕುರಿತಂತೆ ನಡೆಸಿದ ಸಂಶೋಧನೆಗೆ ಅನುಗುಣವಾಗಿ ಕಂಡುಕೊಂಡಂತಹ ಫಲಿತಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಅಧ್ಯಯನದ ಫಲಿತಗಳು

ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ದುಡಿಯುವ ಮಹಿಳೆಯರಲ್ಲಿ ೨೫-೩೫ ವರ್ಷ ವರೆಗಿನ ಮಹಿಳೆಯರು ೩೨.೬%ರಷ್ಟಿದ್ದು ಅತೀ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಿರಿಯ ವಯಸ್ಸಿನ ಮಹಿಳಾ ಕಾರ್ಮಿಕರು ೨೬.೮%ರಷ್ಟಿದ್ದು ತಮ್ಮ ದಿನನಿತ್ಯದ ಆದಾಯಕ್ಕೆ ಹಾಗೂ ಜೀವನೋಪಾಯಕ್ಕೆ ಈ ಕೆಲಸವನ್ನೇ ಅವಲಂಬಿಸಿರುತ್ತಾರೆ.

- ಇಲ್ಲಿ ಮುಖ್ಯವಾಗಿ ಮೆಣಸಿನಕಾಯಿ ತೊಟ್ಟು ಬಿಡಿಸುವುದು, ತುಂಬು ತೆಗೆಯುವುದು, ಸ್ವಚ್ಛಗೊಳಿಸುವುದು, ಪ್ಯಾಕಿಂಗ್ ಸೇರಿದಂತೆ ಹಲವಾರು ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಇಲ್ಲಿ ದುಡಿಯುವ ಮಹಿಳಾ ಕಾರ್ಮಿಕರಲ್ಲಿ ೬೪.೨%ದಷ್ಟು ಮಂದಿ ಸ್ವಂತ ಮನೆಯನ್ನು ಹೊಂದಿರುತ್ತಾರೆ. ಇವರಿಗೆ ದೊರಕುವ ಕೂಲಿಯು ಕನಿಷ್ಠವಾಗಿದ್ದು ಕೆ.ಜಿಗೆ ೮-೧೦ರೂಪಾಯಿ ದರ ನಿಗದಿಯಾಗಿರುತ್ತದೆ. ದಿನವೊಂದಕ್ಕೆ ಹೆಚ್ಚೆಂದರೆ ೩೦೦ ರೂಪಾಯಿಯಷ್ಟು ವೇತನವನ್ನು ಇವರು ಪಡೆಯುತ್ತಿದ್ದು ಇದೇ ಇವರ ಗರಿಷ್ಠ ವೇತನವಾಗಿರುತ್ತದೆ. ಈ ಕೂಲಿಯನ್ನು ಪಡೆಯಲು ೭-೮ ಘಂಟೆಗಳ ಕಾಲ ಸತತ ದುಡಿಮೆಯ ಅಗತ್ಯವಿದ್ದು ಇದು ಹೆಚ್ಚಿನ ದೈಹಿಕ ಶ್ರಮವನ್ನು ಬೇಡುವುದರ ಜೊತೆಗೆ ಕೆಲವೊಂದು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿರುವುದು ಕಂಡುಬಂದಿರುತ್ತದೆ.
- ಇವರಿಗೆ ಕೊಡಲ್ಪಡುವ ವೇತನವು ದಲ್ಲಾಳಿಗಳ ಮೂಲಕ ಪಾವತಿಸಲ್ಪಟ್ಟಿದ್ದು ದಿನಾಂತ್ಯದಲ್ಲಿ ಇವರು ಕೂಲಿಯನ್ನು ಪಡೆಯುತ್ತಾರೆ. ಆದರೆ ಹೆಚ್ಚುವರಿ ಕೆಲಸಕ್ಕೆ ಯಾವುದೇ ರೀತಿಯ ಪ್ರೋತ್ಸಾಹ ಧನವಾಗಲಿ ಅಥವಾ ಆರ್ಥಿಕ ಸಾಮಾಜಿಕ ಭದ್ರತೆಗಳಾಗಲಿ ಇವರಿಗೆ ದೊರಕುತ್ತಿಲ್ಲ. ಇವರ ಕೆಲಸಕ್ಕೆ ಸಂಬಂಧಿಸಿದಂತೆ ಇವರ ಕಷ್ಟ ಕಾರ್ಪಣ್ಯಗಳನ್ನು ಆಲಿಸಲು

ಯಾವುದೇ ರೀತಿಯ ಅಧಿಕಾರಿ ವರ್ಗಗಳಾಗಲಿ ಅಥವಾ ದುಡಿಸುವವರಾಗಲಿ ಸ್ಪಂದಿಸದೇ ಇರುವುದು ಅಧ್ಯಯನ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

- ಇವರಿಗೆ ಯಾವುದೇ ರೀತಿಯ ರಜೆಯ ಸೌಲಭ್ಯಗಳು ಇರುವುದಿಲ್ಲ. ಇವರಿಗೆ ಬೇಕೆಂದಾಗ ಕೆಲಸಕ್ಕೆ ಗೈರುಹಾಜರಾಗಬಹುದು ಹಾಗೂ ಅತೀ ಆರ್ಥಿಕ ಮುಗ್ಗಟ್ಟಿನಂತಹ ಸಂದರ್ಭದಲ್ಲಿ ಹೆಚ್ಚಿನ ದುಡಿಮೆಯನ್ನು ಮಾಡಬಹುದು ಎಂಬುದು ಕಂಡುಬಂದಿರುತ್ತದೆ. ಸಾಮಾನ್ಯವಾಗಿ ಇಲ್ಲಿ ದುಡಿಯುವ ಕಾರ್ಮಿಕರು ವಾರ ಪೂರ್ತಿ ದುಡಿಯುವುದು ಅತೀ ವಿರಳವಾಗಿದ್ದು, ವಾರದಲ್ಲಿ ಎರಡು ಮೂರು ದಿನ ರಜೆಯನ್ನು ತೆಗೆದುಕೊಳ್ಳುವುದು ಕಂಡುಬಂದಿದ್ದು, ಇದಕ್ಕೆ ಮುಖ್ಯ ಕಾರಣವನ್ನು ಗಮನಿಸಿದಾಗ ದಿನಪೂರ್ತಿ ತೊಟ್ಟು ಬಿಡಿಸುವುದರಿಂದ ಕೈಗಳಲ್ಲಿ ಬೊಬ್ಬೆಗಳು ಏಳುತಿದ್ದು ತೊಟ್ಟು ಬಿಡಿಸಲು ಅಸಾಧ್ಯವಾಗಿರುತ್ತದೆ. ಅಲ್ಲದೇ ಇದಕ್ಕೆ ಪೂರಕವಾಗಿ ಬೆನ್ನುನೋವು, ಸೊಂಟನೋವಿನಂತಹ ಆರೋಗ್ಯ ಸಮಸ್ಯೆಗಳು ತಲೆದೋರುತ್ತಿದ್ದು ಇವರಿಗೆ ವಿಶ್ರಾಂತಿಯ ಅಗತ್ಯವಿರುತ್ತದೆ.
- ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯು ಅತೀ ವಿಸ್ತಾರವಾದ ಮಾರುಕಟ್ಟೆಯಾಗಿದ್ದು, ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಿಗೆ ಉದ್ಯೋಗವನ್ನು ನೀಡುವಂತಹ ಪ್ರಮುಖ ಉದ್ಯೋಗ ಕೇಂದ್ರವಾಗಿದೆ. ಅಲ್ಲದೇ ಇಲ್ಲಿ ದುಡಿಯುವ ಕಾರ್ಮಿಕರಿಗೆ ಯಾವುದೇ ಶೈಕ್ಷಣಿಕ ಅರ್ಹತೆಯ ಅಗತ್ಯ ಇಲ್ಲದಿರುವುದರಿಂದ ಜನರು ಹಾಗೂ ಅನಕ್ಷರಸ್ಥರು ತಮ್ಮ ಆರ್ಥಿಕ ಸ್ವಾವಲಂಬನೆಗೆ ಹೆಚ್ಚೆಚ್ಚು ಈ ಉದ್ಯೋಗವನ್ನೇ ಅವಲಂಬಿಸಿರುವುದು ಕಂಡುಬಂದಿರುತ್ತದೆ.
- ಇಲ್ಲಿ ದುಡಿಯುವ ಮಹಿಳೆಯರಿಗೆ ಯಾವುದೇ ತೆರನಾದ ದೀರ್ಘಕಾಲಿಕ ಹಾಗೂ ತೀವ್ರಸ್ವರೂಪದ ಕಾಯಿಲೆಯು ಬಾಧಿಸದೇ ಇರುವುದು ಕಂಡುಬಂದಿರುತ್ತದೆ. ಆದರೆ ಶ್ವಾಸಕೋಶದ ಕಾಯಿಲೆಗೆ ಸಂಬಂಧಿಸಿದಂತೆ ಕೆಲವೊಂದು ಸಮಸ್ಯೆಗಳನ್ನು ಇಲ್ಲಿನ ಮಹಿಳಾ ಕಾರ್ಮಿಕರು ಅನುಭವಿಸುತ್ತಿದ್ದಾರೆ. ಶುಚಿತ್ವದ ಕುರಿತಂತೆ ಇಲ್ಲಿ ದುಡಿಯುವ ಕಾರ್ಮಿಕರಿಗೆ ಅತೀ ಕಡಿಮೆ ಗಮನವಿರುವುದು ಕಂಡು ಬಂದಿರುತ್ತದೆ. ಮುಖ್ಯವಾಗಿ ಇಲ್ಲಿ ದುಡಿಯುವ ಕಾರ್ಮಿಕರಲ್ಲಿ ೪೮.೮% ಮಂದಿಯಷ್ಟು ಮನೆಯಲ್ಲಿ ಶೌಚಾಲಯವನ್ನು ಹೊಂದಿದ್ದು, ಉಳಿದಂತೆ ೫೧.೨% ರಷ್ಟು ಮಂದಿಯು ಶೌಚಾಲಯವನ್ನು ಹೊಂದಿರುವುದಿಲ್ಲ ಇವರು ದುಡಿಯುವ ಪ್ರದೇಶದಲ್ಲೂ ಉತ್ತಮ ಶೌಚಾಲಯದ ಕೊರತೆಯಿದ್ದು ೯೬.೬% ರಷ್ಟು ಮಂದಿಯು ಶೌಚಾಲಯದ ಬೇಡಿಕೆಯನ್ನು ಇಟ್ಟಿರುತ್ತಾರೆ.
- ಇಲ್ಲಿ ದುಡಿಯುವ ಕಾರ್ಮಿಕರಲ್ಲಿ ಸರಾಸರಿ ೬೪%ರಷ್ಟು ಮಂದಿ ೬-೭ ಘಂಟೆಯವರೆಗೆ ದುಡಿಯುತ್ತಿದ್ದು ವಯಸ್ಸಾದವರು ಸೇರಿದಂತೆ ೮-೯ಘಂಟೆಗಳಷ್ಟು (೧೭.೬%) ದುಡಿಯುತ್ತಾರೆ.

ಇಲ್ಲಿ ದುಡಿಯುವ ೮೯.೪%ರಷ್ಟು ಮಂದಿಯು ಈ ಕೂಲಿ ಆದಾಯವನ್ನೇ ತಮ್ಮ ಜೀವನೋಪಾಯಕ್ಕೆ ಅವಲಂಬಿಸಿಕೊಂಡಿದ್ದು ಇವರಲ್ಲಿ ೪.೮%ರಷ್ಟು ಮಂದಿ ಮಾತ್ರ ಕೃಷಿ ಭೂಮಿಯನ್ನು ಹೊಂದಿರುತ್ತಾರೆ.

- ಇಲ್ಲಿ ಸಿಗುವ ಕೂಲಿಯು ಅತೀ ಕಡಿಮೆ ಇದ್ದು ಹೆಚ್ಚಿನ ವೇತನಕ್ಕೆ ಕಾರ್ಮಿಕರು ಬೇಡಿಕೆಯನ್ನು ಇಟ್ಟಿದ್ದು ೮೨%ರಷ್ಟು ಮಂದಿ ತಮಗೆ ಇಲ್ಲಿ ದೊರಕುವ ವೇತನವು ತೃಪ್ತಿ ತಂದಿರುವುದಿಲ್ಲವೆಂದು ಹೇಳಿರುತ್ತಾರೆ. ಇಲ್ಲಿ ದುಡಿಯುವ ೮೮.೮% ರಷ್ಟು ಮಂದಿ ಹಿಂದು ಧರ್ಮಕ್ಕೆ ಸೇರಿದ್ದು ೧೧.೨% ರಷ್ಟು ಮಂದಿ ಮುಸ್ಲಿಂ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಪರಿಶಿಷ್ಟ ಜಾತಿಗೆ ಸೇರಿದ ಕಾರ್ಮಿಕ ವರ್ಗವು ಅತೀ ಹೆಚ್ಚಿದ್ದು ೪೭.೬% ರಷ್ಟಿದೆ, ಪರಿಶಿಷ್ಟ ಪಂಗಡದ ಕಾರ್ಮಿಕ ವರ್ಗವು ೭.೪% ರಷ್ಟಿದ್ದು ಇತರ ವರ್ಗಕ್ಕೆ ಸೇರಿದ ಮಹಿಳಾ ಕಾರ್ಮಿಕರು ೪೫%ದಷ್ಟು ಇದ್ದಾರೆ.
- ಬುಡಕಟ್ಟು ವರ್ಗದ ಜನಾಂಗವು ಅತೀ ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿ ದುಡಿಯುತ್ತಿದ್ದು ಜೀವನೋಪಾಯಕ್ಕೆ ಈ ಉದ್ಯೋಗವನ್ನೇ ಅವಲಂಬಿಸಿದ್ದಾರೆ. ಇಲ್ಲಿ ದುಡಿಯುವ ವರ್ಗವು ಕನಿಷ್ಠ ಮಟ್ಟದ ಸಾಕ್ಷರತೆಯನ್ನು ಹೊಂದಿದ್ದು ೩೯%ರಷ್ಟು ಮಂದಿ ಸಾಕ್ಷರರಾಗಿದ್ದು ಉಳಿದಂತೆ ೬೧%ರಷ್ಟು ಮಂದಿ ಅನರಕ್ಷರಸ್ಥರಾಗಿರುತ್ತಾರೆ. ಈ ಕೆಲಸವು ಯಾವುದೇ ರೀತಿಯ ಶೈಕ್ಷಣಿಕ ಅರ್ಹತೆಯನ್ನು ಬಯಸದಿರುವ ಕಾರಣ ಅನಕ್ಷರಸ್ಥರಿಗೆ ಅದರಲ್ಲೂ ಗ್ರಾಮೀಣ ಭಾಗದ ಮಹಿಳೆಯರಿಗೆ ಇದು ವರದಾನವಾಗಿ ಪರಿಣಮಿಸಿದೆ. ಹೆಚ್ಚಿನ ಮಹಿಳಾ ಕಾರ್ಮಿಕರು ಇಲ್ಲಿ ದುಡಿಯಲು ಕಾರಣವಾಗಿದೆ. ಅದಲ್ಲದೇ ಇಲ್ಲಿ ದುಡಿಯುವ ಮಹಿಳೆಯರ ಗಂಡಂದಿರೂ ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿಯೇ ಹಮಾಲಿ ಕೆಲಸವನ್ನು ಮಾಡುತ್ತಿದ್ದು ಕುಟುಂಬ ವರ್ಗದವರೆಲ್ಲರೂ ಇಲ್ಲಿ ದುಡಿಯುವ ಅಂಶಗಳನ್ನು ಗುರುತಿಸಲಾಗಿದೆ.
- ಬ್ಯಾಡಗಿ ತಾಲೂಕಿನ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಮಹಿಳಾ ಕಾರ್ಮಿಕರು ದುಡಿಯುತ್ತಿದ್ದು ಇವರ ಆರೋಗ್ಯದ ಕುರಿತಾದಂತಹ ವಿಚಾರಗಳು ಹೆಚ್ಚು ಗಮನ ಸೆಳೆಯುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಸಂಶೋಧನೆಯು ಅತೀ ಸೂಕ್ಷ್ಮವಾದ ಹಾಗೂ ಅತೀ ಅಗತ್ಯವಾದ ಮಹಿಳಾ ಕಾರ್ಮಿಕರ ಆರೋಗ್ಯದ ಕುರಿತಂತೆ ನಡೆಸಲಾದ ಅಧ್ಯಯನದಲ್ಲಿ ವಿಶೇಷ ಹಾಗೂ ಅಚ್ಚರಿಯ ಅಂಶಗಳನ್ನು ಗುರುತಿಸಲಾಗಿದೆ.
- ಇಲ್ಲಿ ದುಡಿಯುವ ಮಹಿಳಾ ಕಾರ್ಮಿಕರು ತಮ್ಮ ಆರೋಗ್ಯದ ಕುರಿತಂತೆ ಹೆಚ್ಚು ಧನಾತ್ಮಕವಾದ ಪ್ರತಿಕ್ರಿಯೆಯನ್ನು ನೀಡಿದ್ದು, ತಮಗೆ ಯಾವುದೇ ರೀತಿಯ ಗಂಭೀರ

ಸ್ವರೂಪದ ಹಾಗೂ ದೀರ್ಘಕಾಲಿಕವುಳ್ಳ ಕಾಯಿಲೆಯು ಬಾಧಿಸಿರುವುದಿಲ್ಲವೆಂದು ತಿಳಿಸಿದ್ದು, ಇದಕ್ಕೆ ನಾವು ದುಡಿಯುತ್ತಿರುವ ಈ ವಾತಾವರಣವೇ ಪ್ರಮುಖ ಕಾರಣವೆಂದು ಅಭಿಪ್ರಾಯಪಟ್ಟಿರುತ್ತಾರೆ.

- ದಿನವಿಡಿ ಕುಳಿತುಕೊಂಡು ತೊಟ್ಟು ಬಿಡಿಸುವ ಕೆಲಸ ಮಾಡುವುದರಿಂದ ಕೈಉರಿ, ಕಣ್ಣುಉರಿ, ಬೆನ್ನುನೋವು, ಸೊಂಟನೋವು, ಕೆಮ್ಮು ಇವುಗಳು ಅಲ್ಪ ಮಟ್ಟಿಗೆ ಬಾಧಿಸಿದರೂ ಒಂದು ದಿನದ ವಿಶ್ರಾಂತಿ ತೆಗೆದುಕೊಂಡರೆ ಎಲ್ಲವೂ ಸರಿ ಹೋಗುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಕೊರೊನಾದಂತಹ ಸಂದರ್ಭದಲ್ಲಿಯೂ ಕೂಡಾ ಇಲ್ಲಿಯ ಕಾರ್ಮಿಕರು ತಮ್ಮ ಆರೋಗ್ಯದ ವಿಚಾರದಲ್ಲಿ ಎಳ್ಳಷ್ಟು ಭಯಭೀತರಾದಂತೆ ಕಂಡು ಬಂದಿರುವುದಿಲ್ಲ. ಅಲ್ಲದೇ ಈ ಮೆಣಸಿನ ಘಾಟಿನ ಕಾರಣದಿಂದ ಯಾವ ಕೊರೊನವು ನಮಗೆ ಬಾಧಿಸದು ಎಂದು ಹೇಳಿದ್ದು, ಅವರ ಆರೋಗ್ಯದ ಬಗೆಗಿನ ಧನಾತ್ಮಕ ಅಭಿಪ್ರಾಯವನ್ನು ಅವರ ಈ ಮಾತುಗಳು ಹೆಚ್ಚು ಸ್ಪಷ್ಟಪಡಿಸುತ್ತಿತ್ತು.
- ಕೊರೊನಾ ಲಾಕ್‌ಡೌನ್‌ನಂತಹ ಸಂದರ್ಭದಲ್ಲಿ ಕೆಲಸವಿಲ್ಲದೆ ಜೀವನ ನಡೆಸಲು ಬಹು ಕಷ್ಟವಾಗಿದ್ದು ಪಡಿತರ ಸಾಮಾಗ್ರಿಗಳನ್ನೇ ನಂಬಿ ದಿನ ಕಳೆಯುವಂತಾಗಿತ್ತು ಎಂದು ತಮ್ಮ ಕಷ್ಟವನ್ನು ತೋಡಿಕೊಂಡಿರುತ್ತಾರೆ. ಇಲ್ಲಿ ದುಡಿಯುವ ಕಾರ್ಮಿಕರು ಬಡತನದ ಬೇಗೆಯಿಂದ ಬಳಲುತ್ತಿದ್ದು ಚಿಕಿತ್ಸೆಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನೇ ಅವಲಂಬಿಸಿದ್ದು ಉತ್ತಮ ಆರೋಗ್ಯ ಸೇವೆಯನ್ನು ಸರಕಾರ ನೀಡಬೇಕೆಂದು ಹೇಳಿರುತ್ತಾರೆ.
- ಕೊರೊನಾ ಹಂತದ ಈ ಸಂದರ್ಭದಲ್ಲಿ ಸಾಮಾಜಿಕ ಅಂತರದ ಪಾಲನೆಯು ಇಲ್ಲಿ ಕಷ್ಟಕರವಾಗಿದ್ದು, ಸಾರ್ವಜನಿಕ ಆರೋಗ್ಯ ರಕ್ಷಣೆಯ ವ್ಯವಸ್ಥೆಯು ಇಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕೆನ್ನುವುದು ಇಲ್ಲಿಯ ಕಾರ್ಮಿಕರ ಅಭಿಪ್ರಾಯವಾಗಿದೆ. ವಾರಕ್ಕೊಮ್ಮೆಯಾದರೂ ದಾದಿಯರು ಹಾಗೂ ಆರೋಗ್ಯ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿದರೆ ಉತ್ತಮ ವೆಂದೂ, ಇಲ್ಲಿ ಗರ್ಭಿಣಿ ಮಹಿಳೆಯರೂ ದುಡಿಯುತ್ತಿರುವುದರಿಂದ ಸಾರ್ವಜನಿಕ ಆರೋಗ್ಯ ರಕ್ಷಣೆಯಂತಹ ಕಾರ್ಯಕ್ರಮಗಳು ಇಲ್ಲಿ ಸಮರ್ಪಕವಾಗಿ ನಡೆಯಬೇಕೆಂಬುದು ಇಲ್ಲಿನ ಕಾರ್ಮಿಕರ ಆಶಯವಾಗಿದೆ.
- ಇಲ್ಲಿ ದುಡಿಯುವ ಮಹಿಳಾ ಕಾರ್ಮಿಕರಲ್ಲಿ ೫೪%ರಷ್ಟು ಮಂದಿಗೆ ಕುಟುಂಬ ಯೋಜನೆಯ ಬಗ್ಗೆ ಹೆಚ್ಚಿನ ಅರಿವಿಲ್ಲದೆ ಇರುವುದು ಕಂಡುಬಂದಿದ್ದು ಸಾರ್ವಜನಿಕ ಆರೋಗ್ಯ ರಕ್ಷಣೆಯ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಜನರನ್ನು ತಲುಪಿದೆ ಎಂಬುದಕ್ಕೆ ಇದು ನಿದರ್ಶನವಾಗಿದೆ. ಬ್ಯಾಡಗಿ ಮಾರುಕಟ್ಟೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರು

ಹಾಗೂ ಇನ್ನುಳಿದ ಕೆಲಸಗಳನ್ನು ನಿಭಾಯಿಸಿರುವ ಇತರ ಕಾರ್ಮಿಕ ವರ್ಗದವರನ್ನು ಅಧ್ಯಯನಕ್ಕೆ ಪೂರಕವಾದಂತಹ ಮಾಹಿತಿ ಸಂಗ್ರಹಣೆಗೆ ಸಂದರ್ಶನಕ್ಕೊಳಪಡಿಸಿದಾಗ ಇವರ ಮೊದಲ ಬೇಡಿಕೆ ಎಂದರೆ ಕೂಲಿ ಹೆಚ್ಚಳ ಹಾಗೂ ಉತ್ತಮ ಆರೋಗ್ಯ ವ್ಯವಸ್ಥೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸುವಂತಹ ಸವಲತ್ತುಗಳನ್ನು ನೀಡಬೇಕೆನ್ನುವುದಾಗಿದೆ.

ಈ ಹಿಂದೆ ಈ ಬೇಡಿಕೆಯ ಕುರಿತಂತೆ ಹೋರಾಟವನ್ನು ನಡೆಸಿದ್ದು ಯಾವುದೇ ರೀತಿಯ ಪ್ರಯೋಜನವು ಆಗಿಲ್ಲವೆನ್ನುತ್ತಾರೆ ಇಲ್ಲಿಯ ಕಾರ್ಮಿಕರು. ಇದಕ್ಕೆ ಮುಖ್ಯಕಾರಣ ಉತ್ತಮ ಕಾರ್ಮಿಕರ ಸಂಘಟಣೆಯ ಕೊರತೆ. ಮಹಿಳಾ ಕಾರ್ಮಿಕರಿಗಾಗಲೀ ಅಥವಾ ಪುರುಷ ಕಾರ್ಮಿಕರಿಗಾಗಲೀ ಇಲ್ಲಿ ಯಾವುದೇ ರೀತಿಯ ವ್ಯವಸ್ಥಿತವಾದ ಕಾರ್ಮಿಕ ಸಂಘಟನೆಯು ಅಸ್ತಿತ್ವದಲ್ಲಿ ಇಲ್ಲದಿರುವುದು ಕಂಡು ಬಂದಿದ್ದು ಇದಕ್ಕೆ ಶೈಕ್ಷಣಿಕ ಕೊರತೆ, ಒಗ್ಗಟ್ಟು ಹಾಗೂ ನಾಯಕತ್ವದ ಕೊರತೆ ಮುಖ್ಯ ಕಾರಣವೆಂದು ಕಂಡುಬಂದಿರುತ್ತದೆ.

ಅಲ್ಲದೆ ಇಲ್ಲಿ ದುಡಿಯುವ ಮಹಿಳಾ ಕಾರ್ಮಿಕರಿಗೆ ಯಾವುದೇ ರೀತಿಯ ಸಾಮಾಜಿಕ ಆರ್ಥಿಕ ಭದ್ರತೆಯನ್ನು ನೀಡದೇ ಇರುವುದು ತಿಳಿದು ಬಂದಿದ್ದು, ಇಲ್ಲಿ ದುಡಿಯುವ ಕಾರ್ಮಿಕರು ಎಲ್ಲರು ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದು ಕೆಲವರು ಗರಿಷ್ಠ ೨೫ ವರ್ಷಗಳಿಂದ ಇಲ್ಲಿಯೇ ದುಡಿಯುತ್ತಾ ಬಂದಿರುವುದು ಕಂಡುಬಂದಿರುತ್ತದೆ. ಇವರಿಗೆ ಯಾವುದೇ ರೀತಿಯ ನಿವೃತ್ತಿ ವೇತನ, ಪಿಂಚಣಿ ಸೌಲಭ್ಯ, ಆರೋಗ್ಯ ವಿಮಾ ಯೋಜನೆಗಳಂತಹ ಯಾವುದೇ ಸವಲತ್ತುಗಳನ್ನು ನೀಡದೆ ಇರುವುದು, ಅಲ್ಲದೇ ಅತೀ ಕಡಿಮೆ ವೇತನಕ್ಕೆ ಗರಿಷ್ಠ ದುಡಿಮೆಯನ್ನು ಇವರು ದುಡಿಯುತ್ತಿರುವುದು ಕಂಡುಬಂದಿದ್ದು, ಇದನ್ನು ಸರಿಪಡಿಸಲು ಸಮರ್ಪಕ ಸಂಘಟಣೆಯ ಕೊರತೆ, ಹೋರಾಟದ ಕೊರತೆ ಇರುವುದು ಅಧ್ಯಯನದ ಸಂದರ್ಭದಲ್ಲಿ ಕಂಡು ಬಂದ ಅಂಶವಾಗಿರುತ್ತದೆ. ಅಧ್ಯಯನಕ್ಕೊಳಪಟ್ಟ ಮಹಿಳೆಯರಲ್ಲಿ ಅತೀ ಹೆಚ್ಚಿನ ಅಂದರೆ ಪ್ರತಿಶತ 42.00 ರಷ್ಟು ಮಾಹಿತಿದಾರರು 21 ರಿಂದ 30 ವಯೋಮಾನದವರಾಗಿದ್ದಾರೆ.

ಮಾಹಿತಿದಾರರಲ್ಲಿ ಹೆಚ್ಚಿನ ಸಂಖ್ಯೆ ಮಾಹಿತಿದಾರರು ಅಂದರೆ ಪ್ರತಿಶತ 38.00 ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದಾರೆ. ಮತ್ತು ಪ್ರತಿಶತ 59.00 ರಷ್ಟು ಮಾಹಿತಿದಾರರು ಅನಕ್ಷರಸ್ಥ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸದಿರುವುದು ಕಂಡುಬಂದಿದೆ. ಏಕೆಂದರೆ ಅವರ ಆರೋಗ್ಯವನ್ನು ಕಾಪಾಡಿಕೊಳ್ಳುವುದು ತಮ್ಮ ಕರ್ತವ್ಯವೆಂದು ತಿಳುವಳಿಕೆ ಇಲ್ಲದೇ ಇರುವುದು ಕಾರಣವಾಗಿದೆ. ಮಾಹಿತಿದಾರರಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ

